ಕಸ್ತೂರಿ

ಅಕ್ಟೋಬರ್ ೧೯೭೭



ಬೆಲೆ : ೧-೨೫



ಇಲ್ಲಿ ಪುರಾತನವು ಆಧುನಿಕತೆಯ ಸೊಬಗನ್ನು ಪಡೆಯುತ್ತದೆ!

ಪುರಾತನ ಕಾಲದಿಂದಲೂ ಕರ್ನಾಟಕ ಹಾಗೂ ಹಿಂದುಸ್ಥಾನಿ ಪದ್ಧತಿಯ ಸಂಗೀತಕ್ಕಾಗಿ ಭಾರತವು ಸುವಿಖ್ಯಾತವಾಗಿದೆ. ಇವೆರಡೂ ಪದ್ಧತಿಯ ಸಂಗೀತಗಳಲ್ಲಿ ರಾಗಗಳ ಆಲಾಪಗಳಿಗೆ ಸಂಬಂಧಿಸಿದ ಪದಗಳು ಒಂದೇ ಆಗಿವೆ. ಹಾಡುಗಾರಿಕೆಯ ಮೂಲಕವೇ ಭಾರತದ ಈ ಪ್ರಮುಖ ಕಲೆಯು ತಲೆತಲಾಂತರಗಳಿಂದ ಇಳಿದುಬಂದಿದೆ. ಅದೇ ಬಗೆಯಾಗಿ ದಾವಣಗೆರೆಯ ನಮ್ಮ ಮಿಲ್ಲಿನಲ್ಲಿ ತಯಾರಾಗುತ್ತಿರುವ ಬಟ್ಟೆಗಳು ಕಾಲಕ್ಕೆ ತಕ್ಕಂತೆ ಬಗೆಬಗೆಯ ವೈವಿಧ್ಯತೆಗಳಲ್ಲಿ ಬರುತ್ತಿವೆ. ಹಿಂದಿನ ಕಾಲದಲ್ಲಿ ಕೇವಲ ಹತ್ತಿಯ ಬಟ್ಟೆಗಳು ತಯಾರಾಗುತ್ತಿದ್ದವು. ಆಮೇಲೆ ಉಚ್ಚ ಮಟ್ಟದ ಶ್ರೇಣಿಗಳಲ್ಲಿ ಬಂದವು. ಈಗ ದಾವಣಗೆರೆಯ ನಮ್ಮ ಮಿಲ್ಲಿನಲ್ಲಿ ಶ್ರೇಷ್ಠ ಮಟ್ಟದ ಬ್ಲೆಂಡೆಡ್ ಬಟ್ಟೆಗಳೂ ತಯಾರಾಗುತ್ತಿವೆ. ಅವು ನೀವು ಕೊಡುವ ಹಣಕ್ಕೆ ದೊರೆಯಬಹುದಾದ ಉತ್ಕೃಷ್ಟ ಬಟ್ಟೆಗಳಾಗಿವೆ.

Suchitra ಸುಚಿತ್ರಾ ಎಚ್ ಟಿ. ವಾಯಿಲ್ ಸೀರೆಗಳು

Lavanya ಲಾವಣ್ಯ 2 x 2 ರುಬಿಯಾ

Pushpanjali ಪುಷ್ಪಾಂಜಲಿ ಕ್ಯಾಂಬ್ರಿಕ್ ಸೀರೆಗಳು

ಸಾ

ನವಿಲಿನ ಕಿರುಚುವಿಕೆಯನ್ನು ಸೂಚಿಸುತ್ತದೆ.


PIN CODE FOR FAST MAIL

ದಾವಣಗೆರೆ

ಗುಣಕ್ಕೆ ಪ್ರಾಧಾನ್ಯತೆ ದೊರೆಯುತ್ತದೆ

ದಿ ದಾವಣಗೆರೆ ಕಾಟನ್ ಮಿಲ್ಸ್ ಲಿಮಿಟೆಡ್ ದಾವಣಗೆರೆ, ಕರ್ನಾಟಕ

THOMAS/DCM/176/ Kan


ಬಣ್ಣಗಳು ನೂರಾರು
ಡಿಸೈನ್‌ಗಳು ಹಲವಾರು
ಮದುರಾ ಬಟ್ಟೆಗಳು ಬಲು ಸೊಗಸು
ಸೂಟಿಂಗ್ ಮತ್ತು ಶರ್ಟಿಂಗ್‌ಗಳ ಅತ್ಯಂತ ವ್ಯಾಪಕ ಶ್ರೇಣಿ. ಇವು ಪೊಲಿಯೆಸ್ಟರ್ ಮತ್ತು ಪೊಲಿಯೆಸ್ಟರ್ ಮಿಶ್ರಿತ ಬಟ್ಟೆಗಳಲ್ಲಿ ದೊರೆಯುತ್ತವೆ.
ಮದುರಾ ಬಟ್ಟೆಗಳು—ತಯಾರಿಸುವವರು:
ಮದುರಾ ಕೋಟ್ಸ್


ಪ್ರಸಾಧನಗಳು ನಿಮ್ಮ
ತ್ವಚೆಯ ದೋಷಗಳನ್ನು
ಬರಿಯ ಮರೆಮಾಚಬಹುದು.

ದೃಢ ನಿಶ್ಚಯದ ಮಹಾ ಪ್ರಯತ್ನ

"ಇತ್ತೀಚೆಗೆ ಭಾರತ ಸರಕಾರ ಕೈಗೊಂಡಿರುವ ಕ್ರಮಗಳಿಂದ ಹಣ ದುಬ್ಬರ ಪರಿಸ್ಥಿತಿ ಹತೋಟಿಗೆ ಬರುತ್ತಿರುವುದು ಗಮನಾರ್ಹ ವಿಷಯ. ಬಟ್ಟೆಯೂ ಸೇರಿದಂತೆ ಅಗತ್ಯ ವಸ್ತುಗಳನ್ನು ಯುಕ್ತ ಬೆಲೆಯಲ್ಲಿ ಸಮಾಜದ ದುರ್ಬಲ ವರ್ಗಗಳವರಿಗೆ ಪೂರೈಸಬೇಕೆಂಬ ಸರಕಾರದ ಆಶಯ ಅತ್ಯಂತ ಸ್ವಾಗತಾರ್ಹವಾದುದು. ಎದುರಾಗಿರುವ ಪರಿಸ್ಥಿತಿಯನ್ನು ನಿವಾರಿಸಲು ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರ ನಾಯಕತ್ವದಲ್ಲಿ ದೃಢ ನಿಶ್ಚಯದ ಮಹಾ ಪ್ರಯತ್ನ ನಡೆದಿದೆ. ಪ್ರಸ್ತುತದ ಕಷ್ಟಗಳಿಂದ ದೇಶವು ಯಶಸ್ವಿಯಾಗಿ ಪಾರಾಗಲು ಹಾಗೂ ರಾಷ್ಟ್ರಗಳ ಸಮೂಹದಲ್ಲಿ ತನ್ನ ಪಾತ್ರವನ್ನು ನಿರ್ವಹಿಸುವಂತಾಗಲು ಈ ಪರಿಸ್ಥಿತಿಯಲ್ಲಿ ನಾವು ಪ್ರಧಾನಿ ಹಾಗೂ ಅವರ ನೀತಿಗಳಿಗೆ ಸಂಪೂರ್ಣ ಬೆಂಬಲ ನೀಡುವುದು ಅಗತ್ಯವಾಗಿದೆ."

ವೈ. ಆರ್. ಘೋರ್ಪಡೆ

(ಅಧ್ಯಕ್ಷ ಭಾಷಣದಿಂದ) ಅಧ್ಯಕ್ಷ ಹಾಗೂ ಕಾರ್ಯನಿರ್ವಾಹಕ ಡೈರೆಕ್ಟರ್

ದಿ. ಸೊಂಡೂರು ಮ್ಯಾಂಗನೀಸ್ ಮತ್ತು ಐರನ್ ಓರ್ಸ್ ಲಿಮಿಟೆಡ್

ರಿಜಿಸ್ಟರ್ಡ್ ಕಚೇರಿ:

'ಲೋಹಾದ್ರಿ ಭವನ' ಯಶವಂತನಗರ-583124 ಸೊಂಡೂರು ಮಾರ್ಗ

(ಕರ್ನಾಟಕ)

ಗಣಿಗಳು :

ದೇವಗಿರಿ-583112

ಸೊಂಡೂರು ಮಾರ್ಗ

ಕಾರ್ಖಾನೆ :

ವ್ಯಾಸನಕೆರೆ-583201

ಹೊಸಪೇಟೆ ಸಮೀಪ (ಕರ್ನಾಟಕ)

ಫೋನ : 33 (ಸೊಂಡೂರು)

ಟೆಲೆಕ್ಸ್ :

ಬೆಂಗಳೂರು– BG 427

ಗ್ರಾಮ್ಸ್ :

'SMIORE' ಸೊಂಡೂರು

ಕಸ್ತೂರಿ

ಪ್ರಕಟನೆ :
ಪ್ರತಿ ತಿಂಗಳ ೧ ನೇ ದಿನಾಂಕ

ವ್ಯವಸ್ಥಾಪಕ ಸಂಪಾದಕರು :
ರಂಗನಾಥ ದಿವಾಕರ

ಪ್ರಧಾನ ಸಂಪಾದಕರು :
ಶಾಬ್ದಿ ಶಾಮಣ್ಣ

ಸಂಪಾದಕರು :
ಜ. ಲ. ಕೆರೂರ

ಪ್ರಕಾಶಕರು :
ಕರ್ನಾಟಕ ಪತ್ರಿಕಾ ಪ್ರೈ. ಲಿ.
ಹುಬ್ಬಳ್ಳಿ

ಕಚೇರಿ :
ಕಸ್ತೂರಿ ಕಾರ್ಯಾಲಯ ಹುಬ್ಬಳ್ಳಿ

ಕಲೆ :
ಕೆ. ಬಿ. ಕುಲಕರ್ಣಿ

ಮುದ್ರಣ :
ಸಂಯುಕ್ತ ಕರ್ನಾಟಕ ಪ್ರೆಸ್
ಹುಬ್ಬಳ್ಳಿ

ಮುಖಪುಟ :
ಮಧುಪಾನ
ಗುರುಮೂರ್ತಿ ಹೆಗಡೆ

ಚಂದಾದರ

೩ ವರ್ಷ	(ಅಂಚೆ ಸೇರಿ)	ರೂ. ೩೫-೦೦
೨ ವರ್ಷ	,,	ರೂ. ೨೫-೦೦
೧ ವರ್ಷ	,,	ರೂ. ೧೪-೦೦
ಅರ್ಧ ವರ್ಷ	,,	ರೂ. ೭-೫೦

KASTURI October 1976

ಲೇಖಕರಿಗೆ ಸೂಚನೆ

ಕಸ್ತೂರಿಯಲ್ಲಿ ಪ್ರಕಟನೆಗಾಗಿ ಲೇಖ, ಪ್ರಬಂಧ, ಕಥೆ ಮೊದಲಾದವನ್ನು ಸ್ವೀಕರಿಸಲಾಗುವುದು. ಕಾಗದದ ಒಂದೇ ಮಗ್ಗುಲಿಗೆ ವಿರಳವಾಗಿ ಬರೆದು ಕಳಿಸಬೇಕು. ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಇಲ್ಲವೆ ಸಾಧಾರ ಲೇಖನಗಳಾದರೆ ಅವುಗಳ ಮೂಲ ಲೇಖಕ ಹಾಗೂ ಪ್ರಕಾಶಕರ ಹೆಸರು ವಿಳಾಸಗಳನ್ನೂ ಒದಗಿಸಬೇಕು. ಮೂಲ ಲೇಖಕರ ಅನುಮತಿ ಪಡೆದೇ ಲೇಖನಗಳನ್ನು ಕಳಿಸಿದರೆ ಅವುಗಳ ಮೇಲೆ ಬೇಗನೆ ನಿರ್ಣಯಕ್ಕೆ ಬರಲು ಸುಲಭವಾಗುವುದು. ಅಸ್ವೀಕೃತ ಲೇಖನಗಳು ತಿರುಗಿ ಬೇಕಾಗಿದ್ದರೆ ಲೇಖನಗಳ ಸಂಗಡವೇ ತಿರುಗಿ ಕಳಿಸಲು ಅವಶ್ಯ ಬೇಕಾಗುವಷ್ಟು ಅಂಚೆ ತಿಕೀಟುಗಳನ್ನೂ ಕಳಿಸಿರಬೇಕು. 'ಇದುವೆ ಜೀವ' ಮೊದಲಾದ ಚುಟುಕುಗಳನ್ನು ತಿರುಗಿ ಕಳಿಸಲು, ಆ ಬಗ್ಗೆ ಪತ್ರವ್ಯವಹಾರ ಮಾಡಲು ಸಾಧ್ಯವಿಲ್ಲ. ಲೇಖನ ಸ್ವೀಕೃತವಾದರೆ ಅನುಕೂಲವಾದಾಗ ಪ್ರಕಟಿಸಲಾಗುವುದು. ಲೇಖಕರು ತಮ್ಮ ಲೇಖನಗಳ ಪ್ರತಿಗಳನ್ನು ಕಾಯ್ದಿಟ್ಟುಕೊಳ್ಳುವುದೊಳಿತು. ಲೇಖನಗಳು ಆಕಸ್ಮಾತ್ತಾಗಿ ಕಳೆದುಹೋದರೆ ಸಂಪಾದಕರು ಹೊಣೆಗಾರರಲ್ಲ.

ಲೇಖನ ಪ್ರಕಟವಾದರೆ, ಕಸ್ತೂರಿಯ ಆಗಿಂದಾಗ್ಗೆ ಗೊತ್ತುಪಡಿಸಿಕೊಂಡ ಕ್ರಮದಲ್ಲಿ ಪ್ರತಿಫಲವನ್ನು ಆದಷ್ಟು ಬೇಗ ಕೊಡುವುದು. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.

ಚಂದಾದಾರರಿಗೆ ಸೂಚನೆ

ಪ್ರತಿ ತಿಂಗಳ ಕಸ್ತೂರಿ ಆಯಾ ತಿಂಗಳ ೧ ನೇ ದಿನಾಂಕದೊಳಗೆ ಪ್ರಕಟವಾಗುವುದು. ಅದು ಚಂದಾದಾರರಿಗೆ ಆಯಾ ತಿಂಗಳ ೫ ನೇ ದಿನಾಂಕದೊಳಗೆ ತಲುಪುವುದು. ಹಾಗೆ ಬಾರದಿದ್ದರೆ ಚಂದಾದಾರರು ತಮ್ಮ ಟಪಾಲುಕಚೇರಿಯಲ್ಲಿ ಮೊದಲು ವಿಚಾರಿಸಿ ನಮಗೆ ತಿಳಿಸಬೇಕು. ಚಂದಾದಾರರು ಕಾರ್ಯಾಲಯದೊಡನೆ ಪತ್ರವ್ಯವಹಾರ ಮಾಡುವಾಗ್ಗೆ ತಮ್ಮ ಚಂದಾ ನಂಬರ್ ಕಾಣಿಸಲು ಮರೆಯಬಾರದು

ಈ ಸಂಚಿಕೆಯಲ್ಲಿ

ಸಹಚಿಂತನ	...		೧೧
ಶುಶ್ರೂಷೆ	...		೧೩
ಮಾವೊ ನಂತರದ ಚೀನ ಅಂತರ್ಮುಖಿ?	...		೧೪
ಸಾತ್ವಿಕ ಚೇತನದ ಕವಿ ಸಾಲಿ ರಾಮಚಂದ್ರರಾಯರು		ಎನ್ಕೆ	೧೭
ಸ್ಟಾಲಿನ್ನನ ಪಾಯಿಪ್	...		೨೪
ಕಿತ್ತೂರರ ಕಮ್ಮಟದಲ್ಲಿ ಕೃಷಿ ವಿವರಗಳು	...	ಜಿ. ಟಿ. ನಾರಾಯಣರಾವ್	೨೫
ಮಕ್ಕಳ ದುಃಸ್ವಪ್ನಗಳು	...	'ಬಾದಲ'	೩೩
ಕವನಗಳು	...		೩೬
ಮಾಣಿಕ್ಯದ ಹರಳು ಮಗ ಹೆಚು	...	ಪ ರಾಮಕೃಷ್ಣ ಶಾಸ್ತ್ರಿ	೩೭
ಭೀತಿ (ಕಥೆ)	...	ಎಚ್. ಇ. ಬೇಟ್	೪೨
ಇದುವೆ ಜೀವ ಇದು ಜೀವನ	...		೪೬
ಅಂಟಾರ್ಕ್ಟಿಕಾ: ಪ್ರಪಂಚದ ದಕ್ಷಿಣದ ತುದಿ	...	ಶ್ರೀಕಾಂತ ಮುಳಗಿ	೪೯
'ಮುರಿತು ಹೋದ ಸಾಮ್ರಾಜ್ಯ' ನೀಡಿದ ಜಿಲ್ಲಾ ನ್ಯಾಯಾಧೀಶ		ಟೇಕೂರ ಕೃಷ್ಣಮೂರ್ತಿ	೫೪
ವಿಚಿತ್ರಗಳ ಜೀವಂತ ಕೋಶನಾಗಿದ್ದನವನು	...	ಕೆ. ವಿ ಭಟ್ಟ	೫೭
ಪ್ರಾಚೀನರಿಗೆ ಪರಮಾಣು ಸಿದ್ಧಾಂತ ಗೊತ್ತಿತ್ತೆ ?	...	ಕೃಷ್ಣಮೂರ್ತಿ ನಿಟಿಲಾಪುರ	೬೨
ಕಡುಬಡತನ–ದಟ್ಟದಾರಿದ್ರ್ಯ	...	ಮು. ಬ. ಚನ್ನಬನ್ನಪ್ಪ	೬೫
ಲೇಸೀ ಶ್ವಾನ: ಒಂದು ಪರಂಪರೆ	...	ಸುಜಾತಾ	೭೭
ಶವಕ್ಕೂ ಪಟ್ಟಾಭಿಷೇಕ	...	ಶಂಕರಲಾಲ ಮುಸ್ಕರಾ	೮೧
ಪಶುಪಾಲಕರಿಗೊಂದು ಕಿವಿಮಾತು	...	ಜೈ ಆರ್. ರಂಗಸ್ವಾಮಯ್ಯ	೮೪
ನಗೆಮಲ್ಲಿಗೆ	...		೮೭
'ದುಂಡಿ'ಯ ಬಗೆಗೆ ಕಾರಂತರೊಡನೆ	...	ಎ. ಮಾಧವ ಉಡುಪ	೮೯
ಹೊಸ ಭಂಗಿ: ಹಳೆಯ ಕಥೆ	...	ರಂಗನಾಥ ದಿವಾಕರ	೯೫
ಪ್ರಾಚೀನ ಕಾವ್ಯಸಂಧೆ	...	ದಲಕೆ	೯೮

ಪುಸ್ತಕ ವಿಭಾಗ

ಮೌಂಟ್ ಬ್ಯಾಟನ್ನರ ಭಾರತ

ಮೂಲ : ಲಾರಿ ಕಾಲಿನ್ಸ್ ಮತ್ತು ಡೊಮಿನಿಕ್ ಲಾಪೀರೆ

ಸಂಗ್ರಹ : ಸುಜಯ ಹಾವನೂರ ೧೦೧

ಸಹಚಿಂತನ

ವೈಕಿಂಗ್ ನೌಕೆಯ ಮಂಗಳ ಯಾತ್ರೆ

ಕಸ್ತೂರಿ ಸಪ್ಟೆಂಬರ್ ಸಂಚಿಕೆಯಲ್ಲಿ ಶ್ರೀ ಜಿ. ಟಿ. ನಾರಾಯಣರಾಯರು ಬರೆದಿರುವ "ವೈಕಿಂಗ್ ನೌಕೆಯ ಮಂಗಳ ಯಾತ್ರೆ" ಅತ್ಯಂತ ಮನೋಜ್ಞವಾಗಿದೆ. ಇಂದಿನ ವಿಜ್ಞಾನ ಯುಗದಲ್ಲೇ ಅತ್ಯದ್ಭುತವಾದ ಈ ಮಂಗಳ ಯಾತ್ರೆಯ ಸುರಮ್ಯ, ಸರಸ, ರೋಮಾಂಚಕಾರಿ ಸಂಗತಿಯು ಈ ಲೇಖಕರ ಅನುಭವಪೂರ್ಣ ಬರೆಹದಲ್ಲಿ ಸುಲಲಿತವಾಗಿ ಅರ್ಥವತ್ತಾಗಿ ಮೂಡಿಬಂದಿರುವುದು ಕನ್ನಡ ಜನವೃಂದದ ಸೌಭಾಗ್ಯವೆನ್ನಬೇಕು. ಈಗಾಗಲೇ ಅನೇಕ ವೈಜ್ಞಾನಿಕ ವಿಚಾರಗಳನ್ನು ಶ್ರೀ ಜಿ. ಟಿ. ಯವರು ಎಲ್ಲ ಕನ್ನಡ ಓದುಗರಿಗೂ ಸ್ವಭಾಷೆಯಲ್ಲೇ ಸುಲಭ ಗ್ರಾಹ್ಯವಾಗುವಂತೆ ಬರೆದಿದ್ದು, ಇದೀಗ ಈ ಲೇಖನದಲ್ಲಿ ಅದ್ಭುತ ವೈಕಿಂಗಿನ ಸವಿಸ್ತಾರವಾದ ಸಚಿತ್ರ ಲೇಖನ, ಬರೆದುದರ ಪರಿಣಾಮವಾಗಿ ಇಂದಿನ ವಿಜ್ಞಾನದ ವಿಶ್ವರೂಪ. ಇದರ ಸಾಹಸ ಕಥೆ, ಅವತರಣಕಾರಿಯ ಅಸಾಮಾನ್ಯ ಕಾರ್ಯಪ್ರವೃತ್ತಿ, ಮತ್ತು ವಿಶಿಷ್ಟ ಮಾಹಿತಿಗಳು, ಸಂಕೇತ ಮೂಲಕವಾದ ಆಜ್ಞೆ-ಅನುಜ್ಞೆಗಳ ಅನುಸಂಧಾನ ಕಾರ್ಯ ವಿಶೇಷ, ಅನೇಕ ವರ್ಷಗಳ ಪ್ರಯತ್ನಗಳ ಫಲಾಫಲ-ಈಡೇರಿಕೆ, ಇವೆಲ್ಲವುಗಳನ್ನು ತಮ್ಮ ಕಸ್ತೂರಿಯ ಮೂಲಕ ಕನ್ನಡಿಗರೆಲ್ಲರೂ ಓದಿ ತಿಳಿದು, ಅನುಭವಿಸಿ, ಆನಂದಿಸುವಂತೆ ಮಾಡಿದುದರ ಜೊತೆಗೆ ವೈಜ್ಞಾನಿಕ ಪ್ರೇಮವನ್ನು ಬೆಳೆಸಿ ನಮ್ಮೆಲ್ಲರನ್ನು ವಿಚಾರವಂತರನ್ನಾಗಿ ಮಾಡಿದ ಈ ಲೇಖಕರು ನಿಜಕ್ಕೂ ಅಭಿನಂದನೀಯರು

ಕೋಟೆಕಾರು (ಮಂಗಳೂರು) -ಜಿ ಶ್ರೀನಿವಾಸ ಭಟ್ಟ

ಮಮತಾ

ಈ ತಿಂಗಳಿನ ಶ್ರೀ. ಶ. ರಾ ಚಂದ್ರರ 'ಮಮತಾ' ಕತೆ ಮನೋಜ್ಞವಾಗಿದೆ. ಬಾಲ್ಯದಲ್ಲಿ ತನ್ನ ವಯಸ್ಸಿಗೆ ಮೀರಿದ ಅವ್ಯಕ್ತ ಭಾವುಕತೆಗಳ ಪರಿಸರಕ್ಕೆ ಜಾರಿ ಅತೃಪ್ತತೆಯ ತಪ್ತತೆಯಲ್ಲಿ ತೊಳಲಾಡುವ ಎಳೇ ವಯಸ್ಸಿನ ಮಮತಾಳ ಸಹಜವಾದ ಮೂಕವೇದನೆಯನ್ನು ಲೇಖಕರು ಅತ್ಯಂತ ಮಾರ್ಮಿಕವಾಗಿ ಚಿತ್ರಿಸಿದ್ದಾರೆ ಉತ್ತಮ ಕಥಾ ವಸ್ತುವನ್ನಾರಿಸಿದ ಲೇಖಕರಿಗೂ, ಪ್ರಕಟಿಸಿದ ಪತ್ರಿಕೆಯವರಿಗೂ ನನ್ನ ಅನಂತ ಅಭಿನಂದನೆಗಳು

ಬೆಂಗಳೂರು -ಬಿ. ಲಕ್ಕಣ್ಣ

ಶ. ರಾ ಚಂದ್ರರವರ "ಮಮತಾ" ಕತೆಯು ಮುಗ್ಧ ಮಗುವಿನ ಉತ್ತಮ ಚಿತ್ರಣದೊಂದಿಗೆ ಸೊಗಸಾಗಿ ಮೂಡಿಬಂದು ವಾತ್ಸಲ್ಯದ ವರ್ಚಸ್ಸನ್ನು ಪ್ರತಿಬಿಂಬಿಸುವುದರಲ್ಲಿ ಫಲಕಾರಿಯಾಗಿದೆ.

ಮಧುಗಿರಿ -ಎಂ. ಎಲ್. ಗಂಗರಾಜು

ಪಾಚಿಯೆಂದರೆ - ...

ಕಸ್ತೂರಿಯ ಸಪ್ಟಂಬರ್ ೧೯೭೭ ರ ಸಂಚಿಕೆಯಲ್ಲಿ ಶ್ರೀ ಟಿ. ಕೆ. ರಾಜಗೋಪಾಲ ಇವರ "ಪಾಚಿ ಎಂದರೆ ಮೂಗು ಮುರಿಯಬೇಡಿ' ಎಂಬ ಲೇಖದಲ್ಲಿ ಪಾಚಿಯ ಬಗ್ಗೆ ತುಂಬಾ ಉಪಯುಕ್ತ ವಿಚಾರ ತಿಳಿಸಿದ್ದಾರೆ. ಆದರೆ ಇದರಲ್ಲಿ ಪಾಚಿಯನ್ನು ಉಪಯೋಗಿಸಿ ವಿದ್ಯುತ್ (ಇಂಧನ ಕೋಶ) ತಯಾರಿಸಲು ವಿಜ್ಞಾನಿಗಳು ಪ್ರಯತ್ನಿಸುತ್ತಿದ್ದಾರೆಂಬ ಅತಿ ಮುಖ್ಯ ವಿಚಾರ ಬಿಟ್ಟು ಹೋಗಿದೆ

ಎಷರಿಕೀಯಾ ಕೋಲೈ ಬ್ಯಾಕ್ಟೀರಿಯಾವನ್ನು ಧನದ್ವಾರದಲ್ಲೂ, ಸಮುದ್ರ ಪಾಚಿಯನ್ನು ಋಣದ್ವಾರದಲ್ಲೂ ಇಟ್ಟು ಸೂರ್ಯನ ಬೆಳಕನ್ನುಪಯೋಗಿಸಿ ಒಂದು ರೀತಿ ಸೌರ ಬ್ಯಾಟರಿ ನಡೆಸಲು ವಿಜ್ಞಾನಿಗಳು ಪ್ರಯತ್ನಿಸುತ್ತಿದ್ದಾರೆ ಇಂಧನದ ಸಮಸ್ಯೆಯಿಂದ ತತ್ತರಿಸುತ್ತಿರುವ ಜಗತ್ತಿಗೆ ಪಾಚಿಯೂ ಒಂದು ಆಶಾಕಿರಣವಾಗಿದೆ.

ಮಂಡಗದ್ದೆ -ಆರ್. ಸುಬ್ಬರಾಯ

ಕುಷ್ಠ ರೋಗ

ತಮ್ಮ ಸಪ್ಟೆಂಬರ್ ತಿಂಗಳ ಸಂಚಿಕೆಯಲ್ಲಿ ಪ್ರಕಟವಾದ 'ಕುಷ್ಠರೋಗ-ನಿಮಗೆಷ್ಟು ಗೊತ್ತು?' ಎಂಬ ಲೇಖನ ಓದಿದೆ. ಬಹಳ ಹಿಂದಿನಿಂದಲೂ ಪರಿಚಿತವಾದ ಈ ಭೀಕರ ರೋಗದ ಬಗ್ಗೆ, ಲೇಖಕರಾದ ಶ್ರೀ ಶರದ್ ನಾಡ್ಕರ್ಣಿಕರರು ಪರಿಚಯಾತ್ಮಕ ವಿವರಣೆಯನ್ನು ಚೆನ್ನಾಗಿ ನೀಡಿದ್ದಾರೆ. ಆದರೆ ೨೫ ನೇ ಪುಟದಲ್ಲಿ ಈ ರೋಗದ ಕುರಿತು ಬರೆಯುತ್ತಾ, "ಇಂದಿಗೂ ಆಧುನಿಕ ವೈದ್ಯಶಾಸ್ತ್ರ ಪೂರ್ಣವಾಗಿ ರೋಗವನ್ನು ಗುಣಪಡಿಸುವುದರಲ್ಲಿ ಸಫಲವಾಗಿಲ್ಲ'' ಎಂದಿದ್ದಾರೆ ಮತ್ತೆ ೨೯ನೇ ಪುಟದಲ್ಲಿ ''ಕುಷ್ಠ ರೋಗ ವಾಸಿಯಾಗುತ್ತದೆಯೋ?'' ಎಂಬ ಪ್ರಶ್ನೆಗೆ. "ಹೌದು; ಕುಷ್ಠರೋಗವು ಸಂಪೂರ್ಣವಾಗಿ ವಾಸಿಯಾಗುತ್ತದೆ,'' ಎಂದು ಬರೆದಿದ್ದಾರೆ ಒಂದೇ ಲೇಖನದಲ್ಲಿ ಪರಸ್ಪರ ವಿರೋಧ ಹೇಳಿಕೆಗಳನ್ನು ನೀಡಿರುವುದು ಹಾಸ್ಯಾಸ್ಪದ ಮಾತ್ರವಲ್ಲ ಓದುಗರನ್ನು ಗಲಿಬಿಲಿಗೊಳಿಸಿದಂತೆಯೂ ಆಗುವುದಿಲ್ಲವೇ? ಹೇಳಿಕೆಗಳಲ್ಲಿ ವಿರೋಧಾಭಾಸಗಳಿಲ್ಲದೆ, ಸ್ಪಷ್ಟತೆ, ನಿಖರತೆ ಇರುವುದು ಅವಶ್ಯ.

ಬಾಕಿಲ —ಸಿ. ಎಚ್. ಕೃಷ್ಣ ಶಾಸ್ತ್ರಿ

ಸೊಂಡೂರು-ಗಾಂಧೀಜಿ

ಗಾಂಧೀಜಿಯವರು ಬಳ್ಳಾರಿ ಮತ್ತು ಸೊಂಡೂರುಗಳನ್ನು ಸುಮಾರು ಐವತ್ತನಾಲ್ಕು ವರ್ಷಗಳ ಹಿಂದೆ ಸಂದರ್ಶಿಸಿದ ವಿಶೇಷ ಘಟನೆಗಳನ್ನು ಟೇಕೂರು ಕೃಷ್ಣಮೂರ್ತಿಯವರ ಸಪ್ಟಂಬರ್ ''ಕಸ್ತೂರಿ'' ಸಂಚಿಕೆಯಿಂದ ಓದಿದೆ. ಲೇಖನತುಂಬಾ ಕುತೂಹಲದಿಂದ ಓದಿಸಿಕೊಂಡೊಯ್ದಿತು, ಗಾಂಧೀಜಿಯವರು ಸೊಂಡೂರಿನ ನಿಸರ್ಗ ಸಿರಿಯನ್ನು ನೋಡಿ, "See Sandur in

September!'' ಎಂದು ಉದ್ಗರಿಸಿದ್ದರೆಂಬ ಕೇಳಲಾದ ವಾಕ್ಯವೊಂದು ನನ್ನ ನೆನಪಿನಲ್ಲಿ ಇನ್ನೂ ಅಚ್ಚಳಿಯದೆ ನಿಂತಿದೆ. ಆದರೆ ಆ ಸೌಂದರ್ಯ ಇಂದು ಕ್ರಮೇಣ ಮಾಯವಾಗುತ್ತಿದೆ. ಉರುವಲು ಕಟ್ಟಿಗೆಗಾಗಿ ಅದುರು ಶೋಧಕ್ಕಾಗಿ ಇಂದು ಕಾಡೆಲ್ಲ ಕರಗಿ ಹೋಗುತ್ತಿದೆ. ಮತ್ತೆ ಬನಸಿರಿಯನ್ನು ವೃದ್ಧಿಸಲು ಕೋರುತ್ತೇನೆ.

ವಿಜಾಪುರ -ಕೂಚಬಾಳ ಗುರುರಾಜ

ಈರುಳ್ಳಿ

ನಿಮ್ಮ ಸಪ್ಟೆಂಬರ್ ತಿಂಗಳ ಪತ್ರಿಕೆ ಇದೀಗ ತಾನೇ ಮುಗಿಸಿದೆ. ಹೆಚ್ಚಿನ ಸಂಖ್ಯೆಯ ವೈಜ್ಞಾನಿಕ ಲೇಖನಗಳನ್ನೊಳಗೊಂಡಿದ್ದ ಈ ಸಂಚಿಕೆಯನ್ನು ಕಂಡು ನನಗೆ ಬಹಳ ಸಂತೋಷವಾಯಿತು. ಅಲ್ಲದೆ ಎಲ್ಲಾ ವಿಶೇಷ ಲೇಖನಗಳೂ ಉತ್ತಮ ಮಟ್ಟದಲ್ಲಿದ್ದವು. ಕಸ್ತೂರಿ ಮತ್ತೆ ತನ್ನ ಕಂಪನ್ನು ಬೀರಲು ಆರಂಭಿಸಿದೆಯೆಂಬುದು ಸಮಾಧಾನಕರ ಸಂಗತಿ "ವಿಜ್ಞಾನ ವಿಶ್ವ'' ಎಂಬ ವಿಭಾಗದಲ್ಲಿ ಪ್ರತಿ ತಿಂಗಳೂ ಒಂದು ಪುಟದಷ್ಟು ವಿಜ್ಞಾನ ಮುನ್ನಡೆಗೆ ಸಂಬಂಧಿಸಿದ ವರದಿಗಳನ್ನು ಕೊಡುವುದನ್ನು ತಪ್ಪಿಸಬೇಡಿ. ಈ ಸಂಚಿಕೆಯ ವಿಜ್ಞಾನ ವಿಶ್ವದಲ್ಲಿ 'ಕಣ್ಣೀರು ಸುರಿಸದ ಈರುಳ್ಳಿ' ಬಗ್ಗೆ ವರದಿ ಮಾಡಲಾಗಿದೆಯಷ್ಟೆ. ಇದಕ್ಕೆ ಈರುಳ್ಳಿಯನ್ನು ಗಂಧಕ ರಹಿತ ವಾತಾವರಣದಲ್ಲಿ ಬೆಳೆಸುವುದಕ್ಕಿಂತ ಸುಲಭೋಪಾಯವುಂಟು. ಅದೆಂದರೆ ಈರುಳ್ಳಿಯನ್ನು ಹೆಚ್ಚುವಾಗ ನೀರಿನಲ್ಲಿಟ್ಟು ಹೆಚ್ಚುವುದು. ಹೀಗೆ ಮಾಡಿದರೆ ಬಿಡುಗಡೆಗೊಳ್ಳುವ ಗಂಧಕದ ಡೈಆಕ್ಸೈಡ್ (ನೀರು ಬರಿಸಲು ಇದೇ ಕಾರಣ) ನೀರಿನಲ್ಲಿ ಕರಗುವುದರಿಂದ ನಮ್ಮ ಕಣ್ಣೀರು ಮಾಯ.

ಬೆಂಗಳೂರು -ಎಸ್. ವೆಂಕಟೇಶ ಮೂರ್ತಿ

ಊಹಾನೀಹಾರ

ತಮ್ಮ ಆಗಸ್ಟ್ ಸಂಚಿಕೆಯ ವೈಚಾರಿಕ ಲೇಖಗಳ ಕುರಿತು ಎತ್ತಿದ ಆಕ್ಷೇಪವನ್ನೇ ಸಪ್ಟೆಂಬರ್ ಸಂಚಿಕೆಯಲ್ಲಿಯ ಲೇಖಗಳ ಕುರಿತು ಪುನರುಚ್ಚರಿಸಬೇಕಾದುದಕ್ಕೆ ವಿಷಾದಿಸುತ್ತೇನೆ:

(೧) ಶಂಬಾರವರ ಊಹಾನೀಹಾರವನ್ನು ಹರಿಯುವದಕ್ಕೆ ಅವರು ಬರೆದಿರುವದರ ಎರಡಷ್ಟು ಉದ್ದವಾಗಿ ಬರೆಯಬೇಕಾದೀತು. ಆದ್ದರಿಂದ ಇಲ್ಲಿ ಒಂದೇ ಮಾತು ಸಾಕು! ಸಂಸ್ಕೃತ ಪರಿವಾರದ ಭಾಷೆಗಳು ಎರಡು ಖಂಡಗಳ ವಿಸ್ತಾರದಲ್ಲಿ ನೂರಾರು ಜನಾಂಗಗಳ ಬಳಕೆಯಲ್ಲಿ ಐದು ಸಾವಿರ ವರ್ಷಗಳಿಗಿಂತಲೂ ಹೆಚ್ಚು ಕಾಲ ನಡೆದು ಬಂದಿವೆ. ಶಬ್ದಗಳ ಅರ್ಥಗಳೂ ಅರ್ಥವಿವಕ್ಷೆಗಳೂ ಕಾಲಕ್ರಮದಲ್ಲಿ ಬೇರೆ ಬೇರೆ ಜನಾಂಗಗಳಲ್ಲಿ ಬದಲಾಗುವದೂ, ಎರಡು ಬೇರೆ ಬೇರೆ ಶಬ್ದಗಳು ಉಚ್ಚಾರಣೆಯಲ್ಲಿ ಒಂದಾಗಿ ಭ್ರಮಿಸಲ್ಪಡುವದೂ, ಎಲ್ಲ ಭಾಷಾ-ವಿಜ್ಞಾನಿಗಳಿಗೂ, ಸಮಾಜ ವಿಜ್ಞಾನಿಗಳಿಗೂ ತಿಳಿದಿರುವ ವಿಚಾರ. ಆದ್ದರಿಂದ ಶಂಬಾರವರು ವೇದ ಮಂತ್ರಗಳಿಂದ ಇಂದಿನ ಸುಭಾಷಿತಗಳ ವರೆಗೆ ಚಲಾವಣೆಯಲ್ಲಿ ಬಂದ ಶಬ್ದಗಳನ್ನು ಸಮಕಾಲೀನ ಏಕದೇಶೀಯವೆಂಬಂತೆ ವಾದದಲ್ಲಿ ಬಳಸಿರುವದು ಸರಿಯಲ್ಲ.

(೨) ನಯನ ತಾರಾ ಸಹಗಲ್ ಅವರು ಹಿಂದುಗಳಲ್ಲಿ ಸರಿ-ತಪ್ಪು ಎಂಬ ಪ್ರಜ್ಞೆ ನಿಖರವಾಗಿಲ್ಲದಿರುವದೇ ಅವರ ಅವನತಿಗೆ ಕಾರಣ ಎನ್ನುತ್ತಾರೆ ಹೆಂಡ ಕುಡಿಯುವದು ಸರಿಯೋ ತಪ್ಪೋ? ಕೊಟ್ಟ ಭಾಷೆಗೆ ತಪ್ಪುವದು? ಪಡೆದ ಸಾಲ ಮರಳಿಸುವದಿಲ್ಲ ಎನ್ನುವದು? ಜೂಜುಗಾರಿಕೆ? ಸರಕಾರಗಳು ಕಾನೂನು ಮಾಡುವದು ಸರಿಯಾದದ್ದನ್ನು ಸಮರ್ಥಿಸುವದಕ್ಕೋ? ತಪ್ಪಾದದ್ದನ್ನು ಪ್ರೋತ್ಸಾಹಿಸುವದಕ್ಕೋ? ನಮ್ಮ ಕಣ್ಣದುರಿಗೇ ನಡೆದಿರುವ ನಡೆಯುತ್ತಿರುವ ಕ್ರಮಗಳನ್ನು ಕಂಡವರು ನಿಖರವಾಗಿ ಹೇಳಲಿ. ಉನ್ನತಿಯ ಶಿಖರದಲ್ಲಿದ್ದ ಬ್ರಿಟನ್ನು ಐವತ್ತು ವರ್ಷಗಳಲ್ಲಿ ದಿವಾಳಿಯ ಅಂಚಿನಲ್ಲಿರುವದಕ್ಕೆ ಅವರೇನು ಹಿಂದುಗಳಾಗಿ ಕೆಟ್ಟರೆ? ಹುಡಿಗೂಡಿ ಹೋಗಿದ್ದ ಚೀನ ಅದೇ ಅವಧಿಯಲ್ಲಿ ಅಗ್ರಮಾನ್ಯ ರಾಷ್ಟ್ರಗಳ ಪಂಕ್ತಿಯಲ್ಲಿ ಬರುವದಕ್ಕೆ ಅವರು ಯಾವ ಧರ್ಮ ಬಿಟ್ಟು ಯಾವ ಧರ್ಮ ಹಿಡಿದರು? ಹಿಂದೂಗಳ ಪರಿಖು ಹರಿದುಕೊಂಡ ಪಾಕಿಸ್ತಾನದವರ ಸ್ಥಿತಿ ಇಂದು ನಮಗಿಂತ ಉತ್ತಮವಾಗಿದೆಯೇ? ಇಂತಹ ಗಹನವಾದ ವಿಷಯಗಳನ್ನು ಕುರಿತು ಹಗುರವಾಗಿ ಪತ್ರಿಕಾ ಲೇಖನಗಳನ್ನು ಬರೆದು ಪುಡಿಗಾಸಿನ ಆಸೆಗಾಗಿ ಜನರಲ್ಲಿ ಬುದ್ಧಿಭೇದ ಮಾಡುವವರಿಗೆ ಸರಿ-ತಪ್ಪು ಪ್ರಜ್ಞೆ ಇದೆಯೇ?

ಬೆಂಗಳೂರು -ಪಿ. ವಿ. ಜೋಷಿ

ಮೆಚ್ಚುಗೆಯಾದ "ನಿಸರ್ಗ"

ಶ್ರೀ ಮಿರ್ಜಿ ಅಣ್ಣಾರಾಯರ "ನಿಸರ್ಗ'' ಕಾದಂಬರಿಯನ್ನು ಓದುವ ಅವಕಾಶ ಲಭ್ಯವಾಗಿರದಿದ್ದ ನನಗೆ, ಇದನ್ನು 'ಪುಸ್ತಕ ವಿಭಾಗ'ದಲ್ಲಿ ಓದಿ ಸಂತಸವಾಯಿತು. ಹತ್ತೊಂಬತ್ತು ನೂರಾ ನಲವತ್ತರ ದಶಕದಲ್ಲಿ ಇದನ್ನು ರಚಿಸಿದ್ದರೂ, ಕಾದಂಬರಿಯ ವಸ್ತು ಸಾರ್ವಕಾಲಿಕವಾಗಿದ್ದು ತನ್ನ ಪ್ರಭುತ್ವವನ್ನು ಸ್ಥಾಪಿಸಿಕೊಂಡ ಮೇರು ಕೃತಿಯಾಗಿದೆ. 'ಮನುಷ್ಯನ ದೈಹಿಕ ಸಂಬಂಧಕ್ಕಿಂತಲೂ ಮಾನಸಿಕ ಮಿಲನ ಎಷ್ಟು ಗಾಢವಾದದ್ದು!'' ಎನ್ನುವುದನ್ನು ತಾತ್ವಿಕ ಮತ್ತು ಅನಂತರ ಪಾತ್ರಗಳ ಮೂಲಕ ಕಾದಂಬರಿಕಾರರು ಅತ್ಯಂತ ಮಾರ್ಮಿಕವಾಗಿ ಅಷ್ಟೇ ಸಹಜವಾಗಿ ಚಿತ್ರಿಸಿದ್ದಾರೆ. ''ನಿಸರ್ಗ''ದ ಈ ಸಂಗ್ರಹಿತ ಲೇಖನವನ್ನು ಓದಿ ಮುಗಿಸಿದಾಗ ಮೂಲ ಕಾದಂಬರಿಯನ್ನು ಒಮ್ಮೆ ಓದಬೇಕೆಂಬ ಹಂಬಲ ನನ್ನನ್ನು ಕಾಡತೊಡಗಿದೆ!

ಮಂಗಳೂರು -ಗಣಪತಿ ದ. ಹೆಗಡೆ

ಕಸ್ತೂರಿ

ಸಂಚಿಕೆ : ೨ ಕಸ್ತೂರಿ, ಅಕ್ಟೋಬರ್ ೧೯೭೬ ವರ್ಷ : ೨೧

ಶುಶ್ರೂಷೆ

ಒಬ್ಬ ಭಿಕ್ಷುವಿಗೆ ಹೊಟ್ಟೆಯಲ್ಲಿ ಏನೋ ವ್ಯತ್ಯಾಸವಾಗಿ ಕಾಮಾಲೆಯಾಗಿತ್ತು. ಅವನು ತನ್ನ ಮಲಮೂತ್ರಗಳಲ್ಲಿ ಬಿದ್ದುಕೊಂಡಿದ್ದ. ಆ ಸಮಯದಲ್ಲಿ ಭಗವಂತನು ಭಿಕ್ಷುಗಳು ಮಲಗುವ ಸ್ಥಳಗಳಲ್ಲಿ ಸಂಚಾರ ಮಾಡುತ್ತ ಆ ಭಿಕ್ಷುವಿನ ವಿಹಾರದ ಬಳಿ ಸಾರಿದನು. ಭಗವಾನ್ ಬುದ್ಧನ ಹಿಂದೆ ಆಯುಷ್ಮಂತನಾದ ಆನಂದನು ಬರುತ್ತಿದ್ದನು.

ಭಗವಂತನು ಅಲ್ಲಿಗೆ ಬಂದು, ಆ ಭಿಕ್ಷುವು ತನ್ನ ಮಲ ಮೂತ್ರಗಳಲ್ಲಿ ಬಿದ್ದು ಮಲಗಿರುವದನ್ನು ಕಂಡು, ಅವನ ಬಳಿಗೆ ಹೋಗಿ "ನಿನಗೇನು ಕಾಯಿಲೆ ಭಿಕ್ಷು?" ಎಂದನು.

"ನನಗೆ ಕುಕ್ಷಿವಿಕಾರ, ಭನ್ತೇ"

"ನಿನ್ನ ಸೇವೆಗೆ ಒಬ್ಬನಿರುವನೇ ಭಿಕ್ಷು?"

"ಇಲ್ಲ ಭಗವನ್"

"ಭಿಕ್ಷುಗಳು ಏಕೆ ನಿನ್ನನ್ನು ಸೇವಿಸುವದಿಲ್ಲ"

"ನಾನು ಭಿಕ್ಷುಗಳಿಗೆ ಏನೂ ಮಾಡುತ್ತಿಲ್ಲ, ಭನ್ತೇ, ಅದರಿಂದ ಭಿಕ್ಷುಗಳು ನನ್ನನ್ನು ಸೇವಿಸುವದಿಲ್ಲ"

ಆಗ ಭಗವಂತನು "ಹೋಗು, ಆನಂದಾ ನೀರು ತಾ. ಈ ಭಿಕ್ಷುವಿಗೆ ಸ್ನಾನ ಮಾಡಿಸೋಣ" ಎಂದು ಆಯುಷ್ಮಂತನಾದ ಆನಂದನಿಗೆ ಹೇಳಿದನು. ಬಹುವಾಗಿ ಉಪಚರಿಸಿದನು.

ಬಳಿಕ ಭಗವಂತನು ಅದೇ ನೆಪದಿಂದ ಆ ಸಮಯದಲ್ಲಿ ಭಿಕ್ಷು ಸಂಘವನ್ನು ಬಳಿಗೆ ಕರೆದು

"ಭಿಕ್ಷುಗಳೆ ಇಂಥ ವಿಹಾರದಲ್ಲಿ ರೋಗಿಯಾದ ಭಿಕ್ಷು ಇರುವನೆ?" ಎಂದು ಕೇಳಿದನು.

"ಇರುವನು ಭಗವನ್"

"ಆ ಭಿಕ್ಷುವಿಗೆ ಏನು ಕಾಯಿಲೆ ಭಿಕ್ಷುಗಳೇ"

"ಭನ್ತೇ, ಆ ಆಯುಷ್ಮಂತನಿಗೆ ಕುಕ್ಷಿವಿಕಾರದ ಕಾಯಿಲೆ"

"ಭಿಕ್ಷುಗಳೆ, ಅವನ ಸೇವೆಗೆ ಯಾರಾದರೂ ಇರುವರೆ?"

"ಇಲ್ಲ. ಭಗವನ್"

"ಭಿಕ್ಷುಗಳೇಕೆ ಅವನ ಸೇವೆ ಮಾಡುವದಿಲ್ಲ?"

"ಭಿಕ್ಷುಗಳಿಗೆ ಆ ಭಿಕ್ಷು ಏನೂ ಮಾಡುವದಿಲ್ಲ. ಅದರಿಂದ ಭಿಕ್ಷುಗಳು ಅವನ ಸೇವೆ ಮಾಡುವದಿಲ್ಲ."

"ಭಿಕ್ಷುಗಳೇ, ನಿಮ್ಮನ್ನು ಸೇವಿಸಲು ನಿಮ್ಮ ತಾಯಿಯಿಲ್ಲ. ತಂದೆಯಿಲ್ಲ. ನೀವು ಒಬ್ಬರನ್ನೊಬ್ಬರು ಸೇವಿಸದಿದ್ದರೆ ಇನ್ನು ಯಾರು ನಿಮ್ಮನ್ನು ಸೇವಿಸುವರು? ಭಿಕ್ಷುಗಳೆ, ನನ್ನ ಸೇವೆ ಮಾಡಬೇಕೆನ್ನುವವರು ರೋಗಿಗಳ ಸೇವೆ ಮಾಡಲಿ." ✡

(ವಿನಯಪಿಟಕದ ಮಹಾವಗ್ಗದಿಂದ)

ಮಾವೋ ನಂತರದ ಚೀನ ಅಂತರ್ಮುಖಿ ?

ನೆಹರೂ ಹೋದಾಗ 'ಅವರು ಅತ್ತರು ಇವರು ಅತ್ತರು, ನಾನು ಅಳಲಿಲ್ಲ.' ಎಂದು ಒಬ್ಬ ಕವಿ ಹಾಡಿದರು. ತಮ್ಮಲ್ಲಿನದೇ ಏನೋ ಒಂದು ಹೋದಂಥ, ಬಹುಶಃ ಕಣ್ಣೀರಿನ ರೂಪದಲ್ಲಿ ದ್ರವಿಸಲಾರದಂಥ ಗಾಢವಾದುದೇನೋ ಕತ್ತರಿಸಿ ಹೋದಂಥ ಒಂದು ಅನುಭವ ಅವರದಾಯಿತು. ಮೊನ್ನೆ ಮಾವೋ ಕಣ್ಮುಚ್ಚಿದಾಗಲೂ ಇಷ್ಟೊಂದು ಗಾಢ ಅನುಭವ ಕೆಲವರಿಗಾದರೂ ಆಗಿರಲು ಸಾಕು.

ಐವತ್ತು ವರ್ಷಗಳಷ್ಟು ದೀರ್ಘ ಕಾಲ ಚೀನದಂಥ ಜನನಿಬಿಡವೂ ವಿಸ್ತಾರವೂ ಪರಂಪರಾಗತ ಕಂದಾಚಾರಗಳಿಗೆ ಕಟ್ಟುಬಿದ್ದಂಥದೂ ಆದ ದೇಶದಲ್ಲಿ ಮೊದಲು ಬಲವಾದ ಕಮ್ಯುನಿಸ್ಟ ಪಕ್ಷವನ್ನು ಕಟ್ಟಿ, ಕಾಲು ಶತಮಾನದಲ್ಲಿ ಅದನ್ನೊಂದು ಪ್ರಬಲ ಶಕ್ತಿಯಾಗಿ ರೂಪಿಸಿ, ನಂತರ ಪಕ್ಷ ಸಮಯದಲ್ಲಿ ರಾಷ್ಟ್ರದ ಅಧಿಕಾರವನ್ನು ವಶಪಡಿಸಿಕೊಂಡು, ಮುಂದಿನ ೨೫ ವರ್ಷಗಳಲ್ಲಿ ದೇಶವನ್ನು ಜಗತ್ತಿನ ಅತ್ಯಂತ ಪ್ರಬಲ ರಾಷ್ಟ್ರವನ್ನಾಗಿ ಮಾಡಿದ ಶ್ರೇಯಸ್ಸು ಪೂರ್ಣತಃ ಈ ಒಬ್ಬ ವ್ಯಕ್ತಿಯದೇ. ಇದುವರೆಗಿನ ಜಾಗತಿಕ ಇತಿಹಾಸದಲ್ಲಿ ಅನೇಕ ಮಹಾಪುರುಷರು ಆಗಿ ಹೋಗಿದ್ದಾರೆ; ಆದರೆ ಮಾಡಿದ ಕಾರ್ಯ ಹಾಗು ಬೀರಿದ ಪ್ರಭಾವ ಈ ಎರಡು ದೃಷ್ಟಿಗಳಲ್ಲಿ ಮಾವೋ ಖಂಡಿತ ಏಕಮೇವಾದ್ವಿತೀಯರು. ಅಂತೆಯೆ ಅವರ ನಂತರ ಏನು, ಯಾರು ಎಂಬುದು ಜಗತ್ತಿನ ದೃಷ್ಟಿಯಲ್ಲಿ ಹಾಗು ಚೀನದ ನೆರೆಯವರಾದ ಭಾರತೀಯರ ದೃಷ್ಟಿಯಲ್ಲಿ ತೀರ ಮಹತ್ವದ ಪ್ರಶ್ನೆಯೇ ಆಗಿ ಪರಿಣಮಿಸುತ್ತದೆ.

"ಅಕ್ಕ ಸತ್ತರೆ ಅಮಾವಾಸ್ಯೆ, ನಿಲ್ಲುವುದಿಲ್ಲ." ಎನ್ನುವಷ್ಟೇ ಮಾವೋ ಸತ್ತರೆ ಚೀನ ಹಾಳಾಗುವುದಿಲ್ಲವೆನ್ನುವುದೂ ನಿಜ. ಚೀನ ೧೯೪೯ರಲ್ಲಿ ಕಮ್ಯುನಿಸ್ಟ ಆದಾಗಿನಿಂದ ಇದುವರೆಗಿನ ಇತಿಹಾಸವನ್ನು ಇತರ ದೇಶಗಳಿಗೆ ಸಂಬಂಧಿಸಿದಂತೆ ನೋಡಿದಾಗ ಸ್ಪಷ್ಟಪಡುವ ಒಂದು ಅಂಶವೆಂದರೆ ಅದು ಹೆಚ್ಚಾಗಿ ಅಂತರ್ಮುಖಿಯಾದ ರಾಷ್ಟ್ರ. ಈ ವರ್ಷಗಳಲ್ಲೆಲ್ಲ ಮಾವೋ, ದ್ವಿತೀಯ ಮಹಾಯುದ್ಧ ಪೂರ್ವದ ಸ್ಟಾಲಿನ್ನನಂತೆ, ಬಾಹ್ಯ ಶಕ್ತಿಗಳಿಂದ ತಮ್ಮ ದೇಶವನ್ನು ಶಕ್ಯವಿದ್ದಷ್ಟು ದೂರವಿರಿಸಿ ಆಂತರಿಕ ಅಭಿವೃದ್ಧಿ ಕಾರ್ಯಗಳಿಗೇ ತಮ್ಮ ಕಾರ್ಯಶಕ್ತಿಯನ್ನು ಮುಡಿಪಾಗಿರಿಸಿದ್ದು ೧೯ನೆಯ ಶತಮಾನದಲ್ಲಿ ಪಾಶ್ಚಿಮಾತ್ಯರು ಚೀನದಲ್ಲಿ ಕಾಲಿರಿಸುವವರೆಗೂ ಅದು ಬಾಹ್ಯಜಗತ್ತಿಗೆ ತನ್ನ ಬಾಗಿಲನ್ನು ಮುಚ್ಚಿಕೊಂಡೇ ಇತ್ತು. ಮಾವೋ ಅಧಿಕಾರಕ್ಕೆ ಬಂದ ನಂತರ ಅದೇ ಧೋರಣೆಯನ್ನೇ ಪುನಃ ಅನುಷ್ಠಾನಕ್ಕೆ ತಂದರು.

ಕಮ್ಯುನಿಸ್ಟ ಆಡಳಿತದ ಪ್ರಾರಂಭದ ಕಾಲದಲ್ಲಿ ಚೀನವು ಅಮೇರಿಕವನ್ನೇ ತನ್ನ ಪರಮ ಶತ್ರುವೆಂದು ಬಗೆಯಿತು. ಅಂಥ ತೀಕ್ಷ್ಣ ಕಮ್ಯುನಿಸ್ಟ ವಿರೋಧಿ ವಾತಾವರಣ ಆಗ ಅಮೇರಿಕದಲ್ಲಿದ್ದೂ ಇತ್ತು. ಕೋರಿಯಾ ಮತ್ತು ನಂತರ ವಿಯೆಟ್ನಾಮ್‌ಗಳಲ್ಲಿ

ಅಮೇರಿಕ ದೊಡ್ಡ ಪ್ರಮಾಣದಲ್ಲಿ ಪ್ರವೇಶ ಮಾಡಿದಾಗ ಆ ಎರಡೂ ದೇಶಗಳೊಂದಿಗೆ ಸಂಲಗ್ನತೆಯಿರುವ ಚೀನ, ಅಲ್ಲಲ್ಲಿರುವ ಕಮ್ಯುನಿಸ್ಟರಿಗೆ ಸಕ್ರಿಯ ಸಹಾಯ ನೀಡಿತು. ಆದರೆ ಹೇಗೆ ನೋಡಿದರೂ ಆಗ ಅದು ಚೀನದ ವಿಸ್ತರಣದಾಹಕ್ಕಿಂತ ಹೆಚ್ಚಾಗಿ ಸಂರಕ್ಷಣಾತ್ಮಕ ಕೃತಿಯೇ ಆಗಿತ್ತು. ಮುಂದೆ ಭಾರತದ ವಿರುದ್ಧ ಅದು ಯುದ್ಧಕ್ಕಿಳಿದದ್ದು, ಹಾಗು ಪಾಕಿಸ್ತಾನದೊಂದಿಗೆ ಮೈತ್ರಿ ಬೆಳೆಸಿ ಕಾಶ್ಮೀರದಲ್ಲಿ ತುಸು ಭಾಗದ ಮೇಲೆ ತನ್ನ ಅಧಿಕಾರ ವಿಸ್ತರಿಸಿದ್ದು ಸಹ ನಮ್ಮ ದೃಷ್ಟಿಯಲ್ಲಿ ಆಕ್ರಮಕವೆನಿಸಿದರೂ ತಿಬೇಟಿನ ಮೇಲೆ ತನ್ನ ನಿಯಂತ್ರಣವನ್ನು ಭದ್ರವಾಗಿ ಇಳಿಸಿಕೊಳ್ಳುವ ಉದ್ದೇಶದಿಂದ ಗೈದ ಒಂದು ಬಗೆಯ ಸಂರಕ್ಷಣಾತ್ಮಕ ಕೃತಿಯೆಂದೇ ಹೇಳಬೇಕು.

ಚೀನವು ಪೂರ್ತಿ ಕಮ್ಯುನಿಸ್ಟ್ ದೇಶವಾದುವ ಮುನ್ನ ಸ್ಟಾಲಿನ್ ಯಾವಾಗಲೂ ಮಾವೋರನ್ನು ಅಷ್ಟೊಂದು ಗೌರವದಿಂದ ಕಂಡುದಿಲ್ಲ. ಚೀನವು ರಶಿಯಕ್ಕೆ ಬಲಾಢ್ಯ ಪ್ರತಿಸ್ಪರ್ಧಿಯಾಗಬಹುದೆಂಬ ಭಯ ಸ್ಟಾಲಿನ್ನನಿಗೆ ಮೊದಲಿನಿಂದಲೂ ಇರಬಹುದು. ಆ ಕಾರಣಕ್ಕಾಗಿಯೇ ಈ ಎರಡು ದೇಶಗಳಲ್ಲಿ ಮೊದಮೊದಲು ತೋರಿಕೆಗೆ ಸಹಕಾರ, ಮೈತ್ರಿ ಕಂಡರೂ ನಂತರದ ವರ್ಷಗಳಲ್ಲಿ ಅವುಗಳಲ್ಲಿಯ ಈ ವೈಮನಸ್ಸು ವೈರದಲ್ಲಿ ಪರ್ಯವಸಾನಗೊಂಡಿದೆ.

ಪ್ರಾರಂಭದ ವರ್ಷಗಳಲ್ಲಿ ಚೀನವು ರಶಿಯದಿಂದ, ವಿಶೇಷವಾಗಿ ತನ್ನ ಔದ್ಯಮಿಕ ಅಡಿಪಾಯ ಹಾಕುವಲ್ಲಿ, ಸಾಕಷ್ಟು ದೊಡ್ಡ ಪ್ರಮಾಣದ ಸಹಾಯವನ್ನೇ ಪಡೆಯಿತು. ಆದರೆ ಆಗಲೂ ಒಂದು ಮಹದಂತರ ಅಲ್ಲಿ ಸ್ಪಷ್ಟವಾಗಿ ಒಡೆದು ಕಾಣುತ್ತಿತ್ತು. ರಶಿಯದ ಸಾವಿರಾರು ತಂತ್ರಜ್ಞರು ಚೀನಕ್ಕೆ ಬಂದು ದುಡಿಯತೊಡಗಿದರೂ ಅವರು ಅಲ್ಲಿ ಪ್ರತ್ಯೇಕವಾಗಿ 'ವಿದೇಶಿ ಮಿತ್ರರು' ಮಾತ್ರವಾಗಿ ಉಳಿಯಬೇಕಾಯಿತೇ ಹೊರತು ಅಲ್ಲಿನ ಜನಜೀವನದೊಂದಿಗೆ ಬೆರೆಯಲು ಅವರಿಗೆಷ್ಟೂ ಅವಕಾಶ ದೊರೆಯಲಿಲ್ಲ. ಚೀನೀಯರು ಹಾಗೂ ರಶಿಯನ್ನರಲ್ಲಿ ಆಗಲೂ ಪರಸ್ಪರ ಅವಿಶ್ವಾಸವೇ ಪ್ರಮುಖ ಲಕ್ಷಣವಾಗಿತ್ತು.

ಅಧ್ಯಕ್ಷ ನಿಕ್ಸನ್ನರ ಎರಡನೆಯ ಅಧಿಕಾರಾವಧಿಯಲ್ಲಿ ಒಮ್ಮೆ ಕಡುವೈರಿಗಳೆನಿಸಿದ್ದ ಈ ಎರಡು ದೇಶಗಳಲ್ಲಿ ಮೈತ್ರಿಯುತ ಸಂಬಂಧಗಳುಂಟಾದ ನಂತರ ಕೂಡ ಮಾವೋ ಈ ಮೈತ್ರಿಯನ್ನು ಅತಿ ಎಂಬ ಮಟ್ಟಕ್ಕೊಯ್ಯದೇ ತಮ್ಮ ಪ್ರಯೋಜನಕ್ಕೆಷ್ಟು ಬೇಕೋ ಅಷ್ಟಕ್ಕೇ ಒಂದು ಗೆರೆ ಕೊರೆದು ನಿಲ್ಲಿಸಿದ್ದಾರೆ.

ವೈಯಕ್ತಿಕವಾಗಿ ಸಹ ಮಾವೋ ಒಂಟಿ ಜೀವವೇ ಎಂದು ಹೇಳಬೇಕು. ತಾವು ಅಧಿಕಾರಕ್ಕೆ ಬಂದೊಡನೆಯೆ ತಮ್ಮ ಜೀವನವನ್ನು ಒಂದು ಅರಮನೆಗಷ್ಟೇ ಸೀಮಿತವಾಗುಳಿಸಿಕೊಂಡು ಬಾಹ್ಯ ಜಗತ್ತಿನಿಂದ ದೂರವಾಗಿ ಉಳಿದುಬಿಟ್ಟರು. ತಾವಾಗಿಯೇ ಅವರೆಂದೂ ಚೀನವನ್ನು ಬಿಟ್ಟು ಹೊರಗೆ ಹೋಗಲಿಲ್ಲ. ಚೀನಕ್ಕೆ ಬಂದ ವಿದೇಶಿ ವರಿಷ್ಠರಿಗೆ ಅವರ ಸಂದರ್ಶನ ಲಭ್ಯವಿತ್ತಷ್ಟೆ.

ಅವರ ಸ್ವಭಾವದಲ್ಲಿಯ ಈ ಪ್ರತ್ಯೇಕತಾ-



ಟೈಮ್ಸ್ ಆಫ್ ಇಂಡಿಯಾದ ವ್ಯಂಗ್ಯಚಿತ್ರಕಾರ ಶ್ರೀ. ಆರ್. ಕೆ. ಲಕ್ಷ್ಮಣರ ದೃಷ್ಟಿಯಲ್ಲಿ ಮಾವೋ ನಂತರದ ಚೀನ.

ಪ್ರಿಯಂತೆ ಅವರಿಂದ ಸ್ಫೂರ್ತವಾದ ಚೀನೀ ವಿದೇಶ ನೀತಿಯಲ್ಲೂ ಪ್ರತಿಬಿಂಬಿತವಾಗಿತ್ತು. ಚೀನೀ ವಿದೇಶ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದವರು ಮತ್ತೊಬ್ಬ ಪ್ರತಿಭಾನ್ವಿತ ಚೀನೀ ನಾಯಕ ಚೌ ಎನ್ ಲೈ. ಚೀನದ ಅಷ್ಟಿಷ್ಟು ಬಹಿರ್ಮುಖ ದರ್ಶನವಾಗುತ್ತಿದ್ದುದು ಚೌ ಅವರ ಮೂಲಕವೇ. ಅತ್ಯಂತ ಸಮರ್ಥ ರೀತಿಯಲ್ಲಿ ಅವರು ತಮ್ಮ ಚೌಕಟ್ಟಿನ ಅಳವಿನಲ್ಲೇ ತಮ್ಮ ಕಾರ್ಯವನ್ನು ನಿರ್ವಹಿಸಿದರಾದರೂ ಮಾವೋ ನಿರ್ದೇಶನದ ಪ್ರಭಾವದಿಂದ ತಪ್ಪಿಸಿಕೊಳ್ಳಲು ಅವರಿಂದಲೂ ಶಕ್ಯವಾಗಲಿಲ್ಲ.

ಚೀನೀ ಪ್ರತ್ಯೇಕತಾಪ್ರಿಯತೆ ಅದೆಷ್ಟು ಗಾಢವಾದುದಾಗಿದೆಯೆಂದರೆ ಆಂತರಿಕ ಅಭಿವೃದ್ಧಿ ಕಾರ್ಯಗಳಲ್ಲಿ ಮೊದಲು ರಶಿಯದಿಂದ ಹಾಗು ನಂತರ ಪಶ್ಚಿಮದ ದೇಶಗಳಿಂದ ನೆರವು ಪಡೆದು ಕೂಡ, ಬಹುಮಟ್ಟಿಗೆ ಸ್ವಂತ ಸಂಪನ್ಮೂಲಗಳನ್ನೇ ಅವಲಂಬಿಸಲು ಯತ್ನಿಸುತ್ತಿದೆ. ಎಷ್ಟೇ ಗಂಭೀರ ಸ್ವರೂಪದ ಆಪತ್ತುಗಳು ಒದಗಿದಾಗಲೂ ಅವುಗಳನ್ನು ಬಾಹ್ಯ ಜಗತ್ತಿನಿಂದ ಬಹುಮಟ್ಟಿಗೆ ಮುಚ್ಚಿಟ್ಟು ತಮ್ಮದನ್ನು ತಾವು ನೋಡಿಕೊಳ್ಳುವ ಚೀನೀ ಪ್ರವೃತ್ತಿಯೂ (ಇತ್ತೀಚಿನ ಭಾರಿ ಭೂಕಂಪಗಳ ನಂತರ ನಡೆದದ್ದು ಉದಾಹರಣೆ) ಇದನ್ನೇ ತೋರುತ್ತದೆ.

ಬಾಹ್ಯ ದೇಶಗಳೊಡನೆ ಚೀನದ ಸಂಬಂಧ ಎರಡು ಮಟ್ಟಗಳಲ್ಲಿದೆ. ಒಂದು ಸರಕಾರ ಹಾಗು ಎರಡನೆಯದು ಕಮ್ಯುನಿಸ್ಟ್ ಪಕ್ಷ. ಚೌ ನಿಧನರಾದಾಗ ರಾಜತಾಂತ್ರಿಕ ಸಂಬಂಧಗಳು ಏರ್ಪಟ್ಟಿಲ್ಲವೆಂಬ ಒಂದು ಕಾರಣಕ್ಕಾಗಿ ಇಸ್ರೇಲ್ ಕಳಿಸಿದ್ದ ಸಂತಾಪಸೂಚಕ ಪತ್ರವನ್ನು ಚೀನ ತಿರಸ್ಕರಿಸಿತು. ಮಾವೋ ತೀರಿಕೊಂಡಾಗ ಈ ಯಾದಿ ಇನ್ನೂ ಬೆಳೆಯುತ್ತಲೇ ಇದೆ. ರಶಿಯ ಮತ್ತು ಯುರೋಪಿನ ಬಹ್ವಂಶ ದೇಶಗಳಲ್ಲಿಯ ಕಮ್ಯುನಿಸ್ಟ್ ಪಕ್ಷಗಳೊಡನೆ ಚೀನೀ ಪಕ್ಷಕ್ಕೆ ಔಪಚಾರಿಕ ಸಂಬಂಧಗಳಿಲ್ಲ. ಈ ಕಾರಣಕ್ಕಾಗಿ ಈ ಪಕ್ಷಗಳು ಕಳಿಸಿರುವ ವಿಷಾದ ಸೂಚಕ ಪತ್ರಗಳನ್ನು ಚೀನೀ ಪಕ್ಷ ತಿರಸ್ಕರಿಸಿದೆ

ಇಂಥ ವರ್ತನೆಯಿಂದಾಗಿ ಚೀನದ ವರ್ತನೆ ಇನ್ನು ಕೆಲ ಕಾಲ ಹೇಗಿರಬಹುದೆಂಬುದನ್ನು ಊಹಿಸಬಹುದು. ಚೀನದಲ್ಲಿ ಚೌ ಎನ್ ಲೈರವರ ನಿಧನಾನಂತರ ಪ್ರಧಾನ ಮಂತ್ರಿಯ ಸ್ಥಾನಕ್ಕೆ ಯಾರೆಂಬುದು ನಿರ್ಧಾರವಾಗುವಲ್ಲಿ ನಡೆದ ಘರ್ಷಣೆಯ ತೀವ್ರತೆಯನ್ನು ನೋಡಿದರೆ ಅಲ್ಲಿ ಯಾರೊಬ್ಬ ತಾನು ಮಾವೋರ ಉತ್ತರಾಧಿಕಾರಿಯೆಂದು ಅವರ ನಿಧನದಿಂದುಂಟಾದ ತೆರವನ್ನು ತುಂಬಲಾರನೆನಿಸುತ್ತದೆ. ಅದಕ್ಕೆ ಬದಲು ಉಚ್ಚ ಸ್ತರದಲ್ಲಿರುವ ಕೆಲ ನಾಯಕರ ಸಾಮೂಹಿಕ ನಾಯಕತ್ವ ಅಧಿಕಾರ ನಿರ್ವಹಿಸಬಹುದು.

ಇಂತು ನಾಯಕತ್ವದ ಪ್ರಶ್ನೆ ಸುಸೂತ್ರ ಬಗೆಹರಿದು ಪರಿಸ್ಥಿತಿ ಸ್ಥಿಮಿತಕ್ಕೆ ಬರುವವರೆಗಂತೂ ಚೀನ ಅಂತರ್ಮುಖಿಯಾಗಿಯೇ ಹೊರ ಜಗತ್ತಿನೊಂದಿಗೆ ತನ್ನ ಅವಶ್ಯಕತೆಗೆ ಬೇಕಾದಷ್ಟು ಮಾತ್ರ ಸಂಬಂಧವುಳಿಸಿಕೊಂಡು ಇರುವಂತಿದೆ.

ರಶಿಯದೊಂದಿಗಿನ ಸಂಬಂಧಗಳು ಮಾವೋ ನಂತರ ಸುಧಾರಿಸಬಹುದೇ ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವುದು ಸಹ ಇಷ್ಟೇ ಕಠಿಣ. ಚೀನೀ ನಾಯಕತ್ವದಲ್ಲಿ ತೀವ್ರ ಬದಲಾವಣೆಯಾಗದೇ ರಶಿಯದೊಂದಿಗೆ ಸಹ ಇದ್ದ ಪರಿಸ್ಥಿತಿಯೇ ಮುಂದುವರಿಯುವ ಸಂಭವವೇ ಹೆಚ್ಚು.

ಭಾರತದೊಂದಿಗೆ ತೀರ ಇತ್ತೀಚೆ ಮಾತ್ರ ರಾಯಭಾರಿ ಮಟ್ಟದ ರಾಜನೈತಿಕ ಸಂಬಂಧಗಳು ಪ್ರಾರಂಭವಾಗಿರುವಾಗ ಇತ್ತಿಯೂ ಹೆಚ್ಚಿನ ಯಾವ ತೀವ್ರ ಪರಿಣಾಮವನ್ನೂ ನಿರೀಕ್ಷಿಸುವಂತಿಲ್ಲ.

ಸಾತ್ವಿಕ ಚೇತನದ ಕವಿ ಸಾಲಿ ರಾಮಚಂದ್ರರಾಯರು

ಎನ್ಕೆ

ಕವಿ ಭವಭೂತಿ ತನ್ನ 'ಉತ್ತರರಾಮ ಚರಿತ' ನಾಟಕದಲ್ಲಿ 'ಏಕೋ ರಸಃ ಕರುಣ ಏವ' ಎಂದು ಹೇಳಿ ಶ್ರೀರಾಮಚಂದ್ರನ ಪಾತ್ರವನ್ನು ಕರುಣೆಯಿಂದ ಕರುವಿಟ್ಟಂತೆ ಚಿತ್ರಿಸಿದ್ದಾನೆ. 'ದುಃಖ ಸಂವೇದನಾಯೈವ ರಾಮ ಚೈತನ್ಯಮಾಹಿತಂ'. ಶ್ರೀರಾಮಚಂದ್ರನೇ ಹೇಳುತ್ತಾನೆ. ದುಃಖವನ್ನು ಅನುಭವಿಸಲೆಂದೇ ಶ್ರೀರಾಮಚಂದ್ರನಲ್ಲಿ ಜೀವವನ್ನು ಹಾಕಲಾಯಿತಂತೆ. ಅಂದು ಶ್ರೀ ಸಾಲಿ ರಾಮಚಂದ್ರರಾಯರ ಭೆಟ್ಟಿಗೆಂದು ನಾನು ಹೋದಾಗ ಭವಭೂತಿಯ ಮಾರ್ಮಿಕ ಶ್ಲೋಕ ನೆನಪಾಯಿತು. ಸಾಲಿ ರಾಮಚಂದ್ರರಾಯರ ಅಳಿಯ, ಖ್ಯಾತ ಸಂಶೋಧಕ ಶ್ರೀ ಪಾಂಡುರಂಗರಾವ ದೇಸಾಯಿ ಅವರು ಹೃದಯಾಘಾತದಿಂದ ಹಠಾತ್ತನೆ ನಿಧನ ಹೊಂದಿದ್ದರು. ಇಂತಹ ಇಳಿಯ ವಯಸ್ಸಿನಲ್ಲಿ ಇಂತಹ ಪೆಟ್ಟನ್ನು ಸಹಿಸುವದು ಸಾಲಿಯವರಿಗೆ ದುಃಸಾಧ್ಯವಾಗಿರಬೇಕು ಎಂದು ಯಾರಿಗಾದರೂ ಕಂಡುಬರುವಂತಿತ್ತು ಅವರ ಅಸಹಾಯ ಮುಖದ ಮೇಲಿನ ಅವ್ಯಕ್ತ ಶ್ಲೋಕವನ್ನು ಓದಿಕೊಂಡಾಗ.



"ನನ್ನ ಹಿರೇಮಗಳು (ಪಾಂಡುರಂಗರಾಯರ ಪತ್ನಿ 'ಸುಬ್ಬಕ್ಕ') ನನ್ನ ಸಲುವಾಗಿ ತನ್ನ ಮಕ್ಕಳ ಜೋಡಿ ಇರೋದು ಬಿಟ್ಟು ಇಲ್ಲಿ ಬಂದು ಇದ್ದಾಳ. ಆಕಿನ್ನ ನಾ ನೋಡಿಕೋಬೇಕೋ, ನನ್ನ ಆಕಿ ನೋಡಕೋಬೇಕೋ...."

ಸಾಲಿಯವರಿಗೆ ಹೆಚ್ಚು ಮಾತನಾಡುವದು ಕಷ್ಟವೆನಿಸುತ್ತಿತ್ತು. ಸಮೀಪ ಕುಳಿತು ಕೇಳದಿದ್ದರೆ ಕೇಳಿಸದಷ್ಟು ಮಂದವಾದ ದನಿಯಲ್ಲಿ ಅಳಿಯದ ಖ್ಯಾತಿಯ ಅಳಿಯದೇವರ ಹಳೆಯ ನೆನಪುಗಳನ್ನು ಹೇಳುತ್ತಿದ್ದರು. ತಮ್ಮ ಹಿರಿಯ ಮಗಳಿಗೆ ಅವರು ವರನಾಗಿ ದೊರೆಕಿದುದು ಭಗವದಿಚ್ಛೆಯಂತೆ ಸುಲಭವಾಗಿ, ಸಹಜವಾಗಿ ಘಟಿಸಿತೆಂದು ಸಾಲಿಯವರು

ಭಾವಿಸಿದ್ದಾರೆ. ದಿ. ಪಾಂಡುರಂಗರಾಯರ ಬಗ್ಗೆ ಗತ ಸಂಗತಿಗಳನ್ನು ಸ್ಮರಿಸಿಕೊಳ್ಳುವುದರಿಂದ ಅವರ ಹೃದಯಕ್ಕೆ ಹಗುರೆನಿಸಿರಬೇಕು. ಇಂತಹ ವ್ಯಥೆಯನ್ನು ನುಂಗಿಕೊಂಡು ಅದನ್ನು ಕಥೆ ಮಾಡಿ ಹೇಳುವ ಮಾನಸಿಕ ಸಾಧನೆ ಒಂದು ಮಹಾಯೋಗವೆಂದೇ ಹೇಳಬೇಕು. ಕವಿಯಾದವನು ಜೀವನಾನುಭವವನ್ನು ಒಂದು ಯಜ್ಞವನ್ನಾಗಿ ಕಲ್ಪಿಸಿ ಜೀವನದಲ್ಲಿ ಪಟ್ಟ ಪಾಡನ್ನು ಹಾಡನ್ನಾಗಿ ಪರಿವರ್ತಿಸುತ್ತಾನೆ.

ಚಿಕ್ಕೆ ಮೊಳೆಯುದ ಮುನ್ನ
ಹಕ್ಕಿ ಹಾರಲು ಹೋಗಿ
ಕಕ್ಕುಲತಿ ನೆತ್ತರನು
ಮುಕ್ಕುದಿಉವಡೆ ಮಣ್ಣ

'ತಿಲಾಂಜಲಿ'ಯ ಮೊದಲಿನ ನಾಲ್ಕು ಸಾಲುಗಳಿವು. ಹಿರಿಯ ಮಗ, ಒಬ್ಬನೆ ಮಗ ಕೃಷ್ಣನನ್ನು ಕಳೆದುಕೊಂಡಾಗ ತಂದೆಯ ಹೃದಯ ಸಂತಾಪ 'ತಿಲಾಂಜಲಿ'ಯ ಮೂಲಕ ಸೂಸಿ ಬಂದಿತ್ತು. ತನ್ನ ದುಃಖವನ್ನು ಕವಿ ಕಾವ್ಯ ದ್ವಾರಾ ಹಲವಾರು ಸಹೃದಯರಲ್ಲಿ ಹಂಚಿಕೊಂಡು ಹಗುರು ಮಾಡಿಕೊಳ್ಳುತ್ತಾನೆ. ಸಾಲಿಯವರು ಅಂದಿನ ದುಃಖವನ್ನು ಇಂದಿಗೆ ನೆನೆಯುತ್ತಿರುವಾಗ ಅವರ ಒಳಗಣ್ಣ ಮುಂದೆ ಹಿಂದಿನ ಚಿತ್ರಗಳೆಲ್ಲ ನುಗ್ಗಿ ಬರುತ್ತಿರಬೇಕು. ಅಂತೆಯೆ ಅವರು ಆಲೋಚನಾಮಗ್ನರಾಗಿರುವಂತೆ ತೋರುತ್ತಾರೆ.

ಮಗ ಕೃಷ್ಣ ಬಾಲ್ಯದಲ್ಲಿಯೇ ರಾಷ್ಟ್ರದ ಕಟ್ಟಾಭಿಮಾನಿ. ದೇಶದ ಸ್ವಾತಂತ್ರ್ಯಕ್ಕಾಗಿ ತಾನೂ ಹೋರಾಡಬೇಕೆಂಬ ಹಂಬಲ. ೧೯೩೦ರ ವರ್ಷ! ಸ್ವಾತಂತ್ರ್ಯ ಆಂದೋಲನಕ್ಕೆ ಒಂದು ಟೆಂಪೋ ಬಂದಿತ್ತು. ಯುವಕರಲ್ಲಿ ಹೊಸ ಉತ್ಸಾಹದ ಹೆದ್ದೆರೆ. ಡಾ॥ ಕಬ್ಬೂರರ ಭಾಷಣದಿಂದ ಉತ್ತೇಜಿತನಾಗಿ ಮಗ ಕೃಷ್ಣ ಉಪ್ಪಿನ ಸತ್ಯಾಗ್ರಹದ ಚಳುವಳಿಯಲ್ಲಿ ನುಗ್ಗಿದ. ಸತ್ಯಾಗ್ರಹಿಯಾಗಿ ಧರ್ಸಾನಾಕ್ಕೆ ವೀರ ಹೆಜ್ಜೆಯನ್ನಿಟ್ಟ. ಪೋಲೀಸರು ಮಾರ್ಗದಲ್ಲಿಯೆ ತಡೆದರು. ಅಡವಿಗಟ್ಟಿದರು. ತುಂಬ ಹಿಂಸೆಗೊಳಗಾಗಿ ಗಾಸಿಪಟ್ಟು ಮನೆಗೆ ಬಂದು ಬಿದ್ದ ಕೃಷ್ಣ.

ಕಾಲೇಜಿನಲ್ಲಿ ಕೃಷ್ಣ U. T. C.ಯಲ್ಲಿಯೂ ಸೇರಿದ. ಆ ಮೂಲಕವೂ ಆತನಲ್ಲಿ ವೀರೋತ್ಸಾಹದ ಕೆಚ್ಚು. ಒಮ್ಮೆ ಸಾಲಿಯವರಿಗೆ ಕಾಶೀಯಾತ್ರೆಯ ಸದವಕಾಶ. ಅಲೀಗಢದವರೆಗೂ ಮಿತ್ರರ ಸಹಾಯದಿಂದ ಯಾತ್ರೆ ಮುಂದರಿದಿತ್ತು. ಮನಸ್ಸಿಗೆ ಏನು ತಿಳಿಯಿತೊ ಏನೊ, ಯಾತ್ರೆಯನ್ನು ಮುಗಿಸದೆ ಧಾರವಾಡಕ್ಕೆ ಹಿಂತಿರುಗಿದರು. ಮಗ ತುದೆಯನ್ನು ನಿಲ್ದಾಣದಿಂದ ಮನೆಗೆ ಕರೆತಂದ. ಅಂದೇ ಕೃಷ್ಣನ U.T.C. ವಾರ್ಷಿಕೋತ್ಸವ. ಅದಕ್ಕಾಗಿ ದುಡಿದು ದುಡಿದು, ದಣಿದು, ರಾತ್ರಿ ಹೊತ್ತು ಮೀರಿ ಮನೆಗೆ ಬಂದು ಮಲಗಿದ. ಮೈಯುಷ್ಷ ಸರಿಯಿಲ್ಲವೆಂದು ಹೇಳಿ ಊಟ ಕೂಡ ಮಾಡಿರಲಿಲ್ಲ. ನಿದ್ರೆಯಲ್ಲಿ ನರಳುವದನ್ನು ಕಂಡು ತಂದೆಗೆ ಗಾಬರಿ. ಮೈ ಹಿಡಿದು ನೋಡುತ್ತಾರೆ; ಮೈ ಬೆಂಕಿಯಾಗಿತ್ತು. ತುಂಬ ಜ್ವರ. ಡಾ. ಕಬ್ಬೂರರು ಬಂದರು. ತಪಾಸು ಮಾಡಿದರು. ೧೦೭° ಜ್ವರ! ಅಯ್ಯೊ ದೇವರೆ! ಡಾ. ಕಬ್ಬೂರ ಗುರುಗಳಾದ ಸಾಲಿಯವರ ಅಡಿಗೆ ಮಣಿದರು. "ಮಾಸ್ತರ್, ನೀವು ದುರ್ದೈವಿ. ಇನ್ನು ನಾವೇ ನಿಮ್ಮ ಮಕ್ಕಳು. ನಿಷ್ಠುರವಾದರೂ ನಾನು ಸತ್ಯವನ್ನು ಹೇಳಲೇಬೇಕು. ಕೃಷ್ಣ ಇನ್ನು ನಿಮ್ಮ ಮಗನಾಗಿ ಉಳಿಯಲಾರ..." ಸಾಲಿಯವರಿಗೆ ಸಿಡಿಲು ಬಡಿದಂತಾಗಿತ್ತು. ಮರುದಿನವೇ ಕೃಷ್ಣ ಕಣ್ಣು ಮುಚ್ಚಿದ. ಎಲ್ಲಿಂದ ಬಂದು ಅಂಟಿಕೊಂಡಿತ್ತೊ ಪ್ಲೇಗು! ದೈವೇಚ್ಛೆ. ಸಾಲಿಯವರು ಈ ಎರಡನೆಯ ಕಹಿ ತುತ್ತನ್ನು ಸಹನೆಯಿಂದ ನುಂಗಿಕೊಂಡರು. ಮೊದಲನೆಯ ತುತ್ತು ೧೯೨೩ರಲ್ಲಿ ಹೆಂಡತಿಯ ಮರಣ. ಸಾಲಿಯವರು ಮತ್ತೊಂದು ಮದುವೆ ಮಾಡಿಕೊಳ್ಳಬಹುದಾಗಿತ್ತು, ಮಾಡಿಕೊಳ್ಳಲಿಲ್ಲ. ಮನೆಯಲ್ಲಿ ಇಬ್ಬರು ಹೆಣ್ಣು ಮಕ್ಕಳು. ಅವರಿಗೆ ಮಲತಾಯಿಯ ಅವಶ್ಯ ಬೇಡ ಎಂದು ನೆನೆದರು. ಹೇಗೋ ಬಾಳನೌಕೆಯನು ಸಾಗಿಸಿಕೊಂಡು ಸಾಗು

ತ್ತಿದ್ದಾಗ ಮಗನ ಈ ಅಕಾಲಿಕ ಮರಣದಿಂದಾಗಿ ಅವರ ಬಾಳು ಬಿರುಗಾಳಿಯು ಹೊಡೆತಕ್ಕೆ ಒಡೆದ ನೌಕೆಯಂತಾಗಿತ್ತು. ಈ ಎರಡನೆಯ ಕಹಿ ತುತ್ತನ್ನು ಹೇಗೆ ಪಚನ ಮಾಡಿಕೊಳ್ಳುವದು? ನೋವು ನೋಂಪಿಯಾಗಿ ಹೊರಬಂದಿತು. 'ತಿಲಾಂಜಲಿ!' ಕೃಷ್ಣನ ಕೃಷ್ಣ ಮರಣವು ಅದರಲ್ಲಿ ವರ್ಣಿತವಾಗಿತ್ತು. "ಪ್ರಾರ್ಥನೆ" ಎಂಬ ತತ್ಪೂರ್ವದ ಕಾವ್ಯದಲ್ಲಿ ತಿಲಾಂಜಲಿ ಪೂರ್ವದ ಅಂತರಂಗದ ಪರಿಸ್ಥಿತಿಯನ್ನು ತೋಡಿಕೊಂಡಿದ್ದಾರೆ.

ಮೊದಲಿನಿಂದಲೂ ಸಾಲಿಯವರು ಸ್ಥಿತಿ-ಮಂತರೇನಲ್ಲ. ವಿದ್ಯಾರ್ಥಿ ದೆಸೆಯಿಂದಲೇ ಗುರುಗಳ, ಮಿತ್ರರ ಸಹಾಯ, ಸಹಾನುಭೂತಿಗಳಿಂದ ಬೆಳದು ಬಂದವರು. ಇನ್ನೊ-ಬ್ಬರ ಕರುಣೆಯ ನೆರಳಿನಲ್ಲಿ ನಿಂತುಕೊಂಡೇ ವಿದ್ಯಾಭ್ಯಾಸವನ್ನು ಮುಗಿಸಿದವರು. ಇವರ ಕಾಲೇಜು ಶಿಕ್ಷಣ ಪುಣೆ ಫರ್ಗ್ಯುಸನ್ ಕಾಲೇಜ್ ಮತ್ತು ಡೆಕ್ಕನ್ ಕಾಲೇಜಿನಲ್ಲಿ.

"ನೀವು ಧಾರವಾಡಕ್ಕೆ ಬಂದು ನೆಲಸಿದ್ದು ಯಾವಾಗ?" ನಾನು ಪ್ರಶ್ನೆ ಮಾಡಿದೆ.

"೧೯೨೩ ರೊಳಗ. ಅದೂ ಹೆಂಡತಿಗೆ ಕಾಯಿಲೆ ಅಂತ ಕೂಡಲೇ ಬರಬೇಕಾಯಿತು. ಬಿ. ಎ. ನೂ ಮುಗಿಸಿದೆ. ನೌಕರೀನೂ ದೊರಕಿಸಿದೆ. ಹೆಂಡತಿನ್ನ ಮಾತ್ರ ಉಳಿಸಿಕೊಳ್ಳೋದು ಆಗಲಿಲ್ಲ."

"ನೀವು ಹೈಸ್ಕೂಲು ಶಿಕ್ಷಕರಾಗೇ ನೌಕರಿ ಸುರುವು ಮಾಡಿದಿರೇನು? ಯಾಕಂದರ ಹೆಸರs ಸಾಲಿ; ಸಾಲೀ ಮಾಸ್ತರಕೀನೂ ಅನ್ವರ್ಥಕ ಏನೋ ಅಂದುಕೊಂಡೆ."

"ಇಲ್ಲ. ಮೊದ್ಲ ಪೋಸ್ಟ ಆಫೀಸಿನೊಳಗ ಕೆಲಸಾ ಹಿಡಿದೆ. ಆದರ ಮನಸ್ಸು ಸ್ವಾತಂತ್ರ್ಯಂದೋಲನದ ಕಡೆ ಹರಿಯಿತು. ಟಿಳಕರ ಪ್ರಭಾವ. ಸರಿ, ಸರಕಾರೀ ನೌಕರಿಗೆ ತಿಲಾಂಜಲಿ."

"ಮುಂದೆ?"

"ಧಾರವಾಡಕ್ಕೆ ಬಂದಮ್ಯಾಲೆ ಶ್ರೀ ಆಲೂರ ವೆಂಕಟರಾಯರ ಪರಿಚಯ ಆಯಿತು. ಅವರಿಂದ ನನ್ನ ಕನ್ನಡದ ಅಭಿಮಾನ ಜಾಗೃತ ಆಯ್ತು."

"ಮೊದ್ಲs ಜಾಗೃತ ಇದ್ದದ್ದು ಉಜ್ವಲ ಆಯಿತು ಅನ್ರಿ."

"ಇಲ್ಲ, ಒಂದು ಮಾತು ನಾನು ಹೇಳಲೇಬೇಕು. ನನ್ನ ವಿದ್ಯಾರ್ಥಿ ದೆಸೆಯಲ್ಲಿ ಬೆಳಗಾವಿ, ಪುಣೇದಲ್ಲಿ ಆದ್ದರಿಂದ ನನಗ ಕನ್ನಡದ ಅಭ್ಯಾಸ ಸಾಕಷ್ಟು ಆಗಿರಲಿಲ್ಲ."

"ನಿಮಗ?"

"ಹೌದು. ಶ್ರೀ ಆಲೂರ ವೆಂಕಟರಾಯರ ಕನ್ನಡ ಮಂತ್ರದ ಪ್ರಭಾವದಿಂದಲೇ ನನ್ನ 'ಆವಿನದು ನೊರೆ ಹಾಲನೊಲ್ಲೆನು' ಅನ್ನುವ ಪದ್ಯ ಹೊರ ಹೊಮ್ಮಿತು."

"ಹಾಂಗಾದರ ಅದೇ ನಿಮ್ಮ ಮೊದಲ ಕವನ ಅನ್ರಿ!"

"ಹೌದು, ನನ್ನ ಪ್ರಥಮ ಪ್ರಕಟಿತ ಕವನ. ಶ್ರೀ ಮಂಗಳವೇಢೆ ಶ್ರೀನಿವಾಸರಾಯರು 'ಕನ್ನಡ ನವಜೀವನ' ಅನ್ನುವ ಪತ್ರಿಕೆಯೊಳಗ ಪ್ರಸಿದ್ಧ ಮಾಡಿದರು. ಮುಂದೆ ಶ್ರೀನಿವಾಸರಾಯರೇ ನನ್ನ ಏಳೆಂಟು ಪದ್ಯಗಳನ್ನ ಪ್ರಕಟಿಸಿರಬೇಕು!"

"ಆವಿನದು ನೊರೆ ಹಾಲನೊಲ್ಲೆನು ಅನ್ನೋ ಕವಿತಾ ಜನರಿಗೆ ಬಹಳ ಮೆಚ್ಚಿಗೆ ಆಧಾಂಗ ಕಾಣತದ." ನನ್ನ ಈ ಮಾತಿಗೆ ಸಾಲಿಯವರು ಉತ್ಸಾಹಿತರಾದರು. ಹಿರಿಯ ಸಾಹಿತಿ ಶ್ರೀ ಮಾಸ್ತಿಯವರಿಗೆ ಅದು ಮೆಚ್ಚಿಗೆಯಾದ ಒಂದು ಸಂದರ್ಭವನ್ನು ವಿವರಿಸಿದರು. ಒಮ್ಮೆ ಸಾಲಿಯವರು ಬೆಂಗಳೂರಿಗೆ ಹೋದಾಗ ಮಾಸ್ತಿಯವರನ್ನು ಕಂಡುಬರಬೇಕೆಂದು ಬಸವನಗುಡಿಗೆ ಹೋದರು. ಮನೆಯ ಬಾಗಿಲು ತಟ್ಟಿದರು. ಮಾಸ್ತಿಯವರೇ ಬಾಗಿಲು ತೆರೆದರು.

"ತಾವು ಯಾರು?"

"ನಾನು, ಸಾಲಿ ರಾಮಚಂದ್ರರಾಯ!"

"ಓ! ಬರಬೇಕು, ಬರಬೇಕು!... ಆವಿನದು ನೊರೆ ಹಾಲನೊಲ್ಲೆನು' ತಾವೇ ಬರೆದದ್ದು ಅಲ್ಲವೇ?"

ಆವಿನ ನೊರೆ ಹಾಲಿನಂತೆ ಮಾಸ್ತಿಯವರ ಸ್ನೇಹ ಸಾಲಿಯವರ ಹೃದಯವನ್ನು

ತುಂಬಿತ್ತು. ಈ ಪರಿಚಯ ಸಂಧಿಸಿದುದು ಸುಮಾರು ೧೯೨೩ ರಲ್ಲಿ. ಆಗ ಸಾಲಿಯವರಿಗೆ ೩೨ ವರ್ಷ, ಮಾಸ್ತಿಯವರಿಗೆ ೨೮. ಮಾಸ್ತಿಯವರಿಗೆ ಅಧಿಕಾರಿಯ ವರ್ಚಸ್ಸು, ಆತ್ಮೀಯ ಮಿತ್ರನ ಅಂತಃಕರಣ ಎರಡೂ ಮುಖದ ಮೇಲೆ ಕಂಗೊಳಿಸುತ್ತಿದ್ದವು. ಈ ಪ್ರಥಮ ಪರಿಚಯವೇ ಪಾಕವಾಗಿ ಸೋದರ ಭಾವದಲ್ಲಿ ಪರಿವರ್ತಿತವಾಗಿತ್ತು. ಮುಂದೆ ಕೆಲವೇ ದಿನಗಳಲ್ಲಿ ಸಾಲಿಯವರಿಗೆ ಪತ್ನೀ ವಿಯೋಗ! ಮಾಸ್ತಿಯವರು ಪತ್ರ ಬರೆದರು– 'ದಿನಕರ್ಮ ಮುಗಿಸಿಕೊಂಡು ನಿಮ್ಮ ಮಕ್ಕಳೊಂದಿಗೆ ಕೆಲ ದಿನಗಳ ಮಟ್ಟಿಗೆ ಇಲ್ಲಿ ಬಂದು ಬಿಡಿ. ಹಾಯಾಗಿ ಇರಿ. ಬದಲಾವಣೆಯಾಗಲಿ.' ಆ ಮಾತಿಗೆ ಸಾಲಿಯವರು ಮಾಸ್ತಿಯವರ ಮನೆಯಲ್ಲಿ ಹಿರಿಯಣ್ಣನಾಗಿ ಕೆಲ ದಿನ ಇದ್ದರು. "ನನ್ನ ಜೀವನದಲ್ಲಿ ಮಾಸ್ತಿಯವರನ್ನು ನಾನು ಎಂದೂ ಮರೆಯಲಾರೆ!" ಈ ಮಾತನ್ನು ಹೇಳುವಾಗ ಸಾಲಿಯವರ ಅಂತಃಕರಣ ತುಂಬಿ ಬಂದಿತ್ತು.

"ಹೀಗೆ ನಿಮ್ಮ ಮೇಲೆ ಪರಿಣಾಮ ಮಾಡಿದ ಬೇರೆ ವ್ಯಕ್ತಿಗಳು?"

"ಸಾಹಿತಿಗಳಾಗಿ ಮಾಸ್ತಿಯವರು ಬೇಂದ್ರೆಯವರು ಇಬ್ಬರೇ ನನ್ನ ಮೇಲೆ ಪ್ರಭಾವ ಬೀರಿದ್ದಾರೆ. ಹಳಗನ್ನಡದ ಪ್ರತಿನಿಧಿಗಳಾಗಿ ಪಂಪ-ಮುದ್ದಣ. ಸಂಸ್ಕೃತದಲ್ಲಿ ವಾಲ್ಮೀಕಿ, ವ್ಯಾಸ. ನಾಟಕಕಾರರಾಗಿ ಕಾಳಿದಾಸ, ಭವಭೂತಿ ಮತ್ತು ವಿಶಾಖದತ್ತ."

"ಮಾಸ್ತಿಯವರ ಹಾಗೆ ನಿಮಗೆ ಆಸರೆ ನೀಡಿದವರು?"

"ನನ್ನ ವಿದ್ಯಾರ್ಥಿ ದೆಸೆಯೊಳಗ ವಿಜಾಪುರದ ಡಂಬಳ ಮಾಸ್ತರು. ಧಾರವಾಡದ ಡಂಬಳರ ಅಣ್ಣಂದಿರು. ನಾನು ತೀರ ಚಿಕ್ಕವನಿರುವಾಗಲೇ ತಂದೆಯನ್ನು ಕಳೆದುಕೊಂಡೆ. ವಿದ್ಯಾರ್ಥಿ ದೆಸೆಯಲ್ಲಿ ತಾಯಿಯನ್ನು ಕಳೆದುಕೊಂಡೆ. ವಿಜಾಪುರದೊಳಗ ವಾರ ಹಚ್ಚಿಕೊಂಡು ಅಭ್ಯಾಸ ಮುಂದರಿಸಿದೆ. ಒಬ್ಬ ಸ್ಥಿತಿವಂತರ ಮನೆಯೊಳಗ ಮುಂದ ಕಾಯಂ ಆಗೇ ಇದ್ದುಬಿಟ್ಟೆ. ಆದರೆ ನನ್ನ ದುರ್ದೈವಕ್ಕ ಅಲ್ಲಿ ಕಾಯಂ ಆಗಿ ನಿಲ್ಲದಂತಹ ಪರಿಸ್ಥಿತಿ .."

"ಅಂದರ?"

"ಅಂದರ ತುಂದೆ ಮಕ್ಕಳ ದುರ್ವ್ಯಸನಕ್ಕ ನಾನು...ಏನು ಹೇಳಲಿ?"

'ಅಂದರ?'

'ಅಂದರೇನು? ಅವರ ಕುಡಿತಕ್ಕ ನಾನು ಪ್ಯಾಟಿಯಿಂದ ಬಾಟ್ಲಿ ತಂದು ಕೊಡಬೇಕು. ರಾತ್ರಿ ವೇಶ್ಯಾನ ಮನೆಗೆ ಹೋಗಲಿಕ್ಕೆ ಅವರಿಗೆ ಕಂದೀಲು ತೋರಿಸಿ ಬರಬೇಕು. ಒಂದು ದಿವಸ ರಾತ್ರಿ ಊಟಕ್ಕೆ ಕೂತಾಗ ಮಗಾ ಕುಡದು ಬಂದಿದ್ದ. ಊಟದ ತಾಟಿನ್ಯಾಗ ವಾಂತಿ ಮಾಡಿಕೊಂಡ. ನಾನು ಬಳೀಬೇಕಾತು!! ವಾಂತಿ ಬಳದು ಚೆಲ್ಲಿ ಕಂದೀಲು ಹಿಡಕೊಂಡು ಹೋಗಬೇಕಾತು. ಎಲ್ಲಿಗೆ ಅಂತ ಮತ್ತ ಕೇಳಬ್ಯಾಡ್ರಿ. ಹದಿನೈದು ವರ್ಷದ ಹುಡುಗ ನಾನು. ವಿದ್ಯಾಭ್ಯಾಸಕ್ಕಿಂತ ಒಬ್ಬರ ಮನೆಯ ಚಾಕರನಾಗಿ ಇದ್ದುಕೊಂಡು ಮಾಡಬಾರದ ಕೆಲಸಕ್ಕೆ ತಯಾರಾಗಿ ನಾಳೆ ನನ್ನ ಭವಿಷ್ಯನೂ ಹಾಳಾಗೋ ಪ್ರಸಂಗ ಬಂದರ? ನನ್ನ ಮನಸ್ಸು ಬಹಳ ತ್ರಸ್ತ ಆತು. ಅದೇ ಒಂದು ತಿರುವಿನ ಬಿಂದು ಆತು, ಮರುದಿನ ನಾನು ಈ ಸಮಾಚಾರ ಎಲ್ಲಾ ನನ್ನ ಆಪ್ತ ಮಿತ್ರ ಶಾಸ್ತ್ರ್ಯಾನ ಮುಂದ (ದಿ. ಆರ್. ಎ. ಜಾಗೀರದಾರ, ಕ. ವಿ. ವಿ. ವೈಸ್ ಚಾನ್ಸಲರ್) ತೋಡಿಕೊಂಡೆ. ಹಾಂಗಾದರ ಡಂಬಳ ಮಾಸ್ತರ ಕಡೆ ಹೋಗು. ಅವರು ಖಾತ್ರಿ ಸಹಾಯ ಮಾಡತಾರ ಅಂದ. ಮರುದಿನ ಮಧ್ಯಾಹ್ನ ಸೂಟಿಯೊಳಗ ಏಕಾಂತ ಸ್ಥಳದೊಳಗ ರಾಮ ಜಪ ಮಾಡಿಕೋತ ಕೂತಿದ್ದ ಡಂಬಳ ಮಾಸ್ತರ ಕಡೆ ಹೋದೆ. ಕಣ್ಣಲ್ಲಿ ನೀರು ತುಂಬಿಬಂದವು. ಅವರ ಕಾಲಿಗೆ ಬಿದ್ದೆ. ನನ್ನ ಅನಾಥ ಪರಿಸ್ಥಿತಿ ತೋಡಿಕೊಂಡೆ. ಅವರು ನನ್ನ ಹಿಡಿದು ಎತ್ತಿದರು. 'ಕಾಳಜಿ ಮಾಡಬ್ಯಾಡಾ, ನಿನ್ನ ತಂದೆ ತಾಯಿ ಜೀವಂತ ಇದ್ದಾರ ಅಂತ ತಿಳಕೋ' ಅಂದರು. ಆತು ಅವತ್ತೇ ಅವರ ಮನೆಯ ನೆರಳು. ಇಂದಿಗೂ ನಾನು ಡಂಬಳ ಮಾಸ್ತರ್ನ ತಂಪು ಹೊತ್ತಿನೊಳಗ ನೆನಸಬೇಕು. ಆದರ

ಒಂದು ಮಾತು; ಯಾರ ಮನೆ ನಾನು ಬಿಟ್ಟು ಬಂದೆನೋ ಅವರೆಲ್ಲರೂ ನನ್ನನ್ನ ಒಳ್ಳೇ ರೀತಿಯಿಂದ ಕಂಡಿದ್ದರು. ಆದರೆ...ದುರ್ವ್ಯಸನ...!"

ಈ ಸಂಗತಿಯನ್ನು ಮನದುಂಬಿ ನಿರೂಪಿಸುವಾಗ ಸಾಲಿಯವರು ಎರಡು ಮೂರು ಸಲ ಗದ್ಗದಿಸಿದರು.

"ನೀವು ಧಾರವಾಡಕ್ಕೆ ಬಂದು ನೆಲಸಿದ ಮ್ಯಾಲೆ, ನಿಮ್ಮ ಮ್ಯಾಲೆ ಯಾರ ಯಾರ ಪ್ರಭಾವ ಬಿತ್ತು? ನಿಮ್ಮ ಶಿಕ್ಷಕ ವೃತ್ತಿ ಹ್ಯಾಂಗ ಆರಂಭ ಆಯ್ತು? ನಿಮ್ಮ ಸಾಹಿತ್ಯ ಸೃಷ್ಟಿ ಹ್ಯಾಂಗ ನಿರ್ಮಾಣ ಆಯ್ತು; ಬೆಳೆಯಿತು ಇದನ್ನೆಲ್ಲಾ ಸ್ವಲ್ಪ ಹೇಳ್ತೀರಾ?"

"ಧಾರವಾಡಕ್ಕೆ ಬಂದ ಮ್ಯಾಲೆ ಆಲೂರ ವೆಂಕಟರಾಯರಿಂದ ಸ್ಫೂರ್ತಿ ಪಡೆದದ್ದಂತೂ ಸರಿಯೆ. ಅಲ್ಲದೆ ಕಡಪಾ ರಾಘವೇಂದ್ರರಾಯರು, ಮುಂದವೀಡು ಕೃಷ್ಣರಾಯರು, ರೊದ್ದ ಶ್ರೀನಿವಾಸರಾಯರು ಈ ಹೆಸರುಗಳನ್ನು ನಾನಿಲ್ಲಿ ನೆನೆದುಕೊಳ್ಳಬೇಕು. ಇವರೆಲ್ಲರಿಂದ ಕನ್ನಡದ ಸ್ಫೂರ್ತಿ, ಟಿಳಕ, ಗಾಂಧೀಜಿ ಅವರಿಂದ ದೇಶಭಕ್ತಿಯ ಸ್ಫೂರ್ತಿ!..."

"ಗಾಂಧೀಜಿ ದರ್ಶನ ನಿಮಗ ಆಗಿತ್ತೇನು? ಯಾವಾಗ?"

"ಹೌದು ಗಾಂಧೀಜಿ ದರ್ಶನ, ಸಂದರ್ಶನ ಎರಡೂ ನನಗ ಲಭಿಸಿದ್ದು ಬೆಳಗಾವಿ ಕಾಂಗ್ರೆಸ್‌ನೊಳಗ. ಗಾಂಧೀಜಿಯವರ ಅಧ್ಯಕ್ಷೀಯ ಭಾಷಣದ ಕನ್ನಡ ಅನುವಾದ ಮಾಡುವ ಸುಯೋಗ ನನಗ ದೊರಕಿತ್ತು.'

"ಹಾಂಗಾದರ ಧಾರವಾಡಕ್ಕೆ ಬಂದ ಮ್ಯಾಲೆ ನಿಮ್ಮ ಕಾಂಗ್ರೆಸ್ ನಿಷ್ಠೆ ಚ್ಯುತಿ ಇಲ್ಲದೆ ನಡೆದುಕೊಂಡು ಬಂದಿರಬೇಕು!"

"ನಾನು ಧಾರವಾಡಕ್ಕೆ ಬಂದ ಮ್ಯಾಲೆ ಕರ್ನಾಟಕ ಹೈಸ್ಕೂಲಿನಲ್ಲಿ ಶಿಕ್ಷಕ ಅಂತ ನೆಲೆಯಾಗಿ ನಿಂತೆ. ನನ್ನ ಬಾಳನೌಕೆಗೆ ಒಂದು anchor ಸಿಕ್ಕಂತಾತು. ನನ್ನ ಶಿಷ್ಯರಾಗಿದ್ದ ದ. ಪ. ಕರಮರಕರ, ಡಾ. ಎನ್. ಬಿ. ಕಬ್ಬೂರ ಇವರೇ ನಾನು ಧಾರವಾಡದಾಗ ಕಾಲೂರಿ ನಿಲ್ಲುವ ಹಾಂಗ ಅನುಕೂಲ ಮಾಡಿಕೊಟ್ಟರು. ಶಿಕ್ಷಕನಾಗಿದ್ದುಕೊಂಡೇ ನಾನು ನನ್ನ ದೇಶ ಭಕ್ತಿ, ನಾಡಭಕ್ತಿಗಳನ್ನು ಬೆಳಸಿಕೊಂಡು ಬಂದೆ. ನನ್ನ ಕಾವ್ಯದಲ್ಲಿ ಈ ಭಾವನೆಗಳಿಗೆ ಅಭಿವ್ಯಕ್ತಿ ಸಿಕ್ಕಿತು."

"ನಿಮ್ಮ ಕಾವ್ಯ ರಚನೆಯ ಬಗ್ಗೆ ಒಂದು ಮಾತು ಮೂವತ್ತರ ದಶಕದೊಳಗ ಆಧುನಿಕ ಕಾವ್ಯ ಹೊಸದೊಂದು ಮಾರ್ಗವನ್ನು ಹಿಡಿದಾಗಲೂ ನೀವು ಮಾತ್ರ ಷಟ್ಪದಿ ರಚನೆ ಬಿಡಲಿಲ್ಲ. ಯಾಕೆ?"

"ಷಟ್ಪದಿ ಕಾವ್ಯ ರಚನೆಯ ಬಗ್ಗೆ ನನ್ನಲ್ಲಿ ಅಷ್ಟೊಂದು ಪ್ರೀತಿ, ಆಸಕ್ತಿ ಮೂಡಿ ಬರಲಿಕ್ಕೆ ಮುದ್ದಣ, ಕುಮಾರವ್ಯಾಸ, ಲಕ್ಷ್ಮೀಶರೇ ಕಾರಣ. ಇವರನ್ನ ನಾನು ವಿದ್ಯಾರ್ಥಿಗಳಿಗೆ ಕಲಿಸತಾನೂ ಇದ್ದೆ."

ಷಟ್ಪದೀ ಕಾವ್ಯದಲ್ಲಿ ಸಾಲಿಯವರು ಆಧುನಿಕ ಭಾವಗೀತದ ಬೆಡಗನ್ನು ತಂದರು. 'ಕನ್ನಡದ ಪುಲ್ಲೆನಗೆ ಪರಮ ಪಾವನ ತುಲಸಿ...' ಎಂದು ಬಣ್ಣಿಸುತ್ತ 'ಕನ್ನಡಂದೈವಮೆನ್ಯೆ' ಎಂದು ಭಾವನಾ ಶಿಖರವನ್ನು ಮುಟ್ಟುವ ಅವರ ಈ ಷಟ್ಪದಿ, ಕವಿಯ ಕನ್ನಡತನದ ಕೆಚ್ಚನ್ನೂ ನಿಚ್ಚಳವಾಗಿ ಮೂಡಿಸುತ್ತದೆ. ಅದೇ ಬಗೆಯ ಅವರ 'ಇಂಚರ' ಎಂಬ ಷಟ್ಪದಿಯ ತುಣುಕು ಎಂತಹ ಸುಂದರ ಬಂಧುರ ಭಾವನೆಗಳಿಂದ ಕೂಡಿದೆ. ಗಮಕಿಯೊಬ್ಬಳ ಗಮಕ ವಾಚನವನ್ನು ಕೇಳಿ ಮೆಚ್ಚಿ 'ಅಭೀಪ್ಸಿತಂ ಸಂಪ್ರಾಪ್ತಮಸ್ತುತೇ ಎಂಬುದೇ ಎನ್ನ ಪರಕೆ' ಎಂದು ಉದ್ಗಾರ ತೆಗೆದಿದ್ದಾರೆ. (ಈ ಗಮಕಿ ಭಾರತ ಬಿಂದೂರಾಯರ ಶಿಷ್ಯೆ ಖ್ಯಾತ ಗಾಯಕಿ ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಎಂಬುದು ಮೊನ್ನೆ ಮೊನ್ನೆ ನನಗೆ ಗೊತ್ತಾಯಿತು.)

'ಚಿತ್ರಸೃಷ್ಟಿ' ಸಾಲಿಯವರ ಕಾವ್ಯ ರಚನಾ ಮಾರ್ಗದಲ್ಲಿ ಎರಡನೆಯ ಮೈಲಿಗಲ್ಲು. ಇದರಲ್ಲಿ ಷಟ್ಪದಿಯಿಂದ ಅವರ ಕಾವ್ಯವಾಹಿನಿ ಛಂದೋ ರೂಪದಲ್ಲಿಯೂ ಹೊಸ ತಿರುವನ್ನು ಪಡೆದಿದೆ. ಇದೊಂದು ಲಲಿತ ಭಾವಗೀತಗಳ ಗುಚ್ಛ.

ಸಾಲಿ ರಾಮಾಯಣವು ಮೂರನೆಯ ಮೈಲಿಗಲ್ಲು. ಇದೊಂದು 'ಆಧುನಿಕ ಮಹಾಕಾವ್ಯ' ಎಂಬ ಮೆಚ್ಚುಗೆಯನ್ನೂ ಸಂಪಾದಿಸಿತು.

ಶ್ರೀರಘುಕುಲಮಣಿ
ವೀರ ಶಿರೋಮಣಿ
ಕಾರುಣಿಕಾಗ್ರಣಿ, ತಾರಕ ಶರಣು

ಎಂಬ ಚಿಕ್ಕ ಚೊಕ್ಕ ಶರಷಟ್ಪದಿಯು ಈ ಕಾವ್ಯ ಬಹು ಲೋಕಪ್ರಿಯತೆಯನ್ನು ಗಳಿಸಿತು. 'ಕವಿಯೆಂದರೆ ವ್ಯಕ್ತಿಯಲ್ಲ ಅದೊಂದು ಶಕ್ತಿ' ಎಂದು ವಿಮರ್ಶಕರು ಹೊಗಳಿದರು ಈ ಆಧುನಿಕ 'ಮಹಾಕಾವ್ಯ'ದ ಕವಿಯನ್ನು ಕುರಿತು. ವಿದ್ಯಾರ್ಥಿಗಳಿಗಂತೂ ಈ ಕಾವ್ಯ ಕಂಠಪಾಠಕ್ಕೆ ಬಹಳ ಸುಗಮವಾಗಿತ್ತು. ಇಷ್ಟೆಲ್ಲ ಹಿರಿಮೆಯಿಂದಲೂ ಈ ಕಾವ್ಯ ರಚನೆ ಇಂದಿಗೂ ಪೂರ್ತಿಗೊಂಡಿಲ್ಲ. ಇದೊಂದು ದುರ್ದೈವದ ಸಂಗತಿ. ಧನಬಲವಿಲ್ಲದುದೆ ಕಾರಣವೊ ಅಥವಾ ಒಂದೆಡೆಗೆ ಈ ಕಾವ್ಯದ ಬಗ್ಗೆ ಅನವಶ್ಯಕವಾದ 'ಬ್ರಹ್ಮಾಸ್ತ್ರ'ದಂತಹ ಒಂದು ವಿಮರ್ಶೆಯು ಪೆಟ್ಟು ಬಿದ್ದುದೇ ಕಾರಣವೋ? ಅಂತೂ ಕನ್ನಡ ಸರಸ್ವತಿಯ ದುರ್ದೈವ.

ಸಾಲಿಯವರು 'ಯದುಪತಿ' ಎಂಬ ಒಂದು ಚಿಕ್ಕ ಕಾದಂಬರಿಯನ್ನು ಬರೆದಿರುವುದು ಬಹು ಜನರ ಕಣ್ಣಿಗೆ ಬಿದ್ದಂತಿಲ್ಲ. ಕತೆಗಾರರು ಇದರಲ್ಲಿ ತಮ್ಮ ಬಾಲ್ಯದ ಕಷ್ಟನಿಷ್ಠುರಗಳೊಂದಿಗೆ ಗುರಿಬದ್ಧ ಜೀವನವನ್ನೇ ಚಿತ್ರಿಸಿರಬೇಕು ಎನಿಸುತ್ತದೆ.

ಸಾಲಿಯವರ ನಿವೃತ್ತ ಜೀವನ ಶಾಂತಮಯವಾಗಿ ಸಾಗಿತ್ತು. 'ಶ್ರೀನಿಕೇತನ'ದ ಸುತ್ತುಮುತ್ತಲಿನ ವನಶ್ರೀಯಲ್ಲಿ ಕೈಯಲ್ಲಿಯ ಊರುಗೋಲು ಹಿಡಿದುಕೊಂಡು ಪ್ರಕೃತಿಯ ಚೆಲುವನ್ನೂ ಸವಿಯಲೆಂಬಂತೆ ಸುತ್ತಲೂ ಓಡಾಡುವರು. ಇಂತಹ ತಾಳ್ಮೆಯ ಬಾಳಿಗೆ ಮತ್ತೊಂದು ಪೆಟ್ಟು ಅವರ ಅಕ್ಕರೆಯ ಅಳಿಯ ಪಾಂಡುರಂಗರಾಯರು ಅಳಿದುದು. ಇಂತಹ ನೋವನ್ನು ತಡೆದುಕೊಂಡವರಿಗೆ ರಾಜ್ಯ ಪ್ರಶಸ್ತಿಯೂ ಸನ್ಮಾನದ ಸಂತಸ ವಿಶೇಷವೆನಿಸಿರಲಾರದು; ಸುಖ ದುಃಖಗಳನ್ನು ಸಮನಾಗಿ ತಿಳಿದ ಅವರಿಗೆ.

ಒಮ್ಮೆ ಸಾಲಿಯವರು ಸಂಸ್ಕೃತ ಸರಳ ಗದ್ಯದಲ್ಲಿ ಬರೆದಿಟ್ಟಿದ್ದ ರಾಮಾಯಣದ ಒಂದು ಭಾಗವು ಬೆಳಗಾಗುವುದರಲ್ಲಿ ಗೆದ್ದಲಿಗೆ ಆಹುತಿ! ವಾಚಕನಿಗಿಂತ ಮೊದಲು ಗೆದ್ದಲಿಗಳೆ ಅದನ್ನು ಮೆಚ್ಚಿ ಜೀರ್ಣಿಸಿಕೊಂಡು ಬಿಟ್ಟವೇನೊ! ಆದರೆ ಸಾಲಿಯವರಿಗೆ ಈ ಕಾವ್ಯ ನಷ್ಟ ಬಲವಾದ ನೋವನ್ನುಂಟು ಮಾಡಿತು. ಇವರ ಮೊಮ್ಮಗ ಮಾತ್ರ– "ಎಂಥೆಂಥಾದ್ದೊ ತಡಕೊಂಡಾನ ಅಜ್ಜಾ. ಇದನ್ನು ತಡಕೊಂಡ ತಡಕೋತಾನ' ಎಂದು ತಮ್ಮ ತಾಯಿಯೆದುರಿಗೆ ಉದ್ಗಾರ ತೆಗೆದನಂತೆ. ಹೌದು, ಸಾಲಿಯವರಲ್ಲಿ ಬಂದ ನೋವನ್ನು ಸಹಿಸಿಕೊಳ್ಳುವ ಶಕ್ತಿ ಇದೆ. ಈ ಯೋಗ ಶಕ್ತಿ ಅವರಲ್ಲಿ ದೊರಕೊಂಡುದು ವ್ಯಾಸ ವಾಲ್ಮೀಕಿಗಳ ಅಭ್ಯಾಸ ಬಲದಿಂದ, ಶ್ರೀ ಮದ್ಭಾಗವತದ ಶ್ರೀಕೃಷ್ಣನ ಚರಿತಾಮೃತ ಪಾನದ ಫಲದಿಂದ.

ಈಗ ಸಾಲಿಯವರು ಅನೇಕ ಕನ್ನಡ ಭಕ್ತಿ ಗೀತಗಳ ರಚನೆಗಳೊಂದಿಗೆ ಭಾಗವತದ ಆಧಾರದಿಂದ ಶ್ರೀ ಕೃಷ್ಣ ಚರಿತವನ್ನು ಸರಳ ಸಂಸ್ಕೃತ ಗದ್ಯದಲ್ಲಿ ರಚಿಸತೊಡಗಿದ್ದಾರೆ. ಇಡಿಯ ಭಾಗವತವನ್ನೇ ಗದ್ಯಾನುವಾದಿಸಬೇಕೆಂದು ಬಯಸಿದರು. ಸಿರ್ಸಿಯ ಸಂಸ್ಕೃತ ಪ್ರಾಧ್ಯಾಪಕ ಮುಂಡರಗಿಯವರು, "ಅದು ನಿಮ್ಮ ಶೇಷಾಯುಷ್ಯದಲ್ಲಿ ಮುಗಿಯುವ ಕಾರ್ಯವಲ್ಲ. ಅದಕ್ಕಾಗಿ ಕೃಷ್ಣ ಚರಿತವನ್ನು ಮಾತ್ರ ಬರೆಯಿರಿ" ಎಂದರಂತೆ. ಆ ಮೇರೆಗೆ ಈಗ ಕಂಸವಧೆಯ ವರೆಗೆ ಪೂರೈಸಿದ್ದಾರೆ. ಅದರ ಒಂದು ತುಣುಕು ಮಾದರಿ ಹೀಗಿದೆ:

"ಭೋಜರಾಜ (ಎಂದರೆ ಕಂಸರಾಜ) ತೂರ್ಯಾಣಿ ನಿವಾರ್ಯ ಅವದತ್– 'ದುರುವೃತ್ತೌ ವಾಸುದೇವಾತ್ಮಜೌ ಪುರಾತ್ ನಿಸ್ಸಾರಯತ. ಗೋಪಾನಾಂ ಧನಂ ಹರತ. ದುರ್ಮತಿಂ ನಂದಂ ಬಧ್ನೀತ, ದುರ್ಮೇಧಃ ವಾಸುದೇವಃ ಹನ್ಯತಾಂ. ತೇನ ಸಹ ಮಮ

ಪಿತಾ ಅಪಿ ಪರಪಕ್ಷಗಃ ,ಉಗ್ರಸೇನಃ”

‘ಆವಿಶಂತಂ ತಂ ಆಲೋಕ್ಯ ಭೋಜಪತಿಃ ಕಂಸಃ ಆಸನಾತ್ ಉತ್ಪತ್ಯ ಅಸಿ ಚರ್ಮಣೀ ಜಗ್ರಾಹ. ಪ್ರಕ್ಷುಬ್ಧಂ ತಂ ಖಡ್ಗಪಾಣಿಂ ಉಗ್ರತೇಜಾಃ ಆತ್ಮತಂತ್ರಃ ಕೇಶವಃ ಕೇಶೇಷು ಪ್ರಗೃಹ್ಯ ತುಂಗ ಮಂಚಾತ್‌ರಂಗ ಮಧ್ಯೇ ನಿಪಾತ್ಯ ತಸ್ಯ ಉಪರಿ ಸ್ವಯಂ ಪಪಾತ್. ಜನಸ್ಯ ಪಶ್ಯತಃ ಹರಿಃ ಪರೇತಂ ತಂ ಭೂಮೌ ವಿಚಕರ್ಷತ್ತದಾ. ಸರ್ವಜನೈಃ ಉದೀರಿತಃ ಹಾಹಾ ಇತಿ ಶಬ್ದಃ ಅಭೂತ್.

‘ಪಿಬನ್ ವಾ ವದನ್ ವಾ ಮುಂಚನ್ ವಾ ವಿರಚನ್ ವಾ ಸ್ವಪನ್ ವಾ ಶ್ವಸನ್ ವಾ ನಿತ್ಯದಾ ಸಃ ಕಂಸಃ ಉದ್ವಿಗ್ನ ಧಿಯಾ ಯಂತ್ ರೂಪಂ ಅಪಶ್ಯತ್ ತದೇವ ದುರವಾಪಂ ರೂಪಂ ಸಃ ಅವಾಪ.’

ಸಂಸ್ಕೃತ ಭಾಷೆ, ಸಂಸ್ಕೃತ ವಾಙ್ಮಯ ಎಂದರೆ ಸಾಲಿಯವರಿಗೆ ತುಂಬ ಅಭಿಮಾನ. ಸಂಸ್ಕೃತ ಭಾಷೆ ಎಷ್ಟು ಕಠಿಣವೆನಿಸುತ್ತದೆಯೊ ಅಷ್ಟೇ ಸರಳ. ಅರ್ಥವೈಪುಲ್ಯ, ಪರ್ಯಾಯ ಶಬ್ದ ಪ್ರಯೋಗಗಳಿಗೆ ಸಂಸ್ಕೃತದಂತಹ ಸಂಪತ್ತುಳ್ಳ ಭಾಷೆ ಇನ್ನೊಂದಿಲ್ಲ. ಸೌಂದರ್ಯ-ಸಂಪತ್ತಿ, ವೈವಿಧ್ಯ, ಸರಳತೆಗಳಿಗಾಗಿ ನಾವು ಸಂಸ್ಕೃತವನ್ನು ಕಲಿಯಬೇಕು ಎಂದು ಸಾಲಿಯವರು ಕಳಕಳಿಯಿಂದ ಹೇಳುತ್ತಾರೆ.

ಅಕ್ಟೋಬರ್ ೧೦, ೧೯೭೭ ಕ್ಕೆ ಸಾಲಿಯವರಿಗೆ ೮೮ ಪೂರ್ತಿ ತುಂಬಿ ೮೯! ಅಂತೂ ಶತಮಾನದ ಕೊನೆಯ ದಶಕವನ್ನು ಮುಟ್ಟಲಿದ್ದಾರೆ. ‘ಶತಮಾನಂ ಭವತು’ ಎಂದು ೩ ಕೋಟಿ ಕನ್ನಡಿಗರು ಮನಸಾರೆ ಪ್ರಾರ್ಥಿಸೋಣ.

ಸಾಲಿಯವರಿಗೆ ೮೫ ರ ಪೂರ್ತಿಯ ಸಂದರ್ಭದಲ್ಲಿ ನಾನು ಅವರನ್ನು ಸಂದರ್ಶಿಸಿದಾಗ ಬಾಳಿನ ಕೊನೆಯ ನೋವನ್ನು ನುಂಗಿ ಪಚನ ಮಾಡಿಕೊಂಡು ಚೇತನಪೂರ್ಣರಾಗಿ ಕಂಡರು.

“ನಮ್ಮ ಯುವಕರಿಗೆ ನಿಮ್ಮ ಸಂದೇಶವೇನು ಸಾಲಿಯವರೇ ?”

“ಯುವಕರಲ್ಲಿ ನಾನು ಯಾಚನೆ ಮಾಡುವುದು ಇಷ್ಟೇ: ಶೀಲಸೌಂದರ್ಯಕ್ಕಿಂತ ಇನ್ನೊಂದು ಸೌಂದರ್ಯವಿಲ್ಲ. ಚರಿತ್ರೆಯೇ ಚರಿತಾರ್ಥದ ಬುನಾದಿ. ರಾನಡೆ, ಟಿಳಕ, ಗೋಖಲೆ ಅವರ ಚರಿತ್ರಗಳಿಂದ ನಮ್ಮ ತರುಣ ಭಾರತ ಧನ್ಯತೆ ಪಡೆಯಲಿ. ಕನ್ನಡ ನಾಡಿನ ಒಬ್ಬ ಮಾಸ್ತಿಯವರನ್ನು ಆದರ್ಶವಾಗಿ ಇಟ್ಟುಕೊಳ್ಳಲಿ. ಅವರ ಚರಿತ್ರೆಯನ್ನು ಓದಿ ಅನುಸರಿಸಲಿ. ಆಗ ಮಾಸ್ತಿಯವರು ಎಷ್ಟು ದೊಡ್ಡವರು ಅನ್ನೋದು ನಮಗೆ ತಿಳೀತದ. ನಮ್ಮ ಯುವಕರಲ್ಲಿ ಹುಡುಗತನ ಹೋಗಿ ಗಂಭೀರತನ ಬರಬೇಕು.”

೮೮ ರ ಹೊಸ್ತಿಲ ಮೇಲೆ ನಿಂತು ಸಾಲಿಯವರು ಸಿಹಿ ಕಹಿಗಳ ಬಾಳನ್ನು ಸ್ಮಿತದಿಂದ ಸ್ವಾಗತಿಸಿದ್ದಾರೆ. ಇದು ಅವರ ರಸಿಕತೆ, ರಸಜ್ಞತೆ, ಜೀವನಯೋಗ!

ಸತ್ಯದ ಅನುಯಾಯಿ

ಡಾ. ತೇಜಬಹಾದ್ದೂರ ಸಪ್ರು ಅತ್ಯಂತ ಪ್ರಾಮಾಣಿಕ ವ್ಯಕ್ತಿ. ಗಾಂಧೀಜಿ ಅವರನ್ನು ‘ಸತ್ಯದ ಅನುಯಾಯಿ’ ಎಂದು ಬಾಯ್ತುಂಬ ಕರೆಯುತ್ತಿದ್ದರು. ಡಾ. ಸಪ್ರು ಖಾದಿ ಧರಿಸುವ ಪ್ರತಿಜ್ಞೆ ಕೈಕೊಂಡಿಲ್ಲ ಎಂದು ಕೆಲವರು ಗಾಂಧೀಜಿ ಅವರ ಕಡೆಗೆ ದೂರು ಒಯ್ದರು. “ಖಾದಿಯಲ್ಲಿ ಅವರಿಗೆ ವಿಶ್ವಾಸ ಇಲ್ಲ, ಆದ್ದರಿಂದ ಅವರು ಖಾದಿ ತೊಡುತ್ತಿಲ್ಲ. ನಿಮ್ಮಲ್ಲಿಯೂ ಅನೇಕರಿಗೆ ಖಾದಿಯಲ್ಲಿ ವಿಶ್ವಾಸ ಇಲ್ಲ, ಆದರೂ ಖಾದಿ ಹಾಕುತ್ತಿದ್ದೀರಿ. ಸತ್ಯದ ಅನುಯಾಯಿಗೆ ಅಸತ್ಯವನ್ನು ಅವಲಂಬಿಸುವಂತೆ ಮಾಡಿರೆಂದು ನಿಮ್ಮ ಕೋರಿಕೆಯು ? ನಾನೆಂದಿಗೂ ಹಾಗೆ ಮಾಡಲಾರೆ, ಎಂದು ಗಾಂಧೀಜಿ ಉತ್ತರಿಸಿದರು.

ಸ್ಟಾಲಿನ್ನನ ಪಾಯಿಪ್

ರಶಿಯಾದ ಉಗ್ರ ಸರ್ವಾಧಿಕಾರಿ ಸ್ಟಾಲಿನ್ ಬಗ್ಗೆ ರಶಿಯಾದಲ್ಲಿ ಈ ಕಥೆ ಪ್ರಚಾರದಲ್ಲಿದೆ.

ಸ್ಟಾಲಿನ್ನನ ಏರಿಕೆಯ ಕಾಲದಲ್ಲಿ ಬೆರಿಯಾ ಆತನ ಅತ್ಯಂತ ವಿಶ್ವಾಸಾರ್ಹ ದಕ್ಷ ಅಧಿಕಾರಿಯಾಗಿದ್ದ. ಆತ ಸ್ಟಾಲಿನ್ನನ ಬಲಗೈ ಅಂದರೂ ತಪ್ಪಲ್ಲ.

ಒಂದಿನ ಸ್ಟಾಲಿನ್ ತನ್ನ ಸಚಿವಾಲಯಕ್ಕೆ ಬಂದ. ಆಸೀನನಾಗಿ ತನ್ನ ಮೇಜಿನ ಡ್ರಾಅರ್‌ನಲ್ಲಿ ಕೈಹಾಕಿ ಪಾಯಿಪ್‌ನ್ನು ಹುಡುಕಿದ; ಸಿಗಲಿಲ್ಲ. ಧೂಮಪಾನದ ಚಟ ತೀವ್ರವಾಗಿತ್ತು, ಪಾಯಿಪ್ ಮಾತ್ರ ಕೈಗೆ ಸಿಗಲಿಲ್ಲ. ತನ್ನಂಥ ಸರ್ವಾಧಿಕಾರಿಯ ಕೋಣೆಯಲ್ಲಿ ಅಕ್ರಮವಾಗಿ ಪ್ರವೇಶ ಮಾಡಿ ತನ್ನ ಪಾಯಿಪ್‌ನ್ನು ಕದ್ದ ಎದೆಗಾರ ಯಾರಿರಬಹುದು ಎಂದು ಆತನ ತಲೆಗೆ ಬಿಸಿಯೇರಿತು. ಸ್ಟಾಲಿನ್ನನ ಪಾಯಿಪ್ ಕಳವಾಗುವುದೆಂದರೇನು? ಹುಡುಗಾಟಿಕೆಯೇ?

ಸ್ಟಾಲಿನ್ ಕೂಡಲೆ ಬೆರಿಯಾನಿಗೆ ಫೋನ್ ಮಾಡಿದ. ತನ್ನ ಪಾಯಿಪ್ ಕಳೆದು ಹೋದದ್ದನ್ನು ಆತನಿಗೆ ತಿಳಿಸಿ, ತಕ್ಷಣ ಶೋಧ ಮಾಡಬೇಕು ಎಂದೂ ಆಜ್ಞಾಪಿಸಿದ.

ಮುಂದೆ ಒಂದು ಗಂಟೆಯ ನಂತರ ಸ್ಟಾಲಿನ್ ಅದೇಕೋ ತನ್ನ ಕೋಟಿನ ಜೇಬಿನಲ್ಲಿ ಕೈ ತುರುಕಿದ. ಅಲ್ಲಿ ಪಾಯಿಪ್ ಅವನ ಕೈಗೆ ಹತ್ತಿತು. ಆತನಿಗೇ ಆಚ್ಚರಿ. ಮುನ್ನಾದಿನ ಆತನು ಧೂಮಪಾನ ಮಾಡಿದ ನಂತರ ಪಾಯಿಪ್‌ನ್ನು ಡ್ರಾಅರ್‌ನಲ್ಲಿಡುವದನ್ನು ಮರೆತು ತನ್ನ ಕೋಟಿನ ಜೇಬಿನಲ್ಲಿ ಇರಿಸಿಕೊಂಡಿದ್ದು ನೆನಪಾಯಿತು. ಕೂಡಲೆ ಆತ ಬೆರಿಯಾಗೆ ಫೋನ್ ಮಾಡಿದ. 'ಪಾಯಿಪ್ ಸಿಕ್ಕಿದೆ. ಆ ಬಗ್ಗೆ ವಿಚಾರಣೆ ನಡೆಸಬೇಕಾಗಿಲ್ಲ' ಎಂದೂ ಆದೇಶವಿತ್ತ.

'ಆದರೆ ಹುಜೂರ್, ಇದುವರೆಗೆ ಆ ಬಗೆಗೆ ನಡೆಸಿದ ವಿಚಾರಣೆಯಲ್ಲಿ ನಾಲ್ವರು ಸಂಶಯಿತರನ್ನು ಗುಂಡಿಟ್ಟುಕೊಲ್ಲಲಾಗಿದೆ. ಮತ್ತೆ ಕೆಲ ಸಂಶಯಿತರನ್ನು ಬಂಧಿಸಿಟ್ಟಿದ್ದೇನೆ' ಎಂದು ಬೆರಿಯಾ ನಿರ್ಧಾರದ ಸ್ವರದಿಂದಲೇ ತಿಳಿಸಿದ.

"ಆದದ್ದಾಗಿಹೋಯಿತು. ಈಗ ಬಂಧನದಲ್ಲಿರುವವರನ್ನು ಬಿಟ್ಟುಬಿಡು. ನಿನ್ನ ದಕ್ಷತೆಗೆ ನನ್ನ ಪ್ರಶಂಸೆಗಳು" ಎಂದು ಸ್ಟಾಲಿನ್ ಬೆರಿಯಾನನ್ನು ಪ್ರಶಂಸಿಸಿದ.

ಮಾಸ್ಕೊ ಚೌಕಿನಲ್ಲಿರುವ ವಿಶಾಲ ಹರ್ಮ್ಯದಲ್ಲಿ ಬೆರಿಯಾ ತನ್ನ ಕಚೇರಿ ಇಟ್ಟುಕೊಂಡು ದಕ್ಷತೆಯನ್ನು ಮೆರೆಸಿದ್ದ. ಸ್ಟಾಲಿನ್ನನ ಆಜ್ಞಾಪಾಲನೆಯ ನೆವದಿಂದ ಆತ ಲಕ್ಷಾವಧಿ ವಿರೋಧಿಗಳನ್ನು ಗುಂಡಿಕ್ಕಿ ಕೊಲ್ಲಿಸಿದ್ದ; ಇಲ್ಲವೆ ಗಲ್ಲಿಗೇರಿಸಿದ್ದ. ಆ ನಿಷ್ಪಾಪ ಜೀವಿಗಳ ಶಾಪ ಆತನಿಗೆ ತಟ್ಟದೆ ಇರಲಿಲ್ಲ.

ಸ್ಟಾಲಿನ್ನನ ನಂತರ ಬೆರಿಯಾನಿಗೂ ಅದೇ ದುರ್ಗತಿ ಒದಗಿತು.

ಕತ್ತಲರನ ಕಮ್ಮಟದಲ್ಲಿ ಕೃಷ್ಣವಿವರಗಳು

ಜಿ. ಟಿ. ನಾರಾಯಣರಾವ್

ಕಲ್ಪನೆಯ ಬೆನ್ನೇರಿ ಬಂದ ಭೃಂಗಲಾಸ್ಯ

"ಭೂಮಿಯಷ್ಟು ಸಾಂದ್ರತೆ ಮತ್ತು ಸೂರ್ಯನಿಗಿಂತ ೨೫೦ ಮಡಿ ಹಿರಿದಾದ ವ್ಯಾಸ ಇರುವ ಒಂದು ಮಿನುಗು ತಾರೆ ಸ್ವಂತಾಕರ್ಷಣೆಯ ಪರಿಣಾಮವಾಗಿ ತನ್ನ ಒಂದಿನಿತು ಕಿರಣಗಳನ್ನೂ ನಮ್ಮಲ್ಲಿಗೆ ಬರಗೊಡದು. ವಿಶ್ವದ ಬಲು ದೊಡ್ಡ ಮಿನುಗು ವಸ್ತುಗಳು ಈ ಕಾರಣದಿಂದ ನಮಗೆ ಕಾಣದಿರುವ ಸಾಧ್ಯತೆ ಉಂಟು" ಎಂಬುದಾಗಿ ಫ್ರೆಂಚ್ ಗಣಿತ ಮತ್ತು ಖಗೋಳ ವಿಜ್ಞಾನಿ ಪಿ. ಎಸ್. ಲಾಪ್ಲಾಸ್ (೧೭೪೯–೧೮೨೭) ಬರೆದಿದ್ದಾನೆ (೧೭೯೮). ಲಾಪ್ಲಾಸನ ಅತ್ಯಂತ ಫಲವಂತ ಬುದ್ಧಿ ಈ ಸೂತ್ರರೂಪದ ಹೇಳಿಕೆಯಲ್ಲಿ ಎಷ್ಟು ವ್ಯಾಪಕ ಮತ್ತು ಕ್ರಾಂತಿಕಾರಕ ಅರ್ಥವನ್ನು ಹಿಡಿದಿಟ್ಟಿದೆ ಎನ್ನುವುದು ಅರಿವಾಗಲು ವಿಜ್ಞಾನದ ಕೆಲವೊಂದು ಮೂಲ ಭಾವನೆಗಳು ನಮಗೆ ಸ್ಪಷ್ಟವಾಗಿ ತಿಳಿದಿರುವುದು ಅವಶ್ಯ. ವಿಜ್ಞಾನದಲ್ಲಿ ಕಲ್ಪನೆಯ ಬೆನ್ನೇರಿ ಬರುವ ಭೃಂಗಲಾಸ್ಯಕ್ಕೆ ಲಾಪ್ಲಾಸನ ಊಹೆ ಒಂದು ಜ್ವಲಂತ ನಿದರ್ಶನ. ಮುಂದಿನ ಪರಿಚ್ಛೇದಗಳಲ್ಲಿ ಆತನ ಪ್ರಾಚೀನ ಚಿಂತನೆಗೆ ಆಧುನಿಕ ವೈಜ್ಞಾನಿಕ ಪ್ರವೇಶವನ್ನು ಒದಗಿಸಲು ಪ್ರಯತ್ನಿಸಿದೆ.

"ಒಂದು ನಕ್ಷತ್ರ ನಮಗೆ ಗೋಚರಿಸುತ್ತದೆ" ಎನ್ನುವ ವಾಕ್ಯದಲ್ಲಿ ಹುದುಗಿರುವ ಮುಖ್ಯ ವೈಜ್ಞಾನಿಕ ಅರ್ಥವಿಷ್ಟು: ಅದು ಬೆಳಕಿನ ಕಿರಣಗಳನ್ನು ಹೊರಸೂಸುತ್ತದೆ; ಅದರ ಕೆಲವು ಕಿರಣಗಳಾದರೂ ನಮ್ಮನ್ನು ತಲಪುತ್ತವೆ; ನಾವು ಅದನ್ನು ಗುರುತಿಸುವೆವು. ಈ ಮೂರರ ಪೈಕಿ ಯಾವುದೇ ಒಂದು ಸಾಧು ಆಗದಿದ್ದರೂ ನಕ್ಷತ್ರ ನಮಗೆ ಕಾಣಿಸದು. ಉದಾಹರಣೆಗೆ, ನಮ್ಮ ಸಮೀಪತಮ ನಕ್ಷತ್ರ ಸೂರ್ಯನನ್ನೇ ಪರಿಶೀಲಿಸೋಣ. ಸೂರ್ಯ ಇದ್ದಿಲಮೂಟೆ ಆಗಿದ್ದರೆ ಅದು ಬೆಳಕಿನ ಕಿರಣಗಳನ್ನು ಹೊರ ಸೂಸುತ್ತಿರಲಿಲ್ಲ. ಭೂಮಿ–ಸೂರ್ಯ ಅಂತರ ಬಲು ಹೆಚ್ಚುಗಿದ್ದರೆ ಕಿರಣಗಳು ನಮ್ಮನ್ನು ತಲಪುತ್ತಿರಲಿಲ್ಲ. ನಾವು ಕಣ್ಣು ಮುಚ್ಚಿಕೊಂಡಿದ್ದರೆ (ನಮಗೂ ಸೂರ್ಯನಿಗೂ ನಡುವೆ ಅಪಾರದರ್ಶಕ ಅಡಚಣೆ ಅಡ್ಡವಾಗಿದ್ದರೆ) ಸೂರ್ಯನನ್ನು ಗುರುತಿಸುತ್ತಿರಲಿಲ್ಲ.

ವಿಶ್ವದಲ್ಲಿರುವ ಎಣಿಕೆಗೆ ನಿಲುಕದ ಮತ್ತು "ನಿಗಮಕೆ ಸಿಲುಕದ" ನಕ್ಷತ್ರಗಳು ಎಲ್ಲವೂ ನಮಗೆ ಗೋಚರವಾಗದಿರಲು ಮುಖ್ಯ ಕಾರಣ ಎರಡನೆಯದು. (ಲಾಪ್ಲಾಸನ ಕಾಲದಲ್ಲಿ ತಿಳಿದಿದ್ದ ಕಾರಣ ಇದೊಂದೇ.) ಅವು ಸೂರ್ಯನಿಗಿಂತ ಅದೆಷ್ಟೋ ಪಟ್ಟು ಹೆಚ್ಚು ಬೆಳಕನ್ನು ಚೆಲ್ಲಿದರೂ ನಾವು ಅತ್ಯಂತ ನಾಜೂಕಾದ ದೂರದರ್ಶಕ ಮುಂತಾದ ಪ್ರಕಾಶೀಯ ಉಪಕರಣಗಳ ನೆರವಿನಿಂದ ಅವನ್ನು

ನೋಡಲು, ಅಂದರೆ ಅವುಗಳಿಂದ ಹೊರಟು ನಮ್ಮೆಡೆಗೆ ಧಾವಿಸುವ ಕಿರಣ ರಾಯಭಾರಿಗಳನ್ನು ಬರಮಾಡಿಕೊಂಡು ಗುರುತಿಸಲು, ಪ್ರಯತ್ನಿಸಿದರೂ ನಮ್ಮೀರ್ವರ ನಡುವಿನ ಅಗಾಧ ದೂರದಿಂದಾಗಿ ಆ ರಾಯಭಾರಿಗಳು ನಮ್ಮನ್ನು ತಲಪುವುದೇ ಇಲ್ಲ. ನಡುಹಾದಿಯಲ್ಲಿ ಅವು ಮಾಸಿ ನಶಿಸಿ ಹೋಗುತ್ತವೆ–ಸುದೂರ ಬೆಟ್ಟದ ಕೊಡಿಯ ಮೇಲೆ ಉರಿಸಿದ ಹಣತೆಯ ಮಸಕು ಮಿನುಗು ನಮ್ಮಲ್ಲಿ ವರೆಗೆ ಐದದಂತೆ.

ಇವೆಲ್ಲ ಸಾಮಾನ್ಯ ನಕ್ಷತ್ರಗಳಿಗೆ ಅನ್ವಯವಾಗುವ ನಿಯಮಗಳು; ನಮ್ಮ ಬದುಕಿನ ಅನುಭವದ ಮಿತಿಯೊಳಗೆ ತಿಳಿಯಬಹುದಾದ ವಿದ್ಯಮಾನಗಳು. ಲಾಪ್ಲಾಸನ ವಿಶೇಷ ನಕ್ಷತ್ರ ಈ ಸಾಲಿಗೆ ಸೇರುವುದಿಲ್ಲ. ಅದರ ಲಕ್ಷಣ ಅರಿಯಲು ನಮ್ಮಲ್ಲಿ ಒಂದಿಷ್ಟು ಪೂರ್ವಸಿದ್ಧತೆ ಅವಶ್ಯ.

ಬೆಳಕಿನ ಹೂರಣ

ಬೆಳಕಿನ ಕಿರಣ ಫೋಟಾನುಗಳೆಂಬ (ಅಂದರೆ ದ್ಯುತಿಕಣಗಳು) ಹೆಸರಿನ ಅನಂತಸೂಕ್ಷ್ಮ ಕಣಗಳ ಧಾರೆ. ಫೋಟಾನಿನ ರಾಶಿ ೮×೧೦^{-೪೯} ಗ್ರಾಮ್ ಎಂದು ಈಗಿನ (೧೯೭೬) ಅಂದಾಜು. ಇದಕ್ಕಿಂತ ಲಘುವಾದ ಕಣ ತಿಳಿದಿಲ್ಲ. ಸಾಮಾನ್ಯವಾಗಿ ಬಲು ಹಗುರ ಕಣವೆಂದು ಪರಿಗಣಿಸಲಾಗಿರುವ ಎಲೆಕ್ಟ್ರಾನ್ (ರಾಶಿ = $೧೦^{-೨೭}$ ಗ್ರಾಮ್) ಫೋಟಾನಿಗಿಂತ ೧೨೫×೧೦^{೧೯} ಮಡಿ ಭಾರವಾಗಿದೆ. ನಮ್ಮ ಇಡೀ ಭೂಮಿಗೂ ಒಂದು ಮೋಟರ್ ಕಾರಿಗೂ ನಡುವೆ ಇರುವ ತೂಕನಿಷ್ಪತ್ತಿ ಸುಮಾರು ಇಷ್ಟೇ ಉಂಟು! ಸೂರ್ಯ–ಭೂಮಿ ನಿಷ್ಪತ್ತಿ (=೩,೩೩,೨೦೦) ಇದರ ಮುಂದೆ ತೀರ "ಹುಡುಗಾಟ"ದ ಅತ್ಯಲ್ಪ ಸಂಖ್ಯೆ ಆಗುತ್ತದೆ. ಬೆಳಕಿನ ಆಕರ ಫೋಟಾನುಗಳನ್ನು ಅವಿಚ್ಛಿನ್ನವಾಗಿ ಅತಿವೇಗದಿಂದ ಎರಚುತ್ತಿರುವುದು. ಹೀಗಾಗಿ ಕಿರಣ ನಮಗೆ ಅಖಂಡವಾದ ಕಂಬಿಯಂತೆ ಭಾಸವಾಗುತ್ತದೆ. ಬೆಳಕಿನ "ಅತಿ ವೇಗ"ದ ಮೌಲ್ಯ ಲಾಪ್ಲಾಸನ ಕಾಲಕ್ಕೇ ತಿಳಿದಿತ್ತು: ಸೆಕೆಂಡಿಗೆ ೨.೯೯೭೯೩×೧೦^{೧೦} ಸೆಂ.ಮೀ. ಭೂಮಿಯ ಸಮಭಾಜಕೀಯ ತ್ರಿಜ್ಯ ೬.೩೭೮೧೬೪×೧೦^{೧೦} ಸೆಂ.ಮೀ. ಎಂದು ಗಮನಿಸಿದರೆ ಬೆಳಕಿನ ಕಿರಣ ೧ ಸೆಕೆಂಡಿನಲ್ಲಿ ಧಾವಿಸುವ ದೂರ ೭ ಭೂಪ್ರದಕ್ಷಿಣೆಗಳಿಗಿಂತ ಕೊಂಚ ಜಾಸ್ತಿ. ಬೆಳಕಿನ ವೇಗವನ್ನು c ಎಂಬ ಪ್ರತೀಕದಿಂದ ನಿರೂಪಿಸುವುದು ವಾಡಿಕೆ.

ರಾಶಿ, ಗಾತ್ರ, ಸಾಂದ್ರತೆ

ಫೋಟಾನಿನಿಂದ ತೊಡಗಿ ಮಹಾನಕ್ಷತ್ರಗಳ ವರೆಗೆ ಪ್ರತಿಯೊಂದು ವಸ್ತುವೂ ದ್ರವ್ಯದ ಕೂಡಿಕೆಯಿಂದ ಆದದ್ದು. ಇದರ ಅಳತೆಗೆ ದ್ರವ್ಯರಾಶಿ ಅಥವಾ ಸರಳವಾಗಿ ರಾಶಿ ಎಂದು ಹೆಸರು. ತಂಬಿಗೆ ಒಳಗಡೆ ತುಂಬಿದ ನೀರು ಬಿಂದಿಗೆ ಒಳಗಡೆ ಹಿಡಿಸಿದ ನೀರಿಗಿಂತ ಹಗುರವಾಗಿದೆ ಎನ್ನುವಾಗ ನಾವು ಭೌತವಾಗಿ ಆ ರಾಶಿಗಳನ್ನು ತುಲನೆ ಮಾಡಿರುವೆವು. ಅರ್ಥಾತ್ ತಂಬಿಗೆ ನೀರಿನ ರಾಶಿ, ಬಿಂದಿಗೆ ನೀರಿನ ರಾಶಿಗಿಂತ ಕಡಿಮೆ. ಭೂಮಿಯ ರಾಶಿ ೫.೯೭೭×೧೦^{೨೭} ಗ್ರಾಮ್; ಸೂರ್ಯನದು ೧.೯೯೧×೧೦^{೩೩} ಗ್ರಾಮ್. ಆದ್ದರಿಂದ ಭೂಮಿ "ತಂಬಿಗೆ"ಗಿಂತ ಸೂರ್ಯ "ಬಿಂದಿಗೆ" ೩,೩೩,೨೦೦ ಪಟ್ಟು ಭಾರವಾಗಿದೆ.

ದ್ರವ್ಯ ಆಕ್ರಮಿಸಿರುವ ಜಾಗಕ್ಕೆ ಅದರ ಘನಗಾತ್ರ ಅಥವಾ ಸರಳವಾಗಿ ಗಾತ್ರ ಎಂದು ಹೆಸರು. ಗಾತ್ರರಹಿತ ದ್ರವ್ಯವಿಲ್ಲ, ದ್ರವ್ಯರಹಿತ ಗಾತ್ರವಿಲ್ಲ. ಗೋಳಾಕಾರದ ವಸ್ತುವೊಂದರ ತ್ರಿಜ್ಯ ತಿಳಿದಾಗ ಅದರ ಗಾತ್ರವನ್ನು ಗಣಿಸಲು ಸುಲಭ ಸೂತ್ರ ಉಂಟು. ಈಗ, ಸೂರ್ಯ–ಭೂಮಿ ತ್ರಿಜ್ಯಗಳ ನಿಷ್ಪತ್ತಿ ಸುಮಾರು ೧೦೮ (ಅಂದರೆ ಸೂರ್ಯಗೋಳದ ತ್ರಿಜ್ಯ ಭೂಗೋಳದ ತ್ರಿಜ್ಯದ ೧೦೮ ಪಟ್ಟು ದೊಡ್ಡದು) ಆಗಿರುವುದರಿಂದ ಸೂರ್ಯನೊಳಗೆ ೧೦ ಲಕ್ಷಕ್ಕಿಂತಲೂ ಜಾಸ್ತಿ ಭೂಮಿಗಳನ್ನು ಒಟ್ಟಬಹುದು. ರಾಶಿಯನ್ನು ಗಾತ್ರದಿಂದ ಭಾಗಿಸಿದಾಗ ದೊರೆಯುವ ಸಂಖ್ಯೆಗೆ ಆ ವಸ್ತುವಿನ ಸರಾಸರಿ ಸಾಂದ್ರತೆ ಎಂದು ಹೆಸರು. ವಸ್ತುವಿನಲ್ಲಿ ದ್ರವ್ಯದ ಸರಾಸರಿ

ಹಂಚಿಕೆಯನ್ನು ಸೂಚಿಸುವ ಮಾನಕವಿದು. ಸಾಂದ್ರತೆಯನ್ನು ಘನಸೆಂಟಿಮೀಟರ್ ಗಾತ್ರಕ್ಕೆ ಇಂತಿಷ್ಟು ಗ್ರಾಮ್‌ಗಳೆಂದು ನಿರೂಪಿಸುವುದು ವಾಡಿಕೆ. ಸೂರ್ಯನ ಸಾಂದ್ರತೆ ೧.೪೧; ಭೂಮಿಯದು ೫.೫೨. ಮಹಾಗಾತ್ರನೂ ಮಹಾರಾಶಿಯುತನೂ ಆಗಿರುವ ಸೂರ್ಯನ ಸಾಂದ್ರತೆ ಭೂಮಿಯದಕ್ಕಿಂತ ಕಡಿಮೆ! ಸೂರ್ಯ ಅನಿಲಮಯ (ನಿಖರವಾಗಿ ಪ್ಲಾಸ್ಮಾಮಯ) ಆಗಿ ಅತಿ ವ್ಯಾಪ್ತಿ ಪಡೆದಿರುವುದರಿಂದ ಈ ತೋರ್ಕೆ ಅಸಾಂಗತ್ಯ ತಲೆದೋರಿದೆ. ವಾಸ್ತವವಾಗಿ ಸಾಮಾನ್ಯ ದರ್ಜೆಯ ಎಲ್ಲ ನಕ್ಷತ್ರಗಳಿಗೂ ಅನ್ವಯಿಸುವ ನಿಯಮವಿದು.

ವಿಶ್ವಬಾಂಧವ್ಯದ ಮೂಲಸೂತ್ರ

ದ್ರವ್ಯದ ಒಂದು ಮುಖ್ಯ ಗುಣ ಇತರ ದ್ರವ್ಯವನ್ನು ತನ್ನೆಡೆಗೆ ಸೆಳೆಯುವುದು. A ಮತ್ತು B ಎಂಬವು ಎರಡು ಗೋಳಗಳೆಂದೂ A ಯ ರಾಶಿ B ಯದಕ್ಕಿಂತ ಹೆಚ್ಚು ಇದೆಯೆಂದೂ ಭಾವಿಸುವ. ಇವನ್ನು ಮಟ್ಟಸ ಮತ್ತು ನುಣುಪು ನೆಲದ ಮೇಲೆ ಇರಿಸೋಣ. ಈಗ, A ಮತ್ತು B ಗಳಲ್ಲಿ ಒಟ್ಟೈಸಿರುವ ರಾಶಿಗಳ ಪರಿಣಾಮವಾಗಿ ಒಂದು ಇನ್ನೊಂದನ್ನು ತನ್ನ ರಾಶಿಕೇಂದ್ರದೆಡೆಗೆ ಸೆಳೆಯುತ್ತದೆ. ಆದರೆ ಇದರಲ್ಲಿ ಅಧಿಕರಾಶಿ ಇರುವ A ಯದೇ ಮೇಲುಗೈ ಆಗುತ್ತದೆ. ಉದಾಹರಣೆಗೆ ಈ ಪತ್ರಿಕೆಯನ್ನು ಓದುತ್ತಿರುವ ನೀವು ರಾಶಿಯುತರಾದ್ದರಿಂದ ಇದನ್ನು ನಿಮ್ಮ ರಾಶಿಕೇಂದ್ರದೆಡೆಗೆ ಸೆಳೆಯುತ್ತಿದ್ದೀರಿ. ಅದೇ ವೇಳೆ ಪತ್ರಿಕೆಯಾದರೂ ಸುಮ್ಮನಿರುವುದೇ? ರಾಶಿಯುತವಾದ ಅದು ಸಹ ಯಥಾಶಕ್ತಿ ನಿಮ್ಮನ್ನು ತನ್ನ ರಾಶಿಕೇಂದ್ರದೆಡೆಗೆ ಆಕರ್ಷಿಸುವುದು. ಆದರೆ ಈ ಪರಸ್ಪರ ಆಕರ್ಷಕ ಬಲಗಳು ಸೂಕ್ಷ್ಮಾತಿಸೂಕ್ಷ್ಮವಾದ್ದರಿಂದ ವ್ಯಾವಹಾರಿಕವಾಗಿ ಇವುಗಳ ಪರಿಣಾಮಗಳನ್ನು ಅಳೆಯಲು ಬಲು ನವುರಾದ ಪ್ರಯೋಗಗಳನ್ನು ಮಾಡಬೇಕಾಗುತ್ತದೆ.

ಎರಡು ವಸ್ತುಗಳ ನಡುವಿನ ಈ ಸೆಳೆತಕ್ಕೆ ಗುರುತ್ವಾಕರ್ಷಣ ಬಲ ಅಥವಾ ಸರಳವಾಗಿ ಗುರುತ್ವಬಲ ಎಂದು ಹೆಸರು. ಇದರ ಅಳತೆಗೆ ಒಂದು ಸುಲಭ ಸೂತ್ರವಿದೆ: A ಮತ್ತು B ವಸ್ತುಗಳ ರಾಶಿಗಳು ಅನುಕ್ರಮವಾಗಿ m ಮತ್ತು M ಆಗಿದ್ದು ಅವುಗಳ ರಾಶಿ-ಕೇಂದ್ರಾಂತರ r ಆಗಿದ್ದರೆ ಆಗ ಒಂದು ಇನ್ನೊಂದನ್ನು ತನ್ನ ರಾಶಿ ಕೇಂದ್ರದೆಡೆಗೆ ಸೆಳೆವ ಬಲದ ಪರಿಮಾಣ GMm/r^2. ಇಲ್ಲಿ G ಎನ್ನುವುದು ವಿಶ್ವದ ಎಲ್ಲೆಲ್ಲೂ ಒಂದೇ ಬೆಲೆ ಪಡೆದಿರುವ ಒಂದು ಸ್ಥಿರಾಂಕ. ಆದ್ದರಿಂದ ಇದಕ್ಕೆ ಗುರುತ್ವಾಕರ್ಷಣದ ವಿಶ್ವಸ್ಥಿರಾಂಕ ಎಂಬ ಹೆಸರುಂಟು. G ಯ ಬೆಲೆಯನ್ನು ನಿರ್ಧರಿಸಲಾಗಿದೆ. ಸರ್ ಐಸಾಕ್ ನ್ಯೂಟನ್ (೧೬೪೨–೧೭೨೭) ಆವಿಷ್ಕರಿಸಿ ನಿರೂಪಿಸಿದ ಈ ಸೂತ್ರಕ್ಕೆ ವಿಶ್ವಗುರುತ್ವಾಕರ್ಷಣ ನಿಯಮ ಎಂದು ಹೆಸರು. ಎರಡು ಆಕಾಶಕಾಯಗಳ ಪರಸ್ಪರ ವರ್ತನೆಯನ್ನು ಇದು ವಿವರಿಸಬಲ್ಲದು. ಉದಾಹರಣೆಗೆ ಭೂಮಿ ಮತ್ತು ಚಂದ್ರರ (ರಾಶಿ = ೭.೩೫ × ೧೦²⁵ ಗ್ರಾಮ್; ಅಂದರೆ ಭೂರಾಶಿಯ ೦.೦೧೨೩ ಅಂಶ) ಪರಸ್ಪರಾಕರ್ಷಣೆಯಲ್ಲಿ ಭೂಮಿಯದು ಮೇಲುಗೈ ಆಗುತ್ತದೆ. ಸೂರ್ಯ ಮತ್ತು ಭೂಮಿಗಳ ಪರಸ್ಪರಾಕರ್ಷಣೆಯಲ್ಲಿ ಸೂರ್ಯನಿಗೆ ಅಗ್ರಪದವಿ ಲಭಿಸುವುದು. ಈ ಕಾರಣದಿಂದಾಗಿ ಚಂದ್ರ ಭೂಮಿಯ ಸುತ್ತಲೂ, ಭೂಮಿ (ಚಂದ್ರನ ಸಮೇತ) ಸೂರ್ಯನ ಸುತ್ತಲೂ ಪರಿಭ್ರಮಿಸುತ್ತವೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವಿದು: ಗುರುತ್ವರಹಿತ ರಾಶಿ ಇಲ್ಲ, ರಾಶಿರಹಿತ ಗುರುತ್ವ ಇಲ್ಲ; ರಾಶಿ ಹಿರಿದಾದಂತೆ ಗುರುತ್ವ ಹಿರಿದಾಗುತ್ತದೆ; ಹಿರಿರಾಶಿಗೆ ಹಿರಿಗುರುತ್ವ ಬಲ; ಕಿರಿರಾಶಿಗೆ ಕಿರಿಗುರುತ್ವ ಬಲ.

ಈಗ ನಮ್ಮ ಮನೆಯಾದ ಭೂಮಿಗೆ ಮರಳೋಣ. ಇದರ ಅಗಾಧ ರಾಶಿಯೊಡನೆ (ಮತ್ತು ಗಾತ್ರದೊಡನೆ ಕೂಡ) ಹೋಲಿಸುವಾಗ ನಾವೂ ನಮ್ಮ ಬೃಹದ್ರಚನೆಗಳೂ

ಅನಂತಾಲ್ಪತ್ವವನ್ನು ಪಡೆಯುತ್ತವೆ. ಗೌರೀಶಂಕರದ ಮಹೋನ್ನತಿಯನ್ನು ಭೂವ್ಯಾಸದೊಂದಿಗೆ ಹೋಲಿಸುವಾಗ ದೊರೆಯುವ ನಿಷ್ಪತ್ತಿ ಅಲ್ಪ ಸಂಖ್ಯೆಯಾದ ೦.೦೦೦೬೨೫. ಭೂಮಿಯನ್ನು ಕಾಲ್ಚೆಂಡಿನ ಗಾತ್ರಕ್ಕೆ ಕುಗ್ಗಿಸಿದರೆ ಈ ನಗಾಧಿರಾಜನಿಗೆ ಅದರ ಮೇಲೆ ಒಂದು ಸೂಕ್ಷ್ಮ ರೇಣುಸ್ಥಾನವೂ ಲಭಿಸದು; ಇನ್ನು ಶಾಂತಸಾಗರದ ಹಿರಿ ಆಳ ಹಗುರ ಗೀರಾಗಿ ಕೂಡ ಮೂಡದು. ಆದ್ದರಿಂದ ಭೂಮಿ–ನಾವು ಸಂಬಂಧದಲ್ಲಿ ಭೂಗುರುತ್ವದ ಪ್ರಭಾವ ನಮ್ಮ ಮೇಲೆ ಅತ್ಯಂತ ಪ್ರಬಲವಾಗಿದೆ. ಭೂತೊಗಟೆಯ ಮೇಲೆ ಅನಂತಸೂಕ್ಷ್ಮ ಗಾತ್ರದ ಕ್ರಿಮಿಗಳಂತೆ ಅಂಟಿಕೊಂಡು ಅತ್ತ ಇತ್ತ ಹರಿಯುತ್ತಿರುವ ನಾವು ಇದರ ಗುರುತ್ವ ಬಲದ ದಿವ್ಯಾಲಿಂಗನದಿಂದ ಸುಲಭವಾಗಿ ತಪ್ಪಿಸಿಕೊಂಡು ಹೋಗಲಾರೆವು. ನೆಲದಿಂದ ಮೇಲಕ್ಕೆ ನೆಗೆದವರು ಮತ್ತೆ ಹಿಂದಕ್ಕೆ ಬೀಳುವುದು, ಸಮತೋಲ ತಪ್ಪಿದ ವಿಮಾನ ಧರೆಗೆ ಕೆಡೆಯುವುದು, ಉಲ್ಕೆಗಳು ಭೂತಳದೆಡೆಗೆ ಮಹಾರಭಸದಿಂದ ಧಾವಿಸುವುದು ಎಲ್ಲದಕ್ಕೂ ಕಾರಣ ಭೂಮಿಯ ಗುರುತ್ವಾಕರ್ಷಣೆ.

ವಿಮೋಚನ ವೇಗ

ನೆಗೆತದ ಅಥವಾ ಅದರಷ್ಟು ಅಪಾಯಕಾರಿ ಅಲ್ಲದ ಎಸೆತದ ಉದಾಹರಣೆಯನ್ನು ಸ್ವಲ್ಪ ವಿವರವಾಗಿ ಪರಿಶೀಲಿಸೋಣ. ನೆಲದಿಂದ ಮೇಲೆಸೆದ ಕಲ್ಲು ಒಂದಷ್ಟು ಎತ್ತರ ಏರಿ ಮತ್ತೆ ನೆಲಕ್ಕೆ ಬೀಳುವುದು ಸರಿ ಅಷ್ಟೆ. ಎಸೆವಾಗ ವಸ್ತುವಿಗೆ ಒದಗಿಸುವ ನೂಕುಬಲ ಹೆಚ್ಚು ಹೆಚ್ಚು ಆದಂತೆ (ಇದು ನಮ್ಮ ರಟ್ಟೆ ತ್ರಾಣವನ್ನು ಅವಲಂಬಿಸಿದೆ) ಅದು ಏರುವ ಎತ್ತರವೂ ಜಾಸ್ತಿ ಜಾಸ್ತಿ ಆಗುತ್ತದೆ ಎಂದು ಅನುಭವದಿಂದ ಅರಿತಿದ್ದೇವೆ. ಇದು ತಿಳಿಯದವರು ಪ್ರತ್ಯಕ್ಷ ಪ್ರಯೋಗ ಮಾಡಿ ನೋಡಲು ಅಡ್ಡಿ ಇಲ್ಲ. ಆದರೆ ಗಾಜಿನ ಮನೆಯಲ್ಲಿ ವಾಸಿಸುವವರು ಮಾತ್ರ ಈ "ಕಲ್ಲು ತೂರಾಟ" ಪ್ರಯೋಗ ಮಾಡುವಾಗ ತುಂಬ ಎಚ್ಚರ ವಹಿಸುವುದು ಅಪೇಕ್ಷಣೀಯ. ಕಲ್ಲು ಕೆಳಕ್ಕೆ ಕೆಡೆಯಬೇಕು ಏಕೆ? ಎಸೆದದ್ದು ಹಾಗೆಯೇ ರಟ್ಟಿ ಚಂದ್ರನೆಡೆಗೋ ಸೂರ್ಯನಕ್ಷತ್ರಗಳೆಡೆಗೋ ತೊಲಗಿಹೋಗುವುದಿಲ್ಲವೇಕೆ? ಭೂಮಿ ಅದನ್ನು ತನ್ನ ಕೇಂದ್ರದೆಡೆಗೆ ಸೆಳೆಯುವುದೇ ಇದರ ಕಾರಣ. ಕಲ್ಲಿನ ಹಾರಾಟದ ವೇಳೆ ಅಲ್ಲಿ ಎರಡು ವಿರುದ್ಧ ಬಲಗಳ ನಡುವೆ ಜಗ್ಗಾಟ ನಡೆದಿರುವುದು. ಒಂದು, ಕಲ್ಲಿಗೆ ನಾವು ನೀಡಿದ ಪ್ರಾರಂಭಿಕ ನೂಕು ಬಲ – ಇದು ಕಲ್ಲನ್ನು ಮೇಲೆ ಮೇಲೆ ಒಯ್ಯಲು ಹೋರಾಡುತ್ತದೆ. ಎರಡು, ಭೂಮಿಯ ಆಕರ್ಷಣ ಬಲ – ಇದು ಕಲ್ಲನ್ನು ನೆಲಕ್ಕೆ ಹತ್ತಿರ ಹತ್ತಿರ ಸೆಳೆಯಲು ಹವಣಿಸುತ್ತದೆ. ಸಮಷ್ಟಿಯ (ಭೂಮಿ) ಎದುರಿನ ವ್ಯಷ್ಟಿಯ (ಕಲ್ಲು) ಈ ಹೋರಾಟ ಎಷ್ಟು ಹೊತ್ತು ತಾನೇ ಮುಂದುವರಿದೀತು? ನೂಕುಬಲ ಸೋಲುತ್ತದೆ. ಕಲ್ಲು ಮತ್ತೆ ಮೇಲೇರಲಾರದು. ಆ ಸಂಧಿಷ್ಠ ಮುಹೂರ್ತದಲ್ಲಿ ಅದು ತಾತ್ಕ್ಷಣಿಕ ವಿರಾಮ ಸ್ಥಿತಿಯಲ್ಲಿ (ತ್ರಿಶಂಕು ಸ್ವರ್ಗ?) ಇರುತ್ತದೆ. ಮರುಕ್ಷಣ ಭೂಮ್ಯಾಕರ್ಷಣೆಗೆ ಮಣಿದು ಇಳೆಗೆ ಇಳಿಯಲು ತೊಡಗುವುದು. ಇದು ಸಾಧಾರಣ ಪರಿಸ್ಥಿತಿ. ಹಾಗಾದರೆ ಅಸಾಧಾರಣ ಪರಿಸ್ಥಿತಿ ಏನು? ನೂಕುಬಲ–ಗುರುತ್ವಬಲ ಜಗ್ಗಾಟದಲ್ಲಿ ನೂಕುಬಲದ ಕೈಮೇಲಾಗುವುದು– ಕೊಕ್ಕೆಯ ಹಿನ್ನೆಳತದಿಂದ ಪಾರಾಗಿ ಕವಣೆ ಮುನ್ನಗೆಯುವುದು. ಗುರುತ್ವ ಬಲದ ಪ್ರಮಾಣ ಹಾಗೂ ಪ್ರಭಾವ ತಿಳಿದಿರುವುದರಿಂದ ಕಲ್ಲಿಗೆ ಸಾಕಷ್ಟು ಪಾಥೇಯವನ್ನು (ನೂಕು ಬಲ) ಒದಗಿಸಿ ಅದು ಈ ಜಗ್ಗಾಟದಲ್ಲಿ ಸೋಲದಂತೆ, ಬದಲು, ಭೂಮಿಯ ಅಗೋಚರ "ಬಂಧನ"ದಿಂದ ವಿಮೋಚನೆಗೊಂಡು ಸಿಡಿದು ಹೋಗುವಂತೆ ಮಾಡುವುದು ಸಾಧ್ಯವಾದೀತೇ ಎಂಬ ಪ್ರಶ್ನೆ ಮೊಳೆಯುತ್ತದೆ. ಇದಕ್ಕೆ ಉತ್ತರ ಸಾಧ್ಯ. ನೆಲದಿಂದ ನೇರ ಮೇಲಕ್ಕೆ ಕಲ್ಲನ್ನು ಸೆಕೆಂಡಿಗೆ ೧೧.೧೯ ಕಿ. ಮೀ. ಅಥವಾ ಹೆಚ್ಚು ವೇಗದಿಂದ

ಕವಣೆ ಬೀರಿದ್ದಾದರೆ ಅದು ಧರೆಗೆ ಮರಳುವುದಿಲ್ಲ. ಈ ವೇಗ ಅದೆಷ್ಟು ಅಗಾಧವಾದದ್ದು ಎನ್ನುವುದರ ಅರಿವಾಗಲು ಒಂದು ನಿದರ್ಶನ ಪರಿಶೀಲಿಸೋಣ. ೨೦–೨೧ ಶತಮಾನ ಸಂಧಿ ಕಾಲದ ಪರಮೋತ್ಕೃಷ್ಟ ವಿಮಾನವೆಂದು ಹೆಸರಾಂತ ಕಾನ್‌ಕಾರ್ಡ್ ಇದೀಗ ಪ್ರತ್ಯಕ್ಷ ಹಾರಾಟ ಆರಂಭಿಸಿದೆ. ಇದರ ಅತಿರಭಸದ ಹಾರಾಟವೇಗ ಕೂಡ ಸೆಕೆಂಡಿಗೆ ೦.೬ ಕಿ. ಮೀ. ಮಾತ್ರ. (ಇದು ೧೧.೧೯ ರ ೦.೦೫೩ ಅಂಶ.) ಆದ್ದರಿಂದ ಭೂಮಾತೆ ಅದೆಂಥ ಪ್ರಬಲ ಅಪ್ಪುಗೆ ಬಲದಿಂದ ತನ್ನ ಸರ್ವಸ್ವವನ್ನೂ ಬರಸೆಳೆದು ಹಿಡಿದು ಜೋಪಾನವಾಗಿ ಕೂಡಿ ಕಾಪಾಡಿಕೊಂಡು ಬರುತ್ತಿದ್ದಾಳೆ ಎಂಬುದನ್ನು ಭಾವುಕರು ಗಮನಿಸಿ ವೈಜ್ಞಾನಿಕವಾಗಿ ಕೂಡ ಸಂತಸ ತಳೆಯಬಹುದು. ಭೂ ಗುರುತ್ವದ ದಿವ್ಯಾಲಿಂಗನದಿಂದ ಬಿಡುಗಡೆಗೊಂಡು ಪಾರಾಗಲು ಕಲ್ಲಗೆ ಅಥವಾ ಯಾವುದೇ ವಸ್ತುವಿಗೆ ನೀಡಬೇಕಾದ ಪ್ರಾರಂಭಿಕ ಕನಿಷ್ಠ ವೇಗಕ್ಕೆ ವಿಮೋಚನ ವೇಗ ಎಂದು ಹೆಸರು; ಆದ್ದರಿಂದ ಭೂಮಿಯ ವಿಮೋಚನ ವೇಗ ಸೆಕೆಂಡಿಗೆ ೧೧.೧೯ ಕಿ. ಮೀ.

ಕೆಳಗಿನ ಯಾದಿಯಲ್ಲಿ ಸೌರವ್ಯೂಹದ ಪ್ರಮುಖ ಕಾಯಗಳ ಕೆಲವು ವಿವರಗಳನ್ನು ಬರೆದಿದೆ. ಇಳಿಯುತ್ತಿರುವ ರಾಶಿಯ ಅನುಸಾರ ಈ ಕಾಯಗಳನ್ನು ಅಳವಡಿಸಲಾಗಿದೆ ಎಂಬುದನ್ನು ಗಮನಿಸಬೇಕು.

ಹಿರಿರಾಶಿಗೆ (ಅಥವಾ ಹಿರಿಗಾತ್ರಕ್ಕೆ) ಎಲ್ಲವೂ ಹಿರಿಯದೇ ಆಗಿರಬೇಕು ಎಂದು ಲೋಕಪ್ರಜ್ಞೆ (= ಪೂರ್ವಗ್ರಹಗಳ ಸಂಕಲನ) ನಮಗೆ ಹೇಳುತ್ತದೆ. ಆದರೆ ಬದುಕು ಹೇಗೋ ಈ ಯಾದಿ ಹಾಗೆ ಹಲವಾರು ಅಪವಾದಗಳನ್ನು (ಅಚ್ಚರಿಗಳನ್ನು ಅನ್ನಿ, ಬೇಕಾದರೆ) ನಮ್ಮ ಎದುರು ಪ್ರಕಾಶಿಸುತ್ತದೆ. ಗಾತ್ರಕ್ಕೆ ಬನ್ನಿ (ಇದನ್ನು ತ್ರಿಜ್ಯ ನಿರ್ಧರಿಸುತ್ತದೆ): ನೆಪ್ಚ್ಯೂನ್, ಯುರೇನಸ್ ಅಪಸ್ವರ ಮಿಡಿಯುತ್ತವೆ. ಸಾಂದ್ರತೆಯ ನೀಟಸಾಲಂತೂ ಲೋಕಪ್ರಜ್ಞೆಯ ಅಡಿಪಾಯವನ್ನೇ ಹಂದಾಡಿಸಿ ಬಿಡುವುದು. ಮೇಲ್ಮೈ ಗುರುತ್ವದ ನೀಟಸಾಲಿನಲ್ಲಿ ತಾಳ ತಪ್ಪಿದ್ದೇ ವಿಮೋಚನವೇಗದ ನೀಟಸಾಲು ಅಪವಾದವಾಗದೇ ವಿಧೇಯವಾಗಿರುವುದು ಆಕಸ್ಮಿಕ

ಕಾಯದ ಹೆಸರು	ರಾಶಿ (ಭೂಮಿ = ೧) M	ತ್ರಿಜ್ಯ (ಭೂಮಿ = ೧) R	ಸರಾಸರಿ ಸಾಂದ್ರತೆ (ಘನ ಸೆಂ.ಮೀಗೆ ಗ್ರಾಮ್) d	ಮೇಲ್ಮೈ ಗುರುತ್ವ (ಭೂಮಿ = ೧) g	ವಿಮೋಚನ ವೇಗ (ಸೆಕೆಂಡಿಗೆ ಕಿ. ಮೀ) v
ಸೂರ್ಯ	೩,೩೩.೨೦೦	೧೦೮	೧.೪೧	೨೮.೫೭	೬೧೮
ಗುರು	೩೧೮	೧೧.೧೯	೧.೩೩	೨.೬೪	೫೭.೫
ಶನಿ	೯೫.೨	೯.೪೭	೦.೬೯	೧.೧೩	೩೫.೪
ನೆಪ್ಚ್ಯೂನ್	೧೭.೩	೩.೫	೨.೨೭	೧.೪೧	೨೪.೪
ಯುರೇನಸ್	೧೪.೬	೩.೬೯	೧.೫೬	೧.೦೭	೨೧.೯
ಭೂಮಿ	೧	೧	೫.೫೨	೧	೧೧.೧೯
ಶುಕ್ರ	೦.೮೨	೦.೯೫	೫.೩	೦.೯೧	೧೦.೩
ಮಂಗಳ	೦.೧೦೮	೦.೫೩	೩.೯೪	೦.೩೮	೫.೧
ಬುಧ	೦.೦೫೬	೦.೩೮	೫.೧	೦.೩೯	೪.೩
ಚಂದ್ರ	೦.೦೧೨೩	೦.೨೭	೩.೩೪	೦.೧೬	೨.೩೮

ಹೊಂದಾಣಿಕೆ ಮಾತ್ರ. ಇಂಥ "ಅಸಾಂಗತ್ಯ" ಗಳಿಂದ ತಿಳಿಯುವ ಒಂದು ಮುಖ್ಯಾಂಶ ಎಂದರೆ ರಾಶಿ (M), ತ್ರಿಜ್ಯ (R), ಗಾತ್ರ (V) ಇವುಗಳ ನಡುವೆ ನಾವು ಸುಲಭವಾಗಿ ಊಹಿಸಬಹುದಾದ ಯಾ ಗ್ರಹಿಸಬಹುದಾದ ನೇರಸಂಬಂಧವೊಂದಿಲ್ಲ. ಲೆಕ್ಕದ ಸಾಮುವಿನಲ್ಲಿ ಪಳಗಿದವರ ಪ್ರೀತ್ಯರ್ಥ ಈ ಮುಂದಿನ ಪ್ರತೀಕಾತ್ಮಕ ಭಾಷೆಯನ್ನು ಬರೆದಿದೆ:

$V = 4\pi R^3/3,\ M = Vd,\ \ g = GM/R^2,$
$v^2 = 2GM/R$. ಇಲ್ಲಿ π ಯು (ಗ್ರೀಕ್ ಅಕ್ಷರ ಪೈ) ಸ್ಥೂಲ ಬೆಲೆ ೩.೧೪೧೫೯; ಮತ್ತು G ಈ ಮೊದಲೇ ವಿವರಿಸಿರುವ ಗುರುತ್ವಾಕರ್ಷಣದ ವಿಶ್ವಸ್ಥಿರಾಂಕ (ಇದರ ಬೆಲೆಯೂ ತಿಳಿದಿದೆ). ಈ ಸಮೀಕರಣಗಳನ್ನು ಗಣಿತಗಣನ ಸಾಧನೆಗಳಿಂದ ಸ್ಥಾಪಿಸುವ ಸಂತೋಷ(?) ಲೆಕ್ಕ ಕಲಿತವರ ಪಾಲಿಗಿರಲಿ, ನಮಗೆ ಫಲಿತಾಂಶದ ಗುಳ ಮಾತ್ರ ಸಾಕು.

ಲಾಪ್ಲಾಸನ ಕಾಲ್ಪನಿಕ ನಕ್ಷತ್ರ

ಈಗ ನಾವು ಲಾಪ್ಲಾಸನ ಕಾಲ್ಪನಿಕ ನಕ್ಷತ್ರವನ್ನು ಕಂಡು ಧನ್ಯರಾಗಲು ಸಿದ್ಧರಾಗಿದ್ದೇವೆ. ಅದಕ್ಕೆ ಅವನು ಮಹಾಗಾತ್ರದ ಸೂರ್ಯನ ತ್ರಿಜ್ಯವನ್ನೂ ಗರಿಷ್ಠ ಸಾಂದ್ರತೆ ಇರುವ ಭೂಮಿಯ ಸಾಂದ್ರತೆಯನ್ನೂ ಆಧಾರವಾಗಿ ತೆಗೆದುಕೊಂಡು ಉಭಯ ಲಾಭವನ್ನು ಒದಗಿಸಿದ್ದಾನೆ. ಈ ಸೈದ್ಧಾಂತಿಕ ನಕ್ಷತ್ರದ ವಿಮೋಚನವೇಗವನ್ನು ಮೇಲಿನ ಸೂತ್ರಾನುಸಾರ ಗಣಿಸಿ ಪಡೆಯಬಹುದು: ಅದು ಸೆಕೆಂಡಿಗೆ ೩.೦೫೭ $\times$ ೧೦^{೧೦} ಸೆಂಮೀ, ಬೆಳಕಿನ ವೇಗ c ಗಿಂತ ಇದು ಹೆಚ್ಚು! ಆದ್ದರಿಂದ ಇದೊಂದು ವಿಚಿತ್ರಕಾಯ. ಇಂಥ ಆಕಾಶ ವೈಚಿತ್ರ್ಯದ ವರ್ತನೆ ಹೇಗಿರುವುದೆಂದು ಈಗ ನೋಡೋಣ. ಇದರಿಂದ, ನಮ್ಮ ಸೂರ್ಯ ಮತ್ತು ಇತರ ದೃಗ್ಗೋಚರ ನಕ್ಷತ್ರಗಳ ತೆರದಲ್ಲಿಯೇ, ಬೆಳಕಿನ ಕಂಬಿಗಳು (ಅಂದರೆ ಫೋಟಾನ್ ಕಣಗಳ ಸತತ ಹೊನಲು) ಹೊರಹೊಮ್ಮುತ್ತವೆ; ಇವು ವೈಚಿತ್ರ್ಯದ ಮೇಲ್ಮೈಯಿಂದ ನೆಗೆವ (ಅಂದರೆ ಉಡಾವಣೆಗೊಳ್ಳುವ) ವೇಗ c. ವೈಚಿತ್ರ್ಯದ ಗುರುತ್ವ ಬಂಧನದಿಂದ ಇವು ಬಿಡುಗಡೆಗೊಂಡು ಹೊರಲೋಕಕ್ಕೆ ತೆರಳಬೇಕಾದರೆ ಈ ವೇಗ ಅದರ ವಿಮೋಚನ ವೇಗಕ್ಕಿಂತ ಜಾಸ್ತಿ ಆಗಬೇಕು. "ದುರದೃಷ್ಟವಶಾತ್" ಪರಿಸ್ಥಿತಿ ತದ್ವಿರುದ್ಧವಾಗಿದೆ. ಆದ್ದರಿಂದ ಫೋಟಾನ್ ಕಣಗಳು (ಬೆಳಕಿನ ಕಂಬಿಗಳು), ಈ ಮೊದಲು ಉದಾಹರಿಸಿದ ಕಲ್ಲಿನಂತೆ, "ಸೋತು" ವೈಚಿತ್ರ್ಯದ ಮೈಗೆ ಮರಳುತ್ತವೆ. ಅರ್ಥಾತ್ ವೈಚಿತ್ರ್ಯದಿಂದ ಬೆಳಕು ಉತ್ಸರ್ಜಿಸಿದರೂ ಅದು ಅಲ್ಲಿಂದ ಹೊರಸಾಗಲಾರದು: "ರಾಯಭಾರಿಗಳೇನೋ ವಿಪುಳ ಸಂಖ್ಯೆಯಲ್ಲಿ ಅಧಿಕೋತ್ಸಾಹದಿಂದ ತೆರಳಲು ಸಿದ್ಧರಾಗಿದ್ದಾರೆ. ಆದರೆ ಅವರಿಗೆ ಪರದೇಶ ಪ್ರಯಾಣ ಮಾಡಲು ಕೇಂದ್ರ ಸರ್ಕಾರದ ರಹದಾರಿ ದೊರೆತಿಲ್ಲ," ಎನ್ನುವ ಸನ್ನಿವೇಶಕ್ಕೆ ಸಮಾನವಾದದ್ದು ನಕ್ಷತ್ರ ವೈಚಿತ್ರ್ಯದ ಈ ಸ್ಥಿತಿ. ಹೀಗಾಗಿ ವಿಶ್ವದ ಬಲು ದೊಡ್ಡ ಮಿನುಗು ವಸ್ತುಗಳು ನಮಗೆ ಕಾಣದಿರುವ ಸಾಧ್ಯತೆ ಉಂಟು.

ಕೃಷ್ಣ ವಿವರಗಳು–ಆಕಾಶಗರ್ತಗಳು

ಇಂಥ ವೈಚಿತ್ರ್ಯಗಳಿಗೆ ಆಧುನಿಕ ವಿಜ್ಞಾನಿಗಳು ಕೃಷ್ಣವಿವರಗಳು ಎಂಬ ಹೆಸರನ್ನು ನೀಡಿದ್ದಾರೆ. ಕೃಷ್ಣ ಅಂದರೆ ಕಪ್ಪು, ವಿವರ ಅಂದರೆ ತೂತು ಎಂದರ್ಥ. ಸ್ವತಃ ವೈಚಿತ್ರ್ಯದಿಂದ ಒಂದಿನಿತು ಬೆಳಕೂ ಹೊರಬರುವುದಿಲ್ಲ. ಇನ್ನು (ಸೈದ್ಧಾಂತಿಕವಾಗಿ) ನಾವು ಅದರ ಮೇಲೆ ಬೀರಬಹುದಾದ ಬೆಳಕಿನ ದೂಲ ಪ್ರತಿಫಲನಗೊಂಡು ನಮ್ಮೆಡೆಗೆ ಮರಳಿ ವೈಚಿತ್ರ್ಯದ ಅಸ್ತಿತ್ವವನ್ನು ಸ್ಥಿರೀಕರಿಸುವುದು ಸಾಧ್ಯವಾದೀತೇ ಎಂದರೆ ಇದೂ ಸಂಭವಿಸದು. ಏಕೆಂದರೆ ಪ್ರತಿಫಲಿತ ದೂಲವಾದರೂ ಫೋಟಾನುಗಳ ಹೊನಲೇ. ಇದು ವೈಚಿತ್ರ್ಯದಿಂದ ಹೊರಸಾಗುವಂತಿಲ್ಲ. ಹೀಗೆ ಅಚ್ಚ ಕಪ್ಪು ಬಣ್ಣದ, ತನ್ನಿಂದ ಯಾವುದನ್ನೂ ಹೊರಬಿಡದ ಮತ್ತು ತನ್ನಲ್ಲಿಗೆ ಬಂದ ಪ್ರತಿಯೊಂದನ್ನೂ ಸ್ವಾಹಾಕರಿಸಿ "ಕೃಷ್ಣಾರ್ಪಣಮಸ್ತು" ಮಾಡುವ ಆಕಾಶಗರ್ತಕ್ಕೆ ಕೃಷ್ಣ

ವಿವರ ಎಂಬ ಹೆಸರು ಅನ್ವರ್ಥಕವಾಗಿದೆ.

ಲಾಪ್ಲಾಸನ ಕಾಲದಲ್ಲಿ ತಿಳಿದಿದ್ದುದು ದೃಗ್ಗೋಚರ ಖಗೋಳ ವಿಜ್ಞಾನ ಮಾತ್ರ—ಅಂದರೆ ಕಣ್ಣಿಗೆ ಕಾಣುವ ಆಕಾಶಕಾಯಗಳನ್ನು ಕುರಿತ ಅಧ್ಯಯನ ಮಾತ್ರ. ಆಧುನಿಕ ದೃಷ್ಟಿ ಖಗೋಳ ವಿಜ್ಞಾನದಲ್ಲಿ ಮೂರು ಮುಖ್ಯ ವಿಭಾಗಗಳನ್ನು ಗುರುತಿಸಿ ಹೆಸರಿಸಿದೆ: ರೇಡಿಯೊ ವಿಭಾಗ, ದೃಗ್ಗೋಚರ ವಿಭಾಗ, ಎಕ್ಸ್‌ಕಿರಣ ವಿಭಾಗ. ನಮ್ಮ ಕಣ್ಣುಗಳ ರಚನೆಯ ಪರಿಣಾಮವಾಗಿ ಈ ಮೂರು ವಿಭಾಗಗಳು ಏರ್ಪಟ್ಟಿವೆ ಅಷ್ಟೆ. ಆಕಾಶಕಾಯಗಳಿಂದ ಬರುವ ರೇಡಿಯೊ ತರಂಗಗಳನ್ನು (ವ್ಯಾಪಕವಾಗಿ ಅತಿರಕ್ತ ವಿಕಿರಣವನ್ನು) ರೇಡಿಯೊ ಖಗೋಳ ವಿಜ್ಞಾನ ಅಧ್ಯಯಿಸುತ್ತದೆ; ಬೆಳಕನ್ನು (ದೃಗ್ಗೋಚರ ವಿಕಿರಣವನ್ನು) ದೃಗ್ಗೋಚರ ಖಗೋಳ ವಿಜ್ಞಾನ ಅಧ್ಯಯಿಸುತ್ತದೆ; ಎಕ್ಸ್ ಕಿರಣಗಳನ್ನು (ವ್ಯಾಪಕವಾಗಿ ಅತಿನೇರಿಳೆ ವಿಕಿರಣವನ್ನು) ಎಕ್ಸ್ ಕಿರಣ ಖಗೋಳವಿಜ್ಞಾನ ಅಧ್ಯಯಿಸುತ್ತದೆ. ಅತಿ ರಕ್ತ, ದೃಗ್ಗೋಚರ ಮತ್ತು ಅತಿನೇರಿಳೆ ಎಂಬ ಈ ಮೂರೂ ಬಗೆಯ ವಿಕಿರಣಗಳಿಗೆ ಒಟ್ಟಾಗಿ ವಿದ್ಯುತ್ಕಾಂತ ವಿಕಿರಣವೆಂದು ಹೆಸರು. ಆದ್ದರಿಂದ ಆಕಾಶಕಾಯ ಎಂಬುದೊಂದು ವಿದ್ಯುತ್ಕಾಂತ ವಿಕಿರಣವನ್ನು ಉತ್ಸರ್ಜಿಸುವ ಆಕರ ಎಂದೂ ಅದಕ್ಕೂ ನಮಗೂ ನಡುವೆ ರಾಯಭಾರಿ ಸಂಬಂಧ ಏರ್ಪಡುವುದು ವಿದ್ಯುತ್ಕಾಂತ ವಿಕಿರಣದಿಂದ ಎಂದೂ ಈಗ ಹೇಳಬಹುದು. ವಿದ್ಯುತ್ಕಾಂತ ವಿಕಿರಣವು ವಿಶ್ವದ ಬಹ್ವಂಶ ನಿರ್ವಾತ ಪ್ರದೇಶವನ್ನು ಬೆಳಕಿನ ವೇಗ c ಯಿಂದ ಗಮಿಸುತ್ತದೆ. ಆದ್ದರಿಂದ ಆಧುನಿಕ ಪರಿಭಾಷೆಯಲ್ಲಿ "ಒಂದು ನಕ್ಷತ್ರ ನಮಗೆ ಗೋಚರಿಸುತ್ತದೆ" ಎನ್ನುವ ವಾಕ್ಯಕ್ಕೆ ಹೆಚ್ಚಿನ ಅರ್ಥ ಮತ್ತು ಹೊಸ ಆಯಾಮ ಪ್ರಾಪ್ತವಾಗಿವೆ: ಆದರಿಂದ ಹೊರಟ ವಿದ್ಯುತ್ಕಾಂತ ವಿಕಿರಣ ನಮ್ಮನ್ನು ತಲುಪಿದಾಗ ಮತ್ತು ನಾವು ಅದನ್ನು ಕಲೆಹಾಕಿ ಗುರುತಿಸಿದಾಗ ಅದು ನಮಗೆ ಗೋಚರಿಸುತ್ತದೆ.

ಕೃಷ್ಣವಿವರವನ್ನು ಈ ಹಿನ್ನೆಲೆಯಲ್ಲಿ ಪರಿಶೀಲಿಸೋಣ. ಅದರಿಂದ ಫೋಟಾನುಗಳ ಪೊನಲಾದ ಬೆಳಕು ಒಂದೇ ಅಲ್ಲ, ಯಾವುದೇ ವಿಧವಾದ ವಿದ್ಯುತ್ಕಾಂತ ವಿಕಿರಣವೂ ತಪ್ಪಿಸಿಕೊಂಡು ಹೊರಬರಲಾರದು. ಆದ್ದರಿಂದ ಲಾಪ್ಲಾಸನ ಹೇಳಿಕೆಯ ಆಧುನಿಕ ರೂಪ ಹೀಗಿರಬಹುದು: "ವಿಮೋಚನ ವೇಗವು c ಗಿಂತ ಹೆಚ್ಚು ಇರುವ ಆಕಾಶಕಾಯದಿಂದ ಹೊರಲೋಕಕ್ಕೆ ಯಾವುದೇ ವಿಧವಾದ ವಿದ್ಯುತ್ಕಾಂತ ವಿಕಿರಣವೂ ತೆರಳುವುದಿಲ್ಲ. ಇಂಥ ಒಂದು ಕಾಯದ ಅಸ್ತಿತ್ವ ಪ್ರತ್ಯಕ್ಷ ವಿಧಾನಗಳಿಂದ ಎಂದೂ ನಮಗೆ ತಿಳಿಯಲಾರದು." ತಾತ್ತ್ವಿಕವಾಗಿ ಕೃಷ್ಣವಿವರಗಳ ಇರವನ್ನು ಬಹುಮಂದಿ ವಿಜ್ಞಾನಿಗಳು ಅಂಗೀಕರಿಸಿರುವರು. ಕೆಲವೊಂದು ಬಗೆಯ ನಕ್ಷತ್ರಗಳ ಕೊನೆಯ ಘಟ್ಟ ಕೃಷ್ಣವಿವರ ಸ್ಥಿತಿ ಎಂದು ಅವರು ನಂಬಿದ್ದಾರೆ.

ಕೃಷ್ಣವಿವರಗಳಿಗಾಗಿ ಶೋಧ

ಪರೋಕ್ಷ ವಿಧಾನಗಳಿಂದ ಸಾಕಷ್ಟು ಅನ್ವೇಷಣೆಗಳು ನಡೆದಿವೆ. ನಮ್ಮ ಸೂರ್ಯ ಸದಸ್ಯನಾಗಿರುವ ಸ್ಥಳೀಯ ಬ್ರಹ್ಮಾಂಡವಾದ ಆಕಾಶಗಂಗೆಯಲ್ಲಿಯೇ ಲಕ್ಷಾಂತರ ಕೃಷ್ಣವಿವರಗಳು ಇರಬಹುದೆಂದು ಸಾಧಾರವಾಗಿ ವಿಜ್ಞಾನಿಗಳು ನಂಬಿದ್ದಾರೆ. ಆದರೆ ಈ ತನಕ (೧೯೭೬) ಖಚಿತವಾಗಿ ಯಾವುದೇ ಕೃಷ್ಣವಿವರದ ಅಸ್ತಿತ್ವನ್ನೂ ಸ್ಥಾಪಿಸಲು ಸಾಧ್ಯವಾಗಿಲ್ಲ. ವಿಶ್ವದ ಅಸಂಖ್ಯಾತ ನಕ್ಷತ್ರ ವಿದ್ಯುದ್ದೀಪಾಲಂಕೃತ ವೈಭವದಲ್ಲಿ ಹುದುಗಿರುವ ಕಾಳ ಕುಹರಗಳು ಇನ್ನೇನೇನು ವೈಚಿತ್ರ್ಯಗಳನ್ನು ಗರ್ಭಿಸಿಕೊಂಡಿವೆಯೋ ಕಾದು ನೋಡಬೇಕಷ್ಟೇ. ಏತನ್ಮಧ್ಯೆ ನಾವು ಕವಿ ಗೋಪಾಲಕೃಷ್ಣ ಅಡಿಗರೊಡನೆ ಅಡಿಗಳನ್ನು ಇಡೋಣ:

ದಿನ ದಿನವು ಲಗ್ಗೆ ನಡೆದಿದೆ ಇವನ ದುರ್ಗಕ್ಕೆ.
ಕದ ತೆರೆಯಲಾರ.
ಹೊರಗೆ ವಿದ್ಯುದ್ದೀಪ ಲಹರಿ ಲಹರಿ ವಿಲಾಸ.
ಅಂತಃಪುರದಿ ಮಾತ್ರ ಅಂಧಕಾರಾಲಾಪ. ✡

ನಿಮ್ಮೂರಿನ ನೆಚ್ಚಿನ ಚಿತ್ರಮಂದಿರಗಳಲ್ಲಿ
ನೋಡಿ ಆನಂದಿಸಿರಿ!

ಗಂಡನೇ ದೇವರೆಂದು ಪೂಜಿಸುವ
ಓರ್ವ ಹೆಣ್ಣಿನ ಹೃದಯಂಗಮ ಕಥಾನಕ

— ಎಸ್.ಪಿ.ವಿ.ಫಿಲಂಸ್ —

ತುಳಸಿ

ಕಲರ್



ಚಿತ್ರೀಕರಣ • **ಕೆ.ಎಸ್.ಎಲ್.ಸ್ವಾಮಿ** .ತಂಡ.
ಸಂಗೀತ • ವಿಜಯಭಾಸ್ಕರ್
ನಿರ್ಮಾಣ • ಕೆ.ಎನ್.ಸುಬ್ಬಯ್ಯ

[illegible] **ಮೂವೀಸ್** ಹಂಚಿಕೆ

★ ಕಲ್ಯಾಣ್‌ಕುಮಾರ, ಜಯಂತಿ, ಮಂಜುಳ, ಶ್ರೀನಾಥ, ಶಿವರಾಂ
ಬಿ. ವಿ. ರಾಧಾ, ಲೋಕನಾಥ್, ರಮಾದೇವಿ, ಲಕ್ಷ್ಮಿದೇವಿ.

-: ಗೌರವ ನಟರು :-

ಕೆ. ಎಸ್ ಅಶ್ವಥ, ಹನುಮಂತಾಚಾರಿ, ಬಿ ಜಯಾ ಮತ್ತಿತರರು.

ಮಕ್ಕಳ ದುಃಸ್ವಪ್ನಗಳು

ಕನಸುಗಳ ಸಾಮ್ರಾಜ್ಯ ರಮ್ಯ ಮನೋಹರವಾಗಿರುವಂತೆ ಭೀಕರ ಭಯಾನಕವೂ ಆಗಿರಬಲ್ಲದು. ಹಲ ಕೆಲವರಿಗಂತೂ ಸ್ವಪ್ನಗಳು ಮುಂದಿನ ಆಗುಹೋಗುಗಳನ್ನು ದಿಗ್ದರ್ಶಿಸುತ್ತವಂತೆ. ಆದರೆ ಇನ್ನು ಕೆಲವರ ಸ್ವಪ್ನಗಳಿಗೆ ಅರ್ಥ ಹಚ್ಚುವದೂ ಕಠಿಣವಾಗುತ್ತದೆ. ದೊಡ್ಡವರ ಸ್ವಪ್ನಲೋಕದ ಬಗೆಗೆ ಏನೇನೊ ಊಹಾಪೋಹ ನಡೆಸಿದರೂ ಚಿಕ್ಕ ಮಕ್ಕಳ ಕನಸಿನ ರಾಜ್ಯದ ಬಗೆಗೆ ಉಂಟಾಗುವ ಅನುಭವ ವಿಚಿತ್ರ. ಕೆಲವು ಮಕ್ಕಳಂತೂ ರಾತ್ರಿಯಲ್ಲಿ ಭೀಕರ ದುಃಸ್ವಪ್ನಗಳನ್ನು ಕಂಡು ಹೆದರಿಹೋಗಿ ತಮ್ಮ ಜೀವನವನ್ನೂ ಮುರುಟಿಸಿಕೊಳ್ಳಬಹುದು. ಚಿಕ್ಕ ಮಕ್ಕಳು ದುಃಸ್ವಪ್ನಗಳನ್ನು ಕಾಣಬೇಕಾದುದಾದರೂ ಏಕೆ? ಎಳೆ ಮನಸ್ಸಿನ ಮೇಲೆ ಆ ದುಃಸ್ವಪ್ನಗಳ ಪರಿಣಾಮವಾದರೂ ಏನಾಗಬೇಕು? ಅಂಥ ಎಳೆ ಮಕ್ಕಳು ಕೆಟ್ಟ ಕನಸುಗಳನ್ನು ಕಂಡರೂ ಅವನ್ನು ಮರೆತುಬಿಡಲು ಸಾಧ್ಯವಿಲ್ಲವೇ? ಎಂದೆಲ್ಲ ಪ್ರಶ್ನೆಗಳನ್ನು ಪರಾಮರ್ಶಿಸಬೇಕಾದುದು ಉಚಿತ.

ರಾಮು ನಡುರಾತ್ರಿಯಲ್ಲಿಯೆ ಹಠಾತ್ತಾಗಿ "ಅಮ್ಮಾ" ಎಂದು ಕಿರುಚುತ್ತ ಎದ್ದೇಳುತ್ತಾನೆ. ತಾಯಿ ಆತನೆಡೆಗೆ ಧಾವಿಸಿ, ಆತನನ್ನು ತಟ್ಟಿ ಎಚ್ಚರಿಸಿ, "ಏಕೋ, ರಾಮಾ, ಏನಾಯಿತು? ಕಿರುಚಿದ್ದೇಕೆ?" ಎಂದು ಕೇಳಿದರೆ ಆತ "ಅಮ್ಮಾ ನಾಯಿ ನನ್ನನ್ನು ಕಚ್ಚಿತು ನೋಡು" ಎಂದು ಕಾಲನ್ನು ನೀಡಬಹುದು. ಆಗ ತಾಯಿ ಆತನನ್ನು ಸಂತೈಸಬೇಕಾಗುತ್ತದೆ, "ಎಲ್ಲಿಯ ನಾಯಿ, ಏನು ನಿನಗೆ ಕಚ್ಚಿತಾ. ನನ್ನ ಪಕ್ಕದಲ್ಲೇ ಮಲಗಿದ್ದೀಯಾ. ಇದೆಲ್ಲ ಕನಸು. ಎಲ್ಲಿ ನೋಡು, ಇಲ್ಲಿ ನಾಯಿ ಇಲ್ಲವಲ್ಲ" ಎಂದು ರಾಮುನನ್ನು ಸಂತೈಸಿದಾಗ ಆತ ಪುನಃ ಶಾಂತನಾಗಿ ನಿದ್ರೆ ಹೋಗುತ್ತಾನೆ. ತಾಯಿಯ ಮಮತೆ ಆತನ ಹೆದರಿಕೆಯನ್ನು ದೂರ ಮಾಡುತ್ತದೆ. ಮರುದಿನ ಬೆಳಿಗ್ಗೆ ಎದ್ದಾಗ ಆತ ಎಲ್ಲವನ್ನೂ ಮರೆತುಬಿಟ್ಟಿರುತ್ತಾನೆ.

ಇನ್ನೂ ಕೆಲವು ಮಕ್ಕಳಿಗೆ ರಾತ್ರಿಯಲ್ಲಿ ನಿದ್ದೆಯಲ್ಲಿ ಏನೋ ಹೆದರಿಕೆ ಬಂದಂತಾಗಿ ಎದ್ದುಬಿಡುತ್ತವೆ. ಮುಖ ವಿಕಾರವಾಗಿರುತ್ತದೆ. ನರಳುವ ದನಿ. ಹಾಗೇ ಒಂದೆರಡು ನಿಮಿಷ ಕುಳಿತಿದ್ದು ಕ್ರಮೇಣ ಎಚ್ಚರಗೊಳ್ಳುತ್ತವೆ. ಆಗ ನೋವು ನರಳಿಕೆ ಎಲ್ಲ ಮಾಯವಾಗಿ ಪುನಃ ನಿದ್ದೆ ಹೋಗುತ್ತವೆ. ಒಮ್ಮೊಮ್ಮೆ ಬಹಳ ಹೊತ್ತು ನಿದ್ದೆ ಹತ್ತುವದೂ ಇಲ್ಲ. ಬೆಳಗಾದ ನಂತರ ಈ ಮಕ್ಕಳಿಗೂ ತಮ್ಮ ರಾತ್ರಿಯ ಚಟುವಟಿಕೆಗಳು ನೆನಪಿನಲ್ಲಿ ಉಳಿದಿರುವದಿಲ್ಲ.

ಮಕ್ಕಳ ನಿದ್ದೆ ಕೆಡಿಸುವ ಈ ದುಃಸ್ವಪ್ನಗಳು ಅವರಿಗೆ ಹೆದರಿಕೆಯನ್ನುಂಟು ಮಾಡಿದರೂ ನಿಜವಾಗಿಯೂ ಭೀಕರವಾಗಿರುವದಿಲ್ಲ. ಕೆಲವು ಮಕ್ಕಳಿಗೆ ಮಲಗಿ ನಿದ್ದೆ ಹತ್ತಿದ ಕೂಡಲೆ ದುಃಸ್ವಪ್ನ ಬಿದ್ದು ಕಾಡುವದುಂಟು. ಇನ್ನು ಕೆಲವರಿಗೆ ಕೆಲ ಗಂಟೆ ನಿದ್ದೆ ಮಾಡಿದ ನಂತರ ಅಥವಾ ನಸುಕಿನಲ್ಲಿ ದುಃಸ್ವಪ್ನ ಕಾಣಿಸಿಕೊಂಡು ಗಾಬರಿಗೊಳಿಸುವದುಂಟು. ಇದೆಲ್ಲ ನಾಲ್ಕೈದು ನಿಮಿಷಗಳ ಮಟ್ಟಿಗೆ ಮಾತ್ರ. ಸ್ವಪ್ನ ಮುಗಿದ ಕೂಡಲೆ ಎಚ್ಚೆತ್ತ ಮಕ್ಕಳು ತಮ್ಮ ಪರಿಸರ ಗುರುತಿಸಿಕೊಂಡು ತಾಯ್ತಂದೆಯರ ಮುಖ ನೋಡಿಕೊಂಡು ನೆಮ್ಮದಿಯಿಂದ ನಿದ್ರೆ ಹೋಗುವದುಂಟು. ಒಮ್ಮೊಮ್ಮೆ ತಮ್ಮ ತಾಯ್ತಂದೆಗಳಿಗೆ ತಮ್ಮ ದುಃಸ್ವಪ್ನದ ಅನುಭವವನ್ನು ಇವರು ಹೇಳಿಕೊಳ್ಳುವದುಂಟು.

ಇಂಥ ದುಃಸ್ವಪ್ನಗಳ ಕಾಟಕ್ಕೆ ಈಡಾದ ಮಕ್ಕಳನ್ನು ಪ್ರೀತಿಯಿಂದ ಸಂತೈಸಬೇಕಾದುದು ತುಂಬ ಅಗತ್ಯ. ಕೆಟ್ಟ ಕನಸಿನಿಂದ ಗಾಬರಿಗೊಂಡ ಮಗುವನ್ನು ಕೂಡಲೆ ಮೃದು

ವಾಗಿ ತಟ್ಟಿ ಎಬ್ಬಿಸಿ ಆತನಿಗೆ ಧೈರ್ಯ ನೀಡಬೇಕಾದುದ ತುಂಬ ಅಗತ್ಯ. ತನ್ನ ಕನಸಿನಿಂದ ಆತ ತ್ರಸ್ತನಾಗದಂತೆ ಸಂತೈಸಿ, ಆತ ಪುನಃ ನೆಮ್ಮದಿಯಿಂದ ನಿದ್ದೆ ಹೋಗುವಂತೆ ಮಾಡಬೇಕು. ತಲೆನ ಹಾಸಿಗೆಯನ್ನು ಸರಿಪಡಿಸಿ ಬೆಚ್ಚಗೆ ಹೊದ್ದಿಸಿ ಮಲಗಿಸಬೇಕು. ಅಂದರೆ ಆತನಿಗೆ ನಿದ್ದೆಯ ಹೊಸ ಕಾಲಾವಧಿ ಪ್ರಾರಂಭವಾದಂತಾಗಿ ಗಾಢ ನಿದ್ದೆಗಿಳಿಯಲು ಅನುಕೂಲವಾಗುವದು. ಬೆಳಿಗ್ಗೆ ಎದ್ದಾಗ ಆತನ ಮನಸ್ಸು ಪ್ರಸನ್ನವಾಗಿಯೂ ಇರಬಲ್ಲದು.

ಕೆಲವೊಮ್ಮೆ ಮೂಗಿನ ತೊಂದರೆಯಿಂದಾಗಿ, ಒಮ್ಮೊಮ್ಮೆ ಅಜೀರ್ಣ ಕಾರಣದಿಂದಾಗಿ ದುಃಸ್ವಪ್ನಗಳು ಬಾಧಿಸುವದುಂಟು. ಅಥವಾ ಮಕ್ಕಳು ಸಾಯಂಕಾಲ ಆಟದ ಬಯಲಲ್ಲಿ ಜಿದ್ದಿನಿಂದಾಗಿ ತಮ್ಮ ಶಕ್ತಿ ಮೀರಿ ಆಟ ಆಡಿ ವಿಪರೀತ ದಣಿದುಕೊಂಡಾಗಲೊ, ಇಲ್ಲವೆ ಅಭ್ಯಾಸದ ಒತ್ತಡ ಶಾಲೆಯಲ್ಲಿ ವಿಪರೀತವಾದರೂ ಅನುಭವಿಸಬೇಕಾಗಿ ಬರುವ ಆಯಾಸ ಕೂಡ ಅನೇಕಾವರ್ತಿ ದುಃಸ್ವಪ್ನಗಳಿಗೆ ಕಾರಣವಾಗಬಲ್ಲದು. ಮನೆಯಲ್ಲಿಯೇ ಮಕ್ಕಳನ್ನು ಹೆದರಿಸುವ ಅಪ್ತೇಷ್ಟರಿದ್ದರೂ ಆ ಹೆದರಿಕೆಯಿಂದಾಗಿಯೂ ಮಕ್ಕಳು ಕೆಟ್ಟ ಕನಸುಗಳನ್ನು ಕಾಣುವರು. ಇಂಥ ಸಂದರ್ಭಗಳಲ್ಲಿ ಮಕ್ಕಳಲ್ಲಿ ಪ್ರೀತಿ ವಿಶ್ವಾಸಗಳನ್ನು ಮೂಡಿಸುವದು ಅತಿ ಅವಶ್ಯಕ.

ಭೀಮು ಕೆಲ ದಿನಗಳಿಂದಲೂ ರಾತ್ರಿಯಲ್ಲಿ ಹೆದರಿ ಚೀರಿ ಎದ್ದು ಬಿಡುತ್ತಿದ್ದ. ಕಾರಣ ಏನೂ ಗೊತ್ತಾಗಲಿಲ್ಲ. ಕೊನೆಗೆ ತಾಯಿಯ ವಿಶ್ವಾಸದಿಂದ ಆತನನ್ನು ರಮಿಸಿ ವಿಚಾರಿಸಲಾಗಿ ತಾನೇ ಕಾರಣ ಎಂದು ಆ ತಾಯಿಗೆ ತಿಳಿದು ಬಂತು. ತಾಯ್ತಂದೆಯರಿಬ್ಬರೂ ಕೆಲ ದಿನಗಳ ಹಿಂದೆ ತಾವು ನೋಡಿ ಬಂದ ನಾಟಕದಲ್ಲಿಯ ಕಳ್ಳರ ವಿಚಾರವಾಗಿ ಚರ್ಚಿಸುತ್ತಿದ್ದಾಗ ಅದನ್ನು ಕೇಳಿದ್ದ ಭೀಮನ ಮನಸ್ಸಿನಲ್ಲಿ ಕಳ್ಳರ ವಿಚಾರದಲ್ಲಿ ಹೆದರಿಕೆ ಉಂಟಾಗಿತ್ತು. ಅದೇ ಆತನನ್ನು ರಾತ್ರಿ ಸ್ವಪ್ನದಲ್ಲಿ ಬಂದು ಕಾಡುತ್ತಿತ್ತು. ತಾಯಿಯು ಆಗ ಭೀಮನೊಂದಿಗೆ ಸ್ಪಷ್ಟವಾಗಿ ಮಾತಾಡಿ, ಆ ನಾಟಕದ ಕಳ್ಳರಿಗೆ ಹೆದರಬೇಕಾಗಿಲ್ಲ ಎಂದು ಬಿಂಬಿಸಿದ ನಂತರ ಭೀಮು ಮತ್ತೆ ಎಂದಿನಂತಾದ. ಅಲ್ಲದೆ ಭೀಮು ರಾತ್ರಿ ಮಲಗಿದಾಗ ಆತನ ತಾಯಿಯು ದೀಪವನ್ನು ಇಟ್ಟಿರುತ್ತಿದ್ದಳು. ರಾತ್ರಿ ಎಚ್ಚತ್ತಾಗ ಬೆಳಕಿದ್ದರೆ ಮಕ್ಕಳಿಗೆ ಅಷ್ಟೆ ಸಮಾಧಾನ, ಅದೇಕೆ, ಕೆಲ ಹಿರಿಯರಿಗೂ ರಾತ್ರಿಯಿಡೀ ದೀಪದ ಬೆಳಕು ಬೇಕಾಗುತ್ತದೆ. ಇಷ್ಟು ಎಚ್ಚರಿಕೆ ವಹಿಸಿದ ನಂತರ ಭೀಮನ ಹೆದರಿಕೆ ಮಾಯವಾಗಿ ಕನಸುಗಳ ಕಾಟವೂ ತಪ್ಪಿತು.

ನಿದ್ರೆಯ ಚಕ್ರದಲ್ಲಿ ನಾಲ್ಕು ಭಾಗಗಳು ಇವೆ ಎಂದು ತಜ್ಞರ ಮತ. ೧) ನಿದ್ದೆ ಹೋಗುವದು. ೨) ನಿದ್ದೆಯಲ್ಲಿರುವದು. ೩) ಎಚ್ಚರಿಯುವದು. ೪) ಎಚ್ಚತ್ತೇ ಇರುವದು.

ದುಃಸ್ವಪ್ನ ಪೀಡಿತರಾದ ಮಕ್ಕಳಲ್ಲಿ ನಿದ್ದೆ ಹತ್ತುವದು, ನಿದ್ದೆಯಲ್ಲಿರುವದು ಇವುಗಳಲ್ಲಿ ಸಮರ್ಪಕ ಹೊಂದಾಣಿಕೆ ಇರುವುದಿಲ್ಲವೆಂದೂ ರಾತ್ರಿ ಹೆದರಿ ಬೆಚ್ಚಿ ಬೀಳುವ ಮಕ್ಕಳಲ್ಲಿ ನಿದ್ದೆಯಲ್ಲಿರುವದು ಮತ್ತು ಎಚ್ಚರಿಯುವದು ಈ ಕ್ರಿಯೆಗಳು ಸಮರ್ಪಕವಾಗಿರುವದಿಲ್ಲವೆಂದೂ ಈ ತಜ್ಞರ ಮತ. ಹೆದರಿದ ಮಗುವು ಚೀರುತ್ತಲೇ ಎಚ್ಚರಿಯುವದು. ಹೇಗೆ ಎಚ್ಚರಗೊಳ್ಳಬೇಕು ಎಂಬುದೇ ಆತನಿಗೆ ತಿಳಿಯದು ಎಂದೂ ಹೇಳಬಹುದಾಗಿದೆ.

ಕೆಲ ಮಕ್ಕಳಿಗೆ ನಿದ್ರಾಸಂಚಾರದ ಪೀಡೆ ಇರುತ್ತದೆ. ಪ್ರತಿಶತ ಎರಡರಷ್ಟು ಜನ, ತಮ್ಮ ಜೀವನದ ಒಂದಿಲ್ಲೊಂದು ಅವಧಿಯಲ್ಲಿ ನಿದ್ರಾಸಂಚಾರಿಗಳಾಗಿರುತ್ತಾರೆಂದು ಕಂಡುಬಂದಿದೆ. ಮಕ್ಕಳಲ್ಲಿ ಈ ರೋಗ ಇನ್ನೂ ಹೆಚ್ಚಿನ ಪ್ರಮಾಣದಲ್ಲಿರುತ್ತದೆಯಂತೆ.

ನಿದ್ರಾಸಂಚಾರಿಯಾದ ಮಗು ರಾತ್ರಿ ಯಾವ ಕಾಲಕ್ಕೂ ತನ್ನ ಹಾಸಿಗೆಯಿಂದೆದ್ದು ಸಂಚಾರಕ್ಕೆ ಹೊರಟುಬಿಡಬಹುದು. ಹಾಗೇ ಸುತ್ತಾಡಿ ಅಥವಾ ಏನಾದರೂ ಕೆಲಸ ಮಾಡಿ ಆತ ಹಾಸಿಗೆಗೆ ಹಿಂತಿರುಗಬಹುದು. ಕೆಲವೊಮ್ಮೆ ಆತನನ್ನು ಎಚ್ಚರಗೊಳಿಸಿದ ನಂತರ

ಆತನು ತನ್ನ ಶಯ್ಯೆಗೆ ಹಿಂತಿರುಗಿ ಮತ್ತೆ ನಿದ್ದೆ ಹೋಗಬಲ್ಲನು. ಇಂಥ ನಿದ್ರಾಸಂಚಾರಿಗಳನ್ನು ಎಚ್ಚರಿಸುವದು ಗಂಡಾಂತರಕಾರಿ ಎಂದು ಹೇಳುತ್ತಾರೆ ಆದರೆ ಅದರಲ್ಲೇನೂ ಅರ್ಥವಿಲ್ಲ.

ಈ ನಿದ್ರಾಸಂಚಾರ ಅಷ್ಟೊಂದು ಭಯಂಕರ ರೋಗವೇನಲ್ಲ. ನಿದ್ರಾಸಂಚಾರ ರೋಗಾವಸ್ಥೆಯನ್ನು ಕೆಲ ಮಕ್ಕಳು ನಿರುಪದ್ರವಕಾರಕ ರೀತಿಯಲ್ಲಿ ಕಳೆದು ಮತ್ತೆ ಎಂದಿನಂತಾಗಬಹುದು. ಇಂಥ ನಿದ್ರಾಸಂಚಾರವು ಉನ್ಮಾದರೋಗಕ್ಕೆ ಕಾರಣವಾಗಬಹುದೆಂಬುದು ನಿರಾಧಾರವಾದ ಹೆದರಿಕೆ.

ನಿದ್ರಾಸಂಚಾರದ ರೋಗಕ್ಕೀಡಾದವರನ್ನು ಹಾಸಿಗೆಗೆ ಕಟ್ಟಿ ಹಾಕುವದೂ ಒಂದು ರೋಗ ನಿವಾರಣೋಪಾಯ. ಅವರನ್ನು ಮಂಚಕ್ಕೆ ಬಿಗಿದಿಡಬೇಕಾದ ಕಾರಣವಿಲ್ಲ. ಅವರು ಹಾಸಿಗೆ ಬಿಟ್ಟೇಳಲು ಪ್ರಯತ್ನಿಸುವಾಗ ಅವರಿಗೆ ತಡೆ ಉಂಟಾಗುವಂತೆ ಅವರ ಕೈಯನ್ನಾಗಲಿ ಕಾಲನ್ನಾಗಲಿ ಮಂಚಕ್ಕೆ ಕಟ್ಟಿಟ್ಟರೆ ಸಾಕು. ನಿದ್ದೆಯಲ್ಲಿ ಏಳಬೇಕೆಂದಾಗ ಆ ತಡೆಯಿಂದಾಗಿ ಅವರಿಗೆ ಸಂಪೂರ್ಣ ಎಚ್ಚರ ಉಂಟಾಗಿ ತಮ್ಮ ತಪ್ಪನ್ನು ತಿದ್ದಿಕೊಳ್ಳಲು ಇವರು ಪ್ರಯತ್ನಿಸುವರು. ತಮ್ಮನ್ನು ಕಟ್ಟಿಹಾಕಲಾಗಿದೆ ಎಂಬ ಭಾವನೆ ಇವರಲ್ಲಿ ಮಲಗುವಾಗ ದೃಢವಾಗುತ್ತ ಹೋದರೆ ನಿದ್ರಾ-ಸಂಚಾರದ ರೋಗ ಇವರನ್ನು ಬಿಟ್ಟು ತೊಲಗುವದುಂಟು.

ಮಕ್ಕಳಿಗೆ ನಿತ್ಯ ರಾತ್ರಿ ಒಂದೇ ಸ್ಥಿತಿಯಲ್ಲಿ ಮಲಗಿ ನಿದ್ದೆ ಹೋಗುವ ಅಭ್ಯಾಸವೂ ಇರುತ್ತದೆ. ಚಿಕ್ಕಮಕ್ಕಳು ತಮ್ಮ ತಾಯಿಯ ಗರ್ಭಾಶಯದಲ್ಲಿದ್ದಂತೆ ಮುದುಡಿಕೊಂಡು ನಿದ್ರಿಸುವದೇ ಹೆಚ್ಚು. ಹಾಗೆ ನಿದ್ರಿಸುತ್ತಿರುವ ಮಕ್ಕಳನ್ನು ಎಬ್ಬಿಸಿಬಿಟ್ಟರೆ ಅವು ಪುನಃ ನಿದ್ದೆ ಹೋಗುವದಕ್ಕೆ ಬಹು ಸಮಯ ಬೇಕು. ಮಕ್ಕಳು ನಿದ್ದೆ ಹೋಗುವ ವಿಧಾನಗಳಲ್ಲಿಯೂ ಹಲವಾರು ಬಗೆಗಳನ್ನು ಗುರುತಿಸಬಹುದಾಗಿದೆ. ಕೆಲವು ಮಕ್ಕಳಿಗೆ ತಮ್ಮ ಆಟದ ಬೊಂಬೆ ಪಕ್ಕದಲ್ಲಿದ್ದರೇನೇ ನಿದ್ದೆ ಬರುವದುಂಟು. ಇನ್ನು ಕೆಲವಕ್ಕೆ ಬೆರಳು ಚೀಪುವ ಚಟ ಇರುತ್ತದೆ. ಮತ್ತಷ್ಟು ಮಕ್ಕಳು ತಮ್ಮ ತಾಯ್ತಂದೆಯರ ಕಿವಿಗಳನ್ನು ತಮ್ಮ ಪುಟ್ಟ ಕೈಗಳಲ್ಲಿ ಹಿಡಿದುಕೊಂಡೇ ನಿದ್ರಿಸುತ್ತವೆ. ಅವಕ್ಕೆ ನಿದ್ದೆ ಹತ್ತಿದ ನಂತರವೇ ಇವರಿಗೆ ಬಿಡುಗಡೆ. ಇಂಥ ವಿಚಿತ್ರ ಚಟಗಳು ಮಕ್ಕಳಿಗೆ ಏಕೆ ಅಂಟಿಕೊಳ್ಳುತ್ತವೆ ಎಂಬುದಕ್ಕೆ ಕಾರಣ ತಿಳಿದುಬಂದಿಲ್ಲ.

ಕೆಲ ಮಕ್ಕಳು ಕತ್ತಲಲ್ಲಿಯೇ ಗಾಢನಿದ್ರೆ ಅನುಭವಿಸಿದರೆ ಇನ್ನು ಕೆಲವಕ್ಕೆ ಕತ್ತಲಲ್ಲಿ ನಿದ್ದೆಯೇ ಬರುವದಿಲ್ಲ. ಮಕ್ಕಳು ರಾತ್ರಿ ಕಳ್ಳಕಾಕರ, ರಾಕ್ಷಸರ ಕಥೆಗಳನ್ನು ಕೇಳುತ್ತಿರುವದೂ ಇದಕ್ಕೆ ಕಾರಣವಿರಬಹುದು. ಮಕ್ಕಳನ್ನು ವಿಧೇಯರನ್ನಾಗಿಸುವದಕ್ಕಾಗಿ ಹಲ ಕೆಲವರು ಮಕ್ಕಳಲ್ಲಿ ಆ ರೀತಿ ಭೀತಿ ಹುಟ್ಟಿಸುವದೂ ಉಂಟು. ಇಂಥ ಭೀತಿಗ್ರಸ್ತ ಮಕ್ಕಳಿಗೆ ರಾತ್ರಿಯೆಲ್ಲ ದೀಪ ಉರಿಯುತ್ತಲೇ ಇರಬೇಕಾಗುತ್ತದೆ. ನೆಮ್ಮದಿ ಕಾಪಾಡುವದಕ್ಕಾಗಿ.

ರಾತ್ರಿ ಮಗುವು ಪ್ರಸನ್ನಚಿತ್ತದಿಂದ ನಿದ್ದೆ ಹೋಗುವಂತಾಗಬೇಕು. ಅದರ ನಿದ್ದೆಯ ಪೂರ್ವದಲ್ಲಿ ಕೆಲ ಘಂಟೆಗಳ ಕಾಲವಾದರೂ ಮನೆಯಲ್ಲಿ ಯಾವ ಜಗಳ-ಗೊಂದಲ ಇಲ್ಲದೆ ಶಾಂತತೆ ನೆಲಸಿರಬೇಕು. ಇಷ್ಟೇ ಅಲ್ಲ, ಆ ಅವಧಿಯಲ್ಲಿ ಅಂದಿನ ಸುಖಸಂತೋಷದ ಗಳಿಗೆಗಳನ್ನು ಮೆಲಕು ಹಾಕುತ್ತಿರುವದು ಒಳ್ಳೆಯದು. ಹೀಗೆ ಮಗು ರಾತ್ರಿ ಪ್ರಸನ್ನಚಿತ್ತದಿಂದ ವಿರಮಿಸಬೇಕು.

ಮಗುವಿನ ದೇಹ-ಮನಸ್ಸು ಎರಡೂ ಬೆಳೆಯುವದು ನಿದ್ರೆಯಲ್ಲಿಯೇ. ಆದುದರಿಂದ ಘರ್ಷಣೆ, ಹೆದರಿಕೆ-ಬೆದರಿಕೆಗಳ ದುಷ್ಪರಿಣಾಮವು ಮಗುವಿನ ಬೆಳವಣಿಗೆಯ ಮೇಲೆ ಆಗದಿರದು. ಆದ್ದರಿಂದ ಮಕ್ಕಳು ರಾತ್ರಿ ಸುಖನಿದ್ರೆ ಅನುಭವಿಸುವಂತೆ ಪ್ರೀತಿ-ವಿಶ್ವಾಸಗಳನ್ನೂ ಮಮತೆ ಅಕ್ಕರತೆಗಳನ್ನೂ ನೀಡಿ ನೆಮ್ಮದಿ ಉಂಟು ಮಾಡುವದು ಅತ್ಯಗತ್ಯ. ✡

ಕವನಗಳು

ನೆನಪು

ಕತ್ತೆತ್ತಿ ನೋಡಿದರೆ
ಕೈಗೆಟುಕದ
ಹಸಿ ಹಸಿರು ಹುಳಿ
ಹುಳಿ ಮಾವಿನಕಾಯಿ
ಕೆಳಗೆ ಕಾಲಡಿ ಬಿದ್ದ
ಒಗರು ಒಗರಿನ
ನಿನ್ನ ನೆನಪಿನ ಮಿಡಿ
ಫಕ್ಕನೆ ಕರೆಂಟು
ಹೋಗಿ, ಗಪ್ಪನೆ
ಮುತ್ತುವ
ಕರೀ ಕತ್ತಲಿನಲ್ಲಿ
ಮಿಣಿ ಮಿಣಿ
ಮಿನುಗುವ
ಚಿಮಣಿಯ
ದೀಪದ ಹಾಗೆ
ನಿನ್ನ ನೆನಪು.
ನೆನಪು ಕನ್ನಡಿಯೊಳಗಿನ
ನಿನ್ನ ಪ್ರತಿಬಿಂಬ
ಥೇಟ್ ಅದೇ ಬಣ್ಣ,
ಅವೇ ಕಣ್ಣುಗಳು,
ಅವೆ ತುಟಿ, ಮೂಗು
ಅಷ್ಟಿಷ್ಟು ಅದಲು
ಬದಲೆಂದರೆ
ಬಲಕ್ಕೆ ಎಡ
ಎಡಕ್ಕೆ ಬಲ
ಬಿಸಿಲ ಬಾಯಾರಿಕೆಗೆ
ನಿನ್ನ ನೆನಪಿನಾಳದ
ಭಾವಿಯೊಳಗಿಂದ
ಭರಭರನೆ
ಸೇದಿದ ನೀರು
ಕುಡಿದಷ್ಟೇ ತೃಪ್ತಿ

—ಸುಧಾ ತೇಲಕರ

ಚುಕ್ಕಿಯಂತೆ ಮೂಡಿ ಬಂದು
ಮನಸಿನಲ್ಲಿ ಬೆಳೆದು ನಿಂದು
ಹಕ್ಕಿಯಂತೆ ಮತ್ತೆ ಮತ್ತೆ
ಕೂಗಿ ಕರೆದಳು,
ನನ್ನ ಸೂರೆಗೊಂಡಳು
ಕನಸಿನಲ್ಲಿ ಕಂಡು ಕಾಡಿ
ಮನಸಿನಲ್ಲಿ ಮತ್ತೆ ಮೂಡಿ
ನನ್ನ ಎದುರು ಏಕೊ ಏನೊ
ಪ್ರಶ್ನೆಯಾದಳು
ಅವಳು ಮೌನವಾದಳು
ಯಾವ ಊರೊ? ಯಾರ ಮನೆಯೊ?
ಏನೊ ಋಣದ ಬಂಧನ?
ಪ್ರೀತಿ ಮಾತ್ರ ನಮ್ಮ ನಡುವೆ
ಎಂದಿಗೂ ಚಿರಂತನ
ಬಾಳ ಕಡಲ ದೋಣಿಯಲ್ಲಿ
ಒಂದುಗೂಡಿನಿಂತ
ನಮ್ಮ ಗುರಿ ಅನಂತ
ನನ್ನ ಮನದಿ ನಿಂತವಳು
ನಿತ್ಯ ಶ್ವೇತ ಸುಂದರಿ
ಅಪ್ರತಿಮ ಮನೋಹರಿ
ನನ್ನ ಕದ್ದ ನನ್ನ ಗೆದ್ದ
ಇವಳು ಯಾರು ತಿಳಿಯದೆ ?
ಇವಳೆ ನನ್ನ ಶಾರದೆ !

—ಜಿ. ವಿಜಯಕುಮಾರ

ಅಲ್ಲೆ ....

ಆ ಕೊರಕಲು, ಕೊಳೆತ
ಹೊಲಸು ಹೆಣಗಳ ನಾತ,
ನರಿನಾಯಿಗಳ ಓಡಾಟ, ಕೂಗಾಟ
ಬೆಳೆದ ಆಳೆತ್ತರದ
ಮುಳ್ಳು ಹುಲ್ಲಿನ ನಡುವೆ
ಹರಿವ ವಿಷಸರ್ಪಗಳು,
ಚೇಳುಗಳು...
ಈ ಇಂಥ ತಾಣದಲಿ,
ಜೀವಂತ ನರಕದಲಿ
ನಡುವೆ ಸಾಗಿದ ಬೀದಿ...
ಇದಿಯೇ ನನ್ನ ಸಮಾಧಿ

-ಅನಂತ ಶಾಂತಿಸದನ

ಪ. ರಾಮಕೃಷ್ಣ ಶಾಸ್ತ್ರಿ

ತುಂಬಿ ತುಳುನಾಡಿನಿಂದ ಬಂದ ಕೈ ದೀಪ ಉರಿಯಲು ಬತ್ತಿಯೇ ಬೇಡ. ಬಾಲನ ಸತ್ಯದಿಂದುರಿಗು ಜಗಜ್ಯೋತಿ ಎಂದು ದಕ್ಷಿಣ ಕನ್ನಡ ಜಿಲ್ಲೆಯ ಜನಪದ ಗೀತೆ ಮಗುವನ್ನು ಬಣ್ಣಿಸುತ್ತದೆ. ಹೆಣ್ಣು ಜನುಮ ಮಣ್ಣಾಗ ಬಾರದು, ಮುದ್ದು ಕಂದನನ್ನು ಹೆತ್ತು ಹೊತ್ತು ಸಲಹಬೇಕು. ಇದು ಸಾರ್ಥಕ್ಯ. ತಾಯಿ ಮಗನ ಧನಿ, ತಾಳ ಬಾರಿಸಿದಂತೆ, ಜೋಡು ಕಿನ್ನರಿ ನುಡಿದಂತೆ ಎನ್ನುತ್ತದೆ ಕವಿ ವಾಣಿ.

> **ಬಂಗಾರ ಬೇಡ ಬಳೆ ಬೇಡ ಪರಮಾತ್ಮ**
> **ಕೊಡಿರೋ ಎನಗೊಬ್ಬ ಕಂದನ-ನಿನ್ನ**
> **ಹೆಸರ್ಹೇಳಿ ಸುಖವ ಪಡೆದೇನು-ನಿನ್ನ**
> **ಪಾದಕೊಂದು ದೀಪ ಉರಿಸೇನು||**

ಬಡವೆಗೆ ಮಕ್ಕಳು ನಡೆವುದೇ ಅತಿ ಚಂದ. ತಿರುಗಾಡಿ ಬಂದು ಮಡಿಲಲ್ಲಿ ಕೂತಾಗ ಬಡ ತನದ ಚಿಂತೆ ಅವಳಿಗಿಲ್ಲವಂತೆ. ದಿನವೂ ಅವಳ ಮನದ ಕೂಗೊಂದೇ.- 'ಚೆಲುವ ಚೆನ್ನಿಗ ಬಾರೋ ಹವಳ ಮಾಣಿಕ ಬಾರೋ, ನೀ ಬರದೆ ಎನ್ನ ಮನಕಿಂದು ಸೊಗಸಿಲ್ಲ'. ಗಾದೆಯೇ ಹೇಳುತ್ತದಲ್ಲ, ಕಾಲಾಸೆ ಹೆಳವಗೆ-ಕಣ್ಣಾಸೆ ಕುರುಡಗೆ. ಅಂತೆಯೇ ಕಂದನ ಆಸೆ ಅನುಗಾಲ ಆಕೆಗೆ. ಹೆಣ್ಣು ಹೃದಯ ಸಂಭ್ರಮಿಸುತ್ತದೆ. 'ಮಕ್ಕಳಾಟಿಕೆ ಚಂದ, ಮತ್ತೆ ಯೌವನ ಚಂದ, ಮುಪ್ಪಿನಲಿ ಚಂದ ನರೆ-ಗಡ್ಡ' ಎಂದು. 'ಅಂತೂ ಅವಳಾಸೆ ಈಡೇರಿದೆ. ಹೆಣ್ಣು ಕಂದನ ಹಡೆದು ಮಲಗಿದ್ದಾಳೆ. 'ದೇವರ ಮನೆಯಲ್ಲಿ ಜೋಡೆರಡು ದೀವಿಗೆ ತುಂಬು ಬಳೆ ಕೈಯ ತಲೆ ದಿಂಬು' ಪಕ್ಕದಲ್ಲಿ ಚಲುವ ಚಂದ್ರಾಮ ಮಗ! ಬಾಲನ ಹೆರುವಾಗ ಪ್ರಸವವೇದನೆ ಯಿಂದ ಬಾಡಿದ ಅವಳ ಮೊಗ ಬಾಲ ಮುಕುಂದನ ಆಗಮನದಿಂದ ಕುಂದಣದ ಚಿನ್ನದಂತೆ ಹೊಳೆಯುತ್ತಿದೆ.

> **ದೇಶ ದೇಶದ ಮಂದಿ ಕಾಶಿಗೆ ಹೋಗ್ತಾರೆ**
> **ಕೂಸು ಕಂದಮ್ಮ ಒಳ ಹೊರಗೆ ಆಡಿದರೆ**
> **ವಿಶ್ವೇಶ್ವರ ಬರುತಾನೆ ನೆರೆಮನೆಗೆ||**

ಚೆಲು ಕುದನೇ ಅವಳಿಗೆ ಪುಣ್ಯಕ್ಷೇತ್ರ; ಕಾಶಿ ಗೋದಾವರಿ. ಹಸುಗೂಸು ಆಡಿದರೆ ಹಸನು ಅವಳ ಅಂಗಳ. ಚೆಲುವ ಮಗರಾಯ ಆಡಿ ದರೆ ಬೆಳಗುತ್ತದೆ ಹಡೆದವ್ವನ ಅರಮನೆ; ಆಡುವ ಕಂದನನ್ನು ಎದೆಗವಚಿಕೊಂಡು ಅಕ್ಕ ತಂಗಿರು ಮೇಲು ಉತ್ತರೆ ಸ್ವಾತಿ ಮಳೆ ಮೇಲು ಕಂದನೀ ಮೇಲು ನನ್ನ ಬಳಗಕ್ಕೆ ಎಂದು ಆ ಮಮತಾಮಯಿ ಉದ್ಗರಿಸುತ್ತಾಳೆ.

ಹಡೆದ ಹನ್ನೊಂದನೆಯ ದಿನ ಮಗನನ್ನು ತೊಟ್ಟಿಲಿಗೆ ಹಾಕುವ ಸಂಭ್ರಮ. ದಿನವೂ ತೊಟ್ಟಿಲಿಗೆ ಸಾಂಬ್ರಾಣಿಯ ಹೊಗೆ. ತೊಟ್ಟಿ ಲಿನ ಕೂಸಿಗೆ ದೃಷ್ಟಿಯಾದೀತೆಂದು ನವಿಲಗರಿ ಗಳ ಕಟ್ಟಿ, ಕರಿಬೇವಿನ ದೃಷ್ಟಿ ತೆಗೆಯಬೇಕು. ತೂಗು ತೊಟ್ಟಿಲಿಗೆ ಒಂದು ಪಾಗು ಪಟ್ಟೆಯ ಹಾಸಿ ಮಗುವನ್ನು ಮಲಗಿಸಿ ತಾಯಿ ತೂಗ ಬೇಕು.

> **ಮುಂಜಾನೆ ಎದ್ದರೆ ಮುಂದೆ ಕುಂದರ ಚಂದ**
> **ಮುನ್ನೋಡಿ ಹರಿವ ನದಿ ಚಂದ! ಕಂದನ**
> **ತೊಟ್ಲ ತೂಗಾಡಿಸುವ ಕೈ ಚಂದ||**

ತೊಟ್ಟಿಲಲ್ಲಿ ಮಲಗಿದ ಕಂದನಿಗೆ ಗಾನ ಅತಿ ಮುಖ್ಯ. ಜೋಗುಳ ಹಾಡಿದರೆ ಆಗಲೇ ಕೇಳುವನು. ಹಾಲ ಹಂಬಲವೇ ಮರೆತ್ತಾನು! ತೊಟ್ಟಿಲಿನೊಳಗೆ ಮಲಗಿದ ಪುಟ್ಟ ಕಂದನಿಗೆ ಸೃಷ್ಟಿಯೊಡೆಯನ ಮಡದಿ ಪಾರ್ವತಿಯ ದೃಷ್ಟಿ ತಗಲೀತೆಂದು ತಾಯಿ ಬೇಗ ಬೇಗನೆ ತೆರೆ ಸರಿಸುತ್ತಾಳೆ.

ಮಗು ಎಷ್ಟೊಂದು ಹಟಗಾರಿ! 'ಹಾಲು ಬೇಡಿ ಅತ್ತಾನೆ, ಕೋಲು ಬೇಡಿ ಕುಣಿದಾನೆ, ಮೊಸರ ಬೇಡಿ ಕೆಸರ ತುಳಿದಾನೆ.' ತಾಯಿ ಅವನನ್ನು ಸಮಾಧಾನಪಡಿಸಬೇಕು. "ಯಾಕ ಳುವೆ ಮುದ್ದಿ? ಅಳದಿರು! ಕಂದಯ್ಯ ಬಾರೋ ರನ್ನದುಂಗುರದವನೆ" ಎಂದು ರಮಿಸುತ್ತಾಳೆ. ಆದರೂ–

> ಕಂದನ ಕಿರಿಕಿರಿ ಇಂದೇಕು ಹೇಳಲಿ
> ಬಿಂದಿಗೆ ಹಾಲು ಸುರುವೆಂದ। ಸಂಜೆಯ
> ಚಂದ್ರಮನ ಕಂಡು ಕಿಲಿಸೆಂದ॥

ಪರಮಾತ್ಮ ಶ್ರೀರಾಮನೇ ಮಗುವಾಗಿದ್ದಾಗ ಆಕಾಶದಲ್ಲಿದ್ದ ಬಾಲಚಂದ್ರನನ್ನು ಬೇಡಿದ ಮೇಲೆ ಈ ಮಗುವಿನ ಪಾಡೇನು? ಅಳದಿರು ವಂತೆ ಮಾಡಬೇಕಾದರೆ ತಾಯಿ 'ಅಮರಾವತಿ ಯೆಂಬ ಎಲೆ ತೋಟದೊಳಗಿನ ಅರಗಿಳಿಯ ತಂದು ಕೊಡುತ್ತೇನೆಂಬ' ಆಸೆ ಒಡ್ಡುತ್ತಾಳೆ. ಕಂದಯ್ಯ ಅತ್ತರೆ ಕಣಗಿಲು ಪರಿಮಳ, ಒಣ ಗಿದ್ದ ಬಾಳೆ ಚಿಗುರೀತು, ಬರಡಾಕಳೆಲ್ಲ ಹೈನಾ ದೀತು ಎಂದೆಲ್ಲ ಹೆತ್ತಬ್ಬೆ ಕಲ್ಪಿಸಿಕೊಂಡರೂ ಮಗನ ಅಳು ತಾಳಲಸಾಧ್ಯವಾದಾಗ, 'ಕಂಡದ್ದು ಕನಸಾಗಿ ಉಂಡದ್ದು ಸವಿಯಾಗಿ ಕಂದ ನೀ ಕಾಡಬೇಡ. ಮಾಡು ನಿದ್ರೆಯ' ಎಂದು ಯಾಚಿಸುತ್ತಾಳೆ.

ಕಾವಿ ಬಣ್ಣದ ಮೇಲೆ ಕಸೂತಿ ನಡು ಕಟ್ಟಿ ಹೊಸಿಲ ಮುಂದೆ ಅಂಬೆಗಾಲಿಕ್ಕುತ್ತಾ ಮಗ ಬರುತ್ತಿದ್ದಾನೆ. ಅವನನ್ನು ನೋಡಿ ತಾಯಿ ಹೂರಣಕ್ಕೆ ಬೆಲ್ಲ ಹಾಕುವುದನ್ನೇ ಮರೆತಳಂತೆ.

> ಅಂಬೆಗಾಲಿಕ್ಕುತ ತುಂಬಿಯ ಕರೆವನು
> ಹಂಬಲಿಸಿ ತಾಯ ಮೊಲೆಯನ್ನು
> ತುಯ್ದಾಡಿ
> ಬೆಂಬಿಡದೆ ಹಾಲು ಕುಡಿವನು॥

ಕೂಸು ಇದ್ದ ಮನೆಗೆ ಬೀಸಣಿಕೆಯೇ ಬೇಡ. ಕೂಸು ಕಂದಮ್ಮ ಒಳ ಹೊರಗೆ ಆಡಿದರೆ ಬೀಸಣಿಕೆ ಗಾಳಿ ಸುಳಿಯುವುದು ಎಂದು ವರ್ಣಿಸುತ್ತದೆ ಒಂದು ತಾಯ್ ಹೃದಯ. ಅಂಬೆಗಾಲಿಕ್ಕುವ ಮಗನನ್ನು ಕಂಡು ಭತ್ತ ಬಾಳೆಯಂಗೊನೆ ಭೂಮಿಗೆ ಬಾಗಿದುವು; ಭೂಮಿದೇವಿ ಕೊಟ್ಟ ಮೊಲೆಹಾಲ ಮಕ್ಕಳಿಗೆ ಹೊತ್ತೊತ್ತಿ ತುಂಬಿ ಬಂದ ರಮಣೀಯತೆ!

> ಅಂಗಿಯ ತೊಡುವ ಬಾಲಾ
> ಎಂದಿಗೆ ಬೆಳೆದಾನೊ
> ಕಂಡ ದೇವರಿಗೆ ಕೈ ಮುಗಿವೆ ಎನ್ನ ಬಾಲಾ
> ಎಂದಿಗಾದಾನು ದೊಡ್ಡವನು॥



ಮಗ ಬೇಗ ದೊಡ್ಡವನಾಗಲಿ ಮೀಸೆ ಬರಲಿ ಎಂದು ತಾಯಿಹೃದಯ ಇಟ್ಟಂಗಿಯ ಗೋಪುರ ಕಟ್ಟುತ್ತವೆ. 'ಮಗ ಹರಿದಾಡಿ ಬರುವಾಗ ಹರಿಯು ಬ್ರಹ್ಮರು ಕಾಯ್ಗ, ಹರಿದಾಡಿ ಜಗಲಿಯಲಿ ಇಳಿದಾಗ ಮನೆ ದೇವರೇ ಕಾಯ್ಗನುದಿನ' ಎಂದು ಹರಸಿಕೊಳ್ಳುವ ತಾಯಿ ದೇವರನ್ನು ನೆನೆದರೆ ಹುಟ್ಟು ಸಾವು ನಮಗಿಲ್ಲವೆಂದು ಮಗನಿಗೆ ಬೋಧಿಸುತ್ತಾಳೆ. ಹಾವ ತುಳಿದರೂ ಭಯವಿಲ್ಲ, ಸರ್ಪನ ಹೆಡೆ ತಾಕಿದರೂ ವಿಷವಿಲ್ಲವೆಂದು ಆರುಹುತ್ತಾಳೆ.

ಸರದಾರ ಬರುವಾಗ ಸುರಿದೀತು ಮಲ್ಲಿಗೆ
ದೊರೆ ನನ್ನ ಮಗ ಬರುವಾಗ
ಯಾಲಕ್ಕಿ ಗೊನೆ
ಬಾಗಿ ಹಾಲು ಹರಿದೀತು ||

ಪದ್ಮದಳದಂತೆ ಪಾದವಿರುವ ಕಂದಯ್ಯ ನಡೆದು ಬಾ. ನಿನ್ನ ನಡಿಗೆಯ ಅರಿಗೆಜ್ಜೆ ಇರಿಸಿ ನೋಡುತ್ತೇನೆ ಎಂದು ಹೆಣ್ಣು ಮಾತೃತ್ವದ ಸೆಲೆಯುಕ್ಕಿಸಿ ಪುಸಲಾಯಿತ್ತಾಳೆ. 'ಬಂದ ಕಂದಮ್ಮ ನಡೆಯುವುದ ನೋಡಲಿಲ್ಲ, ಇದ ಕಾಣದ ಕೈಲಾಸಕೆ ಹೋದರೆ ಮುಕ್ಕಣ್ಣ ಶಿವನು ನಗನೇನು?' ಎಂದು ಆಕೆ ಪ್ರಶ್ನಿಸುತ್ತಾಳೆ. ನಡೆಯುವ ಮಗನನ್ನು ಬಾಚಿ ಎದೆಗವಚಿಕೊಳ್ಳುತ್ತಾಳೆ. 'ಹಸು ಮಗುವೆ ಚಿನ್ನದ ಮಿಸುಣಿ ಹೊಂಬಣ್ಣವೆ ಬಸುರಿಯರ ಹಣೆಯ ತಿಲಕವೇ ಹೊಸ ಮುತ್ತಿನ ಕುಶಲವೆ' ಎಂದು ಬಣಿಸುತ್ತಾಳೆ.

ಹಿಂಡು ಮಕ್ಕಳೊಳಗೆ ಪುಂಡ ಜಾಣ
ಕಂದಯ್ಯ
ದುಂಡು ಮಲ್ಲಿಗೆ ಮರವೇರಿ—
ಹೂ ಕೊಯ್ದು
ಗುಂಡೆಡೆಯ ಬಾಲೆಯರ ತುರುಬಿಗೆ ||

ಬಾಲನ ತುಂಟಾಟಿಕೆಗಳಿಗೆ ಮಿತಿಯೇ ಇಲ್ಲ. ಆದರೆ ಬೆಳೆಯುತ್ತಿರುವ ಮಗನಿಗೆ, 'ಜಾಗರದ ನವಿಲಂತೆ ಬಳುಕುತ್ತ ಬಾಗುವ ಬಾಲೆಯ ಕಂಡು' ಭ್ರಮಿಸಬಾರದೆಂದು ತಿಳಿ ಹೇಳುತ್ತಾಳೆ. 'ಹಿರಿಯರಿಗೆ ಹಿರಿಯೆನ್ನು ಕಿರಿಯರಿಗೆ ಕಿರಿಯೆನ್ನು; ತಲೆಬಾಗಿ ನಡೆಯೋ ನನ್ನ ಮಗನೆ' ಎಂದು ನೀತಿ ಸಾರುತ್ತಾಳೆ. ಜನಪದ ಸಾಹಿತ್ಯದಲ್ಲಿ ತಾಯಿ ಮಗನಿಗೆ ತಿಳಿಸುವ ಬಹು ಪರಿಯ ನೀತಿವಾಕ್ಯಗಳು ಲಭಿಸುತ್ತವೆ. 'ಜೂಜಾಡಿ ಪಾಂಡವರು ರಾಜ್ಯವ ಸೋತರು–ಜೂಜಾಡಿ ನಳ ಬಳಲಿದ ಕಂದಯ್ಯಾ, ಜೂಜಿಗೆ ಮನವ ಬಿಡದಿರು' ಎಂದು ಆಕೆ ಹೇಳುತ್ತಾಳೆ. ವಿಷಯ ಲಂಪಟ ಮಗನಿಗೆ 'ಹೆಣ್ಣಿಂದು ರಾವಣ ಮಣ್ಣು ಗೂಡಿದನಯ್ಯ' ಅನ್ನಿಗರ ಹೆಣ್ಣ ಬಯಸದೆ ತನ್ನ ಹೆಣ್ಣೊಡನೆ ಸುಖಿಯಾಗಿರಬೇಕೆನ್ನುತ್ತಾಳೆ ಮಾತೆ.

ಮಗು–ಬಹು ಸುಂದರ– ಕಾಡಿಗೆ ಹಚ್ಚಿದ ಕಣ್ಣು ತೀಡಿ ಮಾಡಿದ ಹುಬ್ಬು, ಮಾವಿನ ಹೋಳು ಅವನ ಕಣ್ಣು. ಬಾಳೆ ಹಣ್ಣಿನಂತೆ ಅವನ ಮೈ ಚಂದ. 'ಏನುಂಡು ಈ ಮಗನ ನೀ ಹಡೆದೆ?' ಎಂದು ಯಾರಾದರೂ ಕೇಳಬೇಕು. ತವರುಮನೆಯ ಹಾಲುಂಡು ಹಸಿರು ಬಳೆಯುಟ್ಟು ಎನ್ನಬೇಕು ತಾಯಿ.

ನಿದ್ರೆ ಬಾರದ ಕಣ್ಗೆ ಮದ್ದಾರು ಬಲ್ಲಿರಿ
ಗದ್ದೆಯ ತುದಿಲಿ ಬೆಳೆವ ಗರುಗಾನ
ಕುಡಿ ತಂದು
ಸೌಭದ್ರೆ ಕಾಡಿಗೆಯ ಇಡಿ ಹಚ್ಚಿ.

ಹುಟ್ಟಿದ ಕಂದಯ್ಯ ಅಕ್ಷಯವಾಗಿ, ಬೊಟ್ಟು ಬೊಜ್ಜಾಗಿ ಬೆಳೆಯಲು ತಾಯಿಯ ಸಂಗ್ರಹದಲ್ಲಿರುವ ನೂರಾರು ಮನೆ ಚಿಕಿತ್ಸೆಗಳಲ್ಲಿ ಇದೂ ಒಂದು. ಮಗ ಎಲ್ಲಾದರೂ ಬೆಳೆಯಲಿ. ಆದರೆ ನೆಲ್ಲಿ ಬೊಡ್ಡೆಯಂತೆ ಸದಾ ಚಿಗುರುತ್ತಿರಲೆಂದು ಮಗನ ಶ್ರೇಯೋಭಿವೃದ್ಧಿಯನ್ನು ತಾಯಿ ಹರಸುತ್ತಾಳೆ. ಮಗನ ಬಗ್ಗೆ ಆಕೆ ಕಟ್ಟಿರುವ ನುಡಿಮಲ್ಲಿಗೆಗಳೆಷ್ಟು! ಹತ್ತು ಹಡೆಯುವುದಕ್ಕಿಂತ ಮುತ್ತು ಹಡೆವುದು ಲೇಸು. ತಾಯಿದ್ರೆ ತವರ್ಹೆಚ್ಚು ತಂದೆ ಇದ್ರೆ ಬಳಗ ಹೆಚ್ಚು; ಸಾವಿರಕೆ ಹೆಚ್ಚು ಪತಿ ಪುರುಷ ಇದ್ದರೆ ಹೊಟ್ಟೆಯ ಮಾಣಿಕ್ಯದ ಹರಳು ಮಗ ಹೆಚ್ಚು! ಹೂವು ಹೆರಳಿಗೆ ಚೆಂದ ಮುತ್ತು ಕೊರಳಿಗೆ ಚಂದ, ನಕ್ಷತ್ರ ಚೆಂದ

ಗಗನಕ್ಕೆ- ಕಂದಯ್ಯ ಚಂದ ವಂಶಕ್ಕೆ!

ತೆಂಕಣ ಕಟ್ಟೆಯಲಿ ಬಡಗಿಂಗೆ ಬಿಟ್ಟಿರಲಿ
ಮೂಡಲಾಗಿ ತೋಡು ಹರಿಯಲಿ- ಬಾಲನ
ಮಾಡು ಹಾಲಿಗೆಯು ಮೆರೆಯಲಿ||

ಬಾಲನಿಗಾಗಿ ತಾಯಿ ಹೊತ್ತುಕೊಳ್ಳುವ ನೂರಾರು ಹರಕೆಗಳಲ್ಲಿ ಇದೂ ಒಂದು. 'ಹಳ್ಳದ ಕೆರೆಯಲ್ಲಿ ಎಳ್ಳು ಬಿತ್ತಿಸಲಿಕ್ಕೆ ಎಳ್ಳು ಮಾರಿ ಬೆಳ್ಳಿ ತರಲಿಕ್ಕು ಬಾಲಂಗೆ ಬೆಳ್ಳಿಯ ತಟ್ಟೆ ಕಿರುಗೆಜ್ಜೆ' ಎಂದು ಇನ್ನೊಬ್ಬ ತಾಯಿ ಹಾರೈಸುತ್ತಾಳೆ. ಅವಳ ಸಕಲವೂ ಮಗನಿಗಾಗಿ.

ಮಗ ದೊಡ್ಡವನಾದ. ಅವನಿಗೊಂದು ಮದುವೆ ಆಗಬೇಕು- ಅವನಿಗೋ ಪಟ್ಟಣದ ಬೆಡಗಿಯ ಮೇಲೆ ಕಣ್ಣು. ತಾಯಿಗೆ:

ಚೆಲುವೆ ಚೆಲುವೆ ಅಂತ ಹಿಡಿ ಬಾಯಿ
ಬಿಡದಿರು
ಚೆಲುವಿದ್ದರೇನು— ಗುಣವಿಲ್ಲ! ಕೊಳೆ
ಖೀರು
ತಿಳಿಯಿದ್ದರೇನು ರುಚಿಯಿಲ್ಲ||

ಅವಳಿಗೆ ಹಳ್ಳಿಯ ಕಪ್ಪು ಹೆಣ್ಣಿನ ಮೇಲೆ ಇಷ್ಟ. ಕಪ್ಪು ಹೆಣ್ಣೆಂದು ಕರಕರಿ ಮಾಡುವುದೇ? ನೇರಳೆ ಹಣ್ಣು ಕಪ್ಪಾದರೇನು, ತಿಂದು ನೋಡಿದರೆ ಬಲು ರುಚಿ! ಕೆಂಪು ಹೆಣ್ಣೆಂದು ಸಂತೋಷಪಡಬೇಕಾಗಿಲ್ಲ ಅತ್ತಿಯ ಹಣ್ಣು ಕೆಂಪಾಗಿದ್ದರೂ ಅದರೊಳಗೆ ಹುಳವೇ ತುಂಬಿದೆ. ಅನುಭವ ಸಾಗರದಿಂದ ಆಯ್ದ ಈ ನೀತಿ ವಾಕ್ಯಗಳಲ್ಲಿ ಎಂಥ ಅದ್ಭುತ ಸತ್ಯವನ್ನು ಸೆರೆ ಹಿಡಿದಿದೆ ತಾಯಿ ಹೃದಯ.

ಎಲ್ಲರ ಮಕ್ಕಳಂಗೆ ಅಲ್ಲ ಕಣೆ ನನ್ನಯ್ಯ
ನಲ್ಲೆಳೆಯಗಣ್ಣು ನಗೆಮುಖ ಕಾಮನ
ಬಿಲ್ಲು ಹೋಲುತ್ತಾವೆ ಕುಡಿಹುಬ್ಬು ||

ಹೆತ್ತವರಿಗೆ ಹೆಗ್ಗಣ ಮುದ್ದಲ್ಲವೆ! 'ಮಲ್ಲಿಗೆ ಹೂವೇ ಇಲ್ಲಿ ಯಾಕೆ ನಿಂತಿದ್ದಿ? ಎಲ್ಲರ ಕಣ್ಣು ನಿನ್ನ ಮೇಲೆ ಕಂದಯ್ಯ-ವಲ್ಲಿ ಸೆರಗಲ್ಲ ಪರಿಮಳ' ಎಂದು ನೆಟಿಕೆ ಮುರಿಯುತ್ತಾಳೆ. 'ಅವಳ ಮಗನಂಥ ಹನ್ನೆರಡು ಮಕ್ಕಳು ಹೊನ್ನೆಯ ನೆರಳಲ್ಲಿ ಆಡುವಾಗ ಒಬ್ಬ ಸಂನ್ಯಾಸಿ ಜಪವನ್ನೇ ಮರೆತನಂತೆ. ಅವಳ ಮಗು-ಮಗುವಲ್ಲ ಸೀಗೆಯ ಮೆಳೆಯಲ್ಲಿ ಸಿಕ್ಕಿದ ಅರಗಿಣಿ! ಕೊಕ್ಕಿಲ್ಲ ಮುತ್ತು ರತ್ನ! ಅದು ಸಿಕ್ಕಿತು ಶಿವನ ದಯದಿಂದ ಎಂದು ಹೃದಯ ಹಿಗ್ಗುವುದು.

ಮಕ್ಕಳ ಪಾಶಕ್ಕೆ ಹಕ್ಕಿ ಕಟ್ಟಿತು ಗೂಡ
ಸಿಕ್ಕಿತು ಶಿವನ ಬಳಿಯಲ್ಲಿ-ಬಳೆಗಾರ
ಮಕ್ಕಳ ತಾಯಿ ಕೊಳ್ಳಿರು ||

ತೋಟಕ್ಕೆ ಹೋದ ಪುಟ್ಟ ಹುಡುಗ ಬರಲಿಲ್ಲ. ತೋಟದ ಹೂವ ತಲೆತುಂಬ ಮುಡಿದುಕೊಂಡು ಊಟದ್ದುಂಬಲವೇ ಮರೆತಾನು. ಆದರೆ ತಾಯಿಗೆ ಅವನದೇ ನೆನಪು. 'ಆಡೋ ಮಕ್ಕಳಿರ ನಮ್ಮರಗಿಣಿಯ ಕಾಣೀರ? ಕಂಡ ಮಕ್ಕಳಿರ ಕರೆತನ್ನಿ ಕಂದಯ್ಯ ಉದ್ಯೋಗ-ಲಿಲ್ಲ ಹಸಿದಾನು' ಎಂದು ಹಂಬಲಿಸುತ್ತಾಳೆ. ತುಂಟ ಬರುವ ವರೆಗೂ ಅವಳಿಗೆ ಊಟವಿಲ್ಲ.

ಯಾತಕಳುತಾನೆಂದು ಎಲ್ಲರೂ
ಕೇಳೋರು
ಕಾಯಿಸಿದ ಹಾಲ ಕೆನೆ ಬೇಡಿ-ಕಂದಯ್ಯ
ಕಾಡಿ ಕೈಯಿಂದ ಇಳಿಯುಲು||

ಕಂದ ನಕ್ಕರೂ ಚೆಂದ; ಅತ್ತರೂ ಪ್ರಿಯ. ಮಮತಾಮಯಿಗೆ. ಅವನಿಗೆ ಹೇಳುವ ನೀತಿ ವಾಕ್ಯಗಳಿಗೆ ಮಿತಿಯೇ ಇಲ್ಲ. 'ಹಸುವಿಗೆ ಹಾಲು ಕೊಟ್ಟು ಶಿಶುವಿಗೆ ಬೆಣ್ಣೆ ಕೊಟ್ಟು ಬಿಸಿಲಿಗೆ ನಿಂತವರ ನೆರಳಿಗೆ ಕರೆದರೆ ಅಗಣಿತ ಪುಣ್ಯ ಮಗನಿಗೆ' ಎಂದು ಸಾರುತ್ತಾಳೆ. ಅವಳ ಮಗನಿಗೆ ದೇವೇಂದ್ರ ಕೊಟ್ಟ, ಶಚಿ ಕೊಟ್ಟ ಹಾಲುಂಬ ಬಟ್ಟಲು. ಅದನ್ನಾತ ಯಾರಿಗೂ ಕೊಡಲಾರನಂತೆ.

ಮಗ ದೊಡ್ಡವನಾದ. ಮದುವೆಯಾದ. ತಾಯ ನೆನಪೇ ಅವನಿಗಿಲ್ಲ. ಆಗ ಮುದಿ ಹೃದಯದ ಪೀಡಿತ ಚಿತ್ತವೇಧಕ:

ಹಾಲು ಬೋನ ಉಣಿಸಿ ಮೋರೆ
ಸೆರಗಿಲಿ ಒರೆಸಿ
ಯಾರಿಗೆ ಆದ ಬಾಲಾ-ಕಂದಂಥ
ನಾರಿಗಾಡೆಲ್ಲೋ ಹಡೆದಪ್ಪ|| ✡

ಭೀತಿ

ಮೂಲ : ಎಚ್. ಇ. ಬೇಟ್ಸ್
ಕನ್ನಡಕ್ಕೆ : ಜಿ. ನಾರಾಯಣ

ಕ್ಷಿತಿಜದ ಮೇಲೆ ಮಳೆಯ ಮೋಡದ ಮೂರು ತುಂಡುಗಳು ಭಯಂಕರವಾಗಿ ಗುಡುಗಿದುವು.

ರಿಚರ್ಡ್ ಹಾಗೂ ಅವನಜ್ಜ ಆಶ್ರಯಿಸಿದ ಗುಡಿಸಲು ಆಗಲೇ ದಟ್ಟ ಕತ್ತಲೆಯಿಂದಾಗಿ ಹಸಿರುಗಟ್ಟಿತ್ತು. ಒಳಗಿನ ಗಾಳಿ ಬೆಚ್ಚಗೆ ಉಸಿರುಗಟ್ಟಿಸುವಂತಿತ್ತು. ಅದನ್ನು ಸುತ್ತುವರೆದ ಮರಗಳು ಕಂಬಣ್ಣ ತಾಳಿ ಭಾರವಾದ ನಿಟ್ಟುಸಿರಿಡುತ್ತಿದ್ದುವು. ಕಾಡಿನಿಂದ ಶಬ್ದ ಬಂದಾಗ ಹುಡುಗ ಭೀತಿಯಿಂದ ಕಂದು-ಹಳದಿ ಬಣ್ಣಕ್ಕೆ ತಿರುಗಿದ ಕಣ್ಣುಗಳನ್ನು ಮೇಲೆತ್ತಿ, "ಏನಜ್ಜ? ಕತ್ತಲೆಯಾಕಾಗತ್ತೆ?" ಎಂದು ಹೆದರಿಕೆಯಿಂದ ಕೇಳುತ್ತಿದ್ದ. ಒಮ್ಮೊಮ್ಮೆ ಮುದುಕ ಏನೂ ಉತ್ತರ ನೀಡದೆ ತನ್ನ ಗಡ್ಡವನ್ನು ಕೆರೆದುಕೊಳ್ಳುತ್ತಿದ್ದ. ಮತ್ತೊಮ್ಮೆ, "ಸುಮ್ನೆ ಯಾಕೆ ಚಿಂತೆ ಮಾಡ್ತೀಯಾ," ಎನ್ನುತ್ತಿದ್ದ. ಮಗದೊಮ್ಮೆ, "ನೀ ಹೆದ್ರಕೊಂಡಿಲ್ಲ ಸಿಲ್ವ? ನೀನು ಹೆದ್ರುಸಿದ್ರೆಲ್ಲ ಹೆದ್ರಿಕೊಳ್ಳೋ ಅಷ್ಟು ಚಿಕ್ಕೋನೇನಲ್ಲ. ಸುಮ್ನೆ ಕೂತ್ಕೋ, ಇನ್ನೇನೂ ತೊಂದ್ರೆ ಇಲ್ಲ," ಎನ್ನುತ್ತಿದ್ದ.

ಆದರೆ ಹುಡುಗ ಭೀತಿಯಿಂದ ಉಬ್ಬಿದ ತನ್ನ ಕಣ್ಣುಗಳನ್ನು ಗುಡಿಸಿಲಿನ ಒಳಗೆಲ್ಲ ಹರಿಸುವುದನ್ನು ನಿಲ್ಲಿಸಲಿಲ್ಲ. ಭೀತಿಯಿಂದ ನಡುಗುತ್ತಿದ್ದ ಅವನ ತೊಡೆಯ ಭಾಗ ನಿಶ್ಯಬ್ದ ರಾತ್ರಿಯಲ್ಲಿ ಗುಡಿಸಲಿಗೆ ಅಪ್ಪಳಿಸುತ್ತಿದ್ದ ಭಯಂಕರ ಶಬ್ದಕ್ಕೆ ಆತ ಹೆದರುತ್ತಿದ್ದುದನ್ನು ಸೂಚಿಸುತ್ತಿತ್ತು. ಆ ಶಬ್ದಗಳು ಅವನಿಗೆ ಹಸುಗಳ ಹಾಗೂ ನಾಯಿಗಳ ಧ್ವನಿಗಳನ್ನು ಜ್ಞಾಪಿಸುತ್ತಿದ್ದುವು. ಹಾಗಾಗಿ ಆತ ಮತ್ತೆ ಮತ್ತೆ ಬೇಸರವಿಲ್ಲದೆ ಕೇಳುತ್ತಿದ್ದ" "ಅಜ್ಜಾ ಹ್ಯಾಗೆ ರಾತ್ರಿಯಾಗತ್ತೆ?"

ಅವನ ಪ್ರತಿ ಬಾರಿಯ ಈ ಪ್ರಶ್ನೆಯ ಜೊತೆಯಲ್ಲೇ ಒಳಗಿನ ಕತ್ತಲೆಯೂ ಹೆಚ್ಚುತ್ತಿತ್ತು. ಹೊರಗೆ ಬಿರುಗಾಳಿಯ ಮೂರು ಮೋಡಗಳ ಕೋಪ ಒಂದರ ಮೇಲೆ ಮತ್ತೊಂದಕ್ಕೆ ಹೆಚ್ಚಾಯಿತು. ಕಾಡಿನಲ್ಲಿಯ ಮರಗಳು ಮುಂಬರುವ ಮಳೆಯನ್ನು ಹಿಡಿಯಲು ಸಿದ್ಧತೆ ಮಾಡುತ್ತಿರುವಂತೆ ತಮ್ಮ ಬಾಹುಗಳನ್ನು ಚಾಚಿದುವು. ಮಳೆ ಬಾರದಿದ್ದುದನ್ನು ಕಂಡ ಮುದುಕ, ತನ್ನ ತಿಳುವಾದ ತುಟಿಗಳನ್ನು ಸವರಿಕೊಂಡು ತಾನು ಏನಾದ್ರೂ ಹಾಡ್ತೀನಿ ಎಂದು ಒಂದು ಲಾವಣಿಯನ್ನು ಆರಂಭಿಸಿದ. ಒಂದೆರಡು ಚರಣಗಳಿಗಿಂತ ಹೆಚ್ಚನ್ನು ಹುಡುಗ ಆಲಿಸಲಿಲ್ಲ. ಕೆಲವೇ ಕ್ಷಣಗಳಲ್ಲಿ ಕ್ಷೀಣವಾದ ಹಾಡು ಗುಡಿಸಲಿನ



ಮೌನವನ್ನು ಕಲಕಲು ;ಅಶಕ್ಯವಾದಾಗ ಮುದುಕನೆಂದ, "ನೀ ಸುಮ್ನೆ ಕೂತ್ಕೋ; (ಕತ್ಲೆ) ನಿಂಗೇನೂ ತೊಂದ್ರೆ ಮಾಡೊಲ್ಲ."

"ಹಾಗಿದ್ರೆ ಈ ಕತ್ಲೆ ಯಾಕಾಯ್ತು?" ಹುಡುಗ ಒತ್ತಿ ಕೇಳಿದ.

"ಮಳೆ ಬೀಳುತ್ತೆ," ಎಂದು ಮುದುಕ ಉತ್ತರಿಸಿದರೂ ಅವನಿಗೆ ಅದು ಅರ್ಥವಾಗಲಿಲ್ಲ.

"ನಿನ್ನೆ ಮಳೇನೂ ಬಿದ್ದಿತ್ತು, ಸೂರ್ಯನೂ ಹೊಳೀತಿದ್ದ. ಈಗ ಯಾಕೆ ಸೂರ್ಯ ಹೊಳೀಯುಲ್ಲ?" ಆತನೆಂದ.

"ಸೂರ್ಯ ಅಲ್ಲಿಲ್ಲ ಕಣೋ"

"ಹಾಗಿದ್ರೆ ಆತ ಎಲ್ಹೋದ?" ಹುಡುಗ ಜಾಣತನದಿಂದ ಕೇಳಿದ.

"ನೀ ಸುಮ್ನೆ ತೊಂದ್ರೆ ಕೊಡ್ಬೇಡ."

ಮತ್ತೊಮ್ಮೆ ಗುಡುಗಿತು. ಈಗ ಹುಡುಗನಿಗೆ ಅವನಜ್ಜನೂ ಸರಿಯಾಗಿ ಕಾಣುತ್ತಿರಲಿಲ್ಲ. ಎಲ್ಲ ಸ್ತಬ್ಧವಾದಾಗ ಆತ ಮತ್ತೆ ಬಾಗಿಲ ಹತ್ತಿರ ಹೋಗಿ ಹೊರಗಿಣುಕಿದ.

"ಆಕಾಶ ಯಾಕೆ ಹಸಿರಾಗಿರುತ್ತೆ?" ಆತ ಕೇಳಿದ.

"ಅದು ಹಸಿರಾಗಿಲ್ಲ ಕಣೋ," ಆತನ ಅಜ್ಜನೆಂದ.

"ಇದೆ, ಅದು ನಾನ್ಸಿಯ ಹ್ಯಾಟಿನ ಹಾಗೆ ಹಸಿರಾಗಿದೆ, ಯಾಕ್ಹಾಗೆ ಅದು ಹಸಿರಾಗಿರುತ್ತೆ?" ಹುಡುಗ ಗಟ್ಟಿಸಿ ಕೇಳಿದ.

"ಮಳೆ ಬೀಳುತ್ತೆ ಅಷ್ಟೆ, ನೀ ಸುಮ್ನಾಗು," ಎಂದು ಉತ್ತರ ಬಂತು.

ಅದಕ್ಕೆ ಪ್ರತಿಯಾಗಿ ಹುಡುಗ ಅತ್ತ, ನೀರು ತುಂಬಿದ ಕಣ್ಣುಗಳಿಂದ ನೋಡಿದಾಗ ಆತನಿಗೆ ಕಪ್ಪು ಆಗಸ ಮರಗಳನ್ನು ಗುಡಿಸಲಿನ ಮೇಲೆಯೇ ತಳ್ಳುತ್ತಿರುವಂತೆ ಕೆಲವೇ ಕ್ಷಣಗಳಲ್ಲಿ ಅವು ಗುಡಿಸಲನ್ನು ಪುಡಿ ಮಾಡಿ ತನ್ನನ್ನು ನೆಲದಡಿ ಹುಗಿಯುವಂತೆ ಅನ್ನಿಸಿತು.

"ನಂಗೆ ಮನೇಗ್ಹೋಗೋ ಮನ್ಸಾಗತ್ತೆ," ಆತ ಪಿಸುಗುಟ್ಟಿದ. ಆದರೆ ಅಜ್ಜ ಉತ್ತರ ನೀಡಲಿಲ್ಲ. ಬಹಳ ಹೊತ್ತು ಸಹನಾತೀತವಾದ

ಮೌನ ಅಲ್ಲಿ ವ್ಯಾಪಿಸಿತ್ತು. ಆ ಹುಡುಗನಿಗೆ ತಾನು ಬೆವರುತ್ತಿದ್ದಂತೆ ಭಾಸವಾಯಿತು, ಅಲ್ಲದೆ ಅವನಜ್ಜನೂ ಕಾಣಲಿಲ್ಲ. ಒಮ್ಮೆಗೇ ಮಳೆಯೂ ಬೀಳಲು ಪ್ರಾರಂಭಿಸಿತು. ಮೊದಲು ಬೆದರಿದಂತೆ ಬಿದ್ದು ನಂತರ ದಟ್ಟವಾಗಿ 'ಬುಸ್' ಎಂದು ಶಬ್ದ ಮಾಡುತ್ತ ಬೀಳತೊಡಗಿತು.

"ಅಜ್ಜಾ ! ಅಜ್ಜಾ !" ಆತ ಅತ್ತ. ನಂತರ ಅಜ್ಜನ ಕಪ್ಪಾದ ಮೊಳಕಾಲುಗಳ ಮಧ್ಯೆ ತೊಡರಿಕೊಂಡ. "ಅಜ್ಜಾ" ಆತ ಅಳುತ್ತ ಬಡಬಡಿಸಿದ.

ಆತನ ಅಜ್ಜ ಆಗಲೇ ನಿದ್ರಿಸಿದ್ದ.

"ಏಳಜ್ಜಾ" ಹುಡುಗ ಪಿಸುಗುಟ್ಟಿದ, "ಮಳೆ ಬೀಳ್ತಾ ಇದೆ. ನಂಗೆ ಮನೇಗ್ಹೋಗೋ ಮನಸ್ಸಾಗ್ತಾ ಇದೆ, ಮೇಲೇಳು."

ಮುದುಕ ಎಚ್ಚೆತ್ತಾಗ, ಗುಡುಗಿನ ಪ್ರಚಂಡ ಗರ್ಜನೆ, ಹುಡುಗನ ಅಳುಧ್ವನಿ, ಕಿಟಕಿಗೆ ಹುಚ್ಚು ಆಕ್ರೋಶದಲ್ಲಿ ಅಪ್ಪಳಿಸುತ್ತಿದ್ದ ಮಳೆಯ ಶಬ್ದ, ಇವು ಕಿವಿಗೆ ಬಿದ್ದುವು.

"ನಾನು ಮನೆಗ್ಹೋಗ್ಬೇಕು," ಹುಡುಗ ಕಿರುಚಿದ, "ರಾತ್ರಿಯಾಗಿದೆ ಅಮ್ಮ ಇಷ್ಟೊತ್ತಿಗೆ ಮಲಕ್ಕೊಂಡಿರ್ತಾಳೆ."

"ನೀನು ಸುಮ್ನಿರು, ಈಗೇನೂ ರಾತ್ರಿಯಾಗಿಲ್ಲ," ಮುದುಕ ಸಂತೈಸಿದ.

"ಹಾಗಿದ್ರೆ ಈಗ ವೇಳೆ ಎಷ್ಟು?"

ಆ ನಸುಗತ್ತಲೆಯಲ್ಲಿಯೇ ಬಿಳಿಯ ಕಣ್ಣಿನಂತೆ ಒಂದು ಕೈಗಡಿಯಾರ ಹೊರಗೆ ಬಂತು. ಕಡ್ಡಿಯನ್ನು ಗೀರಿದ್ದರಿಂದ ಉಂಟಾದ ನೀಲವರ್ಣದ ಬೆಂಕಿ ತಟಕ್ಕನೆ ಅದರ ಮೇಲೆ ಕಾಣಿಸಿತು. ಒಂದು ಕ್ಷಣ ಹುಡುಗ ಎಲೆಯ ಆಕಾರದ ಬೆಳಕಿನ ಛಾಯೆ ತನ್ನಜ್ಜನ ಮುಖದ ಮೇಲೆ ಪ್ರತಿಫಲಿಸುವುದನ್ನೂ ಗುಡಿಸಲಿನ ಛಾವಣಿಯನ್ನೂ ದಿಟ್ಟಿಸುತ್ತಿದ್ದಾಗ ಬಿರುಗಾಳಿಯನ್ನು ಮತ್ತು ತನ್ನ ಭೀತಿಯನ್ನು ತಾತ್ಕಾಲಿಕವಾಗಿ ಮರೆತ.

"ಇನ್ನೂ ಎಂಟು ಗಂಟೆ ಆಗ್ತಾ ಇದೆ ನೀನು ತೆಪ್ಪಗೆ ಕೂತ್ಕೋ" ಮುದುಕ ಗುರುಗುಟ್ಟಿದ. ಆದರೆ ಮರುಕ್ಷಣವೇ ಆ ಜ್ವಾಲೆಯನ್ನು ಕತ್ತಲೆ ಕಬಳಿಸಿದಂತೆ ತೋರಿ ಏನೋ ಮಾಟ ಮಾಡಿದಂತೆ ಒಂದು ವಿಚಿತ್ರವಾದ ಬೆಳಕು ಕಾಣಿಸಿ ಆಕಾಶದಲ್ಲೊಂದು ಹಳದಿ ಬಣ್ಣದ ಗಾಯಮಾಡಿತು. ಆ ಗಾಯದಿಂದ ಹಳದಿ ಬಣ್ಣದ ರಕ್ತ ಕಾಡಿನ ಮೇಲೆ ಹಾಗೂ ಗುಡಿಸಿಲಿನ ಛಾವಣಿಯ ಮೇಲೆಲ್ಲಾ ಎರಚಲ್ಪಟ್ಟಿತು. ಭಯಂಕರವಾದ ಕ್ರೂರ ಪ್ರಾಣಿಯೊಂದು ಛಾವಣಿಯ ಮೇಲೆಯೇ ಕುಳಿತು ಗರ್ಜಿಸಿದಂತೆ ಗುಡುಗೊಂದು ಬಂತು. ಶಾಂತವಾದ ಬಿಸಿ ಗಾಳಿ ಮುಗ್ಧ ಮಗುವೊಂದು ಚೀರುವಂತೆ ಚೀರಿತು. ಮರಗಳೆಲ್ಲ ಅಸ್ತವ್ಯಸ್ತವಾದುವು. ಈ ಗೊಂದಲದಲ್ಲಿ ಹುಡುಗನ ತಲೆ ಮಜಡಾಗಿ ಬಿಸಿಯಾಯಿತು.

ಆತ ತನ್ನ ತಲೆಯನ್ನ ಸ್ನೇಹಮಯಿ ಮುದುಕನ ತೊಡೆಗಳ ಮಧ್ಯೆ ಹುದುಗಿಸಿ ಮುಲುಕುತ್ತ ಕತ್ತಲಲ್ಲಿಯೇ ಅತ್ತ.

ಗುಡುಗು- ಸಿಡಿಲುಗಳು ತನ್ನ ತಲೆಯ ಮೇಲೆ ಭಯಂಕರವಾಗಿ ಯುಗಲ ಗೀತೆಯನ್ನು ಹಾಡುತ್ತಿದ್ದಾಗ, ಆತ ತನ್ನ ಮನೆಯನ್ನೂ ತನ್ನ ತಾಯಿಯ ಶಾಂತ ಮುಖವನ್ನೂ ಪರದೆಯಿರುವ ಕಿಟಕಿಯನ್ನೂ ನಿರುಪದ್ರವಿ ಪತಂಗಗಳನ್ನೂ ಜ್ಞಾಪಿಸಿಕೊಳ್ಳಲು ಯತ್ನಿಸುತ್ತಿದ್ದ. ಆದರೆ ಇವೆಲ್ಲವನ್ನೂ ಅಲ್ಲಿ ಆತ ಸ್ಪಷ್ಟವಾಗಿ ಯೋಚಿಸಲಾಗಲಿಲ್ಲ. ಮುಂದಿಯಾಗಿ, ಕಪ್ಪಾಗಿರುವ ಮೋಸಗಾರ ಬಿರುಗಾಳಿಯೇ ತನ್ನನ್ನು ಮನೆಗೆ ಹೋಗದಂತೆ ತಡೆದಂತೆ, ಅದರಿಂದ ತನಗೆ ತಪ್ಪಿಸಿಕೊಳ್ಳಲು ಮಾರ್ಗವೇ ಇಲ್ಲದಂತೆ ಆತನಿಗನ್ನಿಸಿತು. ನೆರಳುಗಳಿಂದ ಅರ್ಧಾರ್ಧ ಮರೆಯಾದ ತಾನು ಒಂದು ನಾಯಿಯೆಂದೋ ಗೋಣಿ ಎಂದೋ ತನ್ನಜ್ಜ ತಿಳಿದುಕೊಂಡರೆ ಮಾತ್ರ ಬಹುಶ: ತಪ್ಪಿಸಿಕೊಳ್ಳಬಹುದು. ಅದಕ್ಕಾಗಿ ಆತ ಅಲ್ಲೇ ನಿಶ್ಶಬ್ದವಾಗಿ ನೆಲಕ್ಕೆ ಸಮವಾಗಿ ಬಗ್ಗಿದ, ಏನನ್ನೂ ಕೇಳಿಸಿಕೊಳ್ಳದಿರಲು ಯತ್ನಿಸಿದ. ಆದರೆ ಹೊರಗೆ ಆತ ಹಿಂದೆಂದೂ ಕೇಳಿರದಂತೆ ಪ್ರತಿ ವಸ್ತುವೂ ಭಯಂಕರ ಶಬ್ದ ಮಾಡುತ್ತಿತ್ತು. ಬಿರುಗಾಳಿ ತನ್ನ ಭೀತಿ

ಯನ್ನು ಲೆಕ್ಕಿಸದೆ ಬೀಸುತ್ತಲೇ ಇರುವುದು ಅವನಿಗರಿವಾಯಿತು.

ಸುಮಾರು ಒಂದು ಗಂಟೆ ಸರಿಯಿತು: ಹುಡುಗನಿಗೆ ಪದೆ ಪದೆ ಕೂಗಿಕೊಳ್ಳಬೇಕೆನ್ನಿಸುತ್ತಿತ್ತು. ಆದರೆ ಕಗ್ಗತ್ತಲು ಹಾಗೂ ಭೀತಿಯಿಂದ ಸ್ತಬ್ಧನಾಗಿ ಕುಳಿತ. ಅವನ ಮೊಳಕಾಲು ತಣ್ಣಗಾಗಲು ಪ್ರಾರಂಭಿಸಿತು. ಒಂದು ಕಾಲು ಜೋಮು ಹಿಡಿಯಿತು. ತಲೆ ಮಾತ್ರ ಬಿಸಿಯೇರಿ ಹಳೆಯ ಗೋಡೆ ಗಡಿಯಾರದಂತೆ ಹೊಡೆದುಕೊಳ್ಳುತ್ತಿತ್ತು.

ಒಮ್ಮೆ ಕಾಡಿನಿಂದ ಸುಟ್ಟ ವಾಸನೆ ಬಂತು. ಅದು ಕಡಿಮೆಯಾಗುತ್ತಿದ್ದಂತೆ ಹುಡುಗ ಪ್ರಾಣಿಗಳೂ ತನ್ನಂತೆ ಭೀತಿ ಹೊಂದಿರಬಹುದೇ? ಪಕ್ಷಿಗಳೆಲ್ಲ ಎತ್ತ ಹೋಗಿರಬಹುದು? ಅವೆಲ್ಲ ಯಾಕೆ ಮೌನವಾಗಿರಬಹುದು? ಎಂದು ಆಶ್ಚರ್ಯಪಡುತ್ತ ಸುಟ್ಟ ವಾಸನೆಯನ್ನು ಮರೆತ.



"...ಲೋ ಮಾಣಿ! ಬೇಗ ಹೋಗಿ ಮೇಜಿನಲ್ಲಿಟ್ಟಿರುವ ವಿಸ್ಕಿ ಬಾಟಲ್ ತೆಗೊಂಬಾರೋ...! 'ಪಾನನಿಷೇಧ'ದ ಬಗೆಗೆ ಮಾತನಾಡಿ ತುಂಬಾ ಬಾಯಾರಿಕೆ ಆಗಿಬಿಟ್ಟಿದೆ......!!"

ಅನಂತರ ಅವನಿಗೆ ಅದೃಷ್ಟವಶಾತ್ ಅವನಜ್ಜನ ಕೈಗಡಿಯಾರದ ಬೆಳ್ಳಿಯ ಅಂಕೆಗಳ ಚಿಕ್ಕಿಗಳನ್ನು ಕಂಡು ಸಮಾಧಾನವಾಯಿತು.

ನೀರವತೆ ಈ ರೀತಿ ಬೆಳೆದಂತೆ ದಟ್ಟವಾದ ಕತ್ತಲೆಯೂ ಆವರಿಸಿತು. ಹುಡುಗ ಮೇಲೆದ್ದು ಕಣ್ಣಗಲಿಸಿದ. ಮಳೆಯ ಆರ್ಭಟ ಅಷ್ಟರಲ್ಲಿ ನಿಂತಿತ್ತು. ತಕ್ಷಣವೇ ಬಿರುಗಾಳಿಯೂ ನಿಂತುಹೋಯಿತು. ಹೊರಗಡೆ ಜೇಡನ ಬಲೆಗಳು ನೀರಿನ ಮಣಿಗಳಿಂದ ನೇಯ್ದ ಹಗ್ಗಗಳಂತೆ ನೇತಾಡುತ್ತಿದ್ದುವು. ಅಲ್ಲಲ್ಲಿ ಹರಿವ ತೊರೆಗಳ ಮೇಲೆಲ್ಲಾ ನೆರಳುಗಳು ಚಿತ್ರ ಬರೆದಿದ್ದುವು. ನಡೆಯುವಾಗ ಅಂತಹ ತೊರೆಗಳು ಬಂದಾಗ ಅಜ್ಜ ಹುಡುಗನನ್ನು ಮೇಲಕ್ಕೆತ್ತುತ್ತಿದ್ದ. ಕಾಡಿನಂಚಿನಲ್ಲಿದ್ದ ನೀಲ ವರ್ಣದ ಬಿರುಗಾಳಿಯ ಮೋಡಗಳು ಹಿಂದೆ ಸರಿದು ಮಬ್ಬಿನಲ್ಲಿ ಮರೆಯಾಗಿದ್ದುವು. ಒಂದೆರಡು ನಕ್ಷತ್ರಗಳು ಅವರ ಪರಿಚಿತ ಹಾದಿಯಲ್ಲಿ ಗೋಚರಿಸಿದುವು.

"ಅದೋ ಕೋಗಿಲೆ" ಮುದುಕನೆಂದ.

ಅದು ನಿಜವಾಗಿತ್ತು. ಆಲಿಸುತ್ತಿದ್ದಂತೆ ಹುಡುಗ ತನ್ನ ಭೀತಿಯನ್ನು ಮರೆತ. ಆತ ನಡೆಯಲು ಯತ್ನಿಸಿದಾಗ ಕಾಲುಗಳು ಸೆಟಗೊಂಡಿರುವುದನ್ನು ತಿಳಿದ. ನೆಲಕ್ಕೆ ಊರಿದಾಗ ಆ ಜೋಮು ಹಿಡಿದ ಕಾಲಿಗೆ ಸಾವಿರಾರು ಸೂಜಿಗಳನ್ನು ಚುಚ್ಚಿದಂತೆನಿಸಿತು; ಆತ ನಕ್ಕುಬಿಟ್ಟ.

ವಿಷಯ ಬದಲಿಸಲು ಮುದುಕ ಹಳೆಯ ಕತೆಗಳನ್ನು ಹೇಳತೊಡಗಿದ. ಹುಡುಗ ಲಕ್ಷ್ಯಗೊಟ್ಟು ಅದನ್ನು ಕೇಳಲಿಲ್ಲ. ಅದೂ ಸ್ವಾರಸ್ಯ ಕಳೆದುಕೊಳ್ಳತೊಡಗಿದಾಗ, ಹುಡುಗನ ತೋರುಬೆರಳನ್ನು ತನ್ನ ಕೊಳಕು ಅಂಗೈಯಲ್ಲಿ ತೆಗೆದುಕೊಂಡು ತಾರೆಗಳನ್ನೆಣಿಸತೊಡಗಿದ, ಮುದುಕ.

'ಐವತ್ತೊಂದು...ಐವತ್ತೆರಡು...,

ಒಂದೆರಡು ಬಾರಿ ದೂರದಲ್ಲಿ ಮಿಂಚಿದರೂ ಗುಡಗೇನೂ ಬರಲಿಲ್ಲ. ನಕ್ಷತ್ರಗಳು ಹೆಚ್ಚು

ಹೆಚ್ಚು ಕಂಡಂತೆಲ್ಲಾ ಹುಡುಗನಿಗೆ ಬಿರುಗಾಳಿ ತನ್ನನ್ನು ಹೆದರಿಸುವ ಶಕ್ತಿಯನ್ನು ಕಳೆದುಕೊಂಡಂತೆನಿಸಿತು, ತಾನು ನಿದ್ರಿಸುತ್ತಿದ್ದಾಗಲೇ ಬಹುಶಃ ಭಯಂಕರವಾದ ಮಿಂಚು ಹೊಡೆದಿರಬೇಕು, ಬೇಗ ಹಳ್ಳಿ ಸಮೀಪಿಸುತ್ತದೆ. ಅನಂತರ ತನಗೆ ಯಾವ ಭೀತಿಯೂ ಇಲ್ಲ ಎಂದುಕೊಂಡ.

"ನಾನೇನೂ ಹೆದರ್ಕೊಂಡಿಲ್ಲ ಕಣಜ್ಜಾ," ಆತ ಹತ್ತು ಹನ್ನೆರಡು ಬಾರಿ ಹೇಳಿದ.

ಒಂಭತ್ತು ಗಂಟೆ ಬಡಿದು ಅದರ ನಾದ ಕಗ್ಗತ್ತಲು ತುಂಬಿದ ಹೊಲಗಳ ಮೇಲೆ ತೇಲಿ ಬರುವುದನ್ನು ಆಲಿಸುತ್ತಿದ್ದಾಗ ಆತ ಒಂದು ಉಲ್ಕಾಪಾತವನ್ನು ಕಂಡ.

"ಒಂದು ನಕ್ಷತ್ರ ಕೆಳಕ್ಕೆ ಬಿತ್ತು! ಓಹ್ ಎಷ್ಟು ಚೆನ್ನಾಗಿದೆ," ಆತ ಕಿರುಚಿದ. ಉಕ್ಕಿದ ಸಂತೋಷದಿಂದ ಮುದುಕನ ಕಾಲುಗಳನ್ನು ಚಿವುಟಿದ. ಒಂದು ಕಾಲುವೆಯಲ್ಲಿ ಜಿಗಿದು ಮತ್ತೊಮ್ಮೆ ಕೂಗಿದ, "ಒಂದು ನಕ್ಷತ್ರ ಕೆಳಕ್ಕೆ ಬಿತ್ತು!"

ಆದರೆ ಆತನ ಅಜ್ಜ ಏನೂ ಹೇಳಲಿಲ್ಲ.

ನಕ್ಷತ್ರ ಕೆಳಕ್ಕುದುರುವುದು ಸಾವಿನ ಸೂಚನೆ ಎನ್ನುವ ಮೂಢನಂಬಿಕೆಯಲ್ಲಿ ಮುದುಕನಿಗೆ ಗಾಢವಾಗಿ ನಂಬಿಕೆಯಿರಲಿಲ್ಲ. ಆದರೂ ಯಾವುದೋ ಕಾರಣಕ್ಕಾಗಿ ಆತ ಅವುಗಳೆರಡರ ಮಧ್ಯದ ಸಂಬಂಧವನ್ನು ಯೋಚಿಸದಿರಲು ಶಕ್ಯವಾಗಲಿಲ್ಲ. ಆತ ಗುಡ್ಡದಿಂದ ಕೆಳಕ್ಕಿಳಿಯುತ್ತಿದ್ದಂತೆಲ್ಲ ಅವನ ಬುದ್ಧಿ ಸ್ವಾಸ್ಥ್ಯ ಕಳೆದುಕೊಳ್ಳತೊಡಗಿತು. ತಟಕ್ಕನೆ ಆತ ತನ್ನ ಹೆಂಡತಿಯ ಬಗ್ಗೆ, ಆಕೆಯ ಸಾವಿನ ಬಗ್ಗೆ, ನಂತರ ತನ್ನ ವಯಸ್ಸಿನ ಬಗ್ಗೆ, ತನ್ನ ಮುದಿ ಅವಯವಗಳ ಬಗ್ಗೆ, ಮರುದಿನದ ಒಳಗೇ ತಾನು ಸತ್ತುಹೋಗಬಹುದಾದ ಸಾಧ್ಯತೆಯ ಬಗ್ಗೆ ಯೋಚಿಸಿದ.

ಮೆಲ್ಲಮೆಲ್ಲನೆ ಆತನಿಗೆ ತಾನು ಸಾವಿಗೆ ಕಟ್ಟುಬಿದ್ದಂತೆನಿಸಿತು. ಗುಡಿಸಲಿನಲ್ಲಿ ಹುಡುಗ ಬೆವರುತ್ತಿದ್ದಂತೆ ಈತನೂ ಬೆವರಲು ತೊಡಗಿದ. ಯಾವುದೋ ಭೀಕರ ಕಪ್ಪು ಪ್ರಾಣಿಯೊಂದು ತನ್ನ ಜೀವ ಹೀರಲು ಸಿದ್ಧವಾಗಿ ಕುಳಿತಂತೆನಿಸಿ, ಅದರಿಂದ ತನ್ನ ದೇಹವನ್ನಾಗಲಿ ಆತ್ಮವನ್ನಾಗಲಿ ತಪ್ಪಿಸಿಕೊಳ್ಳುವುದು ಅಸಾಧ್ಯ ಎನ್ನುವ ಯೋಚನೆ ಆತನನ್ನು ಬಾಧಿಸತೊಡಗಿತು.

ಒಂದೆರಡು ಹಕ್ಕಿಗಳು ಚಿಲಿಪಿಲಿಗುಟ್ಟಲಾರಂಭಿಸಿದುವು. ಹುಡುಗ ಅದನ್ನು ಕೇಳಿದನಾದರೂ ಮುದುಕನಂತೆ ಆತನೂ ನಕ್ಷತ್ರದ ಬಗ್ಗೆ ಮಾತ್ರ ಯೋಚಿಸುತ್ತಿದ್ದ. ಪ್ರಾಣಿಗಳೆಲ್ಲಾ ಬೆದರಿದ್ದುವೇ ಎಂದು, ಹಕ್ಕಿಗಳೆಲ್ಲಾ ಬಿರುಗಾಳಿಬೀಸುವಾಗ ಎಲ್ಲಡಗಿದ್ದುವೆಂದು, ತಾನು ಅಜ್ಜನನ್ನು ಖಂಡಿತ ಪ್ರಶ್ನಿಸಬೇಕೆಂದು ಆತ ಜ್ಞಾಪಿಸಿಕೊಂಡ. ಆದರೆ ಅಜ್ಜನ ಮುಖವನ್ನು ನೋಡುತ್ತಿದ್ದಂತೆ, ಅದನ್ನು ಗಾಂಭೀರ್ಯದ ನೆರಳು ಆವರಿಸಿದುದನ್ನು ಕಂಡು,

"ನೀನು ನಕ್ಷತ್ರ ಬೀಳೋದನ್ನ ನೋಡ್ದೆ?" ಎಂದು ಮಾತ್ರ ಧೈರ್ಯದಿಂದ ಕೇಳಿದ.

ಉತ್ತರ ಬರಲಿಲ್ಲ.

ಗುಡ್ಡದಿಂದ ಕೆಳಗಿಳಿಯುತ್ತಿದ್ದಂತೆ ಮುದುಕ ಯೋಚನೆಯಿಂದ ಗಾಸಿಗೊಂಡು ತನ್ನ ಸ್ಥೈರ್ಯವನ್ನೇ ಕಳೆದುಕೊಂಡ. ಆದರೆ ಹುಡುಗ ಮಾತ್ರ ನಗುತ್ತಿದ್ದ. ಉಳಿದ ನಕ್ಷತ್ರಗಳೂ ಬೀಳಬಹುದೆಂದು ಕಾಯುತ್ತಿದ್ದ.

ತನ್ನಜ್ಜ ಕಠೋರವಾಗಿ, ದೀನನಾಗಿ, ತನ್ನಲ್ಲಿ ಒಂದು ಮಾತನ್ನೂ ಆಡದೆ ಮತ್ತೊಮ್ಮೆ ಮಳೆ ಬೀಳಬಹುದೇನೋ ಎನ್ನುವಂತೆ, ಆತುರವಾಗಿ ನಡೆಯುವುದನ್ನು ಆಶ್ಚರ್ಯದಿಂದ ಅರ್ಥವಾಗದ ಗೊಂದಲ ತುಂಬಿದ ಕಣ್ಣುಗಳಿಂದ ನೋಡತೊಡಗಿದ. ✲

ನಾವೆಯಲ್ಲಿ ಅನೇಕರು ಕುಳಿತುಕೊಂಡಿದ್ದರೂ ಯಾರಿಗೂ ತಮ್ಮ ಆಸನದ ಕೆಳಗಡೆ ನಾವೆಗೆ ತೂತು ಕೊರೆಯಲು ಅಧಿಕಾರವಿಲ್ಲ. —ಇಸ್ರಾಯಿಲ್ ಗಾದೆ

ಇದುವೆ ಜೀವ ಇದು ಜೀವನ

ಬಕ್ಷೀಸ ಅಲ್ಲ, ದಂಡ

ಇತ್ತೀಚೆಗೆ ವಿದೇಶಕ್ಕೆ ಹೋಗಿ ಬಂದ ನನ್ನ ಸ್ನೇಹಿತರೊಬ್ಬರು ಹೇಳಿದ ಹಾಸ್ಯ ಪ್ರಸಂಗವಿದು.

ಯಾವುದೋ ಕಾರ್ಯಾರ್ಥವಾಗಿ ಅತ ನ್ಯೂಯಾರ್ಕ್ ನಗರದಲ್ಲಿ ಕೆಲವು ದಿನ ತಂಗಬೇಕಾಗಿ ಬಂತು. ಒಂದು ಹೋಟೆಲ್‌ನಲ್ಲಿ ಇಳಿದುಕೊಂಡಿದ್ದರು. ಪ್ರತಿ ದಿನ ಬೆಳಗ್ಗೆ ನಗರದಲ್ಲಿ ಪ್ರಕಟವಾಗುವ ಪ್ರಮುಖ ದಿನಪತ್ರಿಕೆಗಳೆಲ್ಲವೂ ಇವರ ರೂಮಿಗೆ ಓದುವುದಕ್ಕೋಸ್ಕರ ಬರುತ್ತಿದ್ದವು. ಅಮೇರಿಕನ್ನರಿಗೆ ದಿನಪತ್ರಿಕೆ ಅಥವಾ ಯಾವುದೇ ಕಾಗದವು ಧೂಳು ಅಥವಾ ಕಸಕ್ಕೆ ಸಮಾನ. ಅಂದರೆ ಅವುಗಳನ್ನು ಗಲೀಜು ಪದಾರ್ಥವೆಂದೆಣಿಸಿ ಓದಿದ ಬಳಿಕ ಬಿಸಾಕುತ್ತಾರೆ. ಇದು ನನ್ನ ಸ್ನೇಹಿತರಿಗೆ ತಿಳಿಯದು. ಓದಿದ ಬಳಿಕ ದಿನಪತ್ರಿಕೆಗಳೆಲ್ಲವನ್ನೂ ರೂಮಿನಲ್ಲಿ ಒಂದು ಕಡೆ ಶೇಖರಿಸಿಟ್ಟರು. ಹೊರಡುವ ದಿನ ಬಂತು. ರೂಮನ್ನು ಖಾಲಿ ಮಾಡಿ ಹೋಟೆಲ್ ಪರಿಚಾರಕನನ್ನು ಕರೆದು ದಿನಪತ್ರಿಕೆಗಳನ್ನಿಟ್ಟಿರುವ ಕಡೆ ತೋರಿಸಿ, "ಅವುಗಳನ್ನು ಮಾರಿಬಿಡು. ಬಂದ ಹಣವನ್ನು ಭಕ್ಷೀಸಿನ ಬದಲಿಗೆ ನೀನೇ ಇಟ್ಟುಕೋ," ಎಂದರು. ಅವನು ಒಳಗೆ ಹೋಗಿ ನೋಡುತ್ತಾನೆ ಸುಮಾರು ಇಪ್ಪತ್ತೈದು ಮೂವತ್ತು ಕೆಜಿ ತೂಗುವಷ್ಟು ದಿನಪತ್ರಿಕೆಗಳು. ಆತ ಓಡಿ ಬಂದು, "ಸ್ವಾಮಿ, ಇಷ್ಟೊಂದು ದಿನಪತ್ರಿಕೆಗಳನ್ನು ಶೇಖರಿಸಿರುವುದರಿಂದ ಹೋಟೆಲ್‌ನವರು ಇದಕ್ಕೆ ನನಗೆ ದಂಡ ವಿಧಿಸುತ್ತಾರೆ- ಇದನ್ನು ಸಾಗಿಸಿ ನಾಶ ಮಾಡುವುದಕ್ಕೆ ನೀವೇ ಹಣ ಕೊಡಿ" ಎಂದು ಹೇಳಿದ. ಭಕ್ಷೀಸು ಹಣ ಉಳಿಸಲು ಹೋದ ಇವರು ಭಕ್ಷೀಸಿನ ಜತೆ ದಂಡವನ್ನೂ ತೆರಬೇಕಾಯಿತು.

—ಶಿವಶಂಕರಯ್ಯ

ಹೆಲ್ಮೆಟ್ಟಿನ ಅವಾಂತರ

ರಾಘು ಅಂದು ಸಂಜೆ ಹೆಲ್ಮೆಟ್ ಧಾರಿಯಾಗಿ ತನ್ನ 'ವೆಸ್ಪಾ' ಸ್ಕೂಟರನ್ನು ಸಜ್ಜುಗೊಳಿಸಿದನು. ಅವನ ಮಡದಿ ಶಾರದೆಯೂ ಏನೋ ಕೊಳ್ಳುವುದಿದೆಯೆಂದು ಅವನೊಡನೆ ಹೊರಟಳು.

ರಾಘು ಬಿರುಸಾಗಿ ವಾಹನವನ್ನು ಕಮರ್ಷಿಯಲ್ ಸ್ಟ್ರೀಟ್‌ನ ಒಂದು ದೊಡ್ಡ ಅಂಗಡಿಯ ಮುಂದೆ ತಂದು ನಿಲ್ಲಿಸಿದನು. ಶಾರದೆಯು ಪಿಲಿಯನ್ನಿನಿಂದ ಇಳಿದು ಅಂಗಡಿಗೆ ಹೋದಳು. ರಾಘು ಅವಳಿಗೆ 'ಬೇಗ ಬಾ' ಎಂದು ಎಚ್ಚರಿಸಿ, ಅಲ್ಲಿಯೇ ನಿಂತನು.

ಕೆಲವು ನಿಮಿಷಗಳಾದ ನಂತರ ಅಂತಹುದೇ ಒಂದು ವೆಸ್ಪಾ ಅದೇ ಅಂಗಡಿಯ ಮುಂದೆ ಬಂದು ನಿಂತಿತು. ಅದರಿಂದ ಮತ್ತೊಬ್ಬ ಹೆಲ್ಮೆಟ್‌ಧಾರಿ ಮತ್ತು ಅವನ ಅರ್ಧಾಂಗಿ ಇಳಿದರು. ಆ ಹೆಂಗಸು ಸಹ ಅಂಗಡಿಯೊಳಕ್ಕೆ ಹೋದಳು. ಅವಳ ಪತಿರಾಯ ಹೊರಗೇ ಸಿಗರೇಟ್ ಸೇದುತ್ತಾ ನಿಂತನು. ಆ ವೇಳೆಗೆ ಶಾರದೆಯು ತನ್ನ ವ್ಯಾಪಾರವನ್ನು ಮುಗಿಸಿ ಹೊರಬಂದಳು. ರಾಘು ಯಾರೋ ಸ್ನೇಹಿತನೊಡನೆ ಮಾತನಾಡುತ್ತಾ ಸ್ವಲ್ಪ ದೂರ ಹೋಗಿದ್ದನು. ಶಾರದೆಯು ತಮ್ಮದಲ್ಲದ 'ವೆಸ್ಪಾ'ದ ಪಿಲಿಯನ್ ಮೇಲೆ ಕುಳಿತು 'ರೆಡಿ' ಎಂದಳು. ಸಿಗರೇಟ್ ಸೇದುತ್ತಿದ್ದ ಹೆಲ್ಮೆಟ್ ಧಾರಿಯು ಅವಳ ಕಡೆ ನೋಡದೆಯೇ ವಾಹನವನ್ನು ಸ್ಟಾರ್ಟ್ ಮಾಡಿ ಹೊರಟುಬಿಟ್ಟನು.

ರಾಘು ತನ್ನ ಸ್ನೇಹಿತನೊಡನೆ ಮಾತು ಮುಗಿಸಿ ಅಂಗಡಿಯ ಬಳಿ ಬಂದನು. ಇಷ್ಟು ಹೊತ್ತಾದರೂ ತನ್ನಾಕೆಯು ಬಂದಿಲ್ಲದಿರುವುದನ್ನು ಕಂಡು ಏನು ಮಾಡಲೂ ತೋಚದೆ ನಿಂತನು. ಆಗ ಆ ಇನ್ನೊಬ್ಬ ಹೆಲ್ಮೆಟ್ ಧಾರಿಯ ಹೆಂಡತಿ ಹೊರಗೆ ಬಂದು ನೋಡಲಾಗಿ, ಗಂಡನು ನಾಪತ್ತೆ, ವಾಹನವೂ

ನಾಪತ್ತೆ. ಆಕೆ ಸ್ವಲ್ಪ ಗಾಬರಿಯಾಗಿ ರಾಘು ವನ್ನು ಕುರಿತು, "ಇಲ್ಲಿದ್ದ ನಮ್ಮ ಗಾಡಿ ಯೇನಾಯಿತು?" ಎಂದು ಕೇಳಿದಳು. ರಾಘು ವಿಗೆ ಏನು ಹೇಳಲೂ ತೋಚದೆ, "ಗೊತ್ತಿಲ್ಲ" ಎಂದು ಉತ್ತರಿಸಿದನು.

ಇತ್ತಲಾಗಿ ಶಾರದೆ ಕುಳಿತಿದ್ದ ಗಾಡಿಯು 'ಕೆವಲ್ರಿ' ರಸ್ತೆಯನ್ನು ತಲುಪಿತ್ತು. ಆಗ ವಾಹಕನು ತನ್ನ ಮುಖವನ್ನು ಹಿಂದೆ ತಿರು ಗಿಸಿದನು. ಶಾರದೆಯು ಆಗ ಅವನನ್ನು ಸರಿಯಾಗಿ ನೋಡಿ, ತನ್ನ ಮೂರ್ಖತನಕ್ಕೆ ನಾಚಿ ಗಾಬರಿಯಿಂದಲೂ, ದುಃಖದಿಂದಲೂ ದಿಗ್ಭ್ರಾಂತಳಾಗಿ ಕಿಟಾರನೆ ಕಿರುಚಿಕೊಂಡಳು. ಹೆಲ್ಮೆಟ್‌ಧಾರಿಯು ವಾಹನವನ್ನು ನಿಲ್ಲಿಸಿ, "ಏಕೆ ಗಾಬರಿಯಾಗಿದ್ದೀರಿ? ಆಗಿಹುದೆ ನಡೆದು ಹೋದುದಕ್ಕಾಗಿ ಚಿಂತಿಸಿ ಫಲವಿಲ್ಲ, ಹೆದರಬೇಡಿ. ನಿಮ್ಮನ್ನು ಪುನಃ ಅಂಗಡಿಯ ಬಳಿ ಒಯ್ಯುತ್ತೇನೆ" ಎಂದು ಸಮಾಧಾನ ಮಾಡಲು ಯತ್ನಿಸಿದನು. ಶಾರದೆಯು ಬಿಕ್ಕಿ ಬಿಕ್ಕಿ ಅಳುತ್ತಲೇ ಸ್ಕೂಟರನ್ನು ಏರಿದಳು.

ಇವರು ಅಂಗಡಿಯನ್ನು ತಲುಪಿದಾಗ ರಾಘು ಮತ್ತು ಆ ಪರಕೀಯನ ಹೆಂಡತಿ, ಇಬ್ಬರೂ ಅಲ್ಲಿ ಇಲ್ಲಿ ಪರದಾಡುತ್ತಿದ್ದರು. ಬಂದ ವಾಹನವನ್ನೂ ಅದರ ಮೇಲಿದ್ದವರನ್ನೂ ನೋಡಿ ಸಂತಸದಿಂದ ಕೂಗಿಕೊಂಡರು.

ಪರಸ್ಪರ ವಿವರಗಳನ್ನು ಹೇಳಿ, ಅವರವರ ಮನೆಗೆ ಹಿಂದಿರುಗಿದರು.


ಶಾರದೆಯು ಇನ್ನೆಂದೆಂದಿಗೂ ಸ್ಕೂಟರನ್ನು ಏರುವುದಿಲ್ಲವೆಂಬ ದೃಢನಿರ್ಧಾರ ಮಾಡಿದಳು.


—ಎಂ. ರಾಮಕೃಷ್ಣ ನಿರಂಜನ್

ಗುಮ್ಮ, ಗುಮ್ಮ

ಒಂದು ಸಂಜೆ ನನ್ನ ಇಬ್ಬರು ಮಕ್ಕಳು ವಿಭಾ, ಶ್ರೀನಾಥರೊಡನೆ ಪೇಟೆಗೆ ಹೋಗಿದ್ದ ನಾನು ಮನೆಯ ಕಡೆ ಹೋಗಲಿದ್ದ ಹನುಮಾನ್ ಬಸ್ಸಿನಲ್ಲಿ ಮಕ್ಕಳೊಂದಿಗೆ ಕುಳಿತಿದ್ದೆ. ಏನು ಕಾರಣವೋ ಬಸ್ಸು ನಿಲ್ದಾಣದಲ್ಲಿ ಹೊರಡದೇ ನಿಂತಿತ್ತು. ನನ್ನ ಪಕ್ಕದಲ್ಲಿ ಘೋಷಾ ಧರಿಸಿದ್ದ ಒಬ್ಬ ಮಹಿಳೆ ಕುಳಿತಿದ್ದಳು. ಅವಳನ್ನು ನೋಡಿ ನನ್ನ ಮಕ್ಕಳಿಬ್ಬರೂ ಒಟ್ಟಿಗೇ, "ಅಮ್ಮಾ, ನೋಡು ಗುಮ್ಮ, ಗುಮ್ಮ," ಎಂದು ಗಟ್ಟಿಸ್ವರದಿಂದ ಹೇಳಲು ಪ್ರಾರಂಭಿಸಿದರು. ಆ ಮಹಿಳೆ ಎಲ್ಲಿ ಬೇಸರಪಟ್ಟುಕೊಳ್ಳುವಳೋ ಎಂದು ನನಗೆ ಬಹಳ ಸಂಕೋಚವಾಯಿತು. ಸುಮ್ಮನೇ ಕುಳಿತುಕೊಳ್ಳಲು ಇಬ್ಬರು ಮಕ್ಕಳಿಗೂ ಜೋರು ಮಾಡಿದೆ ಅದರೂ ಅವರು, "ಗುಮ್ಮ, ಗುಮ್ಮ" ಅನ್ನುವುದನ್ನು ನಿಲ್ಲಿಸಲಿಲ್ಲ. ಕೋಪಬಂದು ಇಬ್ಬರಿಗೂ ಸಣ್ಣದಾಗಿ ಏಟು ಕೊಟ್ಟೆ. ಈಗ ಇಬ್ಬರೂ ಜೋರಾಗಿ ಅಳಲು ಪ್ರಾರಂಭಿಸಿದರು. ಈ ರಂಪಾಟವನ್ನೆಲ್ಲಾ ನೋಡುತ್ತಿದ್ದ ಆ ಮಹಿಳೆ ನನ್ನ ಮಗನನ್ನು ಎತ್ತಿಕೊಂಡು, "ನೋಡು ಬಾಬು, ನಾನು ಗುಮ್ಮ ಅಲ್ಲ, ಅತ್ತೆ" ಎಂದು ಹೇಳುತ್ತಾ ಅವನನ್ನು ಸಮಾಧಾನ ಪಡಿಸಲೆತ್ನಿಸಿದಳು. ಸದ್ಯ ಆ ಹೆಂಗಸು ಬೇರೇನೂ ತಪ್ಪು ಭಾವಿಸಿಕೊಂಡಿಲ್ಲವಲ್ಲಾ ಎಂದು ನನಗೆ ಬಹಳ ಸಂತೋಷವೆನ್ನಿಸಿತು ಮತ್ತು ಹಾಗೇನೂ ತಪ್ಪು ತಿಳಿದುಕೊಳ್ಳಬಾರದಾಗಿ ಅವಳಲ್ಲಿ ಕೋರಿಕೊಂಡೆ. ಮನೆಗೆ ಬಂದು ನಡೆದ ಎಲ್ಲ ಘಟನೆಗಳನ್ನು ನಮ್ಮವರಿಗೆ ವಿವರಿಸಿ, ಇನ್ನು ಮೇಲೆ ಮುಖದ ಮೇಲೆ ಬಟ್ಟೆ ಹಾಕಿಕೊಂಡು ಮಕ್ಕಳೊಡನೆ ಆಡಬೇಡಿ ಎಂದೆ. ಅವರು ಹೊಟ್ಟೆ ಹುಣ್ಣಾಗುವಂತೆ ನಕ್ಕು, "ಆಯಿತು ಮಹಾರಾಯಳೇ, ಇನ್ನು ಮಕ್ಕಳೊಂದಿಗೆ ಗುಮ್ಮ ಆಟ ಆಡುವುದಿಲ್ಲ," ಎಂದರು.

—ಎನ್. ವಿಶಾಲಾ ರಾವ್




ಐಟೆಕ್ಸ್
ಸೌಂದರ್ಯ ಸಾಧನಗಳು
EYETEX BINDI
EYETEX BINDI® DELUXE MATT FINISH
EYETEX BINDI DELUXE
EYETEX REGD.
EYETEX DELUXE KUMKUM
EYETEX KUMKUM PASTE
ARAVIND LABORATORIES MADRAS-600 033

ಅಂಟಾರ್ಕ್ಟಿಕಾ : ಪ್ರಪಂಚದ ದಕ್ಷಿಣದ ತುದಿ

ಶ್ರೀಕಾಂತ ಮುಳಗಿ

ಉತ್ತರಧ್ರುವವನ್ನುಳಿದರೆ ಇಲ್ಲಿ ಹರಡಿಕೊಂಡಷ್ಟು ವಿಸ್ತಾರವಾದ ಹಿಮಪ್ರದೇಶ ಜಗತ್ತಿನ ಯಾವ ಭಾಗದಲ್ಲೂ ಹರಡಿಕೊಂಡಿಲ್ಲ. ಒಂದು ಲೆಕ್ಕಾಚಾರದ ಪ್ರಕಾರ ಅಕಸ್ಮಾತ್ತಾಗಿ ಈ ಎಲ್ಲ ಹಿಮ ಕರಗಿಹೋದರೆ ಸಮುದ್ರದ ಪಾತಳಿ ಇನ್ನೂರೈವತ್ತು ಅಡಿಗಳಷ್ಟು ಹೆಚ್ಚಿ ಮಹಾ ಉತ್ಪಾತವೇ ಸಂಭವಿಸೀತು. ಹೀಗಾದರೆ ಸಮುದ್ರತೀರದ ಪಟ್ಟಣಗಳು ಮುಳುಗಿ ಹೋದಾವು. ಪ್ರಚಲಿತ ನೌಕಾವ್ಯವಸ್ಥೆ ಅಸ್ತ-ವ್ಯಸ್ತಗೊಂಡು ಅನೇಕ ಹಡಗುಗಳು ಸಮುದ್ರದ ತಳ ಸೇರಬಹುದು. ಪ್ರಪಂಚದ ವಾತಾವರಣದಲ್ಲಿ ಅಸಾಮಾನ್ಯ ಏರುಪೇರುಗಳಾಗಿ ಮರುಭೂಮಿಗಳು ನಂದನವನವಾಗುವವು. ಸಸ್ಯಶ್ಯಾಮಲವಾದ ಭೂಮಿ ಸ್ಮಶಾನಸದೃಶವಾಗುವುದು.

ಜಗತ್ತಿನಲ್ಲಿ ಲಭ್ಯವಿರುವ ನೀರಿನ ಶೇಕಡಾ ಹದಿನೈದರಷ್ಟು ಭಾಗ ಇಲ್ಲಿ ಹಿಮರೂಪದಲ್ಲಿ ಸಂಚಿತವಾಗಿದೆ. ಇಲ್ಲಿರುವ ಹಿಮವನ್ನೆಲ್ಲ ಒಂದೇ ಕಡೆಗೆ ಸಂಗ್ರಹಿಸಿ ಅಳೆದರೆ ಅದು ಎಪ್ಪತ್ತುಲಕ್ಷ ಘನ ಅಡಿಗಳಿಗಿಂತ ಕಡಿಮೆಯಾಗಲಿಕ್ಕಿಲ್ಲ. ಆದರೂ ಇಲ್ಲಿ ಕುಡಿಯಲು ನೀರಿಲ್ಲ. ವರ್ಷದಲ್ಲಿ ನಾಲ್ಕು ಇಂಚಿಗಿಂತ ಹೆಚ್ಚು ಮಳೆ ಬೀಳುವುದಿಲ್ಲ. ಬಿದ್ದ ಮಳೆಯೂ ಹಿಮವಾಗಿಬಿಡುವುದರಿಂದ ಹನಿ ಹನಿ ನೀರನ್ನು ಇಲ್ಲಿ ಕಷ್ಟಪಟ್ಟು ದೊರಕಿಸಬೇಕು. ಇದರರ್ಥ ಧ್ರುವಪ್ರದೇಶದಲ್ಲಿ ನೀರು ದೊರೆಯುವುದೇ ಇಲ್ಲವೆಂದಲ್ಲ. ಇಲ್ಲಿನ ವ್ಹಿಕ್ಟೋರಿಯಾಲ್ಯಾಂಡಿನಲ್ಲಿ ಒಂದು ಸರೋವರವಿದೆ. ಅದು ವರ್ಷದ ಯಾವ ಭಾಗದಲ್ಲಿಯೂ ಹೆಪ್ಪುಗಟ್ಟುವುದಿಲ್ಲ. ಆದರೆ ಅದರ ನೀರು ತುಂಬಾ ಉಪ್ಪು. ಇದಕ್ಕಿಂತ ಐದು ಮೈಲು ದೂರದಲ್ಲಿ ಇನ್ನೊಂದು ಸರೋವರವಿದೆ. ಅದರ ಮೇಲ್ಭಾಗ ಚಳಿಗಾಲದಲ್ಲಿ ಹೆಪ್ಪುಗಟ್ಟುವುದಾದರೂ ಕೆಳಗೆ ಇನ್ನೂರಡಿಗಳ ಆಳದಲ್ಲಿ ನೀರು ಯಾವಾಗಲೂ ಎಪ್ಪತ್ತು ಫೆರನ್‌ಹೈಟುಗಳಷ್ಟು ಬಿಸಿಯಾಗಿರುತ್ತದೆ. ಈ ಪ್ರಾಕೃತಿಕ ವೈಚಿತ್ರ್ಯದ ರಹಸ್ಯವನ್ನು ಭೇದಿಸಲು ವಿಜ್ಞಾನಿಗಳು ಸಾಕಷ್ಟು ಕಷ್ಟಪಟ್ಟಿದ್ದಾರೆ. ಆದರೆ ಇನ್ನೂ ಸಾಧ್ಯವಾಗಿಲ್ಲ. ಇಲ್ಲಿ ವಾಸಿಸುವವರಲ್ಲಿ ಬಹುತೇಕ ಜನ ವಿಜ್ಞಾನಿಗಳು. ನೀರು ಬೇಕೆಂದರೆ ಹಿಮವನ್ನು ಕರಗಿಸಿ ಶುದ್ಧಗೊಳಿಸಿ ಕುಡಿಯುವುದೊಂದೇ ಅವರಿಗಿರುವ ದಾರಿ.

ಈ ಹಿಮಖಂಡವನ್ನು ಯಾರು ಶೋಧಿಸಿದರೆಂಬ ಬಗ್ಗೆ ಒಮ್ಮತವಿಲ್ಲ. ಕ್ಯಾಪ್ಟನ್ ಕುಕ್ ೧೭೭೨ರ ಸುಮಾರಿಗೆ ಈ ಖಂಡದ ಸನಿಹದಿಂದ ಹಾಯ್ದು ಹೋದನಾದರೂ ಅದನ್ನವನು ನೋಡಿದ ಹಾಗೆ ಕಾಣುವುದಿಲ್ಲ. ಇದಾಗಿ ಐವತ್ತು ವರ್ಷಗಳ ನಂತರ ಬೆಲಿಂಗ್ ಶಾಸೆನ್

ಎಂಬ ರಶಿಯನ್ ಸಂಶೋಧಕನೊಬ್ಬ ಏಕಾಕಿಯಾಗಿ ಅಂಟಾರ್ಕ್ಟಿಕ್ ವೃತ್ತದ ವರೆಗೂ ಸಾಗಿ ಹೋದನೆಂದು ಐತಿಹಾಸಿಕ ದಾಖಲೆಗಳು ಸೂಚಿಸುತ್ತವೆ. ಮುಂದೆ ೧೮೩೮ರಲ್ಲಿ ಚಾರ್ಲಸ್ ವಿಲ್ಕೀಸ್ ಎಂಬ ಅಮೇರಿಕನ್ನನೊಬ್ಬ ಸರಕಾರದ ಸಹಾಯ ಪಡೆದು ಸಂಶೋಧಕರ ತಂಡವೊಂದನ್ನು ಕಟ್ಟಿಕೊಂಡು ಅಂಟಾರ್ಕ್ಟಿಕ್ಕಿನ ಇಪ್ಪತ್ತುನಾಲ್ಕು ಸಾವಿರ ಕಿಲೋಮೀಟರುಗಳಷ್ಟು ಅಂತರವನ್ನು ಕ್ರಮಿಸಿದ. ಈ ಭೂಖಂಡಕ್ಕೆ ಅಂಟಾರ್ಕ್ಟಿಕವೆಂದು ಹೆಸರುಕೊಟ್ಟಾತ ಅವನೇ. ಆದರೆ ಬ್ರಿಟಿಶರೂ ಅಮೇರಿಕನ್ನರೂ ಹಾಗೆಯೇ ರಶಿಯನ್ನರೂ ತಮ್ಮ ದೇಶದವರೇ ಮೊದಲು ದಕ್ಷಿಣಧ್ರುವವನ್ನು ಶೋಧಿಸಿದರೆಂದು ಹೇಳಿಕೊಳ್ಳುವುದಿದೆ.

೧೯೩೨ ರಲ್ಲಿ ಕೆಲ ದೇಶಗಳು ಸೇರಿ ಆ ವರ್ಷವನ್ನು 'ಅಂತಾರಾಷ್ಟ್ರೀಯ ಧ್ರುವವರ್ಷ'ವನ್ನಾಗಿ ಆಚರಿಸಬೇಕೆಂದೂ ಅದಕ್ಕಾಗಿ ದಕ್ಷಿಣ ಧ್ರುವ ಪ್ರದೇಶದಲ್ಲಿ ಸಂಶೋಧನೆಗಳನ್ನು ನಡೆಸಬೇಕೆಂದೂ ನಿರ್ಧರಿಸಿದವು. ನಿರ್ಧಾರವೇನೋ ಸರಿಯಾಗಿತ್ತು; ಆದರೆ ಪರಿಣಾಮ ಮಾತ್ರ ಸರಿಯಾಗಿರಲಿಲ್ಲ. ಆ ವರ್ಷ ಕೊನೆಗೊಳ್ಳುವ ಹೊತ್ತಿಗೆ ತಂತಮ್ಮ ಸಂಶೋಧಕರು ಸಂಶೋಧಿಸಿದ ಭೂಭಾಗ ತಂತಮ್ಮ ದೇಶಕ್ಕೇ ಸೇರಿದ್ದೆಂದು ಅವು ವಾದಿಸತೊಡಗಿದ್ದವು. ಮೇಲಾಗಿ ಅಲ್ಲಿ ಎಲ್ಲ ವಿಜ್ಞಾನಿಗಳೂ ಒಂಟಿಯಾಗಿಯೆ ಕೆಲಸ ಮಾಡುತ್ತಿದ್ದುದರಿಂದ ಒಂದು ದೇಶದ ವಿಜ್ಞಾನಿಗಳು ಕಲೆಹಾಕಿದ ಮಾಹಿತಿ, ಅಲ್ಲಿಯೆ ಸಂಶೋಧನೆಗಳನ್ನು ನಡೆಸುತ್ತಿದ್ದ ಇನ್ನೊಂದು ದೇಶದ ವಿಜ್ಞಾನಿಗಳಿಗೆ ಲಭ್ಯವಾಗುವಂತಿರಲಿಲ್ಲ. ಹೀಗಾಗಿ ಕ್ಷಿಪ್ರವಾಗಿ ವೈಜ್ಞಾನಿಕ ಪ್ರಗತಿಯಾಗುವುದು ಸಾಧ್ಯವಿರಲಿಲ್ಲ. ಇದನ್ನು ನಿವಾರಿಸಬೇಕೆಂದು ಅಂತಾರಾಷ್ಟ್ರೀಯ ವೈಜ್ಞಾನಿಕ ಮಂಡಳಿ ೧೯೫೭–೫೮ ಅನ್ನು ಅಂತಾರಾಷ್ಟ್ರೀಯ ಭೂಭೌತ ವರ್ಷವನ್ನಾಗಿ ಆಚರಿಸಬೇಕೆಂದೂ ದಕ್ಷಿಣ ಧ್ರುವ ಪ್ರದೇಶದ ಸಂಶೋಧನೆಗಾಗಿ ಯಾವ ರಾಷ್ಟ್ರೀಯ ನಿಬಂಧನೆಗಳೂ ಇಲ್ಲದೆ ವಿಜ್ಞಾನಿಗಳನ್ನು ಕಳಿಸಬೇಕೆಂದೂ ಕೇಳಿಕೊಂಡಾಗ ರಶಿಯ, ಅಮೇರಿಕ, ಫ್ರಾನ್ಸ್ ಹಾಗೂ ನ್ಯೂಜಿಲಂಡ್‌ಗಳನ್ನೊಳಗೊಂಡು ಒಟ್ಟು ಹನ್ನೆರಡು ದೇಶಗಳು ಧ್ರುವಪ್ರದೇಶಕ್ಕೆ ತಮ್ಮ ವಿಜ್ಞಾನಿಗಳನ್ನು ಕಳಿಸಿಕೊಟ್ಟವು. ವಿಜ್ಞಾನಿಗಳಲ್ಲಿನ ಪರಸ್ಪರ ಸಹಕಾರ ಎಷ್ಟು ಮಹತ್ತ್ವಾಗಿರುತ್ತದೆಂಬುದಕ್ಕೆ ಆ ವರ್ಷ ಜ್ವಲಂತ ನಿದರ್ಶನವಾಗಿತ್ತು. ವಿಜ್ಞಾನಿಗಳ ಸಾಧನೆಯನ್ನು ಮೆಚ್ಚಿದ ಆ ದೇಶಗಳು ಇದೇ ಪರಂಪರೆಯನ್ನು ಮುಂದುವರಿಸುವುದಾಗಿ ನಿರ್ಧರಿಸಿ ಒಂದು ಒಪ್ಪಂದವನ್ನೂ ಮಾಡಿಕೊಂಡವು. ಆ ಪ್ರಕಾರ ವಿವಿಧ ದೇಶಗಳ



ವಿಜ್ಞಾನಿಗಳು ತಮ್ಮ ಪ್ರಯೋಗಾಲಯದಲ್ಲಿ ನಿರ್ಧರಿಸಿದ ತಥ್ಯಗಳನ್ನು ಉಳಿದ ದೇಶಗಳ ವಿಜ್ಞಾನಿಗಳು ಹಂಚಿಕೊಳ್ಳಬಹುದು. ಅಲ್ಲದೆ ಯಾವ ವೈಜ್ಞಾನಿಕ ಮಾಹಿತಿಯನ್ನೂ ಬಚ್ಚಿಡುವಂತಿಲ್ಲ. ಹಾಗೆಯೇ ಅಲ್ಲಿ ಅಣ್ವಸ್ತ್ರ ಪ್ರಯೋಗಗಳನ್ನು ನಡೆಸುವಂತೆಯೂ ಇಲ್ಲ.

ಅಣ್ವಸ್ತ್ರ ಪ್ರಯೋಗಗಳು ಇಲ್ಲಿ ನಡೆಯದಿದ್ದರೂ ಜಗತ್ತಿನ ಉಳಿದೆಡೆಗಳಲ್ಲಿ ನಡೆದ ಅಣ್ವಸ್ತ್ರ ಪ್ರಯೋಗಗಳ ಪರಿಣಾಮಗಳಿಂದ ಈ ಪ್ರದೇಶ ಹೊರತಾಗಿಲ್ಲ. ಪ್ರತಿ ವರ್ಷವೂ ಇಲ್ಲಿನ ಹಿಮದಲ್ಲಿ ರೇಡಿಯೋ ಫಾಲ್‌ಔಟ್ ಪ್ರಮಾಣ ಹೆಚ್ಚುತ್ತಿದೆ. ಕಾರಖಾನೆಗಳ ಹೊಗೆಗೊಳವೆಗಳ ಮೂಲಕ ಹೊರದಬ್ಬಲ್ಪಡುತ್ತಿರುವ ಕಲ್ಮಶಗಳು, ವಾಯುಪ್ರವಾಹದ ಗುಂಟ ತೇಲಿ ಬಂದು ಇಲ್ಲಿ ಸಂಗ್ರಹಗೊಳ್ಳುತ್ತಿರುವುದರಿಂದ ಕ್ರಮೇಣವಾಗಿ ಇಲ್ಲಿನ ವಾತಾವರಣವೂ ಮಲಿನವಾಗುತ್ತಿದೆ. ಇಲ್ಲಿನ ವಾತಾವರಣದಲ್ಲಿ ಮಾಲಿನ್ಯದ ಪ್ರಮಾಣ ಎಷ್ಟು ಹೆಚ್ಚಾಗುತ್ತಿದೆಯೆನ್ನುವುದರ ಆಧಾರದ ಮೇಲೆ ಜಗತ್ತಿನ ಉಳಿದೆಡೆಗಳಲ್ಲಿ ವಾತಾವರಣ ಎಷ್ಟು ಮಟ್ಟಿಗೆ ಕಲುಷಿತಗೊಂಡಿದೆಂಬುದನ್ನು ವಿಜ್ಞಾನಿಗಳು ನಿರ್ಧರಿಸುತ್ತಿದ್ದಾರೆ.

ಅತ್ಯಾಧುನಿಕ ಉಪಕರಣಗಳಿಂದಲೂ ಹವಾಮಾನದ ಸರಿಯಾದ ಮುನ್ಸೂಚನೆಯನ್ನು ನೀಡುವುದು ಸಾಧ್ಯವಾಗುತ್ತಿಲ್ಲ. ಆದರೆ ಹವಾಮುನ್ಸೂಚನೆ ಹೆಚ್ಚುಮಟ್ಟಿಗೆ ನಿಖರವಾಗಿರಲು ಧ್ರುವ ಪ್ರದೇಶದ ವಿಜ್ಞಾನಿಗಳು ಶ್ರಮಿಸುತ್ತಿದ್ದಾರೆ. ಅದಕ್ಕಾಗಿ ಅವರು ಪ್ರತಿದಿನ ವೈಜ್ಞಾನಿಕ ಉಪಕರಣಗಳನ್ನೊಳಗೊಂಡ ಬಲೂನುಗಳನ್ನು ಆಕಾಶದಲ್ಲಿ ಹಾರಿಬಿಟ್ಟು ತನ್ಮೂಲಕ ವಾತಾವರಣದ ಉಷ್ಣತೆ, ಒತ್ತಡ, ಆರ್ದ್ರತೆ, ಗಾಳಿಯ ವೇಗ ಹಾಗೂ ದಿಕ್ಕು, ಹಿಮಪ್ರಪಾತದ ಪ್ರಮಾಣ, ಸೌರಶಕ್ತಿ ಮುಂತಾದವುಗಳ ಬಗೆಗೆ ವಿವರಗಳನ್ನು ಸಂಗ್ರಹಿಸಿ ಆಸ್ಟ್ರೇಲಿಯಾದ ಮೆಲ್‌ಬೋರ್ನಿನಲ್ಲಿರುವ ಅಂತಾರಾಷ್ಟ್ರೀಯ ಹವಾವಿಶ್ಲೇಷಣ ಕೇಂದ್ರಕ್ಕೆ ರೇಡಿಯೋ ಅಲೆಗಳ ಮೂಲಕ ಕಳಿಸಿಕೊಡುತ್ತಾರೆ. ದಕ್ಷಿಣ ಗೋಲಾರ್ಧದ ಹವಾಮಾನದ ಭವಿಷ್ಯವನ್ನು ಹೆಚ್ಚು ನಿಖರವಾಗಿ ನುಡಿಯಲು ಇದರಿಂದ ಸಾಧ್ಯವಾಗುತ್ತಿದೆ.

ಲಕ್ಷಾಂತರ ವರ್ಷಗಳ ಅವಧಿಯಲ್ಲಿ ಹವಾಮಾನ ಹೇಗೆ ಬದಲಾಯಿತೆಂಬುದನ್ನು ತಿಳಿದುಕೊಂಡರೆ ಪವನಶಾಸ್ತ್ರದ ವಿಜ್ಞಾನಿಗಳಿಗೆ ಇಂದಿಗೂ ಅರ್ಥವಾಗದ ಕೆಲವು ಒಗಟುಗಳನ್ನು ಬಿಡಿಸಲು ಸಾಧ್ಯವಾಗಬಹುದು. ಚಳಿಗಾಲದ ಹಿಮದಲ್ಲಿ ಪ್ರಾಣವಾಯುವಿನ ಲಘುವಾದ ಐಸೋಟೋಪುಗಳು ($O^{೧೬}$) ಹೆಚ್ಚು ಸಂಖ್ಯೆಯಲ್ಲಿದ್ದರೆ ಬೇಸಿಗೆಯ ಹಿಮದಲ್ಲಿ ಅದೇ ವಾಯುವಿನ ಭಾರವಾದ ಐಸೋಟೋಪುಗಳು ($O^{೧೮}$) ಹೆಚ್ಚು ಸಂಖ್ಯೆಯಲ್ಲಿರುತವೆ. ಇವೆರಡೂ ಐಸೋಟೋಪುಗಳ ಪ್ರಮಾಣ ವಿಜ್ಞಾನಿಗಳಿಗೆ ವಾತಾವರಣದ ಸರಿಯಾದ ಚಿತ್ರಣವನ್ನು ಕೊಡುತ್ತದೆ. ಧ್ರುವ ಪ್ರದೇಶದ ಮೈನಡುಗುವ ಚಳಿಯಲ್ಲಿ ಸಾವಿರಾರು ಅಡಿಗಳಷ್ಟು ತಗ್ಗುತೋಡಿ ಬರ್ಫಿನ ಮಾದರಿಗಳನ್ನು ತೆಗೆದು ಇವೆರಡೂ ಐಸೋಟೋಪುಗಳ ಪ್ರಮಾಣವನ್ನು ಅಳೆದು ಸಾವಿರಾರು ವರ್ಷಗಳ ಹಿಂದೆ ಇಲ್ಲಿನ ವಾತಾವರಣ ಹೇಗಿತ್ತು, ಮುಂದೆ ಅದು ಹೇಗೆ ಬದಲಾವಣೆಗೊಳ್ಳುತ್ತ ನಡೆದೀತು ಎಂಬುದನ್ನು ವಿಜ್ಞಾನಿಗಳು ನಿರ್ಧರಿಸುತ್ತಿದ್ದಾರೆ.

ಜಗತ್ತಿನ ನಕಾಶೆಯಲ್ಲಿ ಭಾರತ, ದಕ್ಷಿಣ ಆಫ್ರಿಕ, ಆಸ್ಟ್ರೇಲಿಯ ಹಾಗೂ ಅಂಟಾರ್ಕ್ಟಿಕ್‌ಗಳನ್ನು ಕತ್ತರಿಸಿದರೆ ಅವು ಒಂದರಲ್ಲೊಂದು ಕೂಡಿಕೊಳ್ಳುತ್ತವೆ. ಇದು ಲಕ್ಷಾಂತರ ವರ್ಷಗಳ ಹಿಂದೆ ಒಂದಾಗಿದ್ದ ಭೂಖಂಡ ವಿಚ್ಛಿನ್ನವಾಗಿ ಕಾಲಾಂತರದಲ್ಲಿ ಅದರ ತುಣುಕುಗಳು ದೂರ ಸರಿಯುತ್ತಾ ಇಂದಿನ ಭೂಖಂಡಗಳು ನಿರ್ಮಾಣಗೊಂಡಿದ್ದನ್ನು ಸೂಚಿಸುತ್ತದೆ ಎಂಬ ವಾದವನ್ನು ಅಲೆಕ್ಸಾಂಡರ್ ಟ್ಯಾಟ್ ಎಂಬ ವಿಜ್ಞಾನಿ ೧೯೩೭ರಲ್ಲಿ ಮುಂದೊಡ್ಡಿದ. ಧ್ರುವ ಪ್ರದೇಶದಲ್ಲಿ ನಡೆಸಿದ ಉತ್ಖನನಗಳಲ್ಲಿ ವಿಷುವವೃತ್ತದ ಪ್ರದೇಶಗಳಲ್ಲಿ ಕಂಡುಬರುವ ಸಸ್ಯ ಹಾಗೂ ಪ್ರಾಣಿವರ್ಗಗಳ ಅವಶೇಷಗಳು

ದೊರೆಯುತ್ತಿರುವುದರಿಂದ ಅವನ ವಾದ ಇಂದು ಸರಿಯಾದ ಹಾಗೆ ಕಾಣುತ್ತದೆ. ಈ ಅವಶೇಷಗಳನ್ನು ರೇಡಿಯೋ ಕಾರ್ಬನ್. ಪರೀಕ್ಷೆಗೆ ಒಳಪಡಿಸಿದಾಗ ಇವು ನಾಲ್ವತ್ತು ಕೋಟಿ ವರ್ಷಗಳಷ್ಟು ಹಳೆಯುವೆಂಬುದು ಸಿದ್ಧವಾಯಿತು. ಅರ್ಥಾತ್ ನಾಲ್ವತ್ತುಕೋಟಿ ವರ್ಷಗಳ ಹಿಂದೆ ಯಾವಾಗಲೋ ಅಖಂಡವಾದ ಭೂಭಾಗವೊಂದು ಛಿನ್ನಛಿನ್ನವಾಗಿ ಭೂಖಂಡಗಳು ಕ್ರಮೇಣವಾಗಿ ಚಲಿಸುತ್ತಾ ಈಗಿರುವ ಸ್ಥಿತಿಯನ್ನು ತಲುಪಿರಬೇಕು.

ಓಹಾಯೋ ಸ್ಟೇಟ್ ವಿಶ್ವವಿದ್ಯಾಲಯದ ವಿಜ್ಞಾನಿಗಳು ಇಲ್ಲಿನ ಹಾರ್ಲಿಕ್ ಪರ್ವತವನ್ನು ಅಗೆಯುತ್ತಿದ್ದಾಗ ಆಕಸ್ಮಾತ್ತಾಗಿ ಇಪ್ಪತ್ತೈದುಕೋಟಿ ವರ್ಷಗಳಷ್ಟು ಹಳೆಯುದಾದ ಕಲ್ಲಿದ್ದಲಿಯ ಗಣಿ ಕಂಡು ಬಂದಿತು. ಈಗವರು ಈ ಕಲ್ಲಿದ್ದಲಿಯ ಮಾದರಿಗಳಲ್ಲಿ ದೊರೆಯಬಹುದಾದ ಪ್ರಾಣಿ, ಸಸ್ಯಗಳ ಅವಶೇಷಗಳನ್ನು ಪ್ರತ್ಯೇಕಿಸಿ ಪ್ರಾಕೃತಿಕ ಇತಿಹಾಸದ ಕಳಚಿಹೋದ ಕೊಂಡಿಗಳನ್ನು ಜೋಡಿಸುತ್ತಿದ್ದಾರೆ. ಕಲ್ಲಿದ್ದಲಿಯ ಈ ಗಣಿಗಳು ಜಗತ್ತಿನಲ್ಲಿಯೇ ಅದ್ವಿತೀಯವಾಗಿದ್ದು ಪ್ರಪಂಚದಲ್ಲಿ ಲಭ್ಯವಿರುವ ಕಲ್ಲಿದ್ದಲಿಯ ಪೈಕಿ ಶೇಕಡಾ ಹತ್ತರಷ್ಟು ಭಾಗ ಇದೊಂದೇ ಗಣಿಯಲ್ಲಿ ಸಂಗ್ರಹಗೊಂಡಿದೆ ಎಂದು ಇತ್ತೀಚೆ ನಡೆದ ಸರ್ವೇಕ್ಷಣೆಗಳಿಂದ ದೃಢಪಟ್ಟಿದೆ. ಒಂದು ಅಂದಾಜಿನ ಪ್ರಕಾರ ಅಲ್ಲಿ ಕಲ್ಲಿದ್ದಲಿಯ ಕ್ಷೇತ್ರ ೧,೫೭,೦೦೦ ಚದುರ ಕಿಲೋಮೀಟರುಗಳಷ್ಟು ವಿಸ್ತಾರವಾದ ಪ್ರದೇಶವನ್ನು ವ್ಯಾಪಿಸಿದೆ. ಇದಲ್ಲದೆ ಧ್ರುವಪ್ರದೇಶದ ಪೂರ್ವಭಾಗದಲ್ಲಿ ಹನ್ನೊಂದು ಲಕ್ಷ ಘನ ಮೀಟರುಗಳಷ್ಟು ಪ್ರಾಕೃತಿಕ ಅನಿಲವೂ ನಾಲ್ಕೂವರೆ ಸಾವಿರ ಕೋಟಿ ಬ್ಯಾರಲ್ಲುಗಳನ್ನು ತುಂಬುವಷ್ಟು ಪೆಟ್ರೋಲೂ ಭೂಗರ್ಭದಲ್ಲಿ ಸಿಕ್ಕಿಕೊಂಡಿದೆ. ಇದನ್ನೆಲ್ಲ ಹೊರತೆಗೆದು ಸಾಗಿಸುವುದು ತಾಂತ್ರಿಕವಾಗಿಯಲ್ಲದಿದ್ದರೂ ಆರ್ಥಿಕವಾಗಿ ದುಃಸಾಧ್ಯವಾಗಿದೆ.

ಒಂದು ರೀತಿಯಲ್ಲಿ ಧ್ರುವಪ್ರದೇಶಗಳು ಬೃಹತ್ ಗಾತ್ರದ ಕೋಲ್ಡ್ ಸ್ಟೋರೇಜ್. ಅಲ್ಲಿಟ್ಟ ಯಾವ ವಸ್ತುವೂ ಸುಲಭವಾಗಿ ನಶಿಸುವುದಿಲ್ಲ. ಹಿಂದೆ ಸ್ಕಾಟ್ ಎಂಬ ಸಾಹಸಿಯಾದ ಸಂಶೋಧಕನೊಬ್ಬ ತನಗೆ ಹೆಚ್ಚಾದ ತಿಂಡಿಯ ಡಬ್ಬಿಗಳನ್ನು ಅಲ್ಲಿಯೆ ಒಗೆದು ಹೋದ. ಮುಂದೆ ಅರವತ್ತು ವರ್ಷಗಳ ನಂತರ ಮತ್ತೊಂದು ಸಂಶೋಧಕರ ತಂಡಕ್ಕೆ ಈ ಡಬ್ಬಿಗಳು ದೊರೆತಾಗ ಅವು ನಿನ್ನೆಯೋ ಮೊನ್ನೆಯೋ ತಯಾರಿಸಿದ ತಿಂಡಿಯ ಹಾಗೆ ತಾಜಾ ಆಗಿಯೇ ಇದ್ದವು. ಕೃಷಿ ಪ್ರಧಾನ ದೇಶಗಳು ತಮಗೆ ಹೆಚ್ಚಾದ ದವಸ ಧಾನ್ಯಗಳನ್ನು ಪ್ರಾಕೃತಿಕ ರಿಫ್ರಿಜಿರೇಟರಿನಲ್ಲಿಟ್ಟು ಸುಲಭವಾಗಿ ರಕ್ಷಿಸಬಹುದು. ಆದರೆ ಧಾನ್ಯಾದಿಗಳನ್ನು ಅಲ್ಲಿಗೆ ಸಾಗಿಸಲು ಅವ್ಯವಹಾರಿಕವೆನ್ನಿಸುವಷ್ಟು ಖರ್ಚು ತಗಲುವುದರಿಂದ ಅಮೇರಿಕ, ರಶಿಯಾಗಳಂತಹ ಆಹಾರ ಧಾನ್ಯ ಸಮೃದ್ಧ ದೇಶಗಳು ಮುಂದೆ ಬಂದಿಲ್ಲ. ಭವಿಷ್ಯತ್ತಿನ ಎಂದಾದರೊಂದು ದಿನ ಸರಕು ಸಾಮಗ್ರಿಗಳನ್ನು ಅತ್ಯಲ್ಪ ವೆಚ್ಚದಲ್ಲಿ ಸಾಗಿಸಬಲ್ಲಂಥ ವಾಹನದ ಶೋಧವಾದರೆ ಧ್ರುವಪ್ರದೇಶಗಳೆರಡೂ ಜಗತ್ತಿನ ಆಹಾರದ ಉಗ್ರಾಣಗಳಾಗುವುದರಲ್ಲಿ ಸಂದೇಹವಿಲ್ಲ.

ಮೇಲುನೋಟಕ್ಕೆ ದಕ್ಷಿಣ ಧ್ರುವ ನಿರ್ಜೀವವಾಗಿರುವಂತೆ ಕಂಡರೂ ವಸ್ತುಸ್ಥಿತಿ ಹಾಗಿಲ್ಲ. ಸಮುದ್ರ ತೀರದಲ್ಲಿ ಪೆಂಗ್ವಿನ್ ಪಕ್ಷಿಗಳನ್ನೂ ಸೀಲುಗಳನ್ನು ನೀವಿಲ್ಲಿ ಸಾವಿರಗಟ್ಟಳೆಯಲ್ಲಿ ಕಾಣಬಹುದು. ಸಮುದ್ರದ ಮೀನೇ ಇವುಗಳಿಗೆ ಜೀವನಾಧಾರ. ಅಲ್ಲದೆ ಅಲ್ಲಲ್ಲಿ ಇಪ್ಪತ್ತು ಅಡಿಗಳಷ್ಟು ಬೃಹದಾಕಾರದ ನೀರಾನೆಗಳೂ ಇಲ್ಲಿ ನೋಡದೊರೆಯುವುದುಂಟು. ಸಸ್ಯಾಹಾರಿಗಳಾದ ಜೀವವರ್ಗವೊಂದು ಇಲ್ಲಿದೆ. ನೋಡಲು ನೊಣದ ಹಾಗೆ ಕಾಣುವ ಇದಕ್ಕೆ ರೆಕ್ಕೆಗಳಿಲ್ಲ. ಬೇಸಿಗೆಯಲ್ಲಿ ಇಲ್ಲಿ ಧಾರಾಳವಾಗಿ ಬೆಳೆಯುವ ಕಲ್ಲುಹೂವು, ಹಾವಸೆಗಳನ್ನು ಭಕ್ಷಿಸಿ, ಬೇಸಿಗೆ ಮುಗಿಯುತ್ತಲೆ ತನ್ನ ಜೀವನ ಲೀಲೆಯನ್ನು ಸಮಾಪ್ತಗೊಳಿಸುತ್ತದೆ.

ಧ್ರುವಪ್ರದೇಶದ ತೀರದಗುಂಟ ಸಮುದ್ರದಲ್ಲಿ ದೊಡ್ಡ ದೊಡ್ಡ ಮೀನುಗಳು

ಸಿಗುವುದು ಆಶ್ಚರ್ಯವಲ್ಲ. ಆದರೆ ಸಮುದ್ರದ ಒಳಭಾಗದಲ್ಲಿ ನಿರ್ಜನವಾಗಿರುವ ಹಿಮಪ್ರದೇಶದಲ್ಲಿ ಸತ್ತ ಮೀನುಗಳು ಆಗಾಗ ದೊರೆಯುವುದುಂಟು. ಅವುಗಳಲ್ಲಿ ಕೆಲವನ್ನು ವೈಜ್ಞಾನಿಕ ಪರೀಕ್ಷೆಗಳಿಗೆ ಒಳಪಡಿಸಿದಾಗ ಅವು ಸಾವಿರ ವರ್ಷಕ್ಕಿಂತಲೂ ಹೆಚ್ಚು ಹಳೆಯವಾಗಿರುವುದು ವ್ಯಕ್ತವಾಯಿತು. ಆ ಮೀನುಗಳು ಸಮುದ್ರದ ಒಳಭಾಗದಲ್ಲಿ ಇಷ್ಟು ದೂರ ಹೇಗೆ ಕಂಡು ಬಂದಿತೆನ್ನುವುದು ವಿಜ್ಞಾನಿಗಳಿಗಿನ್ನೂ ಒಗಟಾಗಿಯೆ ಇದೆ. ಹಾಗೆಯೆ ಸಾವಿರಾರು ವರ್ಷಗಳಷ್ಟು ಹಳೆಯದಾದ ಸೀಲ್ ಪ್ರಾಣಿಗಳ ಹೆಣಗಳೂ ಆಗಾಗ ಸುಸ್ಥಿತಿಯಲ್ಲಿ ಕಾಣಬರುವುದುಂಟು. ಇಲ್ಲಿನ ಹವೆ ಒಣದಾಗಿರುವುದೂ ಬ್ಯಾಕ್ಟೀರಿಯಗಳಿಂದ ರಹಿತವಾಗಿರುವುದೂ ಇವು ಇಷ್ಟು ಸುಸ್ಥಿತಿಯಲ್ಲಿರಲು ಕಾರಣವಾಗಿರಬಹುದು.

ಡಾ. ಗಿರಿರಾಜ ಸಿಂಗ್ ಸಿರೋಹಿಯವರು ಜೈವಿಕ ಗಡಿಯಾರಗಳ ಬಗೆಗೆ ಪ್ರಯೋಗಗಳನ್ನು ನಡೆಸಿದ್ದು ಇಲ್ಲಿಯೆ.* ವಿಜ್ಞಾನಿಗಳು ಈಗ ನಡೆಸುತ್ತಿರುವ ಸಂಶೋಧನೆಗಳು ಪೃಥ್ವಿಯ ಗತೇತಿಹಾಸದ ಮೇಲೆ ಬೆಳಕುಬೀರುವುದಷ್ಟೇ ಅಲ್ಲ, ಮುಂದೆ ವಾತಾವರಣದಲ್ಲಿ ಯಾವರೀತಿಯ ಬದಲಾವಣೆಯಾಗಿ ವಿಭಿನ್ನ ಭೌಗೋಲಿಕ ಪರಿಸರಗಳು ಹೇಗೆ ಮಾರ್ಪಾಟುಗೊಳ್ಳಬಹುದೆಂಬುದನ್ನು ಸೂಚಿಸುತ್ತವೆ; ವಾತಾವರಣದ ರಹಸ್ಯವನ್ನು ಭೇದಿಸಲೂ ಇವರ ಪ್ರಯೋಗಗಳು ನೆರವಾಗುತ್ತಿವೆ. ಈ ವಿಜ್ಞಾನಿಗಳಲ್ಲಿ ರಾಷ್ಟ್ರೀಯತೆಯೆಂಬುದಿಲ್ಲ. ಎಲ್ಲರೂ ವಿಜ್ಞಾನಕ್ಕಾಗಿ ತಮ್ಮನ್ನು ಅರ್ಪಿಸಿಕೊಂಡಿದ್ದಾರೆ. ಆದರೆ ಇದೇ ಸ್ಥಿತಿ ಎಲ್ಲಿಯವರೆಗೆ ಮುಂದುವರಿಯುವುದೋ ಹೇಳಲಾಗುವುದಿಲ್ಲ. ಸಾಮರಿಕವಾಗಿ ಇದು ಒಳ್ಳೆ ಆಯಕಟ್ಟಿನ ಸ್ಥಳವಾಗಿ ತಮ್ಮ ಅಣ್ವಸ್ತ್ರಸಜ್ಜಿತ ಕ್ಷಿಪಣಿಗಳನ್ನು ಇಲ್ಲಿ ನಿಲ್ಲಿಸಿದರೆ ಹೆಚ್ಚು ಭೂಪ್ರದೇಶದ ಮೇಲೆ ತಮ್ಮ ಹತೋಟಿಯನ್ನಿಡಲು ಸಾಧ್ಯವಾದೀತೆಂಬುದು ಸಿದ್ಧವಾದರೆ ಬೃಹತ್ ರಾಷ್ಟ್ರಗಳು ಅಲಿಪ್ತವಾಗಿ ಉಳಿಯಬಹುದೆ? ಅಥವಾ ಇಲ್ಲಿನ ಖನಿಜ ಸಂಪತ್ತನ್ನು ಲಾಭದಾಯಕವಾಗಿ ಉಪಯೋಗಿಸಿಕೊಳ್ಳುವ ಸುಸಂಧಿಯೊದಗಿದರೆ ಸಿಂಹಪಾಲನ್ನು ಪಡೆಯಲು ಅವು ತಮ್ಮ ತಮ್ಮಲ್ಲಾದರೂ ಬಲಪ್ರದರ್ಶನಕ್ಕಿಳಿಯದೆ ಬಿಟ್ಟಾವೆಯೆ? ಆಗ ಪ್ರಪಂಚದ ಜನನಿಬಿಡವಾದ ಭಾಗಗಳಲ್ಲಷ್ಟೇ ಅಲ್ಲ, ಹಿಮಮಯವಾದ ಈ ದಕ್ಷಿಣದ ತುದಿಯಲ್ಲಿಯೂ ಬಿಸಿಯೇರದೆ ಬಿಟ್ಟೀತೆ? ಇವೆಲ್ಲ ಅಂತೆ ಕಂತೆಗಳ ಸಾಮ್ರಾಜ್ಯದಲ್ಲಿ ಉಂಟಾಗಬಹುದಾದ ಸಮಸ್ಯೆಗಳ ಹಾಗೆ ಈಗ ತೋರಬಹುದಾದರೂ ಕ್ಷಿಪ್ರ ವೈಜ್ಞಾನಿಕ ಪ್ರಗತಿಯ ಈ ಯುಗದಲ್ಲಿ ಊಹೆಗಳು ವಾಸ್ತವವಾಗುವ ಸಂಭಾವ್ಯವನ್ನು ಅಲ್ಲಗಳೆಯುವಂತಿಲ್ಲ. ಸದ್ಯಕ್ಕಂತೂ ಶ್ವೇತ ಶುಭ್ರವಾದ ಈ ಪ್ರಶಾಂತ ಖಂಡ ವಿಜ್ಞಾನಿಗಳ ಬೃಹತ್ ಪ್ರಯೋಗಾಲಯವಾಗಿದೆ. ✡

* ಹೆಚ್ಚಿನ ವಿವರಗಳಿಗಾಗಿ 'ಕಸ್ತೂರಿ'ಯ ೧೯೬೭ ರ ಅಗಸ್ಟ್ ಸಂಚಿಕೆಯನ್ನು ನೋಡಿರಿ.

ಇಷ್ಟದ ಮರೆಯಲ್ಲಿದ್ದ ಅದೃಷ್ಟ

ತಿಲದ ಮರೆಯ ತೈಲವ ಅರೆದು ಕಾಬ ತೆರದಂತೆ
ಫಲದ ಮರೆಯ ರಸವ ಹಳಿದು ಕಾಬ ಸವಿವ ರುಚಿಯಂತೆ
ತೆರೆಯ ಮರೆಯ ರೂಪ ತೆಗೆದು ಕಾಬ ಸುಖದಂತೆ
ಇಷ್ಟದ ಮರೆಯಲ್ಲಿದ್ದದೃಷ್ಟವ-ಉಭಯವ ನಿಶ್ಚೈಸಿದಲ್ಲಿ
ಪ್ರಾಣಲಿಂಗ ಸಂಬಂಧ ನಿಃಕಳಂಕ ಮಲ್ಲಿಕಾರ್ಜುನಾ

—ಮೋಳಿಗಯ್ಯನವರು

'ಮರೆತುಹೋದ ಸಾಮ್ರಾಜ್ಯ' ನೀಡಿದ ಜಿಲ್ಲಾ ನ್ಯಾಯಾಧೀಶ

ಟೇಕೂರ ಕೃಷ್ಣಮೂರ್ತಿ

ಬಳ್ಳಾರಿ ಜಿಲ್ಲಾಸ್ಥಳ. ಇದಕ್ಕೆ ಪ್ರಾಚೀನೇತಿಹಾಸವೂ ಉಂಟು. ಅದನ್ನಲ್ಲ ನಾನೀಗ ಹೇಳಹೊರಟಿರುವುದು. ಭಾರತದಲ್ಲಿ ಬ್ರಿಟಿಶರ ಆಳಿಕೆ ಇದ್ದಾಗ ಬಳ್ಳಾರಿಯಲ್ಲಿ ಜಿಲ್ಲಾ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದ ಕೆಲ ಆಂಗ್ಲ ಮಹಾನುಭಾವರು ತಮ್ಮ ವಿಶಿಷ್ಟ ಕಾರ್ಯಗಳಿಂದಾಗಿ ತಮ್ಮ ಹೆಸರುಗಳನ್ನು ಚಿರಸ್ಮರಣೀಯವಾಗಿಸಿದ್ದಾರೆ,

ಬಳ್ಳಾರಿಯಲ್ಲಿ ಜಿಲ್ಲಾ ನ್ಯಾಯಾಧೀಶರ ಹುದ್ದೆ ಪ್ರಾರಂಭವಾದದ್ದು ಕ್ರಿ. ಶ. ೧೮೦೭ ರಲ್ಲಿ. ಬಳ್ಳಾರಿಗೆ ಆಗ ಪ್ರಥಮ ಜಿಲ್ಲಾ ನ್ಯಾಯಾಧೀಶರಾಗಿ ಬಂದಿದ್ದ ಜಿ. ಬ್ರೂಸ್ ಅವರು ಸುಮಾರು ಹದಿನಾಲ್ಕು ವರ್ಷಕಾಲ ಬಳ್ಳಾರಿಯಲ್ಲಿದ್ದರು. ಆ ಕಾಲಕ್ಕೆ ಬಳ್ಳಾರಿಯ ವಸತಿಯೆಲ್ಲ ಕೋಟೆಯಲ್ಲಿಯೆ ಇದ್ದಿತು. ಅದಿನ್ನೂ ಪೆಂಡಾರಿಗಳ ಉಪದ್ರವದ ಕಾಲವಾಗಿದ್ದರಿಂದ ಜನತೆಗೆ ಅವರ ಹಿಂಸಾಚಾರದಿಂದ ರಕ್ಷಣೆ ಒದಗಿಸಲು ಕೋಟೆಯಲ್ಲಿ ಆಶ್ರಯ ನೀಡಲಾಗಿತ್ತು. ಬ್ರಿಟಿಶರು ಈ ಪೆಂಡಾರಿಗಳ ಹುಟ್ಟಡಗಿಸುವಲ್ಲಿ ಯಶಸ್ವಿಯಾದರು,

ಪೆಂಡಾರಿಗಳ ಉಪಟಳ ಕಡಿಮೆಯಾಯಿತು. ಅಲ್ಲದೆ ಬಳ್ಳಾರಿ ಕೋಟೆಯಲ್ಲಿ ಬ್ರಿಟಿಶ್ ಅಧಿಕಾರಿಗಳಿಗೆ ಮತ್ತು ಸೈನಿಕರಿಗೆ ವಾಸಕ್ಕೆ ಅನುಕೂಲತೆ ಕಲ್ಪಿಸುವದಕ್ಕಾಗಿ, ಅಲ್ಲಿ ವಾಸಿಸುತ್ತಿದ್ದ ನಾಗರಿಕರಿಗೆ ಕೋಟೆಯ ಹೊರಗೆ ವಸತಿ ಸೌಕರ್ಯ ಒದಗಿಸುವ ಉದ್ದೇಶದಿಂದ ನಿವೇಶನಗಳನ್ನು ನೀಡಿರುವದಾಗಿ ಶಾಸನ ಹೊರಟಿತು. ಅಲ್ಲದೆ ನಾಗರಿಕರ ಸಾಮಾನುಗಳನ್ನು ಕೋಟೆಯಿಂದ ಹೊರಗಡೆ ಸಾಗಿಸುವದಕ್ಕಾಗಿ ಮೂವತ್ತು ಸಾವಿರ ರೂಪಾಯಿಗಳಷ್ಟು ನೆರವು ನೀಡಲಾಯಿತು. ಹೀಗೆ ಕೋಟೆಯಿಂದ ಹೊರಬಿದ್ದ ನಾಗರಿಕರು ಕಟ್ಟಿಕೊಂಡ ತಮ್ಮ ವಸತಿಗೆ ಬ್ರೂಸ್ ದೊರೆಯ ಹೆಸರನ್ನೇ ಇಟ್ಟರು. ಬ್ರೂಸ್ ಪೇಟೆ ಇಂದಿಗೂ ಬಳ್ಳಾರಿಯಲ್ಲಿ ಸುಸ್ಥಿರವಾಗಿ ನಿಂತಿದೆ. ಇದಕ್ಕೂ ಹೆಚ್ಚಿನ ಘನ ಕಾರ್ಯವನ್ನೇನೂ ಬ್ರೂಸ್ ದೊರೆ ಮಾಡಿರುವಂತೆ ತೋರುವುದಿಲ್ಲ. ಆದರೂ ಬ್ರೂಸ್ ಪೇಟೆ ಶಾಶ್ವತವಾಗಿದೆ.

ಮುಂದೆ ೧೮೪೫ ರಲ್ಲಿ ಜಿಲ್ಲಾ ನ್ಯಾಯಾಧೀಶರಾಗಿ ಬಂದು ಆರು ವರ್ಷಕಾಲ ಅಧಿಕಾರ ನಡೆಸಿದ ಟಿ. ಎಲ್. ಸ್ಟ್ರೇಂಜ್ ಅವರು ಜನರ ಸ್ಮರಣೆಯಲ್ಲಿ ಉಳಿದಿರುವುದು. ತಮ್ಮ ವಿಕ್ಷಿಪ್ತ ವರ್ತನೆಯಿಂದ ಎಂದು ಹೇಳಬಹುದು. ಇವರು ಬಳ್ಳಾರಿಯಿಂದ ನಾಲ್ಕು ಮೈಲು ದೂರದಲ್ಲಿರುವ ಮಿಂಚೇರಿ ಗುಡ್ಡದ ಮೇಲೆ ತಮ್ಮ ಬಂಗಲೆ ಕಟ್ಟಿಸಿಕೊಂಡರು. ಇವರ ನಿವಾಸದಿಂದ ಕೋರ್ಟ ದೂರವಾಗಿದ್ದರಿಂದ ಇವರು

ದಿನಾಲೂ ಕೋರ್ಟಿಗೆ ಬರುತ್ತಿದ್ದಿಲ್ಲ. ಕೋರ್ಟಿನಲ್ಲಿ ಅಗತ್ಯದ ಕೆಲಸ ಏನಾದರೂ ಇದೆ, ನ್ಯಾಯಾಧೀಶರ ಹಾಜರಿ ಆವಶ್ಯಕ ಎನಿಸಿದ ದಿನ ಕೋರ್ಟಿನ ಮೇಲೆ ಒಂದು ಬಾವುಟ ಏರಿಸಲಾಗುತ್ತಿತ್ತು, ಅಲ್ಲಿ ಮಿಂಚೇರಿ ಗುಡ್ಡದ ಬಂಗಲೆಯ ಕಾವಲುಗಾರ ಆ ಬಾವುಟ ನೋಡಿದ ಕೂಡಲೆ ಧಾವಿಸಿ ಒಳಗೆ ಹೋಗಿ ಜಿಲಾ ನ್ಯಾಯಾಧೀಶ ಸ್ಟ್ರೇಂಜರಿಗೆ ಬಾವುಟ ಕಂಡ ಸುದ್ದಿ ತಿಳಿಸುತ್ತಿದ್ದ. ಅವರು ಕೂಡಲೇ ಅಶ್ವಾರೋಹಿಯಾಗಿ ಕೋರ್ಟಿಗೆ ಕೆಲನಿಮಿಷಗಳಲ್ಲಿಯೆ ಹಾಜರಾಗುತ್ತಿದ್ದರು. ತಮ್ಮ ಕರ್ತವ್ಯ ನಿರ್ವಹಿಸುತ್ತಿದ್ದರು. ಸ್ಟ್ರೇಂಜ್ ಸಾಹೇಬರ ಈ ಉಪಾಯ ಇಂದಿನ ಟೆಲಿಫೋನಿಗಿಂತ ತೀವ್ರ ಸಂದೇಶವಾಹಕವಾಗಿತ್ತು ಅಲ್ಲದೆ ಸಾರ ಜನಿಕರಿಗೂ ಪ್ರಯೋಜನಕಾರಿಯಾಗಿತ್ತು. ಬಾವುಟ ಮೇಲೇರಿದ ದಿನ ನ್ಯಾಯಾಲಯದ ಕಾರ್ಯಕಲಾಪಗಳು ನಡೆಯುವದು ಖಚಿತ ಎಂದು ಜನರಿಗೂ ಗುರುತಾಗಿ ಬಿಟ್ಟಿತ್ತು.

ಬಳ್ಳಾರಿಗೆ ಜಿಲ್ಲಾ ನ್ಯಾಯಾಧೀಶರಾಗಿ ಬಂದು ಕರ್ನಾಟಕಕ್ಕೇ ಅವಿಸ್ಮರಣೀಯವಾದ ಸೇವೆ ಸಲ್ಲಿಸಿದವರೆಂದರೆ ಆರ್. ಸಿವೆಲ್ ಅವರು. ಇತಿಹಾಸ ಸಂಶೋಧನೆಯಲ್ಲಿ ಇವರಿಗೆ ಅಪಾರ ಆಸಕ್ತಿ. ಇವರು ಬಳ್ಳಾರಿಯಲ್ಲಿ ಜಿಲ್ಲಾ ನ್ಯಾಯಾಧೀಶರಾಗಿದ್ದಾಗ ಹಂಪಿಯ ಅವಶೇಷಗಳ ಕುರಿತು ಆಳವಾದ ಸಂಶೋಧನೆ ನಡೆಸಿ, ತಮ್ಮ ದೀರ್ಘ ವ್ಯಾಸಂಗದ ಪರಿಣಾಮವಾಗಿ 'Forgotten Empire' (ಮರೆತುಹೋದ ಸಾಮ್ರಾಜ್ಯ) ಎಂದು ಉದ್ಗ್ರಂಥವನ್ನು ನೀಡಿ ಜನಕ್ಕೆ ವಿಜಯನಗರ ಸಾಮ್ರಾಜ್ಯದ ಪರಿಚಯ ಮಾಡಿಕೊಟ್ಟರು. ತಮ್ಮ ಇಪ್ಪತ್ತೊಂದನೆ ವಯಸ್ಸಿನಲ್ಲಿ ಬಳ್ಳಾರಿಗೆ ಜಿಲ್ಲಾ ನ್ಯಾಯಾಧೀಶರಾಗಿ (ಕ್ರಿ.ಶ. ೧೮೬೬) ಬಂದ ಇವರು ಮುಂದೆ ಕ್ರಿ.ಶ. ೧೮೯೪ರಲ್ಲಿ ಬಳ್ಳಾರಿ ಕಲೆಕ್ಟರರಾಗಿಯೂ ಸೇವೆಸಲ್ಲಿಸಿದರು. ಅವರು ತಮ್ಮ ಇಲ್ಲಿಯ ಸೇವಾವಧಿಯನ್ನು ವಿಜಯನಗರ ಸಾಮ್ರಾಜ್ಯದವೈಭವವನ್ನರಿತುಕೊಳ್ಳುವದಕ್ಕಾಗಿ ಉಪಯೋಗಿಸಿಕೊಂಡರು. ಇವರ ಆಳವಾದ ಅಭ್ಯಾಸದ ಕೃತಿ 'ಮರೆತುಹೋದ ಸಾಮ್ರಾಜ್ಯ' ಬಹಳಷ್ಟು ಜನಪ್ರಿಯವಾಗಿತ್ತು. ಕ್ರಿ. ಶ. ೧೯೦೦ ರಲ್ಲಿ 'ಮರೆತುಹೋದ ಸಾಮ್ರಾಜ್ಯ'ದ ಪ್ರಥಮ ಮುದ್ರಣ ಹೊರಬಂದಿತಾದರೂ ದ್ವಿತೀಯ ಮುದ್ರಣಕ್ಕಾಗಿ ೧೯೬೨ ರ ವರೆಗೆ ಅದು ದಾರಿ ಕಾಯಬೇಕಾಯಿತು. ಆರ್. ಸಿವೆಲ್‌ರಿಗೆ ತಮ್ಮ ಕೃತಿಯ ದ್ವಿತೀಯ ಮುದ್ರಣಕಾಣುವ ಸೌಭಾಗ್ಯ ಇರಲಿಲ್ಲ.

ಹಂಪೆಯ ಅವಶೇಷಗಳನ್ನು ಪ್ರಪಂಚಕ್ಕೆ ಪರಿಚಯಿಸಿದ ಆರ್. ಸಿವೆಲ್‌ರಿಗೆ ಕರ್ನಾಟಕ ಧನ್ಯವಾದಗಳನ್ನು ಅರ್ಪಿಸಬೇಕಾದುದಂತೂ ಸಹಜವೇ. ಆದರೆ ಅವರ ಸ್ಮರಣಾರ್ಥವಾಗಿ ಹಂಪೆಯಲ್ಲಿ ಸ್ಮಾರಕ ನಿಲ್ಲಿಸಬೇಕೆಂದು ಒಮ್ಮೆ ಬಂದಿದ್ದ ಸೂಚನೆ ಸೂಚನೆಯಾಗಿಯೆ ಉಳಿಯಿತು.

ಬಳ್ಳಾರಿಯಲ್ಲಿ 'ಮ್ಯಾಕ್ ಸ್ಟೇಡಿಯಂ' ಅಂತ ಒಂದು ಕ್ರೀಡಾಂಗಣವಿದೆ. ಈ ಮ್ಯಾಕ್ ದೊರೆ ಕೂಡ ಬಳ್ಳಾರಿಯಲ್ಲಿ ಜಿಲ್ಲಾ ನ್ಯಾಯಾಧೀಶನಾಗಿದ್ದವನೇ. ತಾನು ಬಳ್ಳಾರಿಯವನೆಂದು ಹೇಳಿಕೊಳ್ಳುವಲ್ಲಿ ಈ ಮ್ಯಾಕ್‌ನಿಗೆ ಬಲು ಹೆಮ್ಮೆ. ಬಳ್ಳಾರಿಯ ಸಾಂಘಿಕ ಚಟವಟಿಕೆಗಳಲ್ಲಿ ಇವನು ಭಾಗವಹಿಸುತ್ತಿದ್ದನಲ್ಲದೇ ಯುವಕ ಕ್ರೀಡಾಕೂಟಗಳಲ್ಲಿಯೂ ಆಸಕ್ತಿ ವಹಿಸುತ್ತಿದ್ದನು. ಬಳ್ಳಾರಿ ಜಿಲ್ಲಾ ವ್ಯಾಯಾಮ ಮತ್ತು ಕ್ರೀಡಾ ಸಂಸ್ಥೆಯನ್ನು ಸ್ಥಾಪಿಸುವಲ್ಲಿ ಇವನು ವಿಶೇಷ ಪರಿಶ್ರಮ ವಹಿಸಿದನು. ಜಿಲ್ಲೆಯಲ್ಲಿರುವ ಎಲ್ಲ ಶಾಲೆಗಳ ಕ್ರೀಡಾಕೂಟವನ್ನು ಪ್ರತಿವರ್ಷ ಈ ಜಿಲ್ಲಾ ಕ್ರೀಡಾ ಸಂಘದವರು ಏರ್ಪಡಿಸುವಂತೆ ವ್ಯವಸ್ಥೆ ಮಾಡಿದನು. ಇದಕ್ಕಾಗಿ ಒಂದು ಸ್ಟೇಡಿಯಂ (ಕ್ರೀಡಾಂಗಣ) ರಚಿಸಬೇಕೆಂದು ನಿರ್ಧಾರವಾಯಿತು. ಜಿಲ್ಲಾ ವ್ಯಾಯಾಮ-ಕ್ರೀಡಾ ಸಂಘಕ್ಕೆ ನಿವೇಶನ-ಹಣ ಒದಗಿಸುವಲ್ಲಿ ನ್ಯಾಯಾಧೀಶ ಮ್ಯಾಕ್ ತುಂಬ ಆಸಕ್ತಿ ತೋರ್ಪಡಿಸಿದನು. ಮುಂದೆ ಸ್ಟೇಡಿಯಂ ಪೂರ್ತಿಯಾದಾಗ ಅದಕ್ಕೆ ಈ ನ್ಯಾಯಾಧೀಶನ ಹೆಸರನ್ನೇ ಇಡಬೇಕೆಂದು ಸಂಘದವರು

ತೀರ್ಮಾನಿಸಿದ್ದರಿಂದ ಇದು 'ಮಾಕ್ ಸ್ಟೇಡಿಯಂ' ಆಗಿ ನಾಮಕರಣ ಹೊಂದಿ, ಅದೇ ಹೆಸರಿನಿಂದಲೇ ಉಳಿದಿದೆ. ಇದರ ಶಂಕು ಸ್ಥಾಪನೆ (ಕ್ರಿ. ಶ. ೧೯೪೨) ಮಾಡಿದವರು ಆಗಿನ ಗವ್ಹರ್ನರ್ ಹೋಪ್ ಅವರು.

ಈ ಕ್ರೀಡಾಂಗಣದಲ್ಲಿ ನಡೆಯುವ ಸಕಲ ಕ್ರೀಡಾ ಚಟುವಟಿಕೆಗಳನ್ನು ನ್ಯಾ. ಮ್ಯಾಕ್ ಖುದ್ದಾಗಿ ನಿಂತು ಪ್ರೋತ್ಸಾಹಿಸುತ್ತಿದ್ದನು. ಈ ಕ್ರೀಡಾಂಗಣದಲ್ಲಿ ಕುಸ್ತಿ, ಟಗರು ಕಾಳಗಗಳು ಮತ್ತಿತರ ಕ್ರೀಡಾ ಪಂದ್ಯಗಳೂ ನಡೆಯುತ್ತವೆ.

ತನ್ನ ಕ್ರೀಡಾಮನೋಭಾವದಿಂದ ಇಲ್ಲಿಯವರೆಗೆ ಪ್ರಿಯನಾಗಿದ್ದ ಮ್ಯಾಕ್ ನಿವೃತ್ತನಾಗಿ ಸ್ವದೇಶಕ್ಕೆ ತೆರಳಿದ ನಂತರವೂ ಬಳ್ಳಾರಿಯ ಪ್ರಗತಿಯನ್ನು ಅರಿತುಕೊಳ್ಳುವದಕ್ಕಾಗಿ ತನ್ನ ಇಲ್ಲಿಯ ಮಿತ್ರರೊಂದಿಗೆ ಸಂಪರ್ಕ ಇಟ್ಟುಕೊಂಡಿದ್ದ. ✡

ಮುಕ್ಕಣ್ಣ, ಆದರೆ ಶಿವನಲ್ಲ

ಸಯುರಿ ತನಾಕಾ ಎಂಬ ಹತ್ತು ವರ್ಷದ ಬಾಲಿಕೆಯ ಪ್ರಚಾರ ಇತ್ತೀಚೆಗೆ ಜಪಾನಿ ಪತ್ರಿಕೆಗಳಲ್ಲಿ ಭರದಿಂದ ಸಾಗಿದೆ. ಟೆಲಿವಿಜನ್ ವೀಕ್ಷಿಸುವದು, ಸೈಕಲ್ ಸವಾರಿ, ಸ್ಕೈಯಿಂಗ ಅಂದರೆ ಈ ಬಾಲಿಕೆಗೆ ಬಲು ಪ್ರಿಯ. ಆದರೆ ಆಕೆ ತನ್ನ ಎರಡೂ ಕಣ್ಣುಗಳನ್ನು ಅಪಾರದರ್ಶಕ ಪಟ್ಟಿಯಿಂದ ಕಟ್ಟಿಕೊಂಡೇ ಈ ಎಲ್ಲ ಆಸೆಗಳನ್ನು ಈಡೇರಿಸಿಕೊಳ್ಳಬಲ್ಲವಳಾಗಿದ್ದಾಳೆ. ಕಣ್ಣು ಕಟ್ಟಿಕೊಂಡೇ ತುಂಬಿದ ರಾಜಮಾರ್ಗದಲ್ಲಿ ಸೈಕಲ್ ಓಡಿಸುತ್ತಾಳೆ, ಟೆಲಿವಿಜನ್‌ದೆದುರು ಕಣ್ಣುಕಟ್ಟಿಕೊಂಡು ಕುಳಿತೇ ಅದರಲ್ಲಿ ಬಿತ್ತರಿಸಲಾಗುವ ಕಾರ್ಯಕ್ರಮಗಳನ್ನೆಲ್ಲ ಯಥಾವತ್ತಾಗಿ ಬಣ್ಣಿಸುತ್ತಾಳೆ. ಒಮ್ಮೆಯಂತೂ ಆಕೆ ತನ್ನ ಶಾಲೆಯ ಪರವಾಗಿ, ಬಾಸ್ಕೆಟ್-ಬಾಲ್ ಪಂದ್ಯದಲ್ಲಿ, ಕಣ್ಣುಕಟ್ಟಿಕೊಂಡೇ ಭಾಗವಹಿಸಿ ತಮ್ಮ ತಂಡಕ್ಕೆ ಯಶಸ್ಸು ದೊರಕಿಸಿ ಕೊಟ್ಟಳು.

ಆಕೆಗೆ ಮೂಗಿನ ಮೇಲೊಂದು ಕಣ್ಣು ಇದೆ. ಆದ್ದರಿಂದ ಸ್ವಾಭಾವಿಕವಾಗಿರುವ ಎರಡೂ ಕಣ್ಣುಗಳನ್ನು ಪಟ್ಟಿಯಿಂದ ಕಟ್ಟಿಕೊಂಡರೂ ಈ ಮೂರನೇ ಕಣ್ಣಿನ ಸಹಾಯದಿಂದ ತನ್ನೆಲ್ಲ ವ್ಯವಹಾರಗಳನ್ನು ಸರಾಗವಾಗಿ ನಡೆಸಬಲ್ಲಳು. ಇವಳ ಮೂರನೆಯ ಕಣ್ಣಿನ ದೃಷ್ಟಿಯೂ ಇನ್ನುಳಿದ ಕಣ್ಣುಗಳಷ್ಟೇ ತೀಕ್ಷ್ಣವಿದೆ ಎಂಬುದನ್ನು ಡಾಕ್ಟರರು ಪರೀಕ್ಷಿಸಿ ಕಂಡುಕೊಂಡಿದ್ದಾರೆ.

ತಮ್ಮ ಚರ್ಮದಿಂದ ನೋಡಬಲ್ಲವರು ಇಡೀ ಪ್ರಪಂಚದಲ್ಲಿ ಕೇವಲ ಹತ್ತು ಜನ ಮಾತ್ರ ಇದ್ದಾರೆ. ಇವರೆಲ್ಲ ಮಹಿಳೆಯರೇ ಆಗಿದ್ದಾರೆ ಎಂಬುದೂ ಒಂದು ವಿಶೇಷ. ಇವರಲ್ಲಿ ಹೆಚ್ಚು ಮಹಿಳೆಯರಿಗೆ ದೃಷ್ಟಿ ಇರುವದು ಅವರ ಬೆರಳುಗಳಲ್ಲಿ. ಸಯುರಿ ತನಾಕಾಗೆ ಮಾತ್ರ ಮೂಗಿನ ಮೇಲೆ ಕಣ್ಣಿದೆ. ಈಕೆ ಒಬ್ಬಾಕೆ ಜಪಾನಿನಲ್ಲಿದ್ದಾಳೆ. ಉಳಿದವರು ರಶಿಯಾ, ಪೋಲಂಡ, ಅಲ್ಬೇನಿಯಾ ಅಮೇರಿಕೆಗಳಲ್ಲಿದ್ದಾರೆ. ಈಕೆಗೆ ಇರುವ ಈ ಮೂರನೇ ಕಣ್ಣನ್ನು ದೈವಿಕ ಶಕ್ತಿಯೆಂದು ಅಲ್ಲಿಯವರು ಭಾವಿಸಿಲ್ಲ.

—ಆಧಾರದಿಂದ

ವಿಚಿತ್ರಗಳ ಜೀವಂತ ಕೋಶನಾಗಿದ್ದನವನು

ಆಗಂತುಕನೊಬ್ಬ ಬಾಬ್ ರಿಪ್ಲೆಯನ್ನು ಕಾಣಬೇಕೆಂದು ನ್ಯೂಯಾರ್ಕ್ ಮಹಾ ನಗರದ ಅಥ್ಲೆಟಿಕ್ ಕ್ಲಬ್‌ನಲ್ಲಿ ವಿಚಾರಿಸತೊಡಗಿದ್ದ. ತಾನು ಕೆಲವು ಅಡಿಗಳ ದೂರದಲ್ಲಿಯೇ ಇದ್ದರೂ ಆ ವ್ಯಕ್ತಿ ವಿಚಾರಿಸುತ್ತಿದ್ದ ರೀತಿಯಿಂದಾಗಿ ರಿಪ್ಲೆಗೆ ಸಂಶಯ ಹುಟ್ಟಿತು. ಇದರಿಂದಾಗಿ ರಿಪ್ಲೆ ಪಕ್ಕದಲ್ಲಿದ್ದ ಬಾಗಿಲಿನಿಂದ ನುಸುಳಿಕೊಂಡು ಹೋಗಿದ್ದ. ಕೊಟ್ಟ ಮಾತನ್ನು ನಡೆಸಿಕೊಡದ ತಪ್ಪಿಗಾಗಿ ತನ್ನ ಮೇಲೆ ಕಾನೂನ ಬದ್ಧ ಕ್ರಮ ತೆಗೆದುಕೊಳ್ಳಬೇಕೆಂಬುವ ವಿಷಯವನ್ನು ತನಗೆ ತಿಳಿಸಲಿಕ್ಕೆ ಬಂದಿರಬೇಕೆಂದು ರಿಪ್ಲೆ ಭಾವಿಸಿದ್ದ.

ಆದರೆ ವಾಸ್ತವವಾಗಿ ಆ ವ್ಯಕ್ತಿ ಅಂಥ ಯಾವ ಉದ್ದೇಶವನ್ನೂ ಇಟ್ಟುಕೊಂಡು ಬಂದಿರಲಿಲ್ಲ. ಅದಕ್ಕೆ ಬದಲಾಗಿ ರಿಪ್ಲೆ ತನ್ನ ಜೀವಮಾನದಲ್ಲಿಯೇ ಕಾಣದಂಥ ಭವ್ಯ ಸ್ಥಾನದಲ್ಲಿ ಅವನನ್ನು ಪ್ರತಿಷ್ಠಿಸಲು ಬಂದವನಾಗಿದ್ದ. ರಿಪ್ಲೆಯು ಕೋಟ್ಯಧಿಪತಿಯಾಗುವಂಥ ಕಂಟ್ರಾಕ್ಟಿನ ಬಗ್ಗೆ ಅವನ ಸಂಗಡ ಒಪ್ಪಂದ ಮಾಡಿಕೊಳ್ಳಲು ಬಂದವನಾಗಿದ್ದ. ರಿಪ್ಲೆಯ ವ್ಯಂಗ್ಯ ಚಿತ್ರಗಳನ್ನು ಅಮೇರಿಕದಲ್ಲೆಲ್ಲ ಹಿಯರಿಸ್ಟ್ ಪತ್ರಿಕೆಯ ಮುಖಾಂತರ ಪ್ರಚಾರ ಮಾಡಬೇಕೆನ್ನುವ ಉದ್ದೇಶದಿಂದ ಬಂದವನಾಗಿದ್ದ.

ಪ್ರಖ್ಯಾತ ವ್ಯಂಗ್ಯಚಿತ್ರಕಾರನಾದ ರಿಪ್ಲೆಯ ವಾರ್ಷಿಕ ಆದಾಯ ೧೯೨೯ ರಲ್ಲಿ ಸುಮಾರು ೩೫೦೦ ಪೌಂಡುಗಳಷ್ಟಿತ್ತು. ಕೇವಲ ಒಂದೇ ಒಂದು ವರ್ಷದಲ್ಲಿ ೩೩ ಸಹಸ್ರ ಪೌಂಡುಗಳಿಗೇರಿತು. ಮೂವತ್ತನೇ ನಡುವಯಸ್ಸಿನಲ್ಲಿದ್ದಾಗ ೧೨೦,೦೦೦ ಪೌಂಡುಗಳನ್ನು ಮುಟ್ಟಿತು. ರೇಡಿಯೋದಲ್ಲಿ ಚಿತ್ರಗಳ ಪ್ರದರ್ಶನ, ಪತ್ರಿಕೆ ಇವು ಅವನಿಗೆ ಆದಾಯವನ್ನು ತರುತ್ತಿದ್ದ ಮುಖ್ಯ ಸಾಧನಗಳಾಗಿದ್ದವು.

ರಿಪ್ಲೆ ೨೮ ಕೋಣೆಗಳ ಭವ್ಯ ಬಂಗಲೆಯೊಂದನ್ನು ತನ್ನ ನಿವಾಸಕ್ಕಾಗಿ ಖರೀದಿ ಮಾಡಿದ್ದ. ಅಲ್ಲಿದ್ದ ಇವನ ಪ್ರೀತಿಯ ವಸ್ತುವೆಂದರೆ ಒಂದು ವಿಚಿತ್ರ ಜಾತಿಯ ಹಾವು ಮಾತ್ರ. ನ್ಯೂಯಾರ್ಕ್ ನಗರದಲ್ಲಿಯೂ ದೊಡ್ಡದೊಂದು ಮನೆಯನ್ನು ಖರೀದಿಸಿದ. ಪಾಮ್ ಬೀಚ್‌ನಲ್ಲಿ ಅರಮನೆಗೆ ಹೋಲಿಕೆಯಾಗಬಲ್ಲ ಭವ್ಯ ಬಂಗಲೆಯನ್ನು ಸಹ ಕೊಂಡಿದ್ದ. ಅರಮನೆಯ ಸದೃಶವಾದ ಈ

ಕೆ. ಬಿ. ಭಟ್ಟ

ಕಟ್ಟಡಗಳು ರಿಪ್ಲೆಯ ಜನಾನಾಗಳಾಗಿದ್ದವು. ಚೀನ, ಜಪಾನ್, ರಶಿಯಾ, ಫ್ರಾನ್ಸ್, ಗ್ರೀಸ್, ಜರ್ಮನಿ, ಅಲ್ಲದೆ ವಿಶ್ವದ ಬೇರೆ ಬೇರೆ ಭಾಗಗಳಿಂದ ಕರೆದು ತಂದ ಸ್ತ್ರೀಯರಿಗೆ ಈ ಜನಾನಾಗಳೇ ವಾಸಸ್ಥಾನವಾಗಿದ್ದವು.

ರಿಪ್ಲೆ ವಿಶ್ವಪರ್ಯಟನವನ್ನು ಕೂಡ ಮುಗಿಸಿ ಆಧುನಿಕ ಯುಗದ ಮಾರ್ಕೊಪೋಲೋ ಎಂದು ಕರೆಯಿಸಿಕೊಂಡ. ಅಮೇರಿಕೆಯ ಸುತ್ತಲಿರುವ ಸಮುದ್ರಗಳ ಮೇಲೆ ಯಾನ ಮಾಡಬೇಕೆಂಬ ಹಂಬಲದಿಂದ ಸಮುದ್ರದಲ್ಲಿ ಹೆಚ್ಚು ಓಡಬೇಕೆಂಬ ಉದ್ದೇಶದಿಂದಾಗಿಯೇ ಜೊತೆ ಡೀಜೆಲ್ ಇಂಜಿನ್ನುಗಳನ್ನು ಜೋಡಿಸಿದ ಚೀನಿಯರ ನಾವೆಯೊಂದನ್ನು ತನ್ನ ಸ್ವಂತಕ್ಕೆ ಖರೀದಿ ಮಾಡಿದ.

ರಿಪ್ಲೆ, ವಂತ್ರವನ "ನಂಬಿದರೆ ನಂಬಿ ಬಿಟ್ಟರೆ ಬಿಡಿ" ಎಂಬ ಪುಸ್ತಕಮಾಲೆ, ಹದಿನೆಂಟು ಭಾಷೆಗಳಲ್ಲಿ ಪ್ರಕಟವಾಯಿತಲ್ಲದೆ ೩೦ ದೇಶಗಳಲ್ಲಿ ಪರಿಚಿತವಾಗಿದ್ದಿತು. ಅಮೇರಿಕೆಯಲ್ಲಿ ಓದುಗರ ಅಂಕಿ ಸಂಖ್ಯೆಗಳನ್ನು ಕಲೆ ಹಾಕಿದಾಗ ರಿಪ್ಲೆಯ ಪತ್ರಿಕೆ ಓದುಗರ ಅಭಿರುಚಿಯನ್ನು ಪೂರ್ಣಗೊಳಿಸಬಲ್ಲದೆಂದು ತೀರ್ಮಾನಿಸಲಾಯಿತು. ಇದಕ್ಕೆ ಅಪವಾದವಾಗಿದ್ದುದೆಂದರೆ ಅದರ ಮುಖ ಪುಟಮಾತ್ರ. ರಿಪ್ಲೆಯ ಸುದ್ದಿ ಪತ್ರಿಕೆಯನ್ನು ಓದುವವರ ಸಂಖ್ಯೆ ಏಳೂವರೆ ಕೋಟಿಗೆ ಮಿಕ್ಕಿದ್ದಿತು. ವರ್ಷಂಪ್ರತಿ ಸರಾಸರಿಯಾಗಿ ೧೦ ಲಕ್ಷ ಪತ್ರಗಳು ರಿಪ್ಲೆಯ ವಿಳಾಸಕ್ಕೆ ಬರುತ್ತಿದ್ದವು.

ರಿಪ್ಲೆ ಮೊದಮೊದಲು ತನ್ನ ವ್ಯಂಗ್ಯ ಚಿತ್ರಗಳಲ್ಲಿ, ಯಾವುದಾದರೊಂದು ಜನರಿಗೆ ಹೊಸದಾದ ಕ್ರೀಡೆ, ಅಪರಿಚಿತವಾದ ದಾಖಲೆಗಳನ್ನು ಬಳಸುತ್ತಿದ್ದ.

೧೮೯೩ ರಲ್ಲಿ ನ್ಯೂ ಆರ್ಲಿಯನಿನ ಒಲಂಪಿಕ್ ಕ್ಲಬ್‌ನಲ್ಲಿ ಆ್ಯಂಡಿ ಬೊವೆಸ್ ಮತ್ತು ಜಾಕ್ ಬರ್ಕ್ ೧೧೦ ಸುತ್ತಿನ ಮುಷ್ಟಿ ಪಂದ್ಯವನ್ನಾಡಿದರೂ ಅದು ಅಂತ್ಯವಾಗಲಿಲ್ಲ. ಕೊನೆಗೆ ರೆಫರಿ ಆಟವನ್ನೇ ನಿಲ್ಲಿಸಿ ಸ್ಪರ್ಧೆಯಿಲ್ಲವೆಂದು ಸಾರಬೇಕಾಯಿತು. ಇಂತಹ ಸುದ್ದಿಗಳನ್ನೇ ರಿಪ್ಲೆ ಉಪಯೋಗಿಸುತ್ತಿದ್ದ.

ದಿವಸಗಳು, ವರ್ಷಗಳು ಕಳೆದಂತೆ ರಿಪ್ಲೆ ಸಾಮಾನ್ಯವಾಗಿ ಜನರು ಸತ್ಯವೆಂದು ತಿಳಿದ ವಿಷಯದ ಬಗ್ಗೆ ಅಪನಂಬಿಕೆ ಉಂಟಾಗುವಂತೆ ಚಿತ್ರಿಸ ಹೊರಟ. ಜನರ ಕುತೂಹಲವನ್ನು ಕೆರಳಿಸಬೇಕೆಂಬುದೇ ಅವನ ಉದ್ದೇಶ.

ತನ್ನದೂ ಸಹ ಇದೇ ಅಭಿಪ್ರಾಯವಾಗಿತ್ತೆಂದು ಓದುಗ ಭಾವಿಸಿದಾಗ ರಿಪ್ಲೆಗಾಗುತ್ತಿದ್ದ ಆನಂದಕ್ಕೆ ಮಿತಿಯಿರುತ್ತಿರಲಿಲ್ಲ. ಇವನನ್ನು ಸುಳ್ಳು ಹೇಳುವವನೆಂದು ಕರೆದು ತೃಪ್ತಿಪಟ್ಟುಕೊಂಡಂತೆ ಜನರು ಮತ್ತಾರನ್ನೂ ಸುಳ್ಳನೆಂದು ಕರೆದಿರಲಾರರು.

ರಿಪ್ಲೆಯ ಜೀವನ ಕೌತುಕವನ್ನು ಕೆರಳಿಸುವಂಥ ಅನೇಕ ಘಟನೆಗಳಿಂದ ಕೂಡಿದೆ. ತನ್ನ ಜೀವನದ ಸಾರ್ಥಕ್ಯವನ್ನು ರಿಪ್ಲೆ ವ್ಯಂಗ್ಯ ಚಿತ್ರಗಳ ಮುಖಾಂತರ ಸಾಧಿಸಿದ್ದ.

೧೯೨೭ ರಲ್ಲಿ ಚಾರ್ಲಸ್ ಲಿಂಡ್‌ಬರ್ಗ್ ನ್ಯೂಯಾರ್ಕಿನಿಂದ ಪ್ಯಾರಿಸ್‌ಗೆ ಏಕಾಕಿಯಾಗಿ ಉಡ್ಡಾಣ ಮಾಡಿದ. ಅಷ್ಟು ದೂರವನ್ನು ಉಡ್ಡಾಣ ಕಾಲದಲ್ಲಿ ಎಲ್ಲಿಯೂ ಇಳಿಯದೇ ಕ್ರಮಿಸಿದ್ದನು. ಈ ರೀತಿಯಲ್ಲಿ ಪ್ರಯಾಣ ಬೆಳೆಸಿದವರಲ್ಲಿ ಇವನೇ ಮೊಟ್ಟ ಮೊದಲಿಗನಾಗಿದ್ದುದರಿಂದ ಜಗತ್ತಿನ ದೃಷ್ಟಿ ಅವನೆಡೆಗೆ ಆಕರ್ಷಿಸಲ್ಪಟ್ಟಿತು. ಆದರೆ ರಿಪ್ಲೆ ಅಟ್ಲಾಂಟಿಕ್ ಮಹಾಸಾಗರದ ಮೇಲೆ ಹಾರಾಡುತ್ತಿರುವ ಮೋನೋಪ್ಲೇನ್ ಚಿತ್ರವೊಂದನ್ನು ರಚಿಸಿ "ಎಲ್ಲಿಯೂ ಇಳಿಯದೆ ಅಟ್ಲಾಂಟಿಕ್ ಮಹಾಸಾಗರವನ್ನು ಲಂಘಿಸಿದವರಲ್ಲಿ ಲಿಂಡ್-ಬರ್ಗ್ ೬೭ ನೇಯವನು" ಎಂಬ ಶಿರೋನಾಮೆಯಿತ್ತ. ಇದನ್ನೋದಿದವರಿಂದ ಒಂದು ಲಕ್ಷ ಎಪ್ಪತ್ತು ಸಾವಿರ ಪ್ರತಿಭಟನಾ ಪತ್ರಗಳು ಬಂದವು. ರಿಪ್ಲೆ ಅಂಜಲಿಲ್ಲ. ಎಲ್ಲೂ ಇಳಿಯದೇ ಲಂಘಿಸಿದವನೆಂದರೆ ಲಿಂಡ್‌ಬರ್ಗ್ ಮಾತ್ರವಲ್ಲ. ಆದರೆ ಲಿಂಡ್‌ಬರ್ಗ್ ಅಟ್ಲಾಂಟಿಕ್ ಮಹಾಸಾಗರವನ್ನು ಲಂಘಿಸಿದವನೆಂಬುದರ ಬಗ್ಗೆ ತನ್ನ ತಕರಾರು ಇಲ್ಲವೆಂಬ ವಿವರಣೆಯನ್ನು ರಿಪ್ಲೆ ಕೊಟ್ಟ.

ತನ್ನ ಉತ್ತರಕ್ಕೆ ಸಾಕ್ಷಿಯಾಗಿ ೧೯೧೯ ರಲ್ಲಿ ಅಟ್ಲಾಂಟಿಕ್ ಮಹಾಸಾಗರವನ್ನು ಎಲ್ಲೂ ಇಳಿಯದ ಉಡ್ಡಾಣ ಮಾಡಿದ ಸರ್ ಜಾನ್ ಆಲ್‌ಕಾಕ್ ಮತ್ತು ಸರ್ ಆರ್ಥರ್ ವ್ಹಿಟನ್ ಬ್ರೌನ್‌ರ ಉದಾಹರಣೆಯನ್ನು ಕೊಟ್ಟಿದ್ದ. ಅವರು ತಮ್ಮ R ೩೪ ಎಂಬ ವಾಯುನೌಕೆಯಲ್ಲಿ ಮೂವತ್ತೊಂದು ಜನರೊಂದಿಗೆ ಸ್ಕಾಟ್ಲೆಂಡಿನಿಂದ ಅಮೇರಿಕಾಕ್ಕೆ ಪ್ರಯಾಣ ಬೆಳಸಿ ಮತ್ತೆ ಹಿಂತಿರುಗಿ ಬಂದಿದ್ದರು. ೧೯೨೪ ರಲ್ಲಿ ಜರ್ಮನಿಯ ಜಪ್ಪಲಿನ್ ಎಂಬ ವಾಯುನೌಕೆ ೩೩ ಜನರನ್ನು ಹೊತ್ತುಕೊಂಡು ಜರ್ಮನಿಯಿಂದ ಅಮೇರಿಕಾಕ್ಕೆ ಪ್ರಯಾಣ ಬೆಳಸಿದ್ದ ವಿಷಯವನ್ನು ಸಹ ಉದಾಹರಿಸಿದ.

ಬೇಟೆಯನ್ನೆ ತನ್ನ ಮುಖ್ಯ ಕಸುಬನ್ನಾಗಿ ಮಾಡಿಕೊಂಡ ವಿಲಿಯಂ ಕೋಡಿಯನ್ನು ಅಮೇರಿಕೆಯ ಲಕ್ಷಗಟ್ಟಲೆ ಜನರು 'ಬಫಲೋ

ಬಿಲ್' ಎಂದು ಗೌರವಿಸುತ್ತಿದ್ದರು. ರಿಪ್ಲೆ ಇವನ ವ್ಯಂಗ್ಯಚಿತ್ರವನ್ನು ಬರೆದು "ಬಫಲೋ ಬಿಲ್ ತನ್ನ ಜೀವಮಾನದಲ್ಲಿ ಒಂದಾದರೂ ಬಫಲೋವನ್ನು ಗುಂಡಿಕ್ಕಿ ಕೊಲ್ಲಲಿಲ್ಲ" ಎಂಬ ತಲೆಬರಹವನ್ನಿತ್ತನು. ಇದನ್ನು ಸಂಪ್ರದಾಯ ವಾದಿಗಳು ಓದಿ ಕೆರಳಿದರು; ಪ್ರತಿಭಟಿಸಿದರು. ಪ್ರತಿಭಟನೆಗೆ ರಿಪ್ಲೆ ಕೊಟ್ಟ ಉತ್ತರವೆಂದರೆ, "ಕೋಡೆ ಗುಂಡಿಕ್ಕಿದ್ದ ಕೋಣವೇ ಹೊರತು ಎಮ್ಮೆಯಲ್ಲ," ಎಂದು.

ರಿಪ್ಲೆ ಕೆಲವು ಸಮಯ ಮಂಗ್ಗರಿಸಬೇಕಾಯಿತು ಕೂಡ. ಆತ ಪೂರ್ಣ ಗಾತ್ರದ ಚಿತ್ರವನ್ನು ಸೃಷ್ಟಿಸಿ ಸವಾಲನ್ನು ಹಾಕುತ್ತಿದ್ದ, ವಿವರಣೆ ಕೊಡುತ್ತಿದ್ದ. ಒಮ್ಮೆ ವಾಟರ್‌ಲೂ ಕೇವಲ ಬೆಲಿಯಂನ ಗ್ರಾಮವೊಂದಕ್ಕೆ ಸೀಮಿತವಾಗಿರದೆ ಅದನ್ನು ಸುತ್ತುವರಿದ ಪ್ರದೇಶವೆಂದು ಕಾಣಿಸಿದ್ದನು. ತಾನು ಚಿತ್ರದಲ್ಲಿ ಕಾಣಿಸಿದಂತೆಯೇ ನೆಪೋಲಿಯನ್ ಓಂದೆಗೆದಿದ್ದನು ಎಂದು ಹೇಳಿದ. "ವಾಟರ್‌ಲೂ ಕದನ ಕೇವಲ ವಾಟರ್‌ಲೂನಲ್ಲಿ ಮಾತ್ರ ನಡೆಯಲಿಲ್ಲ"ವೆಂದು ಅದಕ್ಕೆ ಶಿರೋನಾಮೆಯನ್ನಿತ್ತ.

ಒಮ್ಮೆ ರಿಪ್ಲೆ ಸಿಗರೇಟ್ ಪೇಪರಿನ ಕಿಂಡಿಯೊಳಗೆ ಸಾಮಾನ್ಯ ವಯಸ್ಕನೊಬ್ಬನು ನುಸುಳಿಕೊಂಡು ಹೋಗಬಹುದೆಂದು ಹೇಳಿದ. ಸರಿ, ಸಾವಿರಾರು ಪತ್ರಗಳು ಇದನ್ನು ಪ್ರಶ್ನಿಸಿದವು. ಸ್ಪೇಯಿನಿನ ಮಾಜಿ ದೊರೆ ಆಲ್ಫೆ ಸ್ಸೊಜಿನ ಮಗಳು ಇನ್‌ಫಾಂಟ ಬೆಟ್ರಿಜ್ ಹೀಗೆ ಪತ್ರಬರೆದವರಲ್ಲಿ ಒಬ್ಬಳಾಗಿದ್ದಳು.

ರಿಪ್ಲೆ ಉತ್ತರವಿತ್ತ. ಸಿಗರೇಟ್ ಪೇಪರನ್ನು ಬಹಳ ಹುಷಾರಾಗಿ ೮೫ ತುಂಡುಗಳಲ್ಲಿ ಕತ್ತರಿಸಿ ಜೋಡಿಸಿದಲ್ಲಿ ಒಬ್ಬ ವ್ಯಕ್ತಿ ನುಸುಳಿಕೊಂಡು ಹೋಗಲು ಸಾಧ್ಯವೆಂದು ತೋರಿಸುವ ಚಿತ್ರವನ್ನು ಪ್ರಕಟಿಸಿದ. ನುರಿತ ಕೊರೆಯುವ ಕೆಲಸಗಾರನ ಕೈಚಳಕ ಮತ್ತು ತಾಳ್ಮೆ ಬೇಕಾಗಿದ್ದಿತಷ್ಟೆ.

ರಿಪ್ಲೆ ತನ್ನ ಜೀವನ ಕಾಲದಲ್ಲಿ ಹೆಚ್ಚು ಪ್ರವಾಸವನ್ನೂ ಸಹ ಕೈಗೊಂಡಿದ್ದ. ಅವನ ಪ್ರವಾಸವು ಸಹ ಹೆಚ್ಚು ಕುತೂಹಲ ಕೆರಳಿಸುವಂಥ ವ್ಯಂಗ್ಯಚಿತ್ರಗಳನ್ನು ಹೊರಗೆಡವಿತು. ಅವುಗಳಲ್ಲಿ ಒಂದು ಟರ್ಕಿಗೆ ಸಂಬಂಧಿಸಿದ್ದು. "ಟರ್ಕಿಯ ಗಂಡಸರೆಲ್ಲರೂ ಕೆಂಪು ಫೆಜ್ ಟೋಪಿಯನ್ನು ಧರಿಸುತ್ತಾರೆ. ಅದನ್ನವರು ಎಂದೂ ಕೆಳಗಿಡುವುದಿಲ್ಲ. ಸೈನಿಕರು ತಾವು ಎಂದೂ ತೆಗೆದಿಡದಂಥ ದೊಡ್ಡದಾದ ಕತ್ತಿಯನ್ನು ಹೊತ್ತಿರುತ್ತಾರೆ... ಯುದ್ಧದಲ್ಲಿ ಸತ್ತವರಿಗಿಂತಲೂ ಕಾಫಿ ಹಾಸಿನಲ್ಲಿ ಕುಳಿತುಕೊಳ್ಳುವಾಗ ಚೂರಿ ಇರಿತಕ್ಕೆ ಬಲಿಯಾಗಿ ಸತ್ತವರೇ, ಹೆಚ್ಚು" ಎಂಬುದಾಗಿ ಬರೆದಿದ್ದ.

ಇನ್ನೊಂದು ವ್ಯಂಗ್ಯಚಿತ್ರವನ್ನು ಬರೆದು "ರೋಮ್ ಪ್ರಪಂಚದಲ್ಲಿಯೇ ಶ್ರೇಷ್ಠವಾದ ಲಲಿತಕಲಾ ಪ್ರದರ್ಶನವನ್ನು ಹೊಂದಿದೆ" ಎಂಬ ತಲೆಬರಹ ಕೊಟ್ಟ. ವಾಸವವಾಗಿ ಅದು ಕಾಮೋದ್ರೇಕಗೊಳಿಸುವ ಚಿತ್ರಗಳಿಂದ ಕೂಡಿರುವುದಲ್ಲದೆ ನೋಡಲು ವಿಶೇಷ ಪರವಾನಿಗೆ ಬೇಕಾಗುತ್ತದೆ.

ವಿವಾಹ ಮಾಡಿಕೊಳ್ಳುವೆವೆಂಬ ಹೆಂಗಸರಿಗೆ ಅವನೊಂದು ಸಮಸ್ಯೆಯೇ ಆಗಿದ್ದ. ವಿವಾಹವೆಂದರೆ ಪ್ಲೇಗು ಜಾಡ್ಯವೆಂದು ಬಗೆದಿದ್ದ. ಆದರೆ ಓರ್ವ ಗಾಯಕಿಯೊಡನೆ ಮಾತ್ರ ನಿಕಟವಾದ ಸಂಪರ್ಕವನ್ನು ಇಟ್ಟುಕೊಂಡಿದ್ದ. ಅದು ಅವಳ ಸಾಮರ್ಥ್ಯವನ್ನು ತೋರಿಸುವುದಾಗಿದ್ದಿತು. ಒಮ್ಮೆ ಅವಳು ರಿಪ್ಲೆಯನ್ನು ಕಾಣಲು ಕ್ಲಬ್ಬಿಗೆ ಬಂದಿದ್ದಳು. ರಿಪ್ಲೆ ರೂಮಿನಿಂದ ಹೊರಗೆ ಬರಲೇ ಇಲ್ಲ; ಲಾಬಿಯ ನೆಲದ ಮೇಲೆ ಕುಳಿತುಕೊಂಡು ಅವನು ತನಗೆ ೫೦೦ ಡಾಲರುಗಳನ್ನು ಕೊಡದ ಹೊರತು ಹೋಗವುದಿಲ್ಲವೆಂದು ಕೂಗಾಡಿದಳು. ರಿಪ್ಲೆ ತೆಪ್ಪಗೆ ಹಣ ಕೊಟ್ಟು ಕಳುಹಿಸಿದ.

ಮತ್ತೊಬ್ಬ ತಾಗೆ ತಾನು ಜೀವ ಕಳೆದುಕೊಳ್ಳುವೆನೆಂಬ ಬೆದರಿಕೆಯನ್ನು ಹಾಕಿ ರಿಪ್ಲೆಯನ್ನು ಒಲಿಸಿಕೊಳ್ಳುವ ಪ್ರಯತ್ನ ಮಾಡಿದಳು. ಒಮ್ಮೆ ರಿಪ್ಲೆ ಸ್ನೇಹಿತರೊಂದಿಗೆ ರೂಮಿನಲ್ಲಿ ಕುಳಿತಿದ್ದ. ಇವಳು ಒಂದು

ಬಾಟ್ಲಿ ಆಸ್ಪಿರಿನನ್ನು ಪೂರ್ತಿಯಾಗಿ ನುಂಗಿರುವೆನೆಂದು ಹೇಳುತ್ತಾ ಒಳಗೆ ನುಗ್ಗಿದಳು. ಬಾಲ್ಕನಿಯಿಂದ ಹಾರಿದಳು. ಚಾಕುವಿನಿಂದ ಹೊಟ್ಟೆಯಲ್ಲಿರಿದುಕೊಂಡಳು. ಅವಳ ಪ್ರಸಂಗಾವಧಾನದ ಮಾರ್ಗವನ್ನು ಅರಿತ ಅವರು ಮನಸ್ಸಿಗೆ ಹಚ್ಚಿಕೊಳ್ಳಲೇ ಇಲ್ಲ. ರಿಪ್ಲೆ ಅವಳನ್ನು ಮತ್ತೆಂದೂ ಕರೆಯಲೇ ಇಲ್ಲ.

ಕಾಡಿಟ್ಟುಕೊಂಡ ಹೆಂಗಸರೊಡನೆ ರಿಪ್ಲೆ ಇಟ್ಟುಕೊಂಡ ಸಂಪರ್ಕ ಅನೇಕ ಕ್ಲಿಷ್ಟ ಸಮಸ್ಯೆಗಳಿಂದ ಅವನನ್ನು ಬಿಡಿಸುವವಾಗಿದ್ದವು. ಇದರಿಂದಾಗಿ ತನ್ನ ಖಾಸಗಿ ಸ್ನಾನದ ಸ್ಥಳಕ್ಕೆ ಅವರನ್ನು ಆಹ್ವಾನಿಸುವುದರಿಂದ ಯಾವ ಆತಂಕವಿರಲಾರದೆಂದು ಅವನ ಕಲ್ಪನೆಯಾಗಿದ್ದಿತು.

ಕ್ರಿಸ್‌ಮಸ್ ಹಬ್ಬದ ಸಲುವಾಗಿ ಭೋಜನ ಕೂಟದ ಏರ್ಪಾಟು ಒಮ್ಮೆ ಮಾಡಿದ್ದ. ಪರಸ್ಪರ ದ್ವೇಷದಿಂದ ಕೂಡಿದ ಇಬ್ಬರು ತಾರೆಯರು ಇವನ ಮನಸ್ಸನ್ನು ತಮ್ಮ ಕಡೆಗೆ ಆಕರ್ಷಿಸಬೇಕೆಂದು ಪ್ರಯತ್ನಿಸಿದರು. ದ್ವೇಷವು ಕೈಮೀರಿಹೋಗಿ ಭೋಜನ ಕೂಟವನ್ನೇ ಹಾಳುಮಾಡಿತು. ಒಬ್ಬಳಂತೂ ಯಾವುದೋ ಒಂದು ಪದಾರ್ಥವನ್ನು ಚೆಂಡಿನಂತೆ ಮತ್ತೆ ಒಬ್ಬಳ ಮೇಲೆಸೆದಳು.

ರಿಪ್ಲೆಯ ರೇಡಿಯೋ ಪ್ರದರ್ಶನವು ಸ್ವಾರಸ್ಯಕರವಾದ ಘಟನೆಗಳಿಂದ ಕೂಡಿದೆ. ರಿಪ್ಲೆ ಒಂದು ಪ್ರದರ್ಶನವನ್ನು ಏರ್ಪಡಿಸಿದ್ದನು. ಆ ಮೂವತ್ತು ನಿಮಿಷಗಳ ಕಾರ್ಯಕ್ರಮದಲ್ಲಿ "ನಂಬಿದರೆ ನಂಬಿ ಇಲ್ಲವಾದರೆ ಬೇಡ" ಎಂಬುದನ್ನು ಪ್ರದರ್ಶಿಸಬೇಕಾಗಿದ್ದಿತು. ಅಂತ್ಯದಲ್ಲಿ ಗುಡ್‌ನೈಟ್ ಎಂದಿಷ್ಟೆ ಹೇಳುವುದಿದ್ದಿತು. ಆದರೆ ಪ್ರದರ್ಶನದ ಮೊದಲನೆ ರಾತ್ರಿಯೇ ಅಶುಭ ಘಟನೆಯೊಂದು ನಡೆಯಿತು, ರಿಪ್ಲಿ ತೊದಲಹತ್ತಿದ. ಹಲ್ಲು ಕಡಿಯಹತ್ತಿದ,

ಓದುವದಕ್ಕೆ ಬರೆದಿಟ್ಟುಕೊಂಡಿದ್ದು ಕೆಳಕ್ಕೆ ಬಿತ್ತು. ಅದನ್ನು ಎತ್ತಿಕೊಳ್ಳಲು ಹೋದವನೆ ಮೈಕನ್ನು ಎದುರು ಕುಳಿತವರ [illegible] ಡವಿದ.

ಸಾರ್ವಜನಿಕರಿಗೆ ಇದೊಂದು ಮೋಜಾಗಿದ್ದಿತು. ಪ್ರದರ್ಶನವನ್ನು ಮೆಚ್ಚಿದ್ದರು. ಅವನ ರೇಡಿಯೋ ಕೇಂದ್ರ, ತಮ್ಮ ಕತೆಗಳನ್ನು ಮಾರಲು ಹಾತೊರೆಯುತ್ತಿದ್ದ ಲೇಖಕರು ಸೇರುವ ಸ್ಥಳವಾಯಿತು. ಆದರೂ ಕಾಣಲಿಕ್ಕೆ ಬಂದವರೆಲ್ಲರನ್ನೂ ರಿಪ್ಲೆ ಮಾತನಾಡಿಸುತ್ತಿದ್ದ. ಅವರು ಹೇಳಿದ್ದನ್ನು ಕೇಳುತ್ತಿದ್ದ.

ಒಂದು ದಿನ ಒಳ್ಳೆಯ ಉಡುಪನ್ನು ಧರಿಸಿದ್ದ ನಡುವಯಸ್ಸಿನ ವ್ಯಕ್ತಿಯೊಬ್ಬ ರಿಪ್ಲೆಯಲ್ಲಿಗೆ ಬಂದಿದ್ದ. "ರಿಪ್ಲೆ, ನೀನು ಕೇಳಿರಬಹುದು; ಮರಣದಂಡನೆಗೆ ಗುರಿಯಾದ ಕೈದಿಗಳು, ತಮಗೆ ಮರಣದಂಡನೆಯನ್ನು ವಿಧಿಸಿದ ಮೇಲೆ ತಮ್ಮ ಶವವನ್ನು ವೈಜ್ಞಾನಿಕ ಶಾಲೆಗಳಿಗೆ ಕೊಡಬೇಕೆಂಬ ಒಪ್ಪಂದ ಮಾಡಿಕೊಂಡಿರುತ್ತಾರೆ. ಶವಕ್ಕೆ ಕೊಡುವ ಹಣ ಅವರ ಕುಟುಂಬದವರಿಗೆ ಸೇರುತ್ತದೆ," ಎಂದು ಆ ವ್ಯಕ್ತಿ ಹೇಳಿದ.

ರಿಪ್ಲೆ ಗೋಣು ಹಾಕಿದ. "ನನ್ನ ಕುಟುಂಬವೂ ಸಹ ಐದು ಸಹಸ್ರ ರೂಪಾಯಿಗಳನ್ನು ಪಡೆಯುತ್ತದೆ ಎಂಬ ಭರವಸೆಯನ್ನು ನೀನು ಇತ್ತರೆ, ನೀನು ಯಾವಾಗ ಸಾಯುವುದಕ್ಕೆ ಹೇಳುತ್ತೀಯೋ ಆಗ ಅಂತರಿಕ್ಷದಲ್ಲಿ ಸಾಯಲಿಕ್ಕೆ ಸಿದ್ಧ", ಎಂದು ನುಡಿದ ಆ ವ್ಯಕ್ತಿ.

ರಿಪ್ಲೆಗೆ ಏನೂ ಹೊಳೆಯದಾಯಿತು. ಆ ವ್ಯಕ್ತಿ ಮುಂದುವರಿದು ನುಡಿದ, "ನಿನ್ನ ಮೂಲ ಪ್ರತಿಯಲ್ಲಿ ಗುಂಡು ಹಾಕಿಕೊಳ್ಳಬೇಕು, ನೇಣು ಹಾಕಿಕೊಳ್ಳಬೇಕು ಅಥವಾ ವಿಷ ಕುಡಿಯಬೇಕು ಎಂದಿದ್ದರೂ ನಾನು ಲೆಕ್ಕಿಸುವುದಿಲ್ಲ. ಇಂಥದನ್ನು ಮಾಡಬೇಕೆಂದು ನೀನು ಹೇಳಿದರೆ ಸಾಕು ನಾನು ಮಾಡಲಿಕ್ಕೆ ತಯಾರ್," ಎಂದನು.

ಆ ವ್ಯಕ್ತಿಯ ಪರಿಸ್ಥಿತಿ ಚೆನ್ನಾಗಿಲ್ಲವೆಂದು ರಿಪ್ಲೆಗೆ ತೋರಿತು; ನಿರ್ಧಾರ ಬದಲಿಸುವಂತೆ ಮನವೊಲಿಸಲು ಪ್ರಯತ್ನಿಸಿದ. ಅಷ್ಟು ಸುಲಭದಲ್ಲಿ ಕಿವಿಗೊಡದವನಾಗಿದ್ದನವನು. ಆ ಪ್ರದರ್ಶನ ಯಾಕೆ ಸಾಧ್ಯವಾಗಲಾರದೆಂಬುದು ರಿಪ್ಲೆಗೂ ಹೊಳೆಯಹತ್ತಿತು.

"ಅದು ಮೂಲ ಪ್ರತಿಯಲ್ಲಿಲ್ಲವೆಂದು ನಾನು

ಹೇಳುತ್ತಿಲ್ಲ. ಅದನ್ನು ಕಾರ್ಯರೂಪದಲ್ಲಿ ತರಲಿಕ್ಕೆ ಸಾಧ್ಯವೆ ಎಂಬ ಶಂಕೆ ಅಷ್ಟೆ?" ಎಂದು ನುಡಿದ ರಿಪ್ಲೆ.

"ಮೊದಲನೆ ಪ್ರದರ್ಶನ ೮ ಗಂಟೆಗೆ ನಡೆಯುತ್ತದೆ. ನಾಲ್ಕು ತಾಸಿನ ನಂತರ ಪೆಸಿಫಿಕ್ ತೀರಪ್ರದೇಶಕ್ಕೆ ಹೋಗಬೇಕು. ಮೊದಲನೆ ಪ್ರದರ್ಶನದಲ್ಲಿಯೇ ನೀನು ಜೀವವನ್ನು ಕಳೆದುಕೊಂಡರೆ ಮರುಪ್ರಸಾರ ಮಾಡುವುದು ಹೇಗೆ?" ಎಂದು ಪ್ರಶ್ನಿಸಿದ.

ಇದ್ದಕ್ಕಿದ್ದಂತೆ ಆ ವ್ಯಕ್ತಿ ಕುಳಿತಲ್ಲಿಂದ ಎದ್ದು ನೆಟ್ಟಗೆ ಹೊರಟೇಬಿಟ್ಟ.

ರಿಪ್ಲೆ ತನ್ನ ಪ್ರಚಾರವನ್ನು ತಾನೇ ಮಾಡಿಕೊಳ್ಳುತ್ತಿದ್ದ. ಪ್ರವಾಸ ಮುಖ್ಯವಾದುದಾಗಿದ್ದಿತು. ಪೃಥ್ವಿಯ ಮೇಲೆ ಎಷ್ಟು ದೇಶಗಳಿವೆಯೋ ಅದಕ್ಕಿಂತ ಹೆಚ್ಚು ದೇಶಗಳನ್ನು ತಾನು ನೋಡಿರುವುದಾಗಿಯೂ ಪ್ರತಿಯೊಂದು ದೇಶದ ಹೆಂಗಸಿನೊಡನೆ ತಾನು ಪ್ರೇಮ ಸಂಬಂಧವನ್ನು ಹೊಂದಿರುವುದಾಗಿಯೂ ರಿಪ್ಲೆ ಹೇಳುತ್ತಿದ್ದ.

ರಿಪ್ಲೆ ತನ್ನ ನಲ್ವತ್ತನೇ ವಯಸ್ಸಿಗೆ ಬರುತ್ತಲೆ ಅವನಲ್ಲಿ ಜಡತ್ವ ತಲೆದೋರಿತು. ಅದು ಅವನ ರೂಪದ ಮೇಲೂ ಪ್ರಭಾವವನ್ನು ಬೀರದಿರಲಿಲ್ಲ. ತಲೆಯ ಕೂದಲು ಉದರ ಹತ್ತಿತು. ಕೆಲವೇ ಕೂದಲಿದ್ದರೂ ಅದನ್ನು ನೀಳವಾಗಿ ಬೆಳೆಸಿದ. ಬೇರೆಯವರಿಗೆ ಕಾಣದಿರಲೆಂದು ಆರವ್ಸ್ ಪಿಟ್‌ಗೆ ಹೋಗಿ ಬಾಚಿಕೊಳ್ಳುತ್ತಿದ್ದ.

ಚರ್ಮ ಸುಕ್ಕು ಬಿದ್ದಿತು. ಆರೋಗ್ಯ ಕೆಟ್ಟಿತು. ತನ್ನ ದೇಹದ ಸ್ವಚ್ಛತೆಯ ಬಗ್ಗೆ ಗಮನ ಕೊಡುತ್ತಿರಲಿಲ್ಲ. ತಾಳ್ಮೆ ಕೆಡುತ್ತಿತ್ತು. ಅವನಲ್ಲಿ ಕೆಲಸಕ್ಕಿದ್ದವರು ನಿಷ್ಠೆಯಿಂದಲೂ, ನಮ್ರರಾಗಿದ್ದರು. ಆದರೂ ರಿಪ್ಲೆ ಅವರ ಬಗ್ಗೆ ಸಂಶಯಗ್ರಸ್ಥನಾಗಿದ್ದ. ತನ್ನ ಮನಸ್ಸಿಗೆ ಬಂದಂತೆ ವರ್ತಿಸ ಹತ್ತಿದ. ಒಂದು ಸಲ ಅವನ ಸ್ನೇಹಿತರೊಡನಿರುವಾಗ' ಪಕ್ಕದ ಕೋಣೆಯಲ್ಲಿದ್ದ ಅವರನ್ನು ತನ್ನ ರೂಮಿಗೆ ಬರಬೇಕೆಂದು ಹೇಳಿದ. ಅವರು ಬಂದಾಗ "ನೀವು ನನಗ ಬೇಡವಾಗಿದೆ; ನೀವು ಹೋಗಬಹುದು," ಎಂದು ಹೇಳಿದ.

ಅವನ ಮಾತಿನಂತೆ ಅವರು ಹೊರಡಲನುವಾದಾಗ, ಗಟ್ಟಿಯಾಗಿ, "ನಾನು ಏನಾಡುತ್ತೇನೆ ಎನ್ನುವುದರ ಅರ್ಥವನ್ನು ತಿಳಿಸಬೇಕಾಗಿದ್ದಿತು. ಬಾಲಬಡಕರು." ಎಂದು ಗೆಳೆಯನಿಗೆ ಹೇಳಿದ.

ಹೆಂಗಸರ ವಿಷಯದಲ್ಲಿಯೂ ಅವನಲ್ಲಿ ಸಹಿಷ್ಣುತೆ ಇಲ್ಲದಂತಾಗುತ್ತಿತ್ತು. ತಾನೇ ಬೆಳೆಸಿ ಅವರನ್ನು ಆಕರ್ಷಿಸಿದ್ದ ರಿಪ್ಲೆ ಅವರ ತಂಡದ ಸಂಖ್ಯೆಯನ್ನು ಕಡಿತ ಮಾಡ ಹತ್ತಿದ. ಆದರೆ ಅವರು ಅಷ್ಟು ಸುಲಭವಾಗಿ ಹೋಗುವವರಾಗಿರಲಿಲ್ಲ. ಅವರನ್ನು ಕೆಟ್ಟ ಮತ್ತು ಅವಹೇಳನಕರವಾದ ರೀತಿಯಲ್ಲಿ ಕಾಣ ಹತ್ತಿದ. ಅವರು ಅದನ್ನು ಅಷ್ಟಾಗಿ ಹಚ್ಚಿಕೊಳ್ಳಲಿ . ಅವರಲ್ಲಿ ಕೆಲವರು ರಿಪ್ಲೆಯನ್ನು ಪ್ರೀತಿಸುತ್ತಿದ್ದರೆ ಮತ್ತೆ ಕೆಲವರು ಆತನಿಂದಲೇ ತಮ್ಮ ಹೊಟ್ಟೆ ಹೊರೆದುಕೊಳ್ಳುವುದೆಂದಿದ್ದರು.

೧೯೪೯ರಲ್ಲಿ ಒಮ್ಮೆ ಆತ ಟೆಲಿವಿಜನ್ ಪ್ರಸಾರದಲ್ಲಿ ಭಾಗವಹಿಸಿದ್ದ. ದೀಪವು ಆರಿ ಕತ್ತಲು ಗವಿಯಿತು. ರಿಪ್ಲೆ ಕುಸಿದು ಬಿದ್ದ; ಕೂಡಲೇ ಆಸ್ಪತ್ರೆಗೆ ಸಾಗಿಸಲ್ಪಟ್ಟ. "ತಾನು ಹೆಚ್ಚು ಕಾಲ ಬದುಕಿರಲು ಸಾಧ್ಯವಿಲ್ಲ"ವೆಂದು ತನ್ನ ಸ್ನೇಹಿತನಿಗೆ ಫೋನ್ ಮಾಡಿ ರಿಸೀವರನ್ನು ಇಡುವಷ್ಟರಲ್ಲೇ ಕೆಳಗೆ ಬಿದ್ದ. ೫೫ನೇ ವಯಸ್ಸಿನಲ್ಲಿ ರಿಪ್ಲೆಯ ಪ್ರಾಣಪಕ್ಷಿ ಹಾರಿ ಹೋಯಿತು.

ಇಂದಿಗೂ ವಿಶ್ವದ ಮೂಲೆ ಮೂಲೆಗಳಲ್ಲಿ ರಿಪ್ಲೆಯ ಚಿತ್ರಗಳನ್ನು ನೋಡಿ . ಜನ ಕೌತುಕಗೊಳ್ಳುತ್ತಾರೆ. ಮೂಗು ಮುರಿಯುತ್ತಾರೆ. ಯಾವುದಾದರೂ ಸೋಜಿಗದ ಕತೆ ಪ್ರಾರಂಭವಾಗುವುದಕ್ಕೂ ಶುಭ ಚಿಹ್ನೆಯಾಗುತ್ತದೆ ರಿಪ್ಲೆಯ "ನಂಬಿದರೆ ನಂಬಿ ಇಲ್ಲವಾದರೆ ಬಿಡಿ." ✡

(ಆಧಾರ)

ಕೃಷ್ಣಮೂರ್ತಿ, ನಿಟಿಲಾಪುರ

ಪ್ರಾಚೀನರಿಗೆ ಪರಮಾಣು ಸಿದ್ಧಾಂತ ಗೊತ್ತಿತ್ತೆ?

ಭಾರತದ ಎಲ್ಲ ಚಿಂತನ ಪದ್ಧತಿಗಳೂ ಸಹ ತಮ್ಮದೇ ಆದ ಪರಮಾಣು ಸಿದ್ಧಾಂತಗಳನ್ನು ಅಭಿವೃದ್ಧಿಪಡಿಸಿಕೊಂಡಿವೆ. ಅವುಗಳಲ್ಲೆಲ್ಲ ವೈಶೇಷಿಕ ದರ್ಶನದ ಮೂಲ ಪುರುಷನಾದ ಮಹರ್ಷಿ ಕಣಾದನ ಪರಮಾಣು ಸಿದ್ಧಾಂತವೇ ಅತ್ಯಂತ ಸಮರ್ಪಕವಾಗಿದ್ದು, ಆಧುನಿಕ ವಿಜ್ಞಾನದ ಪರಮಾಣು ಸಿದ್ಧಾಂತಕ್ಕೆ ಸರಿಸಾಟಿಯಾಗಿದೆ.

"ಕಣ (ಪರಮಾಣು)ವನ್ನು ತಿನ್ನುವವ" (ಕಣಂ ಅತ್ತಿ ಇತಿ ಕಣಾದಃ) ಎಂಬ ಅರ್ಥದ ಹೆಸರೇ ಆತನಿಗೆ ರೂಢವಾಗಿ ನಿಜನಾಮವನ್ನೇ ಮರೆ ಮಾಡಿದೆ ಎಂಬುದು ಗಣನೀಯ ಅಂಶ. ಬುದ್ಧನಿಗಿಂತಲೂ ಸುಮಾರು ೮೦೦ ವರ್ಷ ಹಿಂದೆ ಜೀವಿಸಿದ್ದ ಕಣಾದ ತನ್ನ "ವೈಶೇಷಿಕ ಸೂತ್ರ"ಗಳಲ್ಲಿ, ದ್ರವ್ಯಗಳೆಲ್ಲ ಪರಮಾಣುಗಳೆಂಬ ಸರಳ ಹಾಗೂ ಅವಿಭಾಜ್ಯ ಕಣಗಳಿಂದ ನಿರ್ಮಿತವಾಗಿವೆ ಎಂದಿದ್ದಾನೆ.

ವಿಶೇಷ

ಪೃಥ್ವಿ, ಅಪ್, ತೇಜಸು ಮತ್ತು ವಾಯು ಈ ನಾಲ್ಕು ಮಹಾ ಭೂತಗಳ ನಿತ್ಯ (ಶಾಶ್ವತ)ವಾದ ಅಂತಿಮ ಭಾಗಗಳೇ ಈ ಪರಮಾಣುಗಳು. ಪೃಥ್ವಿಯ ಪರಮಾಣುವಿನಲ್ಲಿ ಸ್ಪರ್ಶ, ರೂಪ, ರಸ ಹಾಗೂ ಗಂಧಗಳು, ನೀರಿನ ಅಣುವಿನಲ್ಲಿ ಸ್ಪರ್ಶ, ರೂಪ ಹಾಗೂ ರಸಗಳು, ತೇಜಸ್ಸಿನ ಕಣದಲ್ಲಿ ಸ್ಪರ್ಶ ಹಾಗೂ ರೂಪಗಳು ಮತ್ತು ವಾಯುವಿನ ಪರಮಾಣುವಿನಲ್ಲಿ ಸ್ಪರ್ಶ ಎಂಬ ಗುಣವಿದ್ದು ಈ ಎಲ್ಲ ಪರಮಾಣುಗಳು "ವಿಶೇಷ" ಎಂಬ ವ್ಯಾವರ್ತಕ (ಭೇದ ಸೂಚಕ) ಧರ್ಮವನ್ನು ಹೊಂದಿವೆ. ಈ 'ವಿಶೇಷ'ದಿಂದಾಗಿಯೇ ಕಣಾದನ ದರ್ಶನಕ್ಕೆ 'ವೈಶೇಷಿಕ' ಎಂದು ಹೆಸರು. ಅಣುಗಳು ಅನಂತವಾಗಿರುವುದರಿಂದ 'ವಿಶೇಷ'ಗಳು ಕೂಡ ಅನಂತವಾಗಿವೆ.

ಗಾತ್ರ

ಜಾಲ ಸೂರ್ಯ ಮರೀಚಿಸ್ಥಂ
ಯತ್ ಸೂಕ್ಷ್ಮಂ ದೃಶ್ಯತೇ ರಜಃ ।
ಪ್ರಥಮಂ ತತ್ ಪ್ರಮಾಣಾನಾಂ
ತ್ರಸರೇಣುರಿತಿ ಸ್ಮೃತಃ ॥

ಕಿಟಿಕಿಯಲ್ಲಿ ಒಳ ಹರಿಯುವ ಸೂರ್ಯ ರಶ್ಮಿಯಲ್ಲಿ ಕಣ್ಣಿಗೆ ಕಾಣಿಸುವ ಅತ್ಯಂತ ಸೂಕ್ಷ್ಮ ಧೂಳಿನ ಕಣವು ಪ್ರಮಾಣದಲ್ಲಿ (ಅಳತೆ ಹಾಗೂ ಕಾರಣಗಳಲ್ಲೆಲ್ಲ ಮೊತ್ತ ಮೊದಲನೆಯದಾಗಿದ್ದು "ತ್ರಸರೇಣು" (ಆರು ಪರಮಾಣುಗಳ ಮೊತ್ತ) ಎಂದು ಹೇಳಲ್ಪಟ್ಟಿದೆ.

ಸೂರ್ಯ ರಶ್ಮಿಯಲ್ಲಿ ಗೋಚರಿಸುವ ಅತಿ ಸೂಕ್ಷ್ಮ ಕಣವು ಅಂಗುಲದ ೧/೩೪೯೫೨೫ ಭಾಗದಷ್ಟಿರುತ್ತದೆ. ಇದರ ಆರನೇ ಒಂದಂಶವೇ

ಪರಮಾಣುವಿನ ಗಾತ್ರ. ಎಂದರೆ ಘನ ಅಂಗುಲದ × π × ೩.೫–೧೨–೬೨ ನೇ ಭಾಗ. ಇದು ಜಲಜನಕದ ಪರಮಾಣುವಿನ ಗಾತ್ರದ ಆಧುನಿಕ ಮಾನಕ್ಕೆ ಸಮೀಪವರ್ತಿಯಾಗಿದೆ.

ಸಂಯೋಗ ಕ್ರಮ

ಈ ಪರಮಾಣುಗಳು 'ಕ್ರಿಯಾಶ್ರಯ' (ಸಕ್ರಿಯಗಳಾಗಿದ್ದು) ರೇಖಾ ಗಣಿತದ ಬಿಂದುವಿನ ಗಾತ್ರದ 'ಮಂಡಲ' (ಪರಿಧಿ)ವನ್ನು ಹೊಂದಿವೆ. ಸೃಷ್ಟಿಯಲ್ಲಿ ಇಂತಹ ಪರಮಾಣುಗಳು ಸಂಯುಕ್ತ ಸ್ಥಿತಿಯಲ್ಲಿ ಮಾತ್ರ ಇರಬಲ್ಲವು. ಎರಡು ಪರಮಾಣುಗಳು ಸಂಯೋಗವಾಗಿ ದ್ವ್ಯಣುಕ, ಮೂರು ದ್ವ್ಯಣುಕಗಳಿಂದ ತ್ರ್ಯಣುಕ (ಅಥವಾ ತ್ರಸರೇಣು), ನಾಲ್ಕು ತ್ರ್ಯಣುಕ ಸಂಯೋಗದಿಂದ ಚತುರಣುಕ ಉತ್ಪತ್ತಿಯಾಗುತ್ತವೆ. ಇದು ವಿಶ್ವದ ಪ್ರಪ್ರಥಮ ಅಣು ಸಿದ್ಧಾಂತಕಾರನಾದ ಕಣಾದನು ದ್ರವ್ಯದ ಮೂಲಭೂತ ಘಟಕ (ಪರಮಾಣು) ದಿಂದ ಸಂಯುಕ್ತ ಪದಾರ್ಥ ನಿರ್ಮಾಣವಾಗುವ ಕ್ರಮವನ್ನು ವಿವರಿಸಲು ಮಾಡಿದ ಪ್ರಾಮಾಣಿಕ ಯತ್ನ.

ಕಣಾದನ, ಈ ಪರಮಾಣು ಸಿದ್ಧಾಂತವನ್ನೇ ಮುಂದೆ ಬೌದ್ಧರು ಹಾಗೂ ಜೈನರು ಅಭಿವೃದ್ಧಿಪಡಿಸಿದರು.

ಜೈನ ಪದ್ಧತಿ

ಪರಮಾಣು ಸಂಯೋಗ ಅಥವಾ ಪರಮಾಣುಗಳ ಪರಸ್ಪರ ಆಕರ್ಷಣೆ-ವಿಕರ್ಷಣೆಗಳಿಂದ ಅಣು ರಚನೆಯನ್ನು ಉಮಾಸ್ವಾತಿ (ಕ್ರಿ. ಶ. ೫೦) ಪರಿಣಾಮಕರವಾಗಿ ವಿವರಿಸಿದ್ದಾನೆ.

ಜೈನ ಮತದ ಪ್ರಕಾರ, ಹಲವು ದ್ರವ್ಯಗಳು ಸೇರಿ ಒಂದು ಪದಾರ್ಥವಾಗಬಹುದು. ಹಾಗೆಯೇ, ಒಂದು ಪದಾರ್ಥ ಹಲವಾಗಿ ವಿಭಾಗವಾಗಬಹುದು. ಪದಾರ್ಥದ ಅತಿ ಸೂಕ್ಷ್ಮ ವಿಭಾಗಗಳೇ ಪರಮಾಣುಗಳು. ಅವರು "ಪುದ್ಗಲ" ಎಂದು ಕರೆಯುವ ದ್ರವ್ಯವು ಪರಮಾಣುಗಳಿಂದ ರಚಿತವಾಗಿದೆ. ಪ್ರತಿ ಪರಮಾಣು ಆಕಾಶದಲ್ಲಿ ಒಂದು ಬಿಂದುವಿನಷ್ಟು ಅವಕಾಶವನ್ನು ಆಕ್ರಮಿಸುತ್ತದೆ. ಇಂತಹ ಪರಮಾಣುಗಳು ಅನಂತವಾಗಿವೆ.

ಪದಾರ್ಥದ ರಚನೆ

ಎರಡು ಅಥವಾ ಹೆಚ್ಚು ಪರಮಾಣುಗಳು ಸಂಯೋಗವಾಗಿ "ಸ್ಕಂಧ" ಎಂಬ ಸಂಯುಕ್ತಗಳನ್ನು ಉಂಟು ಮಾಡುತ್ತವೆ. ಅವುಗಳ ಪರಸ್ಪರ ಜೋಡಣೆಯಿಂದ ನಾನಾ ಪ್ರಕಾರದ ಪದಾರ್ಥಗಳು ದೊರೆಯುತ್ತವೆ. ಹೀಗೆ ಪರಮಾಣುಗಳೆಂಬ ಪ್ರಾಥಮಿಕ ವಸ್ತುಗಳ ಸಂಯೋಜನೆಯಿಂದಲೇ ವಿವಿಧ ವಸ್ತುಗಳ ಬೇರೆ ಬೇರೆ ವರ್ಗಗಳು ಉತ್ಪನ್ನವಾಗಿವೆ; ಮಾತ್ರವಲ್ಲ, ಪರಮಾಣುಗಳ ಸಂಯೋಗಕ್ಕೆ ಕಾರಣವಾದ ಬಲಗಳೇ ರಾಸಾಯನಿಕ ಸಂಯುಕ್ತ ರಚನೆಗೂ ಕಾರಣವಾಗಿವೆ ಎಂಬ ತತ್ವವನ್ನೂ ಅವರು ಮನಗಂಡಿದ್ದರು. ✡



ನೀವು ಜಗತ್ತಿನ ಮಹಾನ್ ವಿಚಾರವೇತ್ತರಾಗಿರುವುದರಿಂದ ದಯವಿಟ್ಟು ನಿಮ್ಮ ಆರು ವಿಚಾರಗಳ ಸಂಕ್ಷಿಪ್ತವಾಗಿ ಬರೆದು ಕಳಿಸಿದರೆ ಉಪಕಾರವಾಗುವುದೆಂದು ಒಬ್ಬ ಮಹಿಳೆಯು ಪ್ರೊಫೆಸರ್ ಆಲ್ಬರ್ಟ್ ಐನ್‌ಸ್ಟೀನರಿಗೆ ಪತ್ರ ಬರೆದಳು. ಅದಕ್ಕೆ ಐನ್‌ಸ್ಟೀನರು ಬರೆದದ್ದಿಷ್ಟು: "ದೇವರು, ದೇಶ, ಹೆಂಡತಿ, ಗಣಿತ, ಮಾನವಜನಾಂಗ ಹಾಗೂ ಶಾಂತಿ."

ಅಕ್ಟೋಬರ್ 1976

ಮ. ಬ. ಚನ್ನಬಸಪ್ಪ

ಕಡು ಬಡತನ - ದಟ್ಟ ದಾರಿದ್ರ್ಯ

ಮನುಷ್ಯ ಇಲ್ಲದಿದ್ದರೆ ಬಡತನವೇ ಇರುತ್ತಿರಲಿಲ್ಲ. ಬಡತನ ಅನ್ನುವುದು ಮಾನವನ ನೆರಳು. ಪಶುಪಕ್ಷಿಗಳಲ್ಲಿ ಬಡತನವಿಲ್ಲ, ಕ್ರಿಮಿಕೀಟಗಳಿಗೆ ದಾರಿದ್ರ್ಯ ಅನ್ನುವುದು ಗೊತ್ತಿಲ್ಲ. ಅವಕ್ಕೆ ಬೇಕಾದುದು ಅವು ಇರುವಲ್ಲಿಯೇ ದೊರೆಯುತ್ತದೆ.

ಮಾನವನ ಜೊತೆಯಲ್ಲಿಯೇ ಬಡತನ ಹುಟ್ಟಿತು. ಅವನು ಹುಟ್ಟಿದುದರಿಂದ ಅವನ ಕುಲಕ್ಕೆ ಮಾತ್ರವಲ್ಲ, ಉಳಿದ ಜೀವಕೋಟಿಗಳಿಗೂ ಕೊರತೆ-ಅಭಾವಗಳು ಹೆಗಲೇರಿದುವು. ಸಸ್ಯಸಂಪತ್ತು ನಾಶವಾಗತೊಡಗಿದರೆ ವಾತಾವರಣ ಕಲುಷಿತಗೊಂಡಂತೆ. ಕಾಡು ನಾಶವಾದಂತೆ ಮರುಭೂಮಿ ವಿಸ್ತರಿಸತೊಡಗುತ್ತದೆ. ಜಲಶುದ್ಧೀಕರಣ, ವಾಯುನಿರ್ಮಲೀಕರಣ ಇಂತಹವಕ್ಕೆಲ್ಲ ಪ್ರಕೃತಿಯಲ್ಲಿ ಸ್ವಯಂಚಾಲಿತ ಚೈತನ್ಯಶ್ರೀ ವ್ಯವಸ್ಥೆಯಿದೆ. ಅದನ್ನು ಹದಗೆಡಿಸಿ ತಾನು ನಿಯಂತ್ರಿಸಲು ಹೊರಟಿದ್ದಾನೆಂಬೇ ಕೃತಕವಸ್ತು. ಕಪಟ ದ್ರವ್ಯ, ಸಾರಹೀನ ಸಂಗತಿ, ಸತ್ವರಹಿತ ಚಟುವಟಿಕೆ, ತೇಜೋಹೀನ ವರ್ಚಸ್ಸು, ಬಾಡಿ ಬತ್ತಿ ಕೊರಗಿ ಸೊರಗಿದಂತೆ. ಲವಲವಿಕೆ ಅನ್ನುವುದೇ ಇಲ್ಲ. ಕ್ಷುಲ್ಲಕ ವಿಷಯಗಳಿಗೆಲ್ಲ ಕೆಂಡ, ಕೋಪ, ತಾಪ, ಸಿಡಿಕು ಮೋರೆ, ಮೂಗಿನ ತುದಿಯಲ್ಲಿ ಕೋಪ.

ಮಾನವನ ಬದುಕು ತನಗೂ ಮಾರಕ, ಉಳಿದ ಜೀವಕೋಟಿಗೂ ಮೃತ್ಯು. ಮನುಷ್ಯ ವರ್ಗದಲ್ಲೂ ಅನ್ನಾಭಾವ, ವಸತಿ ದಾರಿದ್ರ್ಯ, ಜೀವನೋಪಾಯ, ಹೊಟ್ಟೆ ಹೊರೆಯುವುದು ದುರ್ಭರವಾಗಿದೆ. ಅವನು

ಇದ್ದಾನೆಂದೇ ಪಶುಪಕ್ಷಿಗಳಿಗೆ ಅನ್ನಾಭಾವ, ಕ್ರಿಮಿಕೀಟಗಳಿಗೆ ವಸತಿ ಇಲ್ಲವಾಗುತ್ತಿದೆ; ನಿಸರ್ಗಕ್ಕೆ ಬೆಂಕಿಯಿಕ್ಕುತ್ತಿದ್ದಾನೆ.

ಸೋಮಾರಿಯ ಮನಸ್ಸು ಪಾಪದ ಕಾರ್ಖಾನೆ ಅನ್ನುವುದರಲ್ಲಿ ಅಷ್ಟು ತಥ್ಯವಿಲ್ಲ. ಮಾನವನ ಮನಸ್ಸು ಕಾಲಕಾಲಕ್ಕೂ ಹೊಸ ಹೊಸ ಬಂಧನಗಳು, ರುಚಿ ರುಚಿಯಾದ ಶೃಂಖಲೆಗಳನ್ನು ನಿರ್ಮಿಸುತ್ತಿರುತ್ತದೆ. ಹಿಂದೆ ವ್ಯವಸ್ಥಿತ ಮತ ಧರ್ಮಗಳು, ಮುಂದೆ ಆರ್ಥಿಕ ಸಿದ್ಧಾಂತ (ಇಸಂ)ಗಳು.

ಸ್ವಾತಂತ್ರ್ಯ-ಸಮಾನತೆಗಳ ಮೊದಲನೆಯ ಶತ್ರುವೆಂದರೆ ಅವನೆ. ಹೆಣ್ಣನ್ನು ಬಳ್ಳಿಗೆ ಹೋಲಿಸುವ ಅವನೆ ನಿಜಕ್ಕೂ ಬಳ್ಳಿ! ಹಿಂದೆಲ್ಲ ದೈವದ ಸುತ್ತ ಹೆಣೆದುಕೊಂಡಿತ್ತು ಅವನ ಹೃನ್ಮನ. ಮುಂದೆ ಆ ಹೃನ್ಮನ ಆರ್ಥಿಕ ಸಿದ್ಧಾಂತ-ಸರ್ವಾಧಿಕಾರದ ಸುತ್ತ ಗುಂಯ್‌ಗುಡುತ್ತಿದೆ.

ಅವನ ಚೇತನ ಸಹ ಮಾನವನನ್ನು ತೆಪ್ಪಗಿರಲು ಬಿಡುವುದಕ್ಕೆ ಸರ್ವಥಾ ಸಿದ್ಧವಿಲ್ಲ. ಎಡಗೈಯಲ್ಲಿ ಧರ್ಮ (ಗ್ರಂಥ) ಬಲಗೈಯಲ್ಲಿ ಕತ್ತಿ ಬಂದೂಕ; ಹಿಂದೆ. ಮುಂದೆ ಕುಡುಗೋಲು ಸುತ್ತಿಗೆಗಳು ಅದೇ ಜಾಡಿಯಲ್ಲಿ ಅಡಿಯಿಡುತ್ತಿವೆ. ಉಗ್ರ ಸಮತಾವಾದ ಆಧುನಿಕ ಮತ ಧರ್ಮ!

ಮನುಷ್ಯ ಪ್ರಕೃತಿಯನ್ನೂ ಕುಲಗೆಡಿಸುತ್ತಿದ್ದಾನೆ, ತನ್ನ ಹೃನ್ಮನಗಳನ್ನೂ ವಿಷಮಯವಾಗಿ ಮಾಡುತ್ತಿದ್ದಾನೆ. ಮೊದಲು ತಾಯಿ ಸಲಹುತ್ತಾಳೆ, ಆ ಮೇಲೆ ಹೆಂಡತಿ, ಮುಪ್ಪಿನಲ್ಲಿ ಊರುಗೋಲು ಆಶ್ರಯ. ನಂಬಿಕೆಯ ಆಶ್ರಯವಿಲ್ಲದೆ ಅವನು ಬದುಕಲಾರ.

ಆ ನಂಬಿಕೆಗಳು ಯಾವ ಆಶ್ರಯ ಭರವಸೆಗಳನ್ನು ತಂದಿವೆ? ಹೃನ್ಮನಗಳಿಗೆ, ಸದಸದ್ವಿವೇಕಕ್ಕೆ ಶೃಂಖಲೆ ಬಂಧನಗಳನ್ನು ತೊಡಿಸಿ ಆಳವಡಿಸುವುದು! ಇದೇ ಚರಿತ್ರೆ-ಇತಿಹಾಸಗಳ ಉದ್ದಕ್ಕೂ ನಡೆದು ಬಂದಿರುವ ಹಗರಣ ಉಪಟಳ-ಪರ-ವಿರುದ್ಧ ಸಮನ್ವಯ ಸಾಹಸ.

ಅವನು ಸುಸ್ತಾಗಿದ್ದಾನೆ. ತಲೆ ಬೇಸರವಿಟ್ಟಿದೆ. ಅಸ್ತವ್ಯಸ್ತ ಮನಸ್ಸು ಹೊಸ ಹೊಸ ತಲೆ ತಿರುಕತನ ಆಭಾಸ ಪ್ರವಾದಗಳನ್ನು ಹಡೆಯುತ್ತಿದೆ. ಮತ್ತೂ ದಟ್ಟದಾರುಣ ಸಂಗತಿಯೆಂದರೆ, ಆತ ಸಹಮಾನವನನ್ನು-ಅವನವನ ಪಾಡಿಗೆ ಅವನವನನ್ನು ಬಿಡಲು ಸುತರಾಂ ಸಿದ್ಧವಿಲ್ಲ. ಅಂಕೆ, ಆಜ್ಞೆ, ಸಹಾಯ, ಔದಾರ್ಯ, ಪ್ರೀತಿ, ಕರುಣೆ-ಪರಿಣಾಮ ಹಂಗು, ದಾಕ್ಷಿಣ್ಯ ಬಂಧನ.

ಬಡತನನೆಂದರೇನು? ದಾರಿದ್ರ್ಯ ಇದೆಯೇಕೆ?

ವಿದ್ಯೆ ಹೆಚ್ಚಿದಷ್ಟೂ ಸಹ ಮಾನವ ಇದ್ದುದನ್ನೂ ಕಳೆದುಕೊಳ್ಳುತ್ತಿದ್ದಾನೆ. ವಿಜ್ಞಾನ ಪಲ್ಲವಿಸಿದಂತೆ ತನ್ನ ಮನೆ ಕಾಂಕ್ರೀಟ್ ಅಂತಸ್ತಿನ ಮೇಲೆ ಅಂತಸ್ತುಗಳು ಮೇಲೇರುತ್ತಿವೆ, ಪಕ್ಕದ ಮನೆ ಗುಡಿಸಲು ಕೊಚ್ಚೆಗುಂಡಿ ಆಗುತ್ತಿದೆ, ಸ್ಲಂ ಕೊಳಕು ಪ್ರದೇಶ ಅಂಟು ಜಾಡ್ಯ.

ಅಂಟು ಜಾಡ್ಯಗಳೆಂದರೆ ವಿದ್ಯೆ-ವಿಜ್ಞಾನಗಳೆ. ಎಲ್ಲ ಕಾಲ ದೇಶಗಳಲ್ಲೂ ಭಯಂಕರ ಕಳೆ, ಮುಳ್ಳಿನ ಗಿಡಗಳಿರುತ್ತವೆ. ಅವನ್ನು ಸಮೂಲ ನಿರ್ಮೂಲಗೊಳಿಸಲು ಸಮಾಜ, ಸರಕಾರ. ರೈತರು ಕೋಟಿ ಕೋಟಿ ಟನ್ ದ್ರಾವಣ ಚೆಲ್ಲಿ ಕೊಚ್ಚಿ ಹಾಕಿದರೂ ಅವು ನಾಶವಾಗುವುದಿಲ್ಲ.

ನೀರು. ಗೊಬ್ಬರ, ಆರೈಕೆಯಿಲ್ಲದೆ ಹುಲುಸಾಗಿ ಬೆಳೆಯುತ್ತವೆ! ಬೆಳೆಗಳಿಗೆ ಕುತ್ತ, ಆರೋಗ್ಯಕ್ಕೆ ಕೇಡು, ಕಿತ್ತು ಹಾಕಿದಂತೆ ಬೆಳೆಯುತ್ತಲೇ ಇರುತ್ತವೆ, ಹೊಲಗದ್ದೆ ರಸ್ತೆ ಅಂಚು, ಖಾಲಿ ಜಾಗ ಸಿಕ್ಕಿದೆಡೆಯಲ್ಲಿ ಅವುಗಳ ಮೂಲೋತ್ಪಾಟನೆಗೆ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳ ಬಳಕೆ!

ಆದರೆ ವಿದ್ಯೆ ವಿಜ್ಞಾನಗಳೆಂದರೆ ವಿಚಿತ್ರ ಅಂಟು ಜಾಡ್ಯ. ಎಲ್ಲ ಕಾಲ ದೇಶಗಳಲ್ಲೂ ಪ್ರತಿಯೊಬ್ಬರೂ ಶ್ರಮಿಸಿ (ಜ್ಞಾನಭಿಕ್ಷು ಜ್ಞಾನಪಿಪಾಸು. ಪುಸ್ತಕದ ಹುಳು)ಗಳಿಸುತ್ತಿರುವ ರಾಜರೋಗ ಬಿಳಿಯಾನೆಗಳೆಂದರೆ ವಿದ್ಯೆ ವಿಜ್ಞಾನಗಳು, ಎಲ್ಲರಿಗೂ ಇಲ್ಲ, ಇರು

ವವರಿಗೂ ಬಡತನ! ಕೊರತೆ.

ಹಿಂದೆ ವಿಷವೇರಿದಂತೆ ಎನ್ನುವ ಉಪಮಾನ ಕೊಡುತ್ತಿದ್ದರು. ಇಂದು ಬ್ಯಾಂಕ್ ಬ್ಯಾಲೆನ್ಸ್ ಏರಿದಂತೆ ಎನ್ನುವ ಉಪಮಾನ! ಮನುಷ್ಯತ್ವವನ್ನು ಹಾಳು ಮಾಡುವುದಕ್ಕೆ ಸಹ ಮಾನವನ ಭದ್ರತೆ, ನೆಮ್ಮದಿಗಳಿಗೆ ಭಂಗ ತರುವುದಕ್ಕೆ. ತುತ್ತನ್ನು ಕಿತ್ತುಕೊಳ್ಳಲು ಗಂಟನ್ನು ಅಪಹರಿಸಲು ಹಿಂದೆ ವಿದ್ಯೆಯ ಉಪಯೋಗ, ಇಂದು ವಿಜ್ಞಾನದ್ದು!

ವಿದ್ಯೆ ಹೆಚ್ಚುತ್ತಿದೆ, ನೆಮ್ಮದಿ ಹೆಚ್ಚುತ್ತಿದೆಯೆ? ವಿಜ್ಞಾನ ನಾಗಾಲೋಟದಲ್ಲಿ ಓಡುತ್ತಿದೆ, ಪರಿಣಾಮವಾಗಿ ಕುಂಟುತ್ತಿದ್ದ ಪಕ್ಕದ ಮನೆಯ ಬದುಕು ತೆವಳತೊಡಗಿದೆ! ಇನ್ನು ಹೆಚ್ಚು ಕಾಲ ಬೇಕಾಗಿಲ್ಲ, ಅದು ನಿಶ್ಶೇಷವಾಗಿ ನಿಶ್ಚಲವಾಗಿ ಬಿದ್ದಲ್ಲಿಂದ ಮುಂದೆ ಕ್ರಮಿಸದಿರಲು. ಸ್ಥಳೀಯ ಸಂಸ್ಥೆಗಳು, ಸ್ವಾಯತ್ತ ಸಂಘಗಳು, ಪುರಸಭೆಗಳು ಏನು ಮಾಡಿದುವು? ರಾಜಕಾರಣಿಗಳಿಗೆ ಬಿನ್ನವತ್ತಳೆ ಅರ್ಪಿಸಿದುವು! ಸಲ್ಲಿಸುತ್ತಿರುವ ಗುರುತರ ಸೇವೆಯನ್ನು ಸ್ತುತಿಸಿ, ಕೀರ್ತಿಸಿ, ಕೊಂಡಾಡಿ, ಹಾರ ಕೊರಳಿಗೆ ಹಾಕಿ ತುರಾಯಿ ಕೈಗೆ ಕೊಟ್ಟರು! ಹಣ ತಿನ್ನುವುದಕ್ಕೆ ಖರ್ಚು ತೋರಿಸುವುದಕ್ಕೆ ಕಣ್ಣೊರೆಸುವುದು ತಲೆ ಸವರುವುದು;

ವಿಶ್ವವಿದ್ಯಾನಿಲಯಗಳು ಏನು ಮಾಡಿದುವು? ಗೌರವ ಪದವಿ, ಡಾಕ್ಟರೇಟುಗಳನ್ನು ಕೊಡುತ್ತವೆ! ಯಾರಿಗೆ? ಉತ್ತು ಬಿತ್ತಿ ಬೆಳೆಯುವವರಿರಿಗೇನು? ಛೇ! ಛೇ! ಮತ್ತೆ? ಬೆವರು ಸುರಿಸುವ ಶ್ರಮಜೀವಿ ಕಾರ್ಮಿಕರಿಗೇನು? ಪಾಪ! ಪಾಪ! ಅದು ಕಮ್ಯುನಿಸ್ಟ ದೇಶಗಳಲ್ಲೂ ಇಲ್ಲ!

–ಯಾವುದು? ಗೌರವಿಸುವುದು ಡಾಕ್ಟರೇಟ್ ಪ್ರಶಸ್ತಿಗಳನ್ನು ಕೊಡುವುದು ಎಂದೆಂದೂ ಪರಾನ್ನಪುಷ್ಟ ಕವಿ, ಸಾಹಿತಿ, ಕಲಾವಿದರಿಗೆ ಮಾತ್ರ. ನಿತ್ಯ ದುಡಿಯುವ ಕಾರ್ಮಿಕನಿಗೂ ಸಹ ಕಮ್ಯುನಿಸ್ಟ ದೇಶಗಳಲ್ಲಿ ಸಿಕ್ಕುವುದೆಂದರೆ ಬೋನಸ್, ಪ್ರೊಡಕ್ಷನ್ ಇನ್‌ಸೆಂಟಿವ್ ಮಾತ್ರ!

ಕುದುರೆ ಮುಂದೆ ಮೂಲಂಗಿ! ಕುದುರೆ ಓಡಿದಂತೆಲ್ಲ ಮೂಲಂಗಿ ಕಾಯಿಯೂ ಓಡುತ್ತಿರುತ್ತದೆ! ಕೊನೆಗೂ ಸಿಕ್ಕುವುದಿಲ್ಲ ಕುದುರೆಗೆ ಮೂಲಂಗಿ ತುಂಡು. ಆದರೆ ಮಾಂಸದ ತುಂಡು (ವಿದ್ಯಾರ್ಥಿವೇತನ, ಪ್ರಯೋಗ ಮುಂದುವರಿಸಲು ಇಡುಗಂಟು, ಮಾತಿಕೆ ಅನುದಾನ ವಿದೇಶ ಪ್ರವಾಸ ಸೌಲಭ್ಯ) ಲಭಿಸುವುದೆಂದರೆ ಸ್ನಾತಕೋತ್ತರ ವಿದ್ಯಾರ್ಥಿ, ವಿಜ್ಞಾನಿ, ಕವಿ, ಕಲಾವಿದ, ಪಂಡಿತರಿಗೆ!

ಪರಾನ್ನ ಪುಷ್ಟರೆಂದರೇನು? ದುಡಿಸುವವರು, ಕಡಿಮೆ ದುಡಿಯುವವರು, ದುಡಿಯದೇ ಇರುವವರು. ಇನ್ನು ದುಡಿಮೆಗೆ ದುಡಿಯುವವರಿಗೆ ಅಡ್ಡಿ ಉಂಟು ಮಾಡುವವರು? ಯಾರು ಅವರು? ದೈವದ ಏಜೆಂಟರು ವ್ಯಾಪಾರಿಗಳು ವ್ಯಭಿಚಾರಿಗಳು! ಕಳ್ಳತನ ದರೋಡೆಗೆ ಮುಕ್ತಾವಕಾಶ ಇರುವಾಗ, ಉತ್ತು ಬಿತ್ತಿ ಬೆಳೆದು ಉತ್ಪಾದಿಸಲು ಮುಂದಾಗುವ ಮೂರ್ಖರು ಇನ್ನೂ ಹುಟ್ಟಿಬರಬೇಕಾಗಿದೆ!

(ಪಿ) ಕವಿಗಳು, (ಇ) ಪ್ರಬಂಧಕಾರರು, (ಎನ್) ಕಾದಂಬರಿ 'ಕೋರ'ರು

ಪ್ರತಿಭೆಯನ್ನು ಗುರುತಿಸಬೇಡವೆ? ಯಾರು ಯಾಕೆ ಗುರ್ತಿಸಬೇಕು? ರಾಜಕಾರಣಿ ಗುರುತಿಸಬೇಕು? ಓತಿಕ್ಯಾತನಿಗೆ ಬೇಲಿಯೇ ಸಾಕ್ಷಿ! ಪರಾನ್ನಪುಷ್ಟ ಸಾಹಿತಿ, ಕಲಾವಿದ, ವಿಜ್ಞಾನಿಗಳನ್ನು ಪರಾನ್ನಪುಷ್ಟ ರಾಜಕಾರಣಿಯೇ ಗುರುತಿಸಬೇಕು, (ಬಡ ಬೋರೇ ಗೌಡನ ತೆರಿಗೆ ಹಣದ ಖರ್ಚಿನಲ್ಲಿ) ಗೌರವಿಸಬೇಕು!

ಅರರೆ! ಏನು ಇದರಲ್ಲಿ ಆಶ್ಚರ್ಯ? ಹಿಂದಿನ ಧಾರ್ಮಿಕ ವಾತಾವರಣ ಹಾಗೂ ಇಂದಿನ ಧರ್ಮನಿರಪೇಕ್ಷ ಹವಾಮಾನ, ಎರಡರಲ್ಲೂ ಇದು ಸರ್ವಸಾಧಾರಣ ಸಂಭಾವಿತ ಸಭ್ಯ ನಡಾವಳಿ! ಹೊಸ ಸತ್ಯ ಹಾಗಾದರೆ ಏನು? ಹಿಂದೆ ತನ್ನನ್ನು ರಕ್ಷಿಸಿದವರನ್ನು ಧರ್ಮ ರಕ್ಷಿಸುತ್ತಿತ್ತು. ಇಂದು ತನ್ನನ್ನು ರಕ್ಷಿಸಿದವರನ್ನು ಪ್ರತಿಭೆ ಸಂರಕ್ಷಿಸುತ್ತದೆ!

ಪ್ರತಿಭೆಯಿಂದ ಪ್ರಗತಿ? ಇದು

ಚಿಗುರೋ? ಹಳೆ ಬೇರೋ? ಅಥವಾ ಅವೆರಡರ ಕೂಸೋ? ಅರಸಿನ ಅರಮನೆಯ ಹುಗ್ಗಿ ಪಾಯಸಕ್ಕೆ ಆಸೆ ಬಿದ್ದು, ವರುಷದ ಗಂಜಿ ಕಳೆದುಕೊಳ್ಳುವುದು ಯಾವ ಜಾಣತನ? ಪ್ರತಿಭೆ ಅನ್ನುವುದು ಅರಮನೆಯ ಹುಗ್ಗಿ ಪಾಯಸ. ಅದನ್ನು ಗೌರವಿಸಿ ಗುರುತಿಸುವುದರಿಂದ ಸುಖೀ ರಾಜ್ಯ, ಎಲ್ಲರಿಗೂ ಮಂಗಳ, ಸರ್ವೋದಯ ಸುತರಾಂ ಸಾಧ್ಯವಿಲ್ಲ.

ಕಣ್ಣು ಕೋರೈಸುವ ಹಾವು ಸೆಳೆಮಿಂಚಿಗೆ ಮರುಳಾಗುವುದು ಮೂರ್ಖತನ, ಮರುಕ್ಷಣದಲ್ಲಿ ಯಥಾಪ್ರಕಾರ ಗಾಢಾಂಧಃಕಾರ, ವಿದ್ಯೆ ಅನ್ನುವುದು ಕಳ್ಳತನ, ವಿಜ್ಞಾನ ಅನ್ನುವುದು ಸೂಳೆಗಾರಿಕೆ, ಅವುಗಳ ಪರಿಣಾಮ ಏನು ನೋಡಿ: ಬಡವರು ಕಡುಬಡವರಾಗುತ್ತಾರೆ, ಶ್ರೀಮಂತರ ಬ್ಯಾಂಕ್ ಬ್ಯಾಲೆನ್ಸ್ ಕೂಡ ದುಪ್ಪಟ್ಟು ವೃದ್ಧಿಸುತ್ತ ನಡೆದಿರುತ್ತದೆ–ಒಂದು ಕಡೆಯಿಂದ ವಾತಾವರಣ ಜಲ ನೆಲಗಳು ಕಲುಷಿತಗೊಳ್ಳುತ್ತ ನಡೆದಿದ್ದರೆ ಮತ್ತೊಂದು ಕಡೆ ಹವಾ ನಿಯಂತ್ರಿತ ಕೋಣೆ, ಸೌಧ, ಆರಾಮ ಧಾಮಗಳು ಕೆಲವರಿಗೆ. ನಾಗರಿಕತೆಯೆಂದರೆ ಹೊಗೆಯಲ್ಲಿ ಕರ್ಣ ಕಠೋರ ಶಬ್ದದಲ್ಲಿ ಉಸಿರಾಟ, ಶಾಲೆಗಳಲ್ಲಿ ನೀತಿಶಾಸ್ತ್ರ ಕಲಿತು, ರಂಗಭೂಮಿ ರಜತ ಪರದೆಗಳಲ್ಲಿ ಸುಳ್ಳು, ಕಳ್ಳತನ, ವ್ಯಭಿಚಾರ ಸೂಳೆಗಾರಿಕೆ ಕಲಿಯುವುದು? ಕವಿತೆಯೆಲ್ಲ ಸೂಳೆಗಾರಿಕೆ ಕಾದಂಬರಿಯೆಲ್ಲ ವ್ಯಭಿಚಾರ!

–ಅನ್ನುವುದು ಹಳೆಯ ಸತ್ಯ, ಅರ್ಧ ಸತ್ಯ. ಇಂದು ಉಗ್ರ ಸಮಾಜ ಸಮತಾವಾದಿ ವಾತಾವರಣ. ಹಿಂದಿನಿಂದ ಬಂದಿರುವ ರಾಜಕಾರಣಿ ಈಗ ಹುಟ್ಟಿಕೊಂಡಿರುವ ಕಾರ್ಮಿಕ ಧುರೀಣರ ಕಾಲ ಇದು. ಇದು ರಾಜಕಾರಣಿಯ ಪ್ರಪಂಚ, 'ಕಾರ್ಮಿಕ ಬಂಧು'ಗಳ ಜಗತ್ತು!

ಹಿಂದೆ ರಾಜಮಹಾರಾಜ ಪಾಳೆಯಗಾರರ ಸುತ್ತ ಬಹು ಪರಾಕ್ ಹೇಳಿ ಹೊಟ್ಟೆ ಹೊರೆಯುತ್ತಿದ್ದ ಕವಿ, ಕಲಾವಿದ, ನಟ, ನಟಿ, ವಿಟ, ವೇಶ್ಯೆಯರು, ಇಂದು ರಾಜಕಾರಣಿ ಕಾರ್ಮಿಕ ಧುರೀಣರ ಬೆನ್ನುಹತ್ತಿದ್ದಾರೆ. ಈಗ ಮತ್ತೆರಡು ಶನಿ ಸಂತಾನಗಳು, ಸಾಲದುದಕ್ಕೆ ವಿಜ್ಞಾನಿ ಹಾಗೂ ಪತ್ರಿಕೋದ್ಯೋಗಿ!

ಪ್ರತಿಭೆಯೆಂದರೇನು? ದುಡಿಯುವ ಹಸ್ತಗಳನ್ನು ಗೌರವಿಸಬೇಕೋ? ಬರೆಯುವ ಕೈಗಳನ್ನು ಸನ್ಮಾನಿಸಬೇಕೋ? ವಿದ್ಯೆ ಹೆಚ್ಚಿದಂತೆ ದುಡಿಯುವವರ ಗೌರವ ಕಡಿಮೆಯಾಗುತ್ತದೆ. ವಿಜ್ಞಾನ ನಾಗಾಲೋಟ ಓಡಿದಂತೆ ದುಡಿಯುವ ಹಸ್ತಗಳು ಯಂತ್ರಗಳಿಗೆ ಸ್ಥಾನ ತೆರವು ಮಾಡಿಕೊಟ್ಟು, ಪೆಚ್ಚು ಮೋರೆ ಸುಟ್ಟ ವದನದಿಂದ ಹಿಂದಿರುಗುತ್ತಿವೆ.

ಗೌರವಿಸುವುದು ಅನ್ನುವುದೇ ಪಾಪ. ಇದುವರೆಗಿನ ಜಗತ್ತಿನಲ್ಲಿ ದೊರೆಯುತ್ತಿರುವ ಗೌರವ ಬರೆಯುವುದಕ್ಕೆ, ಹಾಡುವುದಕ್ಕೆ, ನಾಟಕವಾಡುವುದಕ್ಕೆ, ಚಿತ್ರ ಗೀಚುವುದಕ್ಕೆ, ಶಿಲ್ಪ ಕೊರೆಯುವುದಕ್ಕೆ! ಜೀವರಸ ಅನ್ನ ದುಡಿಯುವ ಕೈಗಳನ್ನು ಗೌರವಿಸುವ ಬುದ್ಧಿ ಇನ್ನೂ ಜಗತ್ತಿನಲ್ಲಿ ಹುಟ್ಟಬೇಕಾಗಿದೆ.

ಮೂಲಭೂತ ಪ್ರಶ್ನೆಯೆಂದರೆ ಗೌರವಿಸುವುದು ಯೋಗ್ಯವೆ? ಯಾರನ್ನು ಯಾರು ಏಕೆ ಗೌರವಿಸಬೇಕು? ಪರಾನ್ನ ಪುಷ್ಟರು ಪರಾನ್ನ ಪುಷ್ಟರನ್ನು ಗೌರವಿಸುವುದು? ಅಧಿಕಾರದ ಗುತ್ತಿಗೆದಾರರನ್ನು ಕಲೆ, ಸಾಹಿತ್ಯ, ಪತ್ರಿಕೋದ್ಯಮಗಳ ಗುತ್ತಿಗೆದಾರರು ಗುರುತಿಸಿ ಗೌರವಿಸುವುದು?

ರಂಗಭೂಮಿ, ರಜತ ಪರದೆ, ಕ್ರೀಡಾಂಗಣ, ಪತ್ರಿಕೋದ್ಯಮಗಳು ವೃದ್ಧಿಸಿದಂತೆಲ್ಲ, ಬದುಕೆಲ್ಲ ಕಳ್ಳ ಮತ್ತು ಅಕ್ರಮ ಆಲಿಂಗನಗಳ ರಸ್ತೆ ಶ್ವಾನ ಪ್ರಣಯರಂಗವಾಗುತ್ತದೆ. ವಿಜ್ಞಾನ ಹೆಚ್ಚಿದಂತೆ ದಾಹ, ಧಾವಂತ ಸ್ವಾರ್ಥ, ಏಕಸ್ವಾಮ್ಯ. ವ್ಯಾಪಾರಿ ಬೆಲೆಯೇರಿಸುತ್ತಾನೆ, ಸರಕಾರ ತೆರಿಗೆ ಏರಿಸುತ್ತದೆ, ರಾಜಕಾರಣಿ ಬಡತನ ನಿವಾರಣೆಯ ಭರವಸೆ ನೀಡುತ್ತಾನೆ.

ಪೂರ್ಣ ಚೇತನ, ಸಂಪೂರ್ಣ ಬದುಕು ಅರಳಿದ ಹೃನ್ಮನಗಳು

ಬದುಕಿನ ಒಗಟಿಗೆ ಜೀವನದ ಜಂಜಡಕ್ಕೆ

ಅರ್ಥ ಕಲ್ಪಿಸುವ ಕಟ್ಟು ಚಟ ಸೊಟ್ಟು ಹಟಗಳು ಎಲ್ಲ ಕಾಲ ದೇಶಗಳಲ್ಲಿ ಜನಪ್ರಿಯ ಹವ್ಯಾಸ. ಅನ್ನದ ಉತ್ಪಾದನೆ ಪ್ರಾಚೀನ ಪೂರ್ವದಲ್ಲಿ ವೃತ್ತಿ ಕಸುಬು, ದುಡಿಮೆ ಆಗಿರಲಿಲ್ಲ. ಪ್ರಗತಿಯನ್ನು ಹಿಂಬಾಲಿಸಿ ಪ್ರತಿಭೆ ಮೂರು ಪೆಡಂಭೂತಗಳನ್ನು ಗುರುತಿಸಿತು! ದೈವ, ವ್ಯಾಪಾರ! ಅವುಗಳ ಪರಿಣಾಮ ಯುದ್ಧ, ಕಿತ್ತಾಟ.

ಮಗುವಾಗಿದ್ದಾಗ ತಾಯಿಯಿಂದ ರಕ್ಷಣೆ ದೊರಕುತ್ತಿತ್ತು. ಬುದ್ಧಿ ಬೆಳೆದಂತೆ ಹೆಚ್ಚಿನ ಆಶ್ರಯ ಬೇಕೆನಿಸಿತು. ದೈವವನ್ನು ಸೃಷ್ಟಿಸಿ, ತನ್ನ ಸಂರಕ್ಷಣೆಯ ಹೊಣೆಗಾರಿಕೆಯನ್ನು ಅದರ ಕೊರಳಿಗೆ ಕಟ್ಟಿದ. ಮಾತ್ರವಲ್ಲ, ತನ್ನ ಕೊರಳಿನ ಹಗ್ಗದ ಇನ್ನೊಂದು ತುದಿಯನ್ನು ದೈವಕ್ಕಿತ್ತ! ದೈವದ ಏಜಂಟ್ ಎಳದಾಡಿದಂತೆ ನರಳತೊಡಗಿದ, ಅಳತೊಡಗಿದ.

ಅವಲಂಬನೆ ಪರಾವಲಂಬನೆ! ಇದೇ ಬದುಕಿನ ಅರ್ಥ ವ್ಯಾಖ್ಯಾನ. ಕೆಳಗಿನವರನ್ನು ಒದೆಯುವುದು ಹತೋಟಿಯಲ್ಲಿ ಇಟ್ಟು ಕೊಳ್ಳುವುದು, ಮೇಲಿನವರ ಬೂಟಿಗೆ ಪಾಲಿಷ್ ಹಚ್ಚಿಕೊಡುವುದು ಅನುಗ್ರಹ ಸಂಪಾದಿಸುವುದು! ಚರಿತ್ರೆ–ಇತಿಹಾಸಗಳ ಅರ್ಥ ವ್ಯಾಖ್ಯಾನ ಇದೇ.

ಹೆಚ್ಚಿನ ಅರ್ಥ ಮೌಲ್ಯಗಳಿಗಾಗಿ ದುಡಿಯುವುದು, ಕೆಳಗಿನ ಕಮ್ಮಿ ಅರ್ಥ ಮೌಲ್ಯಗಳನ್ನು ದಂಡಿಸುವುದು. ಕೆಳಗಿನವರನ್ನು ಒದೆಯುವುದು, ಮೇಲಿನವರ ಅಂದಲವನ್ನು ಹೊರುವುದು. ತನ್ನ ಅರ್ಥ ಬೆಲೆ, ಕಿಮ್ಮತ್ತು, ಕೀರ್ತಿ, ಭದ್ರತೆ, ಭರವಸೆಗಳನ್ನು ಹೆಚ್ಚಿಸಿ ಕೊಳ್ಳುವುದು.

ಮನುಷ್ಯ ಮನುಷ್ಯರ ಮಧ್ಯೆ ಮೇಲು ಕೀಳು, ಮಡಿ ಮೈಲಿಗೆ, ಹೆಚ್ಚು ಕಡಿಮೆ, ನೀಚ ಶ್ರೇಷ್ಠ ವ್ಯತ್ಯಾಸಗಳು ಹೇಗೆ, ಏಕೆ ರೂಪುಗೊಂಡವು? ಬರಹಗಾರ ದೊಡ್ಡವನು, ಬೇಸಾಯಗಾರ ಸಾಮಾನ್ಯನು! ಯುದ್ಧ ಮಾಡುವುದು 'ಗಂಡು' ವೃತ್ತಿ, ಉಳುವುದು, ಅಗೆಯುವುದು ಕನಿಷ್ಠ!

ರಸಿಕತೆ, ಕವಿತಾ ಚಾತುರ್ಯ, ನೋಡುವ ಕಣ್ಣು, ಅನುಭವಿಸಿ ಸವಿಯುವ ಹೃದಯ, ಮಾರ್ದನಿಗೊಳ್ಳುವ ಸಹೃದಯತೆ ಇಂತಹವೆಲ್ಲ ಯಾರಲ್ಲಿ ಇಲ್ಲ? ಎಲ್ಲರೂ ರಸಿಕರೆ; ಪ್ರದರ್ಶನ ಚಾತುರ್ಯ, ಪ್ರತಿಪಾದನ ಕೌಶಲ್ಯ, ನಿರೂಪಣ ಚಾಕಚಕ್ಯತೆ, ಮಂಡನ ಶಕ್ತಿಯನ್ನು ಕೆಲವರು ಬೆಳಸಿಕೊಂಡಿರುತ್ತಾರಷ್ಟೆ. ಕೆಲವರಲ್ಲಿ ಹೆಚ್ಚು ಕೆಲವರಲ್ಲಿ ಕಡಿಮೆ ಪ್ರೌಢಿಮೆ.

ಹಾಗೆ ನೋಡಹೋದರೆ ಒಬ್ಬೊಬ್ಬನೂ ಒಂದೊಂದು ಪ್ರಕಾರದಲ್ಲಿ ಹೆಚ್ಚಿನ ಚಾತುರ್ಯ ಪ್ರತಿಭಾ ಸಂಪನ್ನತೆ ಹೊಂದಿರುತ್ತಾನೆ, ಗಳಿಸಿಕೊಂಡಿರುತ್ತಾನೆ. ಗುರುತಿಸಿ ಗೌರವಿಸಬೇಕು ಅನ್ನುವುದಾದರೆ ಎಲ್ಲರನ್ನೂ ಗೌರವಿಸಬೇಕಾಗುತ್ತದೆ. ಕೆಲವರನ್ನು ಗುರುತಿಸಿ ಗೌರವಿಸುವುದು ಹೇಗೆ ಅನ್ಯಾಯವೊ, ಅಂತೆಯೇ ಎಲ್ಲರನ್ನೂ ಗುರುತಿಸಿ ಗೌರವಿಸುವುದು ಅನ್ನುವುದೂ ಕೂಡ ಅರ್ಥ ಶೂನ್ಯ.

ವಿದ್ಯೆ, ಜ್ಞಾನ, ವಿಜ್ಞಾನ, ತಾಂತ್ರಿಕ ಬಲ್ಮೆ, ಯಾಂತ್ರಿಕ ನೈಪುಣ್ಯ ಅನ್ನುವಂತಹದೆಲ್ಲ ಎಲ್ಲರಲ್ಲಿಯೂ ಇರುತ್ತದೆ. ಅದರ ಪ್ರಮಾಣ ವೃದ್ಧಿಪಡಿಸಿಕೊಂಡಿರುವುದು ಇಂತಹದರಲ್ಲಿ ವ್ಯತ್ಯಾಸವಿರಬಹುದಷ್ಟೆ. ಅನ್ಯೋನ್ಯತೆ ಸಹಕಾರಗಳು ಬದುಕಿನುಸುರು ಆಗಿರುವಾಗ ಸರ್ವತ್ರ ಕ್ಷೇಮ ಸಂತಸ.

ಅಕ್ಷರ, ಸಂಖ್ಯೆ, ಬರಹ, ಲೆಖ್ಖಾಚಾರಗಳಿಂದಾಗಿ ಅಂತರ ವ್ಯತ್ಯಾಸಗಳು! ಹಿತಾಸಕ್ತಿಗಳು! ಬಡ್ಡಿ, ಬಾಡಿಗೆ, ಲಾಭ, ದಲ್ಲಾಳಿಗಳು! ಹಕ್ಕು, ಒಡೆತನ, ಮಾಲೀಕತ್ವಗಳ ಹಸಿ ಸ್ವಾರ್ಥ ಹೇಸಿ ಲಂಪಟತ್ವಗಳ ವ್ಯವಸ್ಥೆಗೆ, ಉಳ್ಳವರ ಸಂರಕ್ಷಣೆಗೆ ಇಲ್ಲದವರ ಕಣ್ಣೀರೊರೆಸಿ, ತಲೆ ಸವರಲು ಸೈನ್ಯ, ಪೋಲೀಸು, ಕಾನೂನು, ಸರಕಾರ, ನ್ಯಾಯಾಲಯ, ನಾಟಕಗಳು. ಎಲ್ಲ ಕಾಲ ದೇಶಗಳ ಸರ್ವ ಪ್ರಥಮ ಪಾಪಿಯೆಂದರೆ ರಾಜಕಾರಣಿ. ವೇಶ್ಯೆ ಕಲಾವಿಲಾಸ ಅನ್ನುತ್ತಾಳೆ, ಮತ ಧರ್ಮಗಳು ಇರುವವರೆಗೆ ಧರ್ಮದ ಗುತ್ತಿಗೆ ಅವಕ್ಕೆ! ಬಡತನ ಅಸಮಾನತೆಗಳು ಹೋಗಬೇಕೆಂದರೆ ಉದ್ಧಾರದ ಉದಾರವೆತ್ತುವ ರಾಜಕಾರಣಿ ತೊಲಗ

ಬೇಕು.

ಕೂದಲನ್ನು ಸಿಗಿಯುವುದು, ಅಲೆಗಳನ್ನು ಎಣಿಸುವುದು

ವಿದ್ಯೆ ಹೆಚ್ಚಿದಂತೆ ಆತಂಕ ತಾಪತ್ರಯಗಳಿಗೆ ರೆಕ್ಕೆ ಪುಕ್ಕಗಳು. ವಿಜ್ಞಾನ ವೃದ್ಧಿ ಪಡಿಸಿದಂತೆ ಶೋಷಣೆ ದುಡಿಸುವಿಕೆಗಳಿಗೆ ಹರೆಯ ಯೌವನ. ಅನಾಗರಿಕತೆಯೆಂದರೆ ಅನ್ನ-ಗಡ್ಡೆಗೆಣಸು, ಹಸಿ ಮಾಂಸ. ನಾಗರಿಕ ನಾಗತೊಡಗಿದಂತೆ ಅನ್ನವೇ ಮಾಯ ಪೋಯ !

ಪ್ರಗತಿಯೋ ? ದುರ್ಗತಿಯೋ ? ಅನಾಗರಿಕತೆಯಲ್ಲಿ ದುಡಿಯಬೇಕಾಗಿಲ್ಲ. ದುಡಿಸುವ ಪ್ರಶ್ನೆಯೇ ಇಲ್ಲ. ನಾಗರಿಕತೆಯ ಹಂತ ಮಂಜಲುಗಳನ್ನು ಏರತೊಡಗಿದಂತೆ ದುಡಿಸುವುದು, ಶೋಷಿಸುವುದು, ಕಿತ್ತುಕೊಳ್ಳುವುದು, ಕಾಡುವುದು, ನಿರಾಕರಿಸುವುದು.

ಮಾನವನಿಗೂ ಪಶುಗಳಿಗೂ ವ್ಯತ್ಯಾಸವೆಂದರೆ, ಮೇಯ್ದು ಹೊಟ್ಟೆ ತುಂಬಿದರೆ ಹಸು ತೆಪ್ಪಗೆ ಮೆಲುಕು ಹಾಕುತ್ತದೆ, ಮಾನವ ಬುದ್ಧಿ ಬೇಲಿ ಹಾಕುತ್ತದೆ, ಇನ್ನೊಬ್ಬರಿಗೆ ದೊರೆಯದಂತೆ ಹಕ್ಕು ಸ್ಥಾಪಿಸುತ್ತದೆ. ವಿಶಾಲ ಭೂಮಂಡಲವನ್ನು ವೈಜ್ಞಾನಿಕ ಸಂಶೋಧನೆ ಒಂದು ಅರ್ಥ ಮಾದರಿಯಲ್ಲಿ ಕಿಕ್ಕಿರಿದು ಮಾಡುತ್ತಿದ್ದರೆ, ಮಾನವನ ಸ್ವಾರ್ಥ ದಾಹ, ಧಾವಂತಗಳು ಮತ್ತೊಂದು ಮಾದರಿಯಲ್ಲಿ ಬರಿದು ಮಾಡುತ್ತಿವೆ. ಹೊಲಸುಗೊಳಿಸುತ್ತಿವೆ. ಬೇಲಿ ಹಾಕಿಕೊಳ್ಳುವುದೆಂದರೇನು! ಪೇಟೆಂಟ್ ಹಕ್ಕು ಅನ್ನುತ್ತಾನೆ ವಿಜ್ಞಾನಿ, ಕಾಪಿರೈಟ್ ಹಕ್ಕು ಅನ್ನುತ್ತಾನೆ [illegible] ಸ್ವಂತ ಪ್ರತಿಭೆ ಹಿಂದೆ ಯಾರೂ ರಚಿಸಿರಲಿಲ್ಲ, ಮುಂದೆ ಕಂಡು ಹಿಡಿಯುವುದಿಲ್ಲ ಎಂದೇನು? ಸ್ವಂತ ಚಿಂತನೆ ಸ್ವಸ್ತಿಕೆಯ ಆಧಾರದಿಂದ ಒಬ್ಬ ಒಂದನ್ನು ರಚಿಸಿದರೆ, ಓಹೋ! ಇದು ನಕಲು! ಹಿಂದೆ ಇಂತಹವನು ಬರೆದಿದ್ದಾನೆ! ಅನ್ನುವುದು ಯೋಗ್ಯ ವಿಮರ್ಶೆ ಆದೀತೆ? ಒಬ್ಬ ವಿಜ್ಞಾನಿ ಸ್ವಂತಿಕೆಯಿಂದ ಸಂಶೋಧಿಸಿದ್ದಕ್ಕೆ-ಇದು ಇಂತಹವನ ಕಾಪಿ! ಕೃತಿಚಾತುರ್ಯ-ಅನ್ನುವ ಕೊಕ್ಕು ಕೀಟಲೆ ಯುಕ್ತವೆ? ಒಳ್ಳೆಯವರಾರು ಕಳ್ಳರಾರು!

ಸಂಶೋಧನೆಯಿಂದ ಕಿತ್ತಾಟ, ಅಸೂಯೆಯಿಂದ ಕಡು ಬಡತನ. ಗಂಡ ಹೆಂಡತಿಯನ್ನು ಕುರಿತು ಸಂಶಯ, ಪಕ್ಕದವರನ್ನು ಕಂಡು ಅಸೂಯೆ! ಕಡು ಬಡವನಿಗೂ ತೃಪ್ತಿಯಿಲ್ಲ, ಕೈಗಾರಿಕಾ ಸಾಮ್ರಾಜ್ಯದೊಡೆಯನಿಗೂ ತೃಪ್ತಿಯಿಲ್ಲ. ವಿದ್ಯೆ ವಿಜ್ಞಾನಗಳು ದಾಹ ಜ್ವಾಲೆಗೆ ತುಪ್ಪ ಸುರಿದಂತೆ.

ಬಡವರನ್ನು ಕುರಿತು ಔದಾರ್ಯ, ಜವಾನರನ್ನು ಕರುಣೆಯಿಂದ ಕಾಣುವುದು, ದಾಸದಾಸಿಯರನ್ನು ಆತ್ಮೀಯತೆಯಿಂದ ನಡೆಸಿಕೊಳ್ಳುವುದು, ಇಂತಹ ದಟ್ಟ ಕ್ರೌರ್ಯನಗ್ನ ದೌರ್ಜನ್ಯಗಳನ್ನು ಮಾತ್ರ ಇದುವರೆಗಿನ ಸಭ್ಯರು ಹಾಗೂ ಅವರ ಸಾಹಿತ್ಯ ಕುರುಕುತ್ತಿರುವುದೆಂದರೆ.

ಬಡತನವೇ ಇಲ್ಲದಿರುವ ಪರಿಸ್ಥಿತಿಗೆ ಹೊಂದಿಕೊಳ್ಳಲು, ತಮ್ಮ ಕೆಲಸವನ್ನು ತಾವೇ ಮಾಡಿಕೊಳ್ಳುವುದಕ್ಕೆ ಸಿದ್ಧವಾಗಿರಲು, ಒಡೆಯ ಅರಸ ಮಾಲೀಕನಾಗದಿರಲು ಒಪ್ಪುವಂತಹವರು, ಇನ್ನೂ ಹುಟ್ಟಿ ಬರಬೇಕಾಗಿದೆ. ಅಂತಹವರನ್ನು ಸೂರ್ಯ ಇನ್ನೂ ಕಾಣಬೇಕಾಗಿದೆ.

ವ್ಯಾಪಾರಿಯ ಸುತ್ತ ಪ್ರಮಾದಿಗಳು, ಕೈಗಾರಿಕೋದ್ಯಮಿಯ ಸುತ್ತ ಮಹಾತ್ಮರು! ಶೋಷಣೆಕೋರರ ಸುತ್ತ ಸಾಧು ಸಾಧ್ವಿಯರು, ರಾಜಕಾರಣಿಯ ಸುತ್ತ ಹೊಗಳುಭಟ್ಟ ಪುಢಾರಿಗಳು. ದುಡಿಮೆಗೆ ಹತ್ತಿದ ತಗಣೆಗಳು, ಶ್ರಮ ಕಾರ್ಯಶೀಲತೆಗೆ ಒಕ್ಕರಿಸಿದ ಕೀಟಾಣು ಬ್ಯಾಕ್ಟೀರಿಯ.

ಬಡವರೂ ಪಾಪಿಗಳು, ಶ್ರೀಮಂತರು ಹೆಚ್ಚಿನ ನೀಚರು. ಜಗತ್ತಿನಲ್ಲಿ ಬಡತನವೂ ಇರಬಾರದು, ಸಿರಿತನವಂತೂ ಸುತರಾಂ ಇರಬಾರದು. ಕರುಬುವುದಕ್ಕೆ ಅಸೂಯೆ ಹೊಟ್ಟೆಕಿಚ್ಚಿಗೆ ಅವಕಾಶ ಕೊಡುವಂತಹ ಪರಿಸ್ಥಿತಿ ವಾತಾವರಣ ಅವಕಾಶಗಳೇ ರೋಗಾಣುಗಳು, ಕೀಟಗಳು.

ಮಾನವನ ಮನಸ್ಸನ್ನು ಪುನಸ್ಸಂಸ್ಕರಿಸಬೇಕಾಗಿದೆ, ಪುನರುತ್ಥಾನಗೊಳಿಸಬೇಕಾಗಿದೆ.

ಪುನರ್‌ಸೃಷ್ಟಿ ಹೊಸ ದೃಷ್ಟಿ ತಂದು ಕೊಡಬೇಕಾಗಿದೆ. ಇದುವರೆಗೆ ಜಗತ್ತು ಕಂಡಿರುವ ಶಿಕ್ಷಣ, ಅನುಭಾವ, ಚಿಂತನೆಗಳೆಲ್ಲವೂ ದಾನ, ಔದಾರ್ಯ, ಹಂಗು, ದಾಕ್ಷಿಣ್ಯಗಳನ್ನೇ ಹಾಡುತ್ತವೆ, ಶೋಷಣೆ ದುಡಿಸುವಿಕೆಯನ್ನೇ ಕೀರ್ತಿಸುತ್ತವೆ.

ಮಾನವೀಯತೆಯ ಸಮಾಧಿಯ ಮೇಲೆ ಮಾನವನ ನಾಟಕ

ಎಲ್ಲ ಕಾಲ ದೇಶಗಳಲ್ಲಿ ಶ್ರೇಷ್ಠ ನ್ಯಾಯಾಲಯ, ಪರಮೋಚ್ಚ ನ್ಯಾಯಾಲಯಗಳು ಏನು ಮಾಡುತ್ತವೆ! ತಡೆ('ಸ್ಟೇ')ಯಾಜ್ಞೆ ನೀಡುತ್ತವೆ! ಕೆಳಗಿನ ನ್ಯಾಯಾಲಯಗಳ ಆಜ್ಞೆಗಳನ್ನು ತಡೆಯುವುದು, ತಿದ್ದುವುದು, ವ್ಯತ್ಯಾಸಗೊಳಿಸುವುದು, ಮೊಟಕು ಮಾಡುವುದು, ಸಂಕುಚಿತಗೊಳಿಸುವುದು ಅಮಾನತ್ತಿನಲ್ಲಿ (ಸಸ್‌ಪೆನ್ಸ್)ಡುವುದು.

–ತುಂಬಾ ಸುಸ್ತು. ಆಟೋರಿಕ್ಷಾ ತನ್ನಿ–ಇಲ್ಲವೆ? ಹಾಗಾದರೆ ಟ್ಯಾಕ್ಸಿನೇ ತನ್ನಿ–ಡಾಕ್ಟರು ಒಳಗಿದ್ದಾರೆ ಕೂತ್ಕೊಳ್ಳಿ–ಪ್ರಾಣ ಹೋಗ್ತಿದೆ, ಅಬಾರ್ಶನ್ ಕೇಸು–ಈಗ ಬಂದು ಬಿಡ್ತೀನಿ ಸೀರಿಯಸ್ ಕೇಸ್, ಗಾಬರಿ ಆಗ್ಬೇಡಿ, ಐದು ನಿಮಿಷದಲ್ಲಿ–ಅಯ್ಯೋ ಬನ್ನಿ, ಬೇರೆ ಡಾಕ್ಟರ ಹತ್ರ ಹೋಗೋಣ.

ಆಟೋ ತನ್ನಿ–ಮಳೆ ಬರ್ತಿದೆ, ಐದು ರೂಪಾಯಿ ಕೇಳ್ತಿದಾನೆ–ಪ್ರಾಣ ಹೋಗ್ತಿರಬೇಕಾದ್ರೆ ದುಡ್ಡಿನ ಮುಖ ನೋಡ್ತೀರಾ?–ಇದು ನೋಡಿ, ಪಿಲ್ಸ್ ಟಾನಿಕ್ಕಿನದು ಹದಿನೆಂಟು ರೂ. ಇಂಜಕ್ಷನ್ನಿಂದು ಹನ್ನೆರಡು, ಎರಡು ಶೀಷೆ ಗ್ಲೂಕೋಸ್‌ದು ೩೪ ರೂ. ಎಕ್ಸ್‌ರೇ ಫೀ ಎಂಟು ರೂ. ನಾಳೆ ಬರ್ಬೇಕು.

–ಅಕ್ಕಿ, ರಾಗಿ, ಮನೆ ಖರ್ಚಿಗೆಂದು ಉಳಿಸಿಕೊಂಡಿದ್ದ ಹಣ ಒಂದು ಘಂಟೆಯಲ್ಲಿ ಡಾಕ್ಟರು ಕಸಿದುಕೊಂಡರು. ಮನೆಯಲ್ಲಿ ಉಪವಾಸ, ವನವಾಸ. ಇನ್ನೂ ದಿನ ನಿತ್ಯ ಆಸ್ಪತ್ರೆಗೆ ಅಲೆದಾಟ. ಔಷಧ ಉಪಚಾರಕ್ಕೆ ಹಣ? ಸಾಲ?

ಹಣ ಮುಗಿದೊಡನೆ ರೋಗವೂ ಕಾಲಿಗೆ ಬುದ್ಧಿ ಹೇಳಬೇಕು? ಹಣ ಮುಗಿದೊಡನೆ ಜಗಳವೂ ಇತ್ಯರ್ಥವಾಗಬೇಕು! ದುಡ್ಡಿದ್ದರೆ ತಾನೇ ಮತ್ತೆ ವೈದ್ಯರ ವೇಶ್ಯೆಯರ ಹತ್ತಿರ ಹೋಗುವ ಸಾಹಸ? ದುಡ್ಡಿದ್ದರೆ ತಾನೇ ಇನ್ನೂ 'ಖಡಕ್' ಲಾಯರು, ಮತ್ತೂ ಮೇಲಿನ ನ್ಯಾಯಾಲಯಕ್ಕೆ ಮೇಲರ್ಜಿ?

ಸೌಂದರ್ಯ ಸ್ಪರ್ಧೆ ಅನ್ನುವುದು ರೋಗಾಣು, ಒಲಂಪಿಕ್ ಕ್ರೀಡೆ ಅನ್ನುವುದು ಬ್ಯಾಕ್ಟೀರಿಯ. ಪ್ರವಾಸೋದ್ಯಮ ಅನ್ನುವುದು ಇತ್ತೀಚಿನ ಸೂಳೆಗಾರಿಕೆ. ಪತ್ರಿಕೋದ್ಯಮ ಅನ್ನುವುದು ವೈಶಿಷ್ಟ್ಯಮಯ ವೇಶ್ಯಾವಾಟಿಕೆ–ಸುಲಭ ಸಂಪಾದನೆಯ ಸಹಸ್ರ ಮುಖವಾಡಗಳು.

ಹಿಂದೆ ಕವಿ, ಕಾವ್ಯ, ಕಾದಂಬರಿ 'ಕೋರ'ರು ತಲೆ ಹಿಡುಕತನದ ಗುತ್ತಿಗೆ ಏಕಸ್ವಾಮ್ಯ ಹೊಂದಿದ್ದರು. ಇಂದು 'ಪ್ರಜಾಪ್ರಭುತ್ವ'ದ ನಾಲ್ಕನೆಯ ಆಧಾರವೆನಿಸಿದ ಪತ್ರಿಕೋದ್ಯಮ ಎಲ್ಲಿಗೆ ಬಂದು ಮುಟ್ಟಿದೆ? ಪತ್ರಿಕೆಯ ಮುಖ ಪುಟದಲ್ಲಿ ವೇಶ್ಯೆ ವ್ಯಭಿಚಾರಕ್ಕೆ ಆಹ್ವಾನಿಸುತ್ತಾಳೆ. ಪತ್ರಿಕೆಯ ಒಳಪುಟಗಳಲ್ಲಿ ಕಾಮಸೂತ್ರ ಮುದ್ರೆ ವಿನ್ಯಾಸ ವೈವಿಧ್ಯಮಯ ರತಿಕ್ರೀಡೆ ರಸ್ತೆಶ್ವಾನ ಪ್ರಣಯ! ಆಕಾಶದಡಿ ಸಭ್ಯ ದಾಂಪತ್ಯ ಮರ್ಯಾದೆ ಗೃಹಕೃತ್ಯಗಳು ಉಳಿಯಬೇಕೆಂದರೆ ಮುದ್ರಣ ಚಿತ್ರಣ ಲೇಖನಗಳು ಸತ್ತು ಹೋಗಬೇಕು. ಏಕೆಂದರೆ ಅಕ್ಷರವೇ ಬ್ಯಾಕ್ಟೀರಿಯ ಅಂಕಿ ಸಂಖ್ಯೆಯೇ ರೋಗಾಣು. ಮುಂಬತ್ತಿ ಸುಟ್ಟಾಗ ಯಾವುದೂ ನಷ್ಟವಾಗುವುದಿಲ್ಲ ಅನ್ನುವುದು ವೈಜ್ಞಾನಿಕ ಸತ್ಯ. ಅಂಕೆ ಅಕ್ಷರಗಳು ಸತ್ತಾಗ ಏನೂ ನಷ್ಟವಾಗುವುದಿಲ್ಲ ಅನ್ನುವುದು ಹೊಸ ಸಾಮಾಜಿಕ ಸತ್ಯವಾಗಬೇಕು! ಅಕ್ಷರದಿಂದ ವ್ಯಭಿಚಾರ, ಅಂಕೆಯಿಂದ ವ್ಯಾಪಾರ–ಕಳ್ಳತನ.

ಆದರೆ ಮುಂಗ ಮಾನವ ಬುದ್ಧಿಯ ಕುಚೋದ್ಯ ಪಾಟೀ ಸವಾಲು ನೋಡಿ ವಿಜ್ಞಾನದಿಂದ ಒಳ್ಳೆಯದಾಗಿಲ್ಲವೆ? ಲೇಖನ ಲೆಕ್ಕಾಚಾರಗಳನ್ನು ಒಳ್ಳೆಯದಕ್ಕೆ ಬಳಸಿಕೊಳ್ಳದಿದ್ದರೆ ಅದು ಯಾರ ತಪ್ಪು? ಉತ್ತರಿಸು

ವುದು ಕಷ್ಟ! ಸಮೃದ್ಧಿ ಪ್ರಗತಿಗಳು ಎಂದೂ ಕೊನೆಯುಬಾಯಿ ಕಟ್ಟ ಕಡೆಯ ಮನೆಗಳಿಗೆ ಮುಟ್ಟುವುದಿಲ್ಲ.

ತಲುಪದಿರುವಾಗ ಸಿಕ್ಕದಿರುವಾಗ ಲಭಿಸ ದಿರುವ ಎಟುಕದಿರುವ ಪರಿಸ್ಥಿತಿಗಳನ್ನು ಉಂಟು ಮಾಡುತ್ತವೆಂದೇ ವಿದ್ಯೆ ವಿಜ್ಞಾನ ಗಳು ತ್ಯಾಜ್ಯ, ವರ್ಜ್ಯ. ಹೆಚ್ಚಿನದರ ಆಸೆಗೆ ಸಿಕ್ಕಿ ಇದ್ದುದ್ದನ್ನೂ ಕಳೆದುಕೊಂಡು ಕೊರ ಗುವುದು ಬುದ್ಧಿವಂತಿಕೆಯ ಲಕ್ಷಣವೇನು?

ಮಾತು ಬಲ್ಲವನು ಮಾಣಿಕ್ಯ ತಂದ (ಅಕ್ಷ ರಕ್ಕೆ ಲಕ್ಷ ವರಹ!) ಮಾತು ಬಾರದವನು ಜಗಳ ತಂದ. ಮಾತು ಜ್ಯೋತಿರ್ಲಿಂಗ! ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವ ನಿಗೆ ರೋಗವಿಲ್ಲ-ಇಂತಹ ಅಣಿಮುತ್ತುಗಳು ದಂತಸೌಧ, ಗಾಳಿ ಗೋಪುರ, ಆರಾಮ ಕುರ್ಚಿಗಳಿಂದ ಉದುರುತ್ತವೆ. ಹಣ ಪ್ರಪಂಚ ದಲ್ಲಿ ಅದಕ್ಕೆ ಗುಣಗಣ. Got It For A Song!

ನಾಯಿ ಹಂದಿಗಳೊಡನೆ ಕಿತ್ತಾಡಿ, ಹಳಸಿದ ಅನ್ನ ಕಿತ್ತಿ ತಂದು ತಿನ್ನುತ್ತಿದೆ ಆ ಮುದುಕಿ. ಈ ದುಃಸ್ಥಿತಿ ಮುದುಕಿಗೇಕೆ ಬಂತು! ಶ್ರೀಮಂತ ಮಕ್ಕಳಿದ್ದಾರೆ, ಮನೆ ಸೇರಿಸುವು ದಿಲ್ಲ. ಕರೆಯುವುದಿಲ್ಲ, ತಿರುಗಿ ನೋಡು- ವುದಿಲ್ಲ. ಬದುಕಿಗೇನು ಬೆಲೆ? ಜೀವನದ ಅರ್ಥ?

ಇದು ಪ್ರತಿಯೊಬ್ಬ ಸ್ತ್ರೀಗೂ ಸಂಭವಿಸುವ ಸಾಧ್ಯತೆಯಿದೆ. ಇದು ಕಠೋರ ಸತ್ಯ. ಅವರ ವರ ಮಕ್ಕಳಿಗೆ ಅವರು 'ಭಾರ'ವಾಗುತ್ತಾರೆ. ತಮ್ಮ ಮಕ್ಕಳಿಂದಲೇ ತಿರಸ್ಕರಿಸಲ್ಪಡಲಿ ದ್ದಾರೆ. ಮಗ ತಂದೆಯನ್ನು ಹೊರತಳ್ಳು ತ್ತಾನೆ, ತಾನು ಮುದುಕನಾದಾಗ ತಾನೂ ತಳ್ಳಲ್ಪಡುತ್ತಾನೆ.

ಹಣದ ಬಡತನವನ್ನು ಪರಿಹರಿಸಬಹುದು. ಭಾವ ಬಡತನವನ್ನು ತುಂಬಿಕೊಡಲು ಸಾಧ್ಯವೆ? ಅವನವನ ತಂದೆಯನ್ನು ಅವ ನವನೇ ಅಪ್ಪನೆಂದು ಗುರುತಿಸಿ ಪ್ರೀತಿಸಬೇಕು. ಅವಳವಳ ತಾಯಿಯನ್ನು ಅವಳವಳೇ ಹುಡು ಕಿಕೊಂಡು ಹೋಗಿ ಸಂತೈಸಬೇಕು.

ಈ ಭಾವನೆಯೇ ನಷ್ಟವಾದರೆ! ಯಾವ ವಿಜ್ಞಾನ ಮನಶ್ಶಾಸ್ತ್ರಗಳು ಈ ನಷ್ಟವನ್ನು ತುಂಬಿಕೊಟ್ಟು ಸರಿಪಡಿಸಿಯಾವು? ತಾಯಿ ತನ್ನ ಮಗುವನ್ನು ಗುರುತಿಸುವಂತೆ, ಮಕ್ಕಳು ಮುದುಕರನ್ನು ಪ್ರೀತಿಸುವಂತಾಗ ಬೇಕು. ಎಲ್ಲರಿಗೂ ಮುಪ್ಪು ಬೆನ್ನು ಹತ್ತಿ ಬಂದೇ ಬರುತ್ತದೆ. ರೋಗ ನೋವು.

ಶಾಶ್ವತವಾದ ಆಶ್ರಯ, ಹುಸಿಯದ ಜೀವವಿಮೆ

ಜಗತ್ತಿನಲ್ಲಿ ಪ್ರತಿಯೊಬ್ಬರೂ ಉತ್ತರ ಕೊಡಬೇಕಾಗುತ್ತದೆ. ಪ್ರತಿಯೊಬ್ಬ ಸ್ತ್ರೀ ಪುರುಷ ಆಬಾಲ ವೃದ್ಧರೂ ನೋವು ಸಂಕಟ ಅನುಭವಿಸಬೇಕಾಗುತ್ತದೆ. ನನಗಾರೂ ದಿಕ್ಕಿಲ್ಲ, ಎಲ್ಲರೂ ನನ್ನನ್ನು ಕೈಬಿಟ್ಟರು, ನಾನು ಅನಾಥ(ಥೆ)— ಈ ಪರಿಸ್ಥಿತಿಗೆ ಪ್ರತಿ- ಯೊಬ್ಬರೂ ಕಾರಣರು, ಸಾಕ್ಷಿಗಳು.

ಪ್ರಭಾವ ಪಂಡಿತರು ಅಭಾವ ಪೀಡಿತರು- ಮಕ್ಕಳು ಕೆಟ್ಟು ಹೋಗುತ್ತಿದ್ದಾರೆ, ಕೈ ಮೀರುತ್ತಿದ್ದಾರೆ? ಎಲ್ಲಿಯವರೆಗೆ ರಂಗಭೂಮಿ ರಜತ ಪರದೆಗಳು ಇರುತ್ತವೋ, ಅಲ್ಲಿಯ ವರೆಗೆ ನಮ್ಮ ಮಕ್ಕಳು ನಮ್ಮವರಲ್ಲ, ನಮ್ಮ ಗಂಡ-ಹೆಂಡತಿಯ ಭರವಸೆ ನಿಷ್ಠೆಗಳು ನಷ್ಟ ಭ್ರಷ್ಟ.

ಭ್ರಾಮಕತೆ ಮಾದಕತೆ, ನೂರೊಂದು ಬಗೆಯ ಕುಡಿತ, ನೂರೊಂದು ಬಗೆಯ ಜೂಜು, ನೂರೊಂದು ಬಗೆಯ ಕಳ್ಳ ಸುಳ್ಳ ತನಗಳು ಸಮಾಜ, ಸರಕಾರ, ಸೈನ್ಯ, ಪೋಲೀಸು ಕುಮ್ಮಕ್ಕಿನಿಂದಲೇ ಎಲ್ಲ ಕಾಲ ದೇಶಗಳಲ್ಲಿ ನಡೆದುಕೊಂಡು ಬರುತ್ತಿವೆ ಅನ್ನುವುದು ಅರ್ಧ ಸತ್ಯ ಮಾತ್ರ.

ಅವೆಲ್ಲ ನಮಗೆಲ್ಲ ಬೇಕಾಗಿವೆ! ನಮ್ಮೆಲ್ಲರ ಹೃನ್ಮನ, ಕೈಕಾಲು ಅವಕ್ಕೆ ಗೊಬ್ಬರ ಹಾಕಿ ನೀರೆರೆದು ಪೋಷಿಸಿಕೊಂಡು ಬರುತ್ತಿವೆ. ಮುಲ್ಲ, ಪಾದ್ರಿ, ಪೂಜಾರಿ, ಪುರೋಹಿತರನ್ನು ನಮ್ಮ ಸ್ವಾರ್ಥಸಾಧನೆಗಾಗಿ ಮಾತ್ರ ಸಾಕಿ ಕೊಂಡು ಬರುತ್ತಿದ್ದೇವೆ, ನಾಯಿ ಬೆಕ್ಕು ಗಳಂತೆ.

ಭೂತ ಪ್ರೇತ ಪಿಶಾಚಿ ನಿಶಾಚರ ಮಂತ್ರ ತಂತ್ರ ಹಸ್ತ ಸಾಮುದ್ರಿಕ ಜ್ಯೋತಿಷ್ಯ- ಲಕ್ಷ ದೊಂದುಬಗೆಯ ಮೂಢ ನಂಬಿಕೆ ಲಕ್ಷದೊಂದು ಬಗೆಯ ಅಂಧಶ್ರದ್ಧೆಗಳನ್ನು, ಎಲ್ಲ ಕಾಲ ದೇಶಗಳ ಎಲ್ಲರೂ ಹೊರಗೆ ದ್ವೇಷಿಸುತ್ತ ಒಳಗೆ ಪ್ರೀತಿಸುತ್ತ ಉಳಿಸಿ ಬೆಳೆಸಿಕೊಂಡು ಬರುತ್ತಿದ್ದಾರೆ.

ಜ್ಞಾನ ಅನ್ನುವುದು ಕಳ್ಳತನ, ವಿಜ್ಞಾನ ಅನ್ನುವುದು ಮೋಸಜ್ಞಾನದ ಉಪಯೋಗ ವೆಂದರೆ ಇನ್ನೊಬ್ಬರ ಶ್ರಮ ಬೆವರನ್ನು ಚತು ರತೆ ಬುದ್ಧಿಪಂತಿಕೆಯಿಂದ ಅಪಹರಿಸುವುದು. ವಿಜ್ಞಾನದ ಪ್ರಯೋಜನವೆಂದರೆ ಅಮಾಯಕ ಗ್ರಾಹಕ ಬಳಕೆದಾರರ ದರೋಡೆ, ಕೊಳ್ಳೆ, ಸುಲಿಗೆ.

ಸಾಹಸದ ನೆವದಲ್ಲಿ ಕೆಲವರು ಚಂದ್ರ ಲೋಕಕ್ಕೆ ಹಾರಿ ಹೋಗಿ ಸುದ್ದಿ ಮಾಡು- ತ್ತಾರೆ. ಅಧ್ಯಾತ್ಮಿಕದ ಹೆಸರಿನಲ್ಲಿ ಪವಾಡ ಗಳನ್ನು ನಡೆಸಿ, ಇನ್ನು ಕೆಲವರು ಜನರನ್ನು ಮರುಳುಗೊಳಿಸುತ್ತಾರೆ. ಅಮಾಯಕರಿಗೆ ಉತ್ತರಿಸಲು ಬಾರದಿರಬಹುದು ಆದರೆ ಅದೆಲ್ಲ ಮೋಸ.

ಖೇಚರ ಚಂದ್ರಲೋಕಯಾನಿ, ಹೆಂಡತಿ ಮಕ್ಕಳೊಡನೆ ಆನಂದ ಸನ್ಮಾನದಲ್ಲಿ ಭೋರ್ಗರೆ ಯುವ ಚಿತ್ರ ವಿಶ್ವದಾದ್ಯಂತ ಪತ್ರಿಕೆ ಪುಸ್ತಕ ಗಳಲ್ಲಿ ಗುಂಯುಗುಡುತ್ತದೆ. ಅವರೆಲ್ಲ ಧನ್ಯರು ಮಾನ್ಯರು! ಅವರಿನ್ನು ಕೆಲಸ ಮಾಡಬೇಕಿಲ್ಲ. ಕೈಕೆಸರು ಮಾಡಿಕೊಳ್ಳಬೇಕಿಲ್ಲ!

ಇದೇ ಪಾಪ ಇದೇ ಮೋಸ. ಜಗತ್ತಿಗೆ ಎಂತಹ ಮೇಲ್ಪಂಕ್ತಿ? ಖೇಚರಗ, ಗಗನಯಾನಿ, ಪರ್ವತ ಶಿಖರಾರೋಹಿ, ಸಾಗರ ತಳಕ್ಕೆ ಇಳಿದ ವರಿಗೆ ಕೆಲಸವಿಲ್ಲದ ಗೌರವ ಹುದ್ದೆ ಅಧ್ಯಕ್ಷ ಗದ್ದುಗೆ ಗಾದಿಗಳು! ಲಕ್ಷ ಲಕ್ಷ ಸಂಬಳ ಸಾರಿಗೆ! ಅವರ ಹೆಸರು ಕೀರ್ತಿಯಿಂದ ಸಂಸ್ಥೆಗೆ ಹೊನ್ನು ಮಳೆ!

ಒಲಿಂಪಿಕ್ ವಿಜೇತರು ದೇವತೆಗಳು! ರಾಷ್ಟ್ರೀಯ ಅಂತಾರಾಷ್ಟ್ರೀಯ ಮಟ್ಟ ಮಂಜಲುಗಳಲ್ಲಿ ಅವರ ಸ್ಥಾನಮಾನಗಳು! ಅವರು ರಾಷ್ಟ್ರದ ಕೀರ್ತಿ! ಅದಕ್ಕಾಗಿ ಅವರಿಗೆ ಪ್ರಶಸ್ತಿ? ಅವರಿನ್ನು ಅಜೀವ ಪರ್ಯಂತ ಭೋಗ ವೈಭವ ರಾಜರಸ್ತೆಯಲ್ಲಿ ಶೋಭಾ ಯಾತ್ರೆ!

ಕ್ರೀಡೆ ಬೇಕು, ಅದರ ವ್ಯಾಪಾರೀಕರಣ ಬೇಡ, ಮನೋರಂಜನ ಬೇಕು ಅದರ ರಾಜಕೀ ಯಕರಣ ಬೇಡ-ವಿದ್ಯೆ ವಿಜ್ಞಾನಗಳು ಎಲ್ಲವನ್ನು ವ್ಯಾಪಾರೀಕರಣ ರಾಜಕೀಯಕರಣ ಮಾಡು- ತ್ತವೆ. ಹಾಗಾಗಿ ಸಕಲ ಸಂಪದ್ಭರಿತ ನಿಸರ್ಗದ ಮಧ್ಯೆ ದಟ್ಟ ದಾರಿದ್ರ್ಯ, ಕಡುಬಡತನಗಳು ತೇನ್‌ಸಿಂಗ್ ಹಿಲರಿ ಗೌರೀಶಂಕರ ಶಿಖರ ಏರಿ ದುದೂ ಮೇಲ್ಪಂಕ್ತಿ ಅಲ್ಲ. ಅವರು ಅಜೀವ ಪರ್ಯಂತ ಕುಟುಂಬ ಹೆಂಡತಿ ಮಕ್ಕಳೊಡನೆ ಉಳಿದ ಜನ ಸಾಮಾನ್ಯರಂತೆ, ಕೈಕೆಸರು ಮಾಡಿಕೊಂಡು ಉತ್ಪತ್ತಿ ಬೆಳೆದರೆ ಅದು ಮಾತ್ರ ಆದರ್ಶ. ಪ್ರತಿಯೊಬ್ಬನಿಗೂ ಅವನ ವನ ಅನ್ನ ಅವನವನ ಬೆವರಿನಿಂದ ದಿನ ದಿನವೂ ಅಜೀವ ಪರ್ಯಂತ ಲಭಿಸಬೇಕು. ಅದು ಮಾತ್ರ ಮೇಲ್ಪಂಕ್ತಿ.

ಯಾರ ಅಭಿಮಾನ! ಯಾರ ಬಿಗುಮಾನ! ಯಾರಿಗೆ ಬಹುಮಾನ!

ಸಾವಧಾನ! ಒರಗಿಕೊಳ್ಳಬೇಡಿ. ಮುಂದೆ ಬನ್ನಿ, ಕಿವಿಗೊಟ್ಟು ಕೇಳಿ. ಈಸೋಪ. ಬಲು ಬುದ್ಧಿವಂತ. 'ಬುದ್ಧಿವಂತ' ಆಳುಗಳು ಪುಸ್ತಕಗಳ ಗಂಟುಗಳನ್ನು ಆರಿಸಿಕೊಂಡರು. ಇನ್ನೂ 'ಬುದ್ಧಿ'ವಂತ ಆಳುಗಳು ಕುರ್ಚಿ ಮಂಚಗಳನ್ನು ಹೊತ್ತುಕೊಂಡರು. ಈಸೋಪ ಮಾತ್ರ ಆಹಾರ, ತಿಂಡಿ ಗಂಟು, ಹೊತ್ತು ಕೊಂಡನಂತೆ.

ತಂಗಿದೆಡೆಯಲ್ಲಿ ಪುಸ್ತಕಗಳನ್ನು ಹೊತ್ತವರು ತಾವು ಬುದ್ಧಿವಂತ ವಿದ್ವಾಂಸರೆಂದು ಬೀಗಿ ದರು. ಕುರ್ಚಿ ಮಂಚಗಳನ್ನು ಹೊತ್ತವರು ಅವನ್ನು ಒಡೆಯರಿಗೆ ಒದಗಿಸುತ್ತಿದ್ದರು. ಆಹಾರ ತಿಂಡಿ ಹೊತ್ತಿದ್ದ ಈಸೋಪ ಮಾತ್ರ ಹೊಟ್ಟೆತುಂಬ ರುಚಿ ರುಚಿಯಾಗಿ ಹೊಡೆ ಯುತ್ತಿದ್ದ! ದಾರಿ ಸವೆದಂತೆ ಅವನ ಹೊರೆ ಕಡಿಮೆ ಆಗುತ್ತಿತ್ತು. ಪ್ರಯಾಣದ ಕಡೆ ಹಂತದಲ್ಲಿ ಅವನು ಕೈಬೀಸಿ ನಡೆದ! ಉಳಿದ

ಆಳುಂಗಳು ಕತ್ತೆಗಳಂತೆ ಹೊತ್ತು ನಡೆದರು ಹಣ ಭಾರವನ್ನು!

ಎಲ್ಲ ಕಾಲ ದೇಶಗಳಲ್ಲಿ ಈಸೋಪರು ಬೀರ ಬಲ್ಲರು ತೆನ್ನಾಲಿ ರಾಮಕೃಷ್ಣರು ಇದ್ದೇ ಯಿರುತ್ತಾರೆ. ಅವರ 'ಬುದ್ಧಿ'ವಂತಿಕೆಯನ್ನು ಕಾಲಕಾಲಕ್ಕೂ ಅಮಾಯಕ ಜನತೆ ಮೆಚ್ಚಿ ತಲೆದೂಗಿ ಸಾಗಿರುತ್ತದೆ. ಪಾಶ್ಚಿಮಾತ್ಯ ಜಗತ್ತಿಗೆ ಈಸೋಪನ ನೀತಿಯು ಕಥೆಗಳು, ಪೌರ್ವಾತ್ಯ ಜಗತ್ತಿಗೆ ಪಂಚತಂತ್ರ, ಕಥಾ ಸರಿತ್ಸಾಗರ, ಬೃಹತ್ ಕಥಾ ಮಂಜರಿ ಗೊಂಚಲುಗಳು.

ವಿಷ್ಣುಶರ್ಮನ ಕುರಿ ಕತ್ತೆ ನಾಯಿ ಬೆಕ್ಕು ಗಿಳಿ ಸಿಂಹ ನರಿ ಇಲಿ ಗಿಡುಗ ಪಾರಿವಾಳ ಗೀಜಗ ಗುಬ್ಬಚ್ಚಿಗಳ ಬುದ್ಧಿಯನ್ನು ಕಂಡು ತಲೆದೂಗುತ್ತೇವೆ. ಅದೇ ಲಹರಿ ಕಾವು ಭಾವ ವೈಭವಗಳಲ್ಲಿ, ಆ ಮತ್ತು ಗುಂಗಿನಲ್ಲಿ ಮಾನವ ಚೇತನ ಸಾಕುಪ್ರಾಣಿ ಆಗಿಬಿಡುತ್ತದೆ!



ಡ್ಯಾಡಿ! ಪುಲಿಂಗ, ಸ್ತ್ರೀಲಿಂಗ, ಮತ್ತು ನಪುಂಸಕ, ಲಿಂಗ, ಅಂದರೆ ಏನು? ಇದರ ಬಗ್ಗೆ ಮೇಷ್ಟ್ರು ಕಲಿಸಿದರು ಆದರೆ 'ಸ್ವಗ ಲಿಂಗ' ಈಗ ಯಾರು ಕಲಿಸುತ್ತಾರೆ.

ಮನುಷ್ಯ ಮನುಷ್ಯನನ್ನು ಮೇಯಿಸಬಹುದೆ? ಸಹ ಮಾನವನ ಶಕ್ತಿ ಚೈತನ್ಯಗಳನ್ನು ಪ್ರತಿಭೆ ಕೌಶಲ ಬುದ್ಧಿವಂತಿಕೆಗಳನ್ನು ಕೊಳ್ಳಬಹುದೆ? ಎಲ್ಲ ಪೂರ್ವನಿಯೋಜಿತ ಚೌಕಟ್ಟು, ಅದರೊಳಗೆ ಕೊರಳಿಗೆ ಹಗ್ಗ ಮೂಗಿಗೆ ಮೂಗುದಾರ. ಕೆಲವರು ಆಳುವುದು ಉಳಿದವರು ಉಳುವುದು.

ಕಥೆ ಕೇಳುತ್ತಿರುವ ನಾವೆಲ್ಲರೂ ರಾಜಕುಮಾರ ಮಂತ್ರಿಮಕ್ಕಳು! ನಮ್ಮನ್ನು ಸ್ವಾಗತಿಸಿ ಅಪ್ಪಿ ಆಲಂಗಿಸಿ ರಮಿಸಲು ರಾಜಕುಮಾರಿಯರು ಸಿದ್ಧರಾಗಿ, ನಮ್ಮ ಸೂಚನೆ ಕಣ್ಸನ್ನೆಗಾಗಿ ಕಾಯುತ್ತಿದ್ದಾರೆ, ತುದಿಗಾಲಿನ ಮೇಲೆ ನಿಂತು. ನಾವೂ ಕೂಡ ತುಂಬಾ ಉದಾರಿಗಳು, ಪ್ರಜೆಗಳನ್ನು ಸ್ವಂತ ಮಕ್ಕಳಿಗಿಂದ ಹೆಚ್ಚಾಗಿ ಪ್ರೀತಿ ವಾತ್ಸಲ್ಯದಿಂದ ಕಾಪಾಡಲು ಸಿದ್ಧ. ರಾಜ್ಯ ಸಿಕ್ಕಬೇಕು!

ಪ್ರಜೆಗಳು ಸಾಕುಪ್ರಾಣಿ ಮೂಕ ಎತ್ತಿನಂತೆ ಉಳಬೇಕು, ಕತ್ತೆ ಕುದುರೆಯಂತೆ ಎಳೆಯಬೇಕು! ಕತ್ತೆ ಕಿರುಬ ತೋಳ ರಾಜಕಾರಣಿ, ಮಂತ್ರಿಮಾನ್ಯರಾಗಲು ಮಾತ್ರ ಶ್ರೋತೃವೃಂದ ತಯಾರು. ಎಳೆಯಲು, ಉಳಲು, ತೊಳೆದು ಬಳಿಯಲು ಯಾರೂ ಸಿದ್ಧರಿಲ್ಲ! ಸುಖ ಸೇವೆ ಬೇಕು.

ನಮಗೆ ಬೇಕಾಗಿರುವ ಭಾಗ್ಯ ಜಗತ್ತಿನ ಸೌಭಾಗ್ಯವೆಂದರೆ, ಚಲನಚಿತ್ರ ಮ್ಯಾಗಝಿನುಗಳು. ನಟನಟಿ; ವಿಜೇತ ಕ್ರಿಡಾಪಟುಗಳು ಸಿಕ್ಕಿದರಂತೂ ತೀರಿತು! ಆದರೆ ವಾಸ್ತವಿಕವಾಗಿ ಆಲಿಂಗನವಂತೂ ಇಲ್ಲವೇ ಇಲ್ಲ. ಹಸ್ತಾಕ್ಷರವಿತ್ತು (ದೂರದಿಂದ) ದರ್ಶನಭಾಗ್ಯವಿತ್ತರೆ ಅದೇ ಪುಣ್ಯ!

ಬಿಳಿಯಾನೆಯನ್ನು ಬಡವ ಸಾಕಬಲ್ಲನೆ? ನಟಸಾರ್ವಭೌಮ ಸಿಕ್ಕಬಹುದು. ಅವನನ್ನು ಮನೆಗೆ ಕರೆತರಬಹುದೆ? ತಾರಾಮಣಿಯನ್ನು ಮನೆಗೆ ಸೇರಿಸಬಹುದೆ? ಸಂಸಾರ ಉಳಿದೀತೆ? ರಾಜಕಾರಣಿ, ಕ್ರೀಡಾಪಟು, ಪತ್ರಿಕೋದ್ಯೋಗಿ, ವೇಶ್ಯೆ, ಸಾಹಿತಿ, ಸಾಹಿತ್ಯಕಲೆಗಳೆಂದರೆ ಅಷ್ಟೆ.

ಕೇವಲ ತುರಿತ ಕಡಿತ ಕೆರೆತ, ಪರೆತ. ಕುರ್ಚಿಗೆ ಭದ್ರವಾಗಿ ಅಂಟಿಕೊಂಡಿರುವವರೆಗೆ ರಾಜಕಾರಣಿ, ಅವನಿಂದ ಲಾಭ ಉಪಯೋಗಿ ಗಿಟ್ಟಿಸಬೇಕೆಂದಿರುವ ನಮ್ಮ ಹಸೀ ಸ್ವಾರ್ಥ ಹೇಸಿ ವಾಂಛಲ್ಯಗಳೇ ಅವನ ಕಿಮ್ಮತ್ತು ಗಮ್ಮತ್ತು, ನಿಜವಾದ ಪಾತಕಿ ನೀಚರೆಂದರೆ ನಾವೇ.

ಬಾಯಾರಿಕೆ ದಾಹ ಧಾವಂತಗಳಿಂದ ಹೊಲಸು ನೀರಿಗೆ ಬಂಗಾರದ ಬಣ್ಣ

ಹೆಂಡತಿ ಏಕೆ ಸಾಕಾಗುವದಿಲ್ಲವೆಂದರೆ, ರಂಗಭೂಮಿ ರಜತ ಪರದೆಗಳು ಇರುವುದರಿಂದ. ಗಂಡಿನಲ್ಲಿ ಸೊಗಸು ಕ್ಷೀಣಿಸುತ್ತಿರುವುದಕ್ಕೆ ಕಾರಣವೆಂದರೆ, ಕಲೆ ಸಾಹಿತ್ಯ ಪ್ರಾಕಾರ ಪ್ರಯೋಗ ಪ್ರಯೋಜನಗಳು. ರಾಜಕಾರಣಿ ಮಂತ್ರಿ ಮಾನ್ಯ ಹುದ್ದೆಗದ್ದುಗೆಳೇ ಬಡತನದ ಮೂಲ. (ಈವಾಗ ಅದೆಲ್ಲ ಬಿಟ್ಟು ಬಿಟ್ಟೆ! ಈಗ ಸುಮ್ನೆ ಮನೇಲಿದ್ಕೊಂಡು ಹೆಂಡತಿ ಮಕ್ಕಳೊಂದಿಗೆ ಹಾಯಾಗಿದೀನಿ. ಹರೆಯು ಕಳೆದ ಮೇಲೆ ಆಕರ್ಷಣೆ ಮುಗಿದ ಬಳಿಕ ನಿವೃತ್ತಿ. ಆದರೆ ಹಸಿವು ದಾಹ ತೀಟೆ ಗೀಳು ಚಾಳಿಗಳಿಗೆ ನಿವೃತ್ತಿ ಮುಕ್ತಾಯ ಅನ್ನುವುದುಂಟೆ? ಹರೆಯ ಎಷ್ಟು ಪ್ರಾಕಾರಗಳಲ್ಲಿ ಉಳಿದವರಿಗೆ ವಿಪತ್ತು ತರುತ್ತದೋ, ಅದರ ಹತ್ತರಷ್ಟು ನೋವು ಸಂಕಟಗಳನ್ನು ಮುಪ್ಪು ಕೂಡ ಸುತ್ತುಮುತ್ತಲಿನವರಿಗೆ ಉಂಟುಮಾಡುತ್ತದೆ!)

ದಾರಿದ್ರ್ಯ ದಟ್ಟೈಸುತ್ತಿದೆ! ಏಕೆಂದರೆ ಸುಲಭ ಸಿದ್ಧಿಯು ಅಪಾರ ಪ್ರಸಿದ್ಧಿಯ ಆಕಾಂಕ್ಷೆ ವಾಂಛೆಗಳಿಗೆ ಬಲಿಬಿದ್ದಿದ್ದೇವೆ. ಮನುಷ್ಯನಿಗೆ ಬೇಕಾಗಿರುವುದು ಅನ್ನವೋ ಚಿನ್ನವೋ! ಎರಡೂ ಒಟ್ಟಿಗಿರಲು ಅಸಾಧ್ಯ! ರಾಜಕಾರಣಿ ಬೇಕೋ? ಅನ್ನ ಬೇಕೋ? ಹೆಂಡತಿಯೋ ತಾರಾಮಣಿಯೋ?

ಶಿಕ್ಷಣ ರಂಗದಲ್ಲಿ ಬದಲಾವಣೆ ಆಗಬೇಕು, ಸುಧಾರಣೆ ಆವಶ್ಯ ಅನ್ನುವ ಮಾತು ಎಲ್ಲ ಕಾಲ ದೇಶಗಳ ಗಿಳಿಪಾಠ ಆಗಿದೆ. ನಿಜವಾದ ವಿದ್ಯೆ ಯಾವುದು? ಅದರ ಶಿಕ್ಷಣದ ಉದ್ದೇಶವೇನು? ಭೌತಿಕ ಸಿರಿಸಂಪತ್ತು ವಿಪತ್ತು ಆಪತ್ತು ಎಂದು ಆಧ್ಯಾತ್ಮ ಮೌಲ್ವಿ ಪಾದ್ರಿ ಪುರೋಹಿತರ ಹೇಳಿಕೆ.

ಉಗ್ರ ಸಮತಾದ, ಸಾಮ್ಯವಾದ, ಸುಖೀ ರಾಜ್ಯ ಸಮಾಜವಾದ ಜಾಲಗಳು? ಅವು ಕೇವಲ ತನ್ನ ಕೈ ಬಲಪಡಿಸಿಕೊಳ್ಳುವ ಕಾರ್ಮಿಕ ಕುರಿಗಳನ್ನು ಮೇಯಿಸುವ ತೋಳ ರಾಯರ ಗುಂಗು. ಕುರ್ಚಿ ಭದ್ರಪಡಿಸಿಕೊಳ್ಳುವ ಹೇಸಿ ರಾಜಕಾರಣಿಯ ಹುದ್ದೆ ಗದ್ದುಗೆ ಜೊಲ್ಲು ಲಾಲಾರಸವಷ್ಟೆ.

ಉಳಿದವರಿಗಿಂತ ಹೆಚ್ಚು ಹೊಂದುವ ಗಿಟ್ಟಿಸುವ ಆಸೆ ಆಕಾಂಕ್ಷೆಯ ಗರ್ಭದಲ್ಲಿ ಕಡು ಬಡತನ ದಟ್ಟ ದಾರಿದ್ರ್ಯಗಳು ಹುದುಗಿವೆ. ಹುತ್ತವ ಬಡಿದರೆ ಹಾವು ಸಾಯುಬಹುದೇ ಅಯ್ಯಾ?– ಏನಪ್ಪಾ ನೀನು ಓದಿ ಪ್ಯಾಸು ಮಾಡಿರೋದು? ಅಕೌಂಟೆನ್ಸಿ ಅಂಡ್ ಕಾಮರ್ಸ್ ಪದವೀಧರ!

ಅರ್ಥವಾಗಲಿಲ್ಲ, ಬಿಡಿಸಿ ಹೇಳಯ್ಯಾ ದೊರೆ! ಕೇಳಯ್ಯ ಪಾಪಿ! ಅರ್ಥಶಾಸ್ತ್ರವೆಂದರೆ ಬಡ್ಡಿ ಬಾಡಿಗೆ ಲಾಭ ದಲ್ಲಾಳಿ ಆಮದು ರಫ್ತು! ಸಿದ್ಧ ವಸ್ತು ಕಚ್ಚಾ ಮಾಲು ಸಾಗಾಣಿಕೆ ತೆರಿಗೆ ವಂಚನೆ, ಲೆಖ್ಖ ಪರಿಶೋಧಕರ ಬಾಯಿಗೆ ಸಿಹಿ ಹಾಕುವುದು ಸಮಾಜ ಸೇವೆ ಕಲ್ಯಾಣಕ್ಕೆ ದಾನ ನೀಡುವುದು.

ನೀನು ರಾಜ! ನಾನು ಕಾನೂನು ಪದವೀಧರ! ಓಹೊಹೋ! ಜಗಳ ಕಚ್ಚಾಟ ಇದ್ರೆ ಮಾತ್ರ 'ನ್ಯಾಯವಾದಿ'ಗೆ ಅನ್ನ!– ಹಂಗಲ್ಲ ಸ್ವಾಮಿ! ಜನಜೀವನ ಅಂದ ಮೇಲೆ ತಂಟೆ ತಕರಾರು ಮೋಸ ಸುಳ್ಳು ಕಳ್ಳ ಕೊಲೆಗಡುಕತನ ದಗಲ್‌ಬಾಜಿತನ ಇದ್ದೇ ಇರುತ್ತೆ– ಗೊತ್ತಾಯ್ತು! ಆಶಾವಾದಿ ನೀನು. ✡


ರುಚಿಕರ, ಪುಷ್ಟಿಕರ
ಬ್ರಿಟಾನಿಯಾ ಗ್ಲಾಕ್ಸೊ ಬಿಸ್ಕಿಟ್
B
R
I
T
A
N
N
I
A
Glaxo
BISCUITS
BRITANNIA
Glaxo
BISCUITS
ಬೆಳೆಯುವ
ಮಕ್ಕಳಿಗೆ ಸ್ವಾದಿಷ್ಟ
ಸಂಗಾತಿ
ಬ್ರಿಟಾನಿಯಾ ಬಿಸ್ಕಿಟ್ ಬಲು ಶ್ರೇಷ್ಠ
ಲಿಂಟಾಸ್.BBC.GLX.6-77 KN

★

ಹಿಂದಿ: ಸುಜಾತಾ

ಕನ್ನಡಕ್ಕೆ: ಡಿ. ಎನ್. ಶ್ರೀನಾಥ

ಲೇಸಿ ಶ್ವಾನ - ಒಂದು ಪರಂಪರೆ

ರಾಜ ಮಹಾರಾಜರ ವಂಶದಂತೆ ಒಂದು ನಾಯಿ ವಂಶವೂ ಇತ್ತು ಅಂದರೆ ನಮಗೆ ನಂಬಿಕೆಯಾಗುವುದಿಲ್ಲ, ಅದೂ ಯಶಸ್ವಿ ಹಾಗೂ ಕೋಟ್ಯಧೀಶ್ವರ ನಾಯಿ ವಂಶ. ಆದರೆ ಲೇಸಿ ಎಂಬ ನಾಯಿಯ ಒಂದು ವಂಶ ಇದೆ, ಅದು ತನ್ನ ಅಭಿನಯ ಕೌಶಲದಿಂದ ವಿಶ್ವವಿಖ್ಯಾತಿಯೊಂದಿಗೆ ಅನೇಕ ಪುರಸ್ಕಾರಗಳನ್ನೂ ಪದಕಗಳನ್ನೂ ಗೆದ್ದಿದೆ. ಅದು ದೊಡ್ಡ ಜಮೀನುದಾರನೂ ಅಹುದು. ಅದರ ವಾರ್ಷಿಕ ಆದಾಯ ಕೋಟಿಗಟ್ಟಲೆ.

೧೯೩೮ರಲ್ಲಿ ಸ್ವರ್ಗೀಯ ಎರಿಕ್ ನೈಟ್ ತನ್ನ ಮಗಳಿಗಾಗಿ ಒಂದು ಕತೆ ಬರೆದ. ಆ ಕತೆಯ ಮುಖ್ಯ ಪಾತ್ರ, ಲೇಸಿಯೆಂಬ ಒಂದು ನಾಯಿ. ಮಕ್ಕಳಿಗಾಗಿ ಬರೆದ ಈ ಕತೆ ಮೊದಲು ಲಘುಕಥೆಯ ರೂಪದಲ್ಲಿ, ನಂತರ ಪುಸ್ತಕದ ಆಕಾರ ತಾಳಿ ಪ್ರಕಾಶಿತವಾಯಿತು. ಅದಕ್ಕೆ 'ಲೇಸಿ ಕೇಮ್ ಹೋಮ್' (ಲೇಸಿ ಮನೆಗೆ ಬಂದ) ಎಂದು ಹೆಸರಿಡಲಾಯಿತು. ಕತೆ ತುಂಬಾ ಪ್ರಸಿದ್ಧಿಯಾಯಿತು. ಪ್ರಸಿದ್ಧ ಅಮೇರಿಕನ್ ಫಿಲ್ಮ್ ಕಂಪನಿ ಎಂ. ಜಿ. ಎಂ. ಅದನ್ನು ಚಲಚ್ಚಿತ್ರವಾಗಿ ನಿರ್ಮಿಸುವ ಅಧಿಕಾರವನ್ನು ಪಡೆಯಲು ನೈಟ್‌ಗೆ ಸುಮಾರು ಎಪ್ಪತ್ತೈದು ಸಾವಿರ ರೂಪಾಯಿಗಳನ್ನು ಕೊಟ್ಟಿತು.

ಚಲಚ್ಚಿತ್ರದಲ್ಲಿ ಲೇಸಿ ಅಭಿನಯ ಮಾಡಲು ಯೋಗ್ಯವಾದ ನಾಯಿಯ ಹುಡುಕಾಟ ಪ್ರಾರಂಭವಾಯಿತು. ಜಾಹಿರಾತುಗಳು ಬಂದವು. ಹಾಲಿವುಡ್‌ನ ಒಂದು ಪಾರ್ಕಿನಲ್ಲಿ ಒಂದು ದಿನ ಸ್ಪರ್ಧೆ ನಡೆಯಿತು; ಮುನ್ನೂರು ನಾಯಿಗಳು ಸೇರಿದವು. ಪ್ರಸಿದ್ಧ ಶ್ವಾನ ಪ್ರಶಿಕ್ಷಕ ರುಡ್ ವೆದರ್‌ವೆಕ್ಸನ ನಾಯಿ ಪಾಲ್ ಸಹ ಅವುಗಳಲ್ಲಿತ್ತು. ಆದರೆ ನಿರ್ಮಾಪಕರಾದ ಸೈಮ್ ಮಾರ್ಕ್ಸ್ ಮತ್ತು ನಿರ್ದೇಶಕರಾದ ಫ್ರೆಡ್ ವಿಲ್‌ಕಾಕ್ಸರಿಗೆ ಒಂದೂ ಲೇಸಿಯ ಅಭಿನಯ ಮಾಡಲು ಯೋಗ್ಯವಾಗಿ ಕಂಡುಬರಲಿಲ್ಲ. ಆದರೆ ವೆದರ್‌ವೆಕ್ಸನಿಗೆ ತನ್ನ ಪಾಲ್‌ನ ಮೇಲೆ ವಿಶ್ವಾಸವಿತ್ತು; ಸೈಮ್ ಮಾರ್ಕ್ಸ್ ಪಾಲ್ ಬಗ್ಗೆ ಖಂಡಿತ ಕೇಳುತ್ತಾನೆಂದು ಅವನು ಕಾಯತೊಡಗಿದ.

ಹಾಗೇ ಆಯಿತು. ಕತೆಯಲ್ಲಿ ಲೇಸಿ ಪ್ರವಾಹಗ್ರಸ್ತ ನದಿಯೊಂದನ್ನು ದಾಟುತ್ತಿರುವ ದೃಶ್ಯವಿತ್ತು; ಸುಯೋಗವೆಂಬಂತೆ ಆ ದಿನಗಳಲ್ಲಿ ಉತ್ತರ ಕ್ಯಾಲಿಫೋರ್ನಿಯಾದ ಸಾನ್ ಜೋಕಿನ್ ನದಿಯಲ್ಲಿ ಭಯಂಕರ ಪ್ರವಾಹ ಬಂತು. ವಾರ್ಕನಿಗೆ, ವೆದರ್ ವೆಕ ನ ನಾಯಿ ಪಾಲನನ್ನು ಕರೆಸಿ ಯಾಕೆ ಪರೀಕ್ಷಿಸಬಾರದೆಂದು ಅನ್ನಿಸಿತು.

ಪಾಲ್‌ನೊಂದಿಗೆ ವೆದರ್‌ವೆಕ್ಸ್ ಬಂದ. ಪಾಲ್ ಪ್ರವಾಹಗ್ರಸ್ತ ನದಿಯನ್ನು ಈಜಿ ದಾಟಿತು. ಅದು ತನ್ನ ಹಿಂಗಾಲುಗಳ ನಡುವೆ ತನ್ನ ಬಾಲ ಸಿಕ್ಕಿಸಿಕೊಂಡು ದಡ ಹತ್ತಿ, ಕ್ಯಾಮರಾದೆದುರಿಗೆ ಸರಿಯಾಗಿ ಬಂದು ಬಿತ್ತು. ನಂತರ ಅದು ಎದುರು ಚಾಚಿದ ತನ್ನ ಮುಂದಿನ ಅಂಗೈಗಳ ನಡುವೆ ತಲೆಯಿಟ್ಟು ಮೆಲ್ಲಮೆಲ್ಲನೆ ಕಣ್ಣು ಮುಚ್ಚಿಕೊಂಡಿತು.

ನದಿಯಿಂದ ಬಂದ ಮೇಲೆ ತನ್ನ ಶರೀರವನ್ನು ಜಾಡಿಸಿ ನೀರು ಕೊಡವದ ಹಾಗೆ, ಅಷ್ಟೊಂದು ಕುಶಲತೆಯಿಂದ, ಪಾಲನಿಗೆ ತರಬೇತಿಯಾಗಿತ್ತು. ನಿರ್ಮಾಪಕರು ಇದರಿಂದ ತುಂಬಾ ಪ್ರಭಾವಿತರಾದರು; ಕಾರಣ, ಒಂದು ವೇಳೆ ಪಾಲ್ ನಾಯಿ ಸ್ವಭಾವದಂತೆ ಶರೀರ ಜಾಡಿಸಿ ನೀರು ಕೊಡವಿದ್ದರೆ, ಇಡೀ ದೃಶ್ಯ ಅಸ್ವಾಭಾವಿಕವಾಗಿ ಬಿಡುತ್ತಿತ್ತು. ಕತೆಯಲ್ಲಿ, ನಾಯಿ ಈಜಾಡಿದ ಮೇಲೆ ಉಸಿರಾಡಲೂ ಕಷ್ಟವಾಗುವಷ್ಟು ದಣಿದಿರುತ್ತದೆ. ಅಂತಹ ಪರಿಸ್ಥಿತಿಯಲ್ಲಿ ಅದು ತನ್ನ ಶರೀರವನ್ನು ಹೇಗೆ ಜಾಡಿಸಲು ಸಾಧ್ಯ ?

ಪಾಲ್ ಅಭಿನಯ ಪರೀಕ್ಷೆಯಲ್ಲಿ ಸಫಲವಾಯಿತು. ಪ್ರಶಿಕ್ಷಕ ವೆದರ್‌ವೆಕ್ಸ್‌ನೊಂದಿಗೆ ಎಂ. ಜಿ. ಎಂ. ಒಂದು ಒಪ್ಪಂದ ಮಾಡಿಕೊಂಡಿತು. ಈಗ ಪಾಲ್ ಲೇಸಿಯಾಗಿತ್ತು. ಅದರ ವಂಶವೂ ಇದೇ ಹೆಸರಿನಿಂದ ಸಾಗುತ್ತಿದೆ. ಅಲ್ಲದೆ ಫಿಲ್ಮ್‌ಗಳಲ್ಲಿ ಮತ್ತು ಟೆಲಿ-ವಿಜನುಗಳಲ್ಲಿ ಅಭಿನಯ ಮಾಡಿ ಸುಮಾರು ಒಂದು ನೂರು ಕೋಟಿ ಹಣವನ್ನು ಗಳಿಸಿದೆ. ಅದರ ವಾರ್ಷಿಕ ಆದಾಯ ಸುಮಾರು ಮೂರುವರೆ ಕೋಟಿ ರೂಪಾಯಿಗಳು.

ಲೇಸಿಯ ಮೊದಲ ಚಿತ್ರ 'ಲೇಸಿ ಕೇಮ್ ಹೋಮ್' ಸಿದ್ಧವಾಯಿತು. ಆ ದಿನಗಳಲ್ಲಿ ಎಲಿಜಾಬೆತ್ ಟೇಲರ್ ಫಿಲ್ಮ್‌ಗಳಲ್ಲಿ ಕೆಲಸ ಮಾಡಲಾರಂಭಿಸಿದ್ದಳು. 'ಲೇಸಿ ಕೇಮ್ ಹೋಮ್'ನಲ್ಲಿ ಅವಳದೊಂದು ಭೂಮಿಕೆಯಿತ್ತು. ಆದರೆ ಪ್ರೇಕ್ಷಕರು ಅವಳಿಗಿಂತ ಲೇಸಿಯ ಅಭಿನಯವನ್ನು ತುಂಬಾ ಮೆಚ್ಚಿಕೊಂಡರು.

ಸನ್ ೧೯೪೩ ರಲ್ಲಿ ಚಿತ್ರ ಪ್ರದರ್ಶಿತವಾಗುವುದಕ್ಕೆ ಮೊದಲು ನಡೆದ ಅದರ ಪ್ರದರ್ಶನದಲ್ಲಿ ಕಂಪನಿಯ ಓರ್ವ ಡೈರೆಕ್ಟರನಾದ ಲುಯಿ ಮಾಯರ್ ಭಾವುಕತೆಯಿಂದ ಅತ್ತುಬಿಟ್ಟ; ಅವನು ಅಷ್ಟು ಪ್ರಭಾವಿತನಾದ. ಅವನ ಆಗ್ರಹದ ಮೇರೆಗೆ ಕಂಪನಿಯು ಹಣ ಖರ್ಚು ಮಾಡಿ ಚಿತ್ರದಲ್ಲಿ ಮತ್ತಷ್ಟು ದೃಶ್ಯಗಳನ್ನು ಸೇರಿಸಿತು. ನಂತರ ಚಿತ್ರ ರಿಲೀಜಾಗಿ 'ಹಿಟ್' ಆಯಿತು. ಸನ್ ೧೯೫೨ರ ವರೆಗೆ ಲೇಸಿ ಫಿಲ್ಮ್-ಶೃಂಖಲೆಯಲ್ಲಿ ಆರು ಚಿತ್ರಗಳಾದವು. ಕಡೆಗೆ ಎಂ. ಜಿ. ಎಂ. ಯಾವುದೋ ಕಾರಣಗಳಿಂದ ಲೇಸಿ ಶೃಂಖಲೆಯ ನಿರ್ಮಾಣವನ್ನು ನಿಲ್ಲಿಸಿ, ಲೇಸಿಯ ಉಪಯೋಗದ ಅಧಿಕಾರವನ್ನು ವೆದರ್‌ವೆಕ್ಸನಿಗೆ ಮರಳಿಕೊಟ್ಟಿತು.

ಸನ್ ೧೯೫೩ ರಲ್ಲಿ ವೆದರ್‌ವೆಕ್ಸನಿಗೆ ಪ್ರಸಿದ್ಧ ಟೆಲಿವಿಜನ್ ನಿರ್ಮಾಪಕ ರಾಬರ್ಟ್ ಮ್ಯಾಕ್ಸ್‌ವೇಲನಿಂದ ಲೇಸಿಯನ್ನು ಸೂಪರ್ ಮೆನ್ ಟೆಲಿವಿಜನ್‌ನಲ್ಲಿ ಪ್ರದರ್ಶಿತಗೊಳಿಸಬಹುದೆಂಬ ಪ್ರಸ್ತಾಪಬಂತು. ವೆದರ್‌ವೆಕ್ಸ್ ಲೇಸಿಯ ಉಪಯೋಗದ ಅಧಿಕಾರವನ್ನು ಮ್ಯಾಕ್ಸ್‌ವೇಲ-ನಿಗೆ ಮಾರಿದ.

ಆದರೆ ಈಗ ಪಾಲ್ ಶಿಥಿಲನಾಗಿದ್ದ, ಆದ್ದರಿಂದ ಅವನ ಸ್ಥಾನದಲ್ಲಿ ಇನ್ನೊಂದು ನಾಯಿಯನ್ನುಪಯೋಗಿಸುವುದು ಅನಿವಾರ್ಯವಾಗಿತ್ತು. ವೆದರ್‌ವೆಕ್ಸನು ಪಾಲನ ಮರಿಗಳಲ್ಲಿಯೇ ಒಂದು ನಾಯಿಯನ್ನು ತರಬೇತು ಮಾಡಿಟ್ಟುಕೊಂಡಿದ್ದ. ರೂಪ, ಗುಣ ಎಲ್ಲದರಲ್ಲೂ ಅದು ಪಾಲನನ್ನೇ ಹೋಲುತ್ತಿತ್ತು. ಅಲ್ಲದೆ ಲೇಸಿ ಫಿಲ್ಮ್-ಶೃಂಖಲೆಯನ್ನು ಮುರಿದು ಆಗಲೇ ಒಂದು ವರ್ಷದ ಮೇಲ್ಪಾ

ಗಿತ್ತು. ಆದ್ದರಿಂದ ಜನರ ಮನಸ್ಸಿನಲ್ಲಿ ಲೇಸಿಯ ಚಹರೆ ಮಬ್ಬಾಗಿತ್ತು. ವೆದರ್-ವೆಕ್ಸ್ ಪಾಲನ ಜಾಗದಲ್ಲಿ ಲೇಸಿ II ನ್ನು ಟಿ. ವಿ. ಯಲ್ಲಿ ಹಾಜರು ಪಡಿಸಿದ. ಅದರ ಶೋ ಒಂದೇ ಬಾರಿಗೆ ಲೋಕಪ್ರಿಯವಾಯಿತು. ಸನ್ ೧೯೫೪-೫೫ ರಲ್ಲಿ ಲೇಸಿಯ ಟೆಲಿವಿಜನ್ ಶೋ ಮಕ್ಕಳಿಗೆ ಸರ್ವೋತ್ಕೃಷ್ಟವೆಂದು ಘೋಷಿತವಾಯಿತು. ಅದಕ್ಕಾಗಿ ಮ್ಯೆರ್ಸ್‌ವೇಲನಿಗೆ 'ಎಮಿ' ಪುರಸ್ಕಾರ ದೊರೆಯಿತು.

ಲೇಸಿ IIರ ಖ್ಯಾತಿ ಹೆಚ್ಚಾದ್ದರಿಂದ ಎಂ. ಜಿ. ಎಮ್. ಮತ್ತೆ ಅದರ ಉಪಯೋಗದ ಅಧಿಕಾರವನ್ನು ಮ್ಯೆರ್ಸ್‌ವೇಲನಿಗೆ ಎರಡು ಕೋಟಿ ನಲ್ವತ್ತಮೂರು ಲಕ್ಷ ಎಪ್ಪತ್ತೈದು ಸಾವಿರ ರೂಪಾಯಿಗಳನ್ನು ಕೊಟ್ಟು ಕೊಂಡಿತು. ಈ ಸಾರಿಯೂ ಲೇಸಿಯ ಚಿತ್ರ 'ಹಿಟ್' ಆಯಿತು. ಚಿತ್ರ ನಿರ್ಮಾಪಕರು ಕೋಟಿಗಟ್ಟಲೆ ಡಾಲರ್ ಗಳಿಸಿದರು.

ಖ್ಯಾತಿಯ ಚರಮೋತ್ಕರ್ಷದ ವೇಳೆಗೆ ಅಕಸ್ಮಾತ್ತಾಗಿ ೧೯೫೯ರಲ್ಲಿ ಲೇಸಿII ಕ್ಯಾನ್ಸರ್ ರೋಗದಿಂದ ಮೃತ್ಯುವನ್ನಪ್ಪಿತು. ಆದರೆ ವೆದರ್‌ವೆಕ್ಸ್ ಸೋಲುವವನಾಗಿರಲಿಲ್ಲ. ಅವನು ಮೊದಲೇ ಲೇಸಿ ವಂಶದ ಮತ್ತೊಂದು ನಾಯಿಯನ್ನು ತರಬೇತು ಮಾಡಿ ಸಿದ್ಧಗೊಳಿಸಿದ್ದ. ಹೀಗೆ ಲೇಸಿ III ಕ್ಯಾಮರಾದೆದುರು ಬಂತು. ಈ ಸಾರಿ ಪ್ರೇಕ್ಷಕರು ಹೊಸ ಲೇಸಿ ಬೇರೆಯದೆಂದು ಗುರುತಿಸಿದರು. ಸಾವಿರಾರು ಪ್ರೇಕ್ಷಕರು ಪತ್ರಗಳನ್ನು ಬರೆದು ನಿಜಾಂಶ ತಿಳಿಯಬಯಸಿದರು. ಆದರೆ ನಿರ್ಮಾಪಕರು ಅದು ೧೯೪೩ರ ಲೇಸಿಯೆಂದೇ ಹೇಳುತ್ತಿದ್ದರು.

ಆದರೆ ಆ ಸುಳ್ಳು ವ್ಯರ್ಥವಾಯಿತು. ಲೇಸಿ III ತನ್ನ ಪೂರ್ವವರ್ತಿಗಳಂತೆ ಕುಶಲ ನಟನೆಂದು ಹೊಗಳಿಸಿಕೊಳ್ಳಲಿಲ್ಲ. ಅಲ್ಲದೆ ಸ್ವತಃ ತಾನೇ ತನ್ನ ವಿಫಲತೆಗೆ ವಿಕ್ಷುಬ್ಧಗೊಂಡಿತು. ಕಡೆಗೆ ವೆದರ್-ವೆಕ್ಸ್ ಗುಂಡು ಹೊಡೆದು ಅದನ್ನು ಕೊಂದು ಹಾಕಿದ.

ಲೇಸಿ IIIರ ನಂತರ ಲೇಸಿ IVರ ಕತೆ ಪ್ರಾರಂಭವಾಯಿತು. ನಿರ್ಮಾಪಕರಿಂದ ಹಿಡಿದು ಪ್ರೇಕ್ಷಕರ ತನಕ ಲೇಸಿ IV ಲೇಸಿ ವಂಶದ ಬಹು ಉತ್ತಮ ನಟನೆಂಬುವುದು ದೃಢವಾದ ಮಾತು. ಅದು ನಿರ್ಮಾಪಕರು, ನಿರ್ದೇಶಕರು ಮತ್ತು ನಟರೊಂದಿಗೆ ಬೆರೆತಿದ್ದು, ಅಪರಿಚಿತರೊಂದಿಗೆ ಬೇರೆಯಾಗಿರುತ್ತಿತ್ತು. ಅದಕ್ಕೆ ತಾನು ಬೇರೆ ನಾಯಿಗಳಿಗಿಂತ ಭಿನ್ನ ಮತ್ತು ಉತ್ತಮವೆಂಬುದು ಗೊತ್ತಿದೆ. ತನ್ನ ಪಾತ್ರದ ಕೊನೆಯಲ್ಲಿ, ಸ್ಟೇಜಿನಲ್ಲಿ ನೆರದಿದ್ದ ಪ್ರೇಕ್ಷಕರು ಚಪ್ಪಾಳೆ ಹೊಡೆಯುವುದು ತನ್ನ ಪ್ರಶಂಸೆಗಾಗಿ ಎನ್ನುವುದೂ ಅದಕ್ಕೆ ಗೊತ್ತು.

ಅದು ತುಂಬಾ ವಿನೋದಿ ಕೂಡ. ಒಂದು ಸಲ ಅದು ತನ್ನ ಬಾಯಲ್ಲಿ ಒಂದು ಜೀವಂತ ಹಾವನ್ನು ಹಿಡಿಯಬೇಕಾಗಿತ್ತು. ಕ್ಯಾಮರಾದೆದುರು ಬಂದು ಅದು ಹಾವನ್ನು ಅಲ್ಲಿ ಕುಳಿತ ಸಹನಿರ್ಮಾಪಕಿಯ ಮಡಿಲಿಗೆ



"ಈ ವರ್ಷದ ಬೆಲೆ ಏರಿಕೆ ಗ್ರಾಫ್ ತಯಾರಿಸಬೇಕಾದರೆ, ನಮ್ಮ ಆಫೀಸನ್ನು ಹೆಚ್ಚು ಎತ್ತರವಿರುವ ರೂಮೊಂದಕ್ಕೆ ಬದಲಾಯಿಸಬೇಕು ಸಾರ್..."

ಹಾಕಿತು. ಸಹನಿರ್ಮಾಪಕಿ ಹಾವನ್ನು ಕಂಡರೆ ಹೆದರುತ್ತಾಳೆಂದು ಅದಕ್ಕೆ ಗೊತ್ತಿತ್ತು. 'ಕಟ್'ನ ಅರ್ಥ ಸಹ ಅದಕ್ಕೆ ತಿಳಿದಿತ್ತು. ಶೂಟಿಂಗ್ ಮಧ್ಯೆ ನಿರ್ದೇಶಕ 'ಕಟ್' ಹೇಳಿದರೆ ಅದು ಕೂಡಲೇ ಹೋಗಿ ವಿಶ್ರಾಂತಿ ತೆಗೆದುಕೊಳ್ಳುತ್ತಿತ್ತು.

ಮೊದಲನೆ ಸಲವೇ ಚೆನ್ನಾಗಿ ಅಭಿನಯಿಸಲೆಂದು ಶೂಟಿಂಗಿಗೆ ಮುಂಚೆಯೇ ವೆದರ್‌ವೆಕ್ಸ್ ಲೇಸಿಗೆ ಪ್ರತಿಯೊಂದು ದೃಶ್ಯಕ್ಕೂ ಪೂರ್ವ ತಯಾರಿ ಕೊಡುತ್ತಿದ್ದ. ಒಂದು ಸಲ ಲೇಸಿಗೆ ಒಂದು ಮೊಲವನ್ನು ಹಿಂಬಾಲಿಸಬೇಕಾಗಿತ್ತು. ಹಿಂಬಾಲಿಸಲು ಲೇಸಿಗೆ ಬದಲಾಗಿ ಬೇರೊಂದು ನಾಯಿಯನ್ನು ಬಳಸಲಾಯಿತು. ಆದರೆ ಲೇಸಿಯ ಅಭಿನಯ ಮುಗಿದಾಗ, ಮೊಲ ಹೆದರುತ್ತಿತ್ತು; ಅದನ್ನು ಲೇಸಿ ತನ್ನ ಅಂಗೈಯಲ್ಲಿ ಹಿಡಿದು 'ಇದು ಬರೇ ನಾಟಕ, ಹೆದರಬೇಕಿಲ್ಲ.'ವೆಂದು ಧೈರ್ಯ ಹೇಳಿತು. ಆದರೆ ಆ ದೃಶ್ಯವನ್ನು ನಿರ್ದೇಶಕ ಚಿತ್ರಿಸಿಕೊಳ್ಳುತ್ತಾನೆಂದು ಅದಕ್ಕೇನು ಗೊತ್ತಿತ್ತು?


ಲೇಸಿ ಸಾನ್‌ಫ್ರಾನ್ಸಿಸ್ಕೋ ಕಣಿವೆಯ ಒಂದು ಹಳ್ಳಿಯ ಮನೆಯಲ್ಲಿ ವೆದರ್‌ವೆಕ್ಸ್‌ನೊಂದಿಗೆ ವಾಸಿಸುತ್ತದೆ. ಕೋಣೆಯಲ್ಲಿ ಒಂದು ದೊಡ್ಡ ಹಾಸಿಗೆಯಿದೆ, ನೆಲದ ಮೇಲೆ ರತ್ನಗಂಬಳಿ ಹಾಸಿದೆ. ಗೋಡೆಗೆ ಅದರ ಒಂದು ಭಾವಚಿತ್ರ ತಗಲಿ ಹಾಕಿದೆ. ಅದರ ಹೆಂಡತಿ ಹೆಸರು ಗರ್ಲೀ.

ವೆದರ್‌ವೆಕ್ಸ್ ಅದರ ವಂಶ ಬೆಳವಣಿಗೆಗಾಗಿ ಅನೇಕ ಹೆಣ್ಣು ನಾಯಿಗಳನ್ನು ಸಾಕಿದ್ದಾನೆ; ಹೀಗೆ ಅದು ಬಹಳಷ್ಟು ನಾಯಿಗಳಿಗೆ ತಂದೆ. ಅವುಗಳಲ್ಲೇ ಯಾವುದೋ ಒಂದು ಲೇಸಿ–V ಆಗುತ್ತದೆ. ಕಳೆದ ಇಪ್ಪತ್ತೊಂಬತ್ತು ವರ್ಷಗಳಲ್ಲಿ ಲೇಸಿ ವಂಶದ ಸಾವಿರಾರು ನಾಯಿಗಳನ್ನು ಉತ್ಪಾದಿಸಿ, ಸಾಕಿರುವುದಾಗಿ ವೆದರ್‌ವೆಕ್ಸ್ ಹೇಳುತ್ತಾನೆ; ಆದರೆ ಅವುಗಳಲ್ಲಿ ಮೂರು–ನಾಲ್ಕು ಮಾತ್ರವೇ ರೂಪದಲ್ಲಿ ಮೂಲ ಲೇಸಿ(ಪಾಲ್)ಯನ್ನು ಹೋಲುತ್ತವೆ.

ಲೇಸಿ ನಟನಂತೂ ಸರಿ; ಎಲ್ಲಾ ನಟರಂತೆ ಲೇಸಿಯೂ 'ಸಿಲ್ಕೀ' ಎಂಬ ನಾಯಿಯನ್ನು ಸಾಕಿದ್ದಾನೆ. ಸಿಲ್ಕೀ ಅವನ ನಿಜವಾದ ಹಾಗೂ ಪ್ರೀತಿಯ ಸ್ನೇಹಿತ. ಇಬ್ಬರೂ ಗಂಟೆಗಟ್ಟಲೆ ಕಲೆತು ಆಡುತ್ತಿರುತ್ತಾರೆ. ಆದರೆ ಪಾರ್ಟಿ ಮುಂತಾದ ಸಮಾರಂಭಗಳಿಗೆ ಅವನು ತನ್ನ ಹೆಂಡತಿ ಗರ್ಲೀ ಜೊತೆಗೆ ಹೋಗುತ್ತಾನೆ.

ಲೇಸಿ ಆರೋಗ್ಯಕರವಾಗಿ ಹಾಗೂ ಸದೃಢವಾಗಿರಲೆಂದು ವೆದರ್‌ವೆಕ್ಸ್ ಅದಕ್ಕೆ ನಿತ್ಯ ವ್ಯಾಯಾಮ ಮಾಡಿಸುತ್ತಾನೆ. ಊಟದಲ್ಲಿ ಮಾಂಸದೊಂದಿಗೆ ತರಕಾರಿಗಳು, ಹಾಲಿನ ಕೆನೆ, ಈರುಳ್ಳಿ, ಬೆಳ್ಳುಳ್ಳಿ, ವಿಟಮಿನ್ ಮತ್ತು ಬಾಟಲಿಯಲ್ಲಿ ಮುಚ್ಚಿಟ್ಟ ಶುದ್ಧ ನೀರನ್ನು ಕೊಡುತ್ತಾನೆ. ಆದರೆ ಲೇಸಿ ತನಗೆ ರುಚಿಯಾದ ಅಡುಗೆ ತಂದಾಗಲೇ ಆ ಕಡೆಗೆ ನೋಡುತ್ತದೆ; ನೀಟಾಗಿ ಬಡಿಸಿದಾಗಲೇ ಉಣ್ಣುತ್ತದೆ.

ನಟ ಅಥವಾ ನಟಿಯೊಂದಿಗೆ ಚುಂಬಿಸುವಾಗ ತನ್ನ ಜೊಲ್ಲು ಅವರಿಗೆ ಹತ್ತದಂತೆ ಲೇಸಿ ಗಮನ ನೀಡುತ್ತದೆ. ಕಳೆದ ದಿನಗಳಲ್ಲಿ ಅದು ಹಾಲಿವುಡ್‌ನ ಹಳೆ ನಟಿ ಜೋನ್ ಕ್ರಾಫರ್ಡಳೊಂದಿಗೆ ಅಭಿನಯಿಸಿತು. ಮೊದಲ ಭೇಟಿಯಲ್ಲೇ, ಲೇಸಿ ಚುಂಬಿಸಿದಾಗ ಪುರುಷನೇ ಚುಂಬಿಸಿದಂತಾಯಿತು, ಸ್ಕ್ರೀನ್‌ನಲ್ಲಿ ನಾನೆಷ್ಟು ಚುಂಬನ ಪಡೆದಿದ್ದೇನೋ ಅವುಗಳಲ್ಲೆಲ್ಲಾ ಲೇಸಿಯ ಚುಂಬನ ತುಂಬಾ ಬಿಸಿ ಮತ್ತು ಸ್ನೇಹದಿಂದ ಕೂಡಿತ್ತು ಎಂದು ಮಿಸ್ ಕ್ರಾಫರ್ಡ್ ಹೇಳುತ್ತಾಳೆ. ✡



★ ಶಂಕರಲಾಲ ಮಸ್ಕರಾ

ಶವಕ್ಕೂ ಪಟ್ಟಾಭಿಷೇಕ

ಪ್ರಪಂಚದ ರಾಷ್ಟ್ರಗಳ ಇತಿಹಾಸದಲ್ಲಿ ರಾಜ ಮಹಾರಾಜರ ಪ್ರೇಮಪ್ರಕರಣಗಳು ತುಂಬಿತುಳುಕುತ್ತಿವೆ. ಇವುಗಳಲ್ಲಿ ಅನೇಕ ಕಥೆಗಳು ಕಲ್ಪನಾತೀತವಾಗಿ ವಿಕ್ಷಿಪ್ತವಾಗಿವೆ ಪೋರ್ತುಗಾಲದ ರಾಜ ಪೆಡ್ರೊ ಹಾಗೂ ಪ್ರೇಯಸಿ ಇನೇಜ ಇವರ ಕಥೆ ಇಂಥ ವಿಕ್ಷಿಪ್ತ ರಮ್ಯಕಥೆಯಾಗಿದೆ. ರಾಜ ಪೆಡ್ರೊ ಪೋರ್ತುಗಾಲದವನಾದರೆ ಇನೇಜ ಸ್ಪೇನದವಳು. ಇನೇಜ ಬೆಳೆದು ದೊಡ್ಡವಳಾದದ್ದು ತನ್ನ ಶ್ರೀಮಂತ ಗೆಳತಿ ಕಾನ್ಸ್ಟಂಟೇಶಿಯಾಳ ಅರಮನೆಯಲ್ಲಿ. ಇನೇಜಳ ಗೆಳತಿಯ ತಂದೆ ಸ್ಪೇನದಲ್ಲಿ ಬಲಾಢ್ಯ ಡ್ಯೂಕ್ (ಸರದಾರ) ಆಗಿದ್ದ. ತಂದೆ ಡ್ಯೂಕನ ಅರಮನೆಯಲ್ಲಿ ಕಾನ್ಸ್ಟಂಟೇಶಿಯಾ ತನ್ನ ಗೆಳತಿ ಇನೇಜಳೊಡನೆ ಶುಕ್ಲಪಕ್ಷದ ಚಂದ್ರಮನಂತೆ ಬೆಳೆಯುತ್ತಿದ್ದಾಗ ಡ್ಯೂಕನು ತನ್ನ ಇತರ ಶ್ರೀಮಂತ ಗೆಳೆಯರೊಂದಿಗೆ ತನ್ನ ಮಗಳ ಭವಿತವ್ಯದ ಕುರಿತು ಚಿಂತಿಸುತ್ತಿದ್ದ.

ಪೋರ್ತುಗಾಲದ ಅರಸು ಅಲ್ಫೊಂಸೊ ತನ್ನ ಮಗ ಯುವರಾಜ ಪೆಡ್ರೋನಿಗಾಗಿ ಸ್ಪೇನದಲ್ಲಿ ರಾಜಕನ್ಯೆಯೊಬ್ಬಳನ್ನು ಅರಸುತ್ತಿದ್ದ. ಕಾನ್ಸ್ಟಂಟೇಶಿಯಾಳ ತಂದೆ ಡ್ಯೂಕ್ ಪೆಡ್ರೋನಿಗೆ ತನ್ನ ಮಗಳನ್ನು ಕೊಟ್ಟು ವಿವಾಹಮಾಡಬಯಸಿ ರಾಜ ಅಲ್ಫೊಂಸೊನನ್ನು ಭೆಟ್ಟಿಯಾದ. ಆಗ ಸುದೈವದಿಂದ ಅಲ್ಫೊಂಸೊನು ಕಾನ್ಸ್ಟಂಟೇಶಿಯಾಳನ್ನು ತನ್ನ ಮಗ ಪೆಡ್ರೋನಿಗೆ ತಂದುಕೊಳ್ಳಲು ಒಪ್ಪಿದ್ದಲ್ಲದೆ ಸ್ಪೇನದಲ್ಲಿ ಪುಂಡಾಟಿಕೆ ನಡೆಸಿದ್ದ ಮೂರ ಜನರನ್ನು ಹತ್ತಿಕ್ಕಲು ಪೋರ್ತುಗೀಜ ಸೇನೆಯನ್ನು ಸ್ಪೇನಕ್ಕೆ ಕಳಿಸಲೂ ಸಮ್ಮತಿಸಿದ.

ಈ ಒಪ್ಪಂದದ ಪರಿಣಾಮವಾಗಿ ಇನ್ನೂ ಚಿಕ್ಕವಳಾಗಿದ್ದ ಕಾನ್ಸ್ಟಂಟೇಶಿಯಾ ಪೆಡ್ರೋನನ್ನು ಲಗ್ನವಾಗಿ ಲಿಸ್ಬನ್ನಿಗೆ ಬಂದಳು. ಬಳುವಳಿಯಾಗಿ ಜೊತೆಯಲ್ಲಿ ಇನೇಜಳನ್ನೂ ಕರೆತಂದಳು. ಲಿಸ್ಬನ್ನಿನ ರಾಜದರ್ಬಾರದ ವೈಭವದಿಂದ ಆಕೆ ಸಂಭ್ರಾಂತಳಾದಳು. ಶಹಾಮೃಗದಂಥ ಉದ್ದನ್ನ ಗೋಣಿನ ಪೆಡ್ರೋನನ್ನು ಕಂಡಾಗಲಂತೂ ಆಕೆ ಹೌಹಾರಿದಳು.

ಆದರೆ ಪೆಡ್ರೊ ಇನೇಜಳತ್ತ ಆಕರ್ಷಿತನಾದ. ಕಾನ್ಸ್ಟಂಟೇಶಿಯಾ ಮತ್ಸರದಿಂದ ಕುದಿದು ಇನೇಜಳನ್ನು ಸ್ಪೇನಕ್ಕೆ ಹಿಂತಿರುಗಿಸುವಂತೆ ಗಂಡನಿಗೆ ದುಂಬಾಲು ಬಿದ್ದಳು. ಆಕೆ ತನ್ನ ತಂದೆಗೂ ಕ್ರೋಧದಿಂದ ಈ ವಿಚಾರ ಬರೆದು ತಿಳಿಸಿದಳು. ಆದರೆ ಪರಿಣಾಮವೇನೂ ಕಂಡುಬರಲಿಲ್ಲ.

ಪೆಡ್ರೊ ತನ್ನ ಪ್ರೇಯಸಿ ಇನೇಜಳನ್ನು ಕೋಯಂಬ್ರಾದಲ್ಲಿಯ ಸಂಟ ಕ್ಲಾರಾ ಅರಮನೆಗೆ ಸ್ಥಳಾಂತರಿಸಿದನು. ಪೆಡ್ರೊ ಆಗಾಗ

ಸೆಂಟ ಕ್ಲಾರಾ ಅರಮನೆಗೆ ಭೆಟ್ಟಿಕೊಟ್ಟು ಇನೇಜಳೊಡನೆ ವಿಲಾಸ ಕ್ರೀಡೆಗಳಲ್ಲಿ ಮಗ್ನನಾಗಿರುತ್ತಿದ್ದ.

ಕಾನ್ಸ್ಟಂಟೇಶಿಯಾ ಕ್ರಿ. ಶ. ೧೩೪೫ ರಲ್ಲಿ ಅಕಸ್ಮಾತ್ತಾಗಿ ನಿಧನಹೊಂದಿದಳು. ಆಗ ಆಕೆಯ ಮಗು ಒಂದು ತಿಂಗಳದ್ದಿತ್ತು. ಕಾನ್ಸ್ಟಂಟೇಶಿಯಾಳ ಈ ಅಕಾಲಮೃತ್ಯು ದರ್ಬಾರದಲ್ಲಿ ಅನೇಕ ಊಹಾಪೋಹಗಳಿಗೆ ಎಡೆಮಾಡಿಕೊಟ್ಟಿತು. ಪೆಡ್ರೋನ ದುರ್ವ್ಯವಹಾರಗಳಿಂದ ಕಾನ್ಸ್ಟಂಟೇಶಿಯಾಳಿಗೆ ಆಘಾತವಾಗಿ ಆಕೆ ಮರಣಹೊಂದಿದಳು, ಇನ್ನು ಮುಂದಿನ ಸರತಿ ಅವಳ ಮಗು ಫರ್ಡಿನಾಂಡನದು ಎಂದು ಹಾರಿಕೆಯ ಸುದ್ದಿಗಳು ಹಬ್ಬತೊಡಗಿದವು.

ಅಳ್ವರಾ ಗೊಂಜೆಲ್ಸ, ಪೆಡ್ರೊ ಕೊಯೆಲೊ, ಡಿಮೆಂಗೊ ಪಚೇಕೊ ಈ ಮೂವರೂ ಮೇಲಿನ ಗಾಳೀವರ್ತಮಾನದ ಪ್ರಚಾರದಲ್ಲಿ ಅತ್ಯಾಸಕ್ತಿಯಿಂದ ತೊಡಗಿದ್ದರಿಂದ ಈ ಸುದ್ದಿ ರಾಜ ಆಲ್ಫೊಂನ್ಸೊನ ಕಿವಿವರೆಗೂ ಹೋಗಿ ಮುಟ್ಟಿತು. ರಾಜಕುಮಾರ ಪೆಡ್ರೋನಿಗೆ ಇನ್ನೊಂದು ವಿವಾಹ ಮಾಡುವದಾಗಿ ರಾಜ ಆಲ್ಫೊಂನ್ಸೊ ಘೋಷಿಸಿದ. ತನ್ನ ತಂದೆಯ ಈ ನಿರ್ಧಾರ ಕೇಳಿದ ಪೆಡ್ರೋ ಅರಮನೆಯಿಂದ ಕೋಯಂಬ್ರಾಕ್ಕೆ ಪಲಾಯನ ಹೇಳಿ ಅಲ್ಲಿ ತನ್ನ ಪ್ರೇಯಸಿ ಇನೇಜಳೊಡನೆ ಸೆಂಟ-ಕ್ಲಾರಾ ಅರಮನೆಯಲ್ಲಿ ಉಳಿದುಬಿಟ್ಟ.

ಇನೇಜಳನ್ನು ಮುಗಿಸಿಬಿಟ್ಟರೆ ಪೆಡ್ರೊ ಪುನಃ ತಮ್ಮ ಕೈಗೆ ಸಿಗುತ್ತಾನೆ ಎಂದು ದರ್ಬಾರದ ಸರದಾರರು ರಾಜ ಆಲ್ಫೊಂನ್ಸೊವಿಗೆ ಸಲಹೆ ಇತ್ತರು.

ರಾಜಕಾರ್ಯಕ್ಕಾಗಿ ಪೆಡ್ರೋನನ್ನು ಕೋಯಂಬ್ರೊದಿಂದ ಹೊರಗೆ ಸಾಗಿಸಲಾಯಿತು.

ಪೆಡ್ರೊ ಕೋಯಂಬ್ರಾದಲ್ಲಿ ಇಲ್ಲದ ಸಮಯದಲ್ಲಿ ನಾಲ್ವರು ಅಶ್ವಾರೋಹಿಗಳು ಕರಾಳ ರಾತ್ರಿಯಲ್ಲಿ ಸೆಂಟ್ ಕ್ಲಾರಾ ಅರಮನೆಯ ಅಂಗಳದಲ್ಲಿ ಒಂದುಗೂಡಿದರು ಈ ಅಶ್ವಾರೋಹಿಗಳು ಬೇರಾರೂ ಆಗಿರದೆ ಮೇಲೆ ಹೇಳಿದ ಅಳ್ವರಾ ಗೊಂಜೆಲ್ಸ, ಪೆಡ್ರೊ-ಕೊಯೆಲೊ, ಡಿಮೆಂಗೋ ಪಚೇಕೊ ಇವರು ರಾಜಾ ಆಲ್ಫೊಂನ್ಸೊನ ನೇತೃತ್ವದಲ್ಲಿ ಸೇರಿದವರಾಗಿದ್ದರು. ಈ ನಾಲ್ವರೂ ಅರಮನೆಯೊಳಗೆ ನುಗ್ಗಿ ಇನೇಜಳನ್ನು ಸುತ್ತುಗಟ್ಟಿದರು. ಆದರೆ ಆಕೆಯ ಅಪಾರ ಸೌಂದರ್ಯವನ್ನೂ ಪೆಡ್ರೊವಿಷಯಕ ಅಪ್ರತಿಮ ಪ್ರೀತಿಯನ್ನೂ ನೋಡಿ ರಾಜಾ ಅಲ್ಫೊಂನ್ಸೊನ ಮನಸು ಕರಗಿ ತೆಪ್ಪಗೆ ನಿಂತ. ಆದರೆ ಉಳಿದ ಮೂವರು ರಾಕ್ಷಸರಂತೆ ಅವಳ ಮೇಲೆರಗಿ ಆಕೆಯನ್ನು ಮುಗಿಸಿಬಿಟ್ಟರು. ಇಷ್ಟೇ ಅಲ್ಲ, ಅರಮನೆಯ ಚರ್ಚಿನ ಆವಾರದಲ್ಲಿಯೆ ಆಕೆಯ ಗೋರಿ ಕಟ್ಟಿಬಿಟ್ಟರು. ಬೆಳಗಾದ ಕೂಡಲೆ ಅವರು ಮಾಡಿದ ಕೆಲಸ ಎಂದರೆ ಇನೇಜಾ ಪ್ರಬಲ ಮೂರ್ಛಾಘಾತದಿಂದ ಆಕಸ್ಮಿಕ ಮರಣವನ್ನಪ್ಪಿದಳು ಎಂದು ಸುದ್ದಿ ಹರಡಿದ್ದು.

ಈ ವಾರ್ತೆ ತಿಳಿದ ಕೂಡಲೆ ಪೆಡ್ರೊ ಕ್ರೋಧೋನ್ಮಾದದಿಂದ ತಂದೆಯ ವಿರುದ್ಧ ಬಂಡೆದ್ದ. ಇನೇಜಳ ಹತ್ಯಾಕಾರಿಗಳಾದ ಆ ಮೂವರೂ ಸರದಾರರ ನಿವಾಸಗಳಿಗೆ ಕೊಳ್ಳಿಯಿಡಿಸಿ ಸುಟ್ಟು ಹಾಕಿದ. ರಾಜ ಆಲ್ಫೊಂನ್ಸೊನಿಗೂ ಯುವರಾಜ ಪೆಡ್ರೋನ ಭಾವನೆಗಳ ಬಗ್ಗೆ ಗೌರವ ಉಂಟಾಗಿತ್ತು. ಆತನು ಮಗನಿಗೆ ರಾಜ್ಯವನ್ನು ಒಪ್ಪಿಸಿ ಮೂರೂ ಹತ್ಯಾಕಾರಿಗಳನ್ನು ಕ್ಷಮಿಸಿ ಬಿಡಬೇಕೆಂದು ಮಗನನ್ನು ಯಾಚಿಸಿದ. ಆದರೂ ಪೆಡ್ರೋ ಅವರನ್ನು ಕ್ಷಮಿಸಿಬಿಡುವನೆಂಬ ಭರವಸೆ ಆಲ್ಫೊಂನ್ಸೊನಿಗೆ ಇಲ್ಲದಾದ್ದರಿಂದ ಅವನು ಹತ್ಯಾಕಾರಿಗಳು ಮೂವರನ್ನು ಕರೆಸಿ, "ಸದ್ಯ ನೀವು ಕಾಸ್ಟಾಯಿಲ್‌ಕ್ಕೆ ಪಲಾಯನ ಮಾಡಿರಿ; ನನ್ನ ನಂತರ ನನ್ನ ಮಗ ನಿಮ್ಮ ಮೇಲೆ ತನ್ನ ಸೇಡು ತೀರಿಸಿಕೊಳ್ಳದಿರಲಾರ," ಎಂದು ಹೇಳಿದ.

ರಾಜಾ ಆಲ್ಫೊಂನ್ಸೊ ಸತ್ತ ಎರಡು ವರ್ಷಗಳ ನಂತರ ರಾಜಾ ಪೆಡ್ರೋ ಕಾಸ್ಟಾಯಿಲದ ರಾಜನಿಗೆ ಆ ಮೂವರು ಹತ್ಯಾಕಾರಿಗಳನ್ನು ತನಗೆ ಒಪ್ಪಿಸಬೇಕು ಎಂದು

ಕಾಡಿ ಬೇಡಿ ಅವರನ್ನು ವಶಪಡಿಸಿಕೊಂಡ. ನಂತರ ಅವರನ್ನು ಅನನ್ವಿತವಾಗಿ ಹಿಂಸಿಸಿ ಕೊಂದು ಹಾಕಿದ.

ಕಾಶ್ಪಿಂಡೋದಲ್ಲಿ ತನ್ನ ವೈಭವಪೂರ್ಣ ದರ್ಬಾರ ನಡೆಯಬೇಕೆಂದು (ಕ್ರಿ ೧೩೬೦ ರ ಜೂನ ದಿ ೧೨ ರಂದು) ಆಜ್ಞೆ ಹೊರಡಿಸಿದ. ಆ ಸಭೆಯಲ್ಲಿ ಪೆಡ್ರೋನು ಇನೇಜಳ ವಿವಾಹವನ್ನು ತನ್ನೊಡನೆ ಗಾರ್ಡಾದ ಬಿಶಪ್ ಬ್ರಗಾಂಝಾ ನೆರವೇರಿಸಿದ್ದನು ಎಂದು ಸಾರಿದ್ದಲ್ಲದೆ, “ಇನೇಜಾ ಹೀಗೆ ನನ್ನ ಧರ್ಮಪತ್ನಿ ಆಗಿದ್ದಾಳೆ. ಅಂತೇ ನಿಮ್ಮ ಮಹಾರಾಣಿ ಕೂಡ ಆಗಿದ್ದಾಳೆ. ಆದ್ದರಿಂದ ಆಕೆಯ ಪಟ್ಟಾಭಿಷೇಕ ನಡೆಸಬೇಕೆಂದು ನಾನು ಆಕೆಯ ಶವವನ್ನು ಆಕೆಯ ಗೋರಿಯಿಂದ ಹೊರ ತೆಗೆಸಿದ್ದೇನೆ” ಎಂದೂ ಘೋಷಿಸಿದನು.

ಹೀಗೆ ಪೋರ್ತುಗಾಲದ ಇತಿಹಾಸದಲ್ಲಿಯೇ, ಅಷ್ಟೇಕೆ, ಪ್ರಪಂಚದ ಚರಿತ್ರೆಯಲ್ಲಿಯೆ ಅನ್ನಬಹುದು, ವಿಕ್ಷಿಪ್ತ ವಿಚಿತ್ರವಾದ ಪಟ್ಟಾಭಿಷೇಕ ನಡೆಯಿತು. ಒಂದು ಸಿಂಹಾಸನದ ಮೇಲೆ ರಾಜ ಪೆಡ್ರೊ ರಾಜೋಚಿತ ವಸ್ತ್ರಾಭೂಷಣಗಳಿಂದ ವಿರಾಜಮಾನನಾಗಿದ್ದರೆ ಇನ್ನೊಂದು ಸಿಂಹಾಸನದ ಮೇಲೆ ಇನೇಜಳ ಶವವನ್ನು ರಾಜವಸ್ತ್ರಗಳಿಂದ ಸಿಂಗರಿಸಿ ಮಂಡಿಸಲಾಗಿದ್ದಿತು.

ಬಿಶಪ್‌ನು ಕಂಪಿಸುತ್ತಿದ್ದ ಕೈಗಳಿಂದ ರಾಜಮುಕುಟವನ್ನೆತ್ತಿ ಆ ಶವದ ತಲೆಯ ಮೇಲಿಟ್ಟನು. ನಂತರ ದರ್ಬಾರದಲ್ಲಿದ್ದವರೆಲ್ಲ ಒಬ್ಬೊಬ್ಬರು ಸಾಲಾಗಿ ಬಂದು ರಾಣಿಯ ಪಾದಗಳನ್ನು ಮುಟ್ಟಿ ವಂದನೆ ಸಲ್ಲಿಸಿ ಹೋದರು. ಆಜೀವಪರ್ಯಂತ ತಮ್ಮ ರಾಣಿಯ ರಕ್ಷಣೆ ಮಾಡುವುದಾಗಿಯೂ ಆ ಸಭಿಕರು ಪ್ರತಿಜ್ಞೆ ಸ್ವೀಕರಿಸಿದರು.

ರಾಜ್ಯಾಭಿಷೇಕದ ಈ ಸಮಾರಂಭ ಮುಗಿದ ಬಳಿಕ ಇನೇಜಳ ಶವವನ್ನು ಎತ್ತಿ ರತ್ನಖಚಿತ ಶವಪೆಟ್ಟಿಗೆಯಲ್ಲಿಡಲಾಯಿತು. ಪೆಡ್ರೊ ತನ್ನ ಈ ಪ್ರೇಯಸಿಗಾಗಿ ಅಲ್ಕೊಬಾಕಾದಲ್ಲಿ ಸಂಗಮರವರಿ ಕಲ್ಲಿನಿಂದ ಕಟ್ಟಿಸಿದ ಸಮಾಧಿ ಮಂದಿರಕ್ಕೆ ಆ ಶವಪೆಟ್ಟಿಗೆ ಸಾಗಿಸಲಾಯಿತು.

ಈ ಶವಯಾತ್ರೆಯಲ್ಲಿ ಇನೇಜಳ ಶವದ ಮುಖ ಕರುಣಾರ್ದ್ರವಾಗಿ ತೋರುತ್ತಿತ್ತು. ಆಕೆಯ ಸುಂದರ ದೇಹವನ್ನು ರಾಜವಸ್ತ್ರಗಳಿಂದ ಅಲಂಕರಿಸಿದ್ದಂತೂ ಸರಿಯೆ ಬಿಶಪ್‌ನೂ ಇತರ ಸಂಭ್ರಾಂತ ಜನರೂ ದೀವಟಿಗೆಗಳ ಬೆಳಕಿನಲ್ಲಿ ಆ ಶವಯಾತ್ರೆಯ ಮಾರ್ಗವನ್ನು ಬೆಳಗಿಸುತ್ತ ಸಾಗಿದ್ದರು.

ಪೆಡ್ರೋನ ಸೇಡಿನ ಸತ್ರ ಈಗ ಪೂರ್ತಿಯಾದಂತಾಗಿತ್ತು. ಇಂಥ ವಿಕ್ಷಿಪ್ತ ವರ್ತನೆಗೆ ಕಾರಣವೇನು? ಹೀಗೇಕೆ ವಿಚಿತ್ರವಾಗಿ ನಡೆದುಕೊಂಡೆ? ಎಂದು ಪೆಡ್ರೋನನ್ನು ಪ್ರಶ್ನಿಸುವ ಧೈರ್ಯ ಯಾರೂ ಮಾಡಲಿಲ್ಲ.

ಪೆಡ್ರೊ ಕೂಡ ಒಬ್ಬ ರಾಜನೇ ಅಲ್ಲವೆ? ತನ್ನ ಮನೀಷೆಯನ್ನು ಈಡೇರಿಸಿಕೊಳ್ಳುವದಕ್ಕಾಗಿ ವಿಕ್ಷಿಪ್ತ ವರ್ತನೆಯನ್ನು ಮೆರೆದ ಸಂಭ್ರಾಂತಪ್ರೇಮಿ ಆತ! ✡

(‘ಕಾದಂಬಿನಿ’ ಕೃಪೆಯಿಂದ)



ವಿಗ್ರಹದಲ್ಲಿ ದೇವರು ಇದ್ದಾನೆ ಎಂದು ಬೇಕಾದರೆ ನೀನು ಹೇಳಬಹುದು. ಆದರೆ ದೇವರೇ ವಿಗ್ರಹವೆಂದು ಭಾವಿಸುವ ತಪ್ಪನ್ನು ಮಾಡಬಾರದು. —ವಿವೇಕಾನಂದ

ಸಂಗ್ರಹ: ಆನಂದರಾಯ ಪ್ರಭು

ಹೆರಿಗೆಯ ಮೊದಲ ದಿನಗಳ ಹಾಲನ್ನು ತಾಯಂದಿರು ಮಕ್ಕಳಿಗೆ ನೀಡಲು ಮೀನ-ಮೇಷ ಎಣಿಸುವುದುಂಟು. ಈ ಹಾಲಿನಲ್ಲಿ ಮಾಮೂಲ ಎದೆಹಾಲಿಗಿಂತ ಮೂರು ಪಟ್ಟು ಹೆಚ್ಚು ಪೌಷ್ಟಿಕಾಂಶವಿರುತ್ತದೆಯೆಂದರೆ ಆಶ್ಚರ್ಯವಾಗಬಹುದು. ಈ ಹಾಲು ಆಗ ತಾನೇ ಬಾಯ್ತೆರೆದ ಜೀರ್ಣಾಂಗಗಳ ಮಾರ್ಗವನ್ನು ಸುಗಮಗೊಳಿಸುತ್ತದೆ. ಹೆಚ್ಚಿನದಾಗಿ, ಅನೇಕ ರೋಗ-ರುಜಿನಗಳ ನಿರೋಧಕ ಲಸಿಕೆಗಳ ಕೆಲಸವನ್ನು ಈ ಪ್ರಕೃತಿದತ್ತ ಹಾಲು ನಿರ್ವಹಿಸುತ್ತದೆ. ಅದಕ್ಕೆಂದೇ ಪೂರ್ವಿಕರು ಎದೆಹಾಲು ಕುಡಿದ ಮಗ ಎಂಟೆದೆಯ ಬಂಟ ಜೀವಸತ್ವ ಇರುವುದೇ ಇಲ್ಲ. ಆದರೆ ಈ ಜೀವಸತ್ವ ಆಗ ತಾನೆ ಕಣ್ತೆರೆದ ಪ್ರಾಣಿಗೆ ಎಷ್ಟು ಅವಶ್ಯವೆಂದರೆ ಆ ಪ್ರಾಣಿಯ ಭಾವೀ ಜೀವನದ ಸತ್ವವೆಲ್ಲಾ ಈ ಜೀವಸತ್ವವನ್ನೇ ಅವಲಂಬಿಸಿದೆ. ಈ 'ಎ' ಜೀವಸತ್ವದ ಕೊರತೆಯನ್ನು ಕರುಗಳಿಗೆ ತುಂಬಿಬಿಡುವುದು ಅವಶ್ಯಕ. ಇದು ತಾಯಿಯ ಮೊದಲ ದಿನಗಳ ಹಾಲಿನಲ್ಲಿ ಸಮೃದ್ಧವಾಗಿರುತ್ತದೆ. ಹಡೆದ ಮೊದಲ ದಿನದ ಹಾಲಿನಲ್ಲಿ ಮೂರನೆ ದಿನದ ಹಾಲಿನ ಮೂರು ಪಟ್ಟು ಹೆಚ್ಚು 'ಎ' ಜೀವಸತ್ವವಿರುತ್ತದೆ. ದಿನಗಳೆದಂತೆ ಈ ಅಂಶ ಕಡಿಮೆಯಾಗುತ್ತಾ ಹೋಗುತ್ತವೆ.

ಪಶುಪಾಲಕರಿಗೊಂದು ಕಿವಿಮಾತು

ಜಿ. ಆರ್. ರಂಗಸ್ವಾಮಯ್ಯ

ಎನ್ನುವುದು. ಹೆರಿಗೆಯಾದ ಮೊದಲ ದಿನಗಳ ಹಾಲುತಾಯಿ ಮಗುವಿನ ಇಡೀ ಜೀವನದ ಆಗು-ಹೋಗುಗಳನ್ನು ಆರೋಗ್ಯದ ದೃಷ್ಟಿಯಿಂದ ನಿರ್ಧರಿಸುತ್ತದೆಂದರೆ ತಪ್ಪಾಗದು. ಇದಕ್ಕೆ ಕಾರಣ ಆ ಹಾಲಿನಲ್ಲಿರುವ 'ಕೊಲೊಸ್ಟ್ರಂ' (colostrum) ಅಂಶ. ಈ ಹಾಲು ಮನುಷ್ಯರಿಗಷ್ಟೇ ಅಮೂಲ್ಯವಲ್ಲ, ಇತರ ಸಾಕುಪ್ರಾಣಿಗಳಿಗೂ ಅಷ್ಟೇ ಅವಶ್ಯಕ, ಪೌಷ್ಟಿಕ ಹಾಗೂ ರೋಗನಿರೋಧಕ. ಸಾಮಾನ್ಯವಾಗಿ ಯಾವುದೇ ಸಾಕುಪ್ರಾಣಿ ಕರುವನ್ನು ಈದಾಗ ಆ ಮರಿಯಲ್ಲಿ 'ಎ' ಜೀವಸತ್ವ ಬಹಳ ಕಡಿಮೆಯಿರುತ್ತದೆ; ಕೆಲವು ಸಲ ಈ

ಪ್ರಖ್ಯಾತ ಪಶುವೈದ್ಯರಾದ ಜಿ. ಎಚ್. ಸ್ಮಿಟ್ ಮತ್ತು ಎಲ್. ಡಿ. ಫಾನ್ ವ್ಲೆಕ್ಟ್-ರವರ ಅಭಿಪ್ರಾಯದಲ್ಲಿ, "ಕರು ಹುಟ್ಟಿದ ನಾಲ್ಕು ಗಂಟೆಗಳೊಳಗೇ ಕನಿಷ್ಟ ನಾಲ್ಕು ಪೌಂಡಿನಷ್ಟು ಈ 'ಕೋಲೊಸ್ಟ್ರಂ' ಕರುವಿನ ಹೊಟ್ಟೆಗೆ ಸೇರುವುದು ಒಳ್ಳೆಯದು. ಏಕೆಂದರೆ, ಆಗ ಹುಟ್ಟಿದ ಕರು ತನ್ನ ರಕ್ತದಲ್ಲಿ ಕೇವಲ ಶೇ. ೧೦ ರಷ್ಟು ರೋಗಗಳಿಂದ ರಕ್ಷಿಸಿಕೊಳ್ಳಲು ಅವಶ್ಯವಾದ ಪ್ರತಿವಿಷವನ್ನು ಹೊಂದಿರುತ್ತದೆ. ಈ 'ಕೋಲೊಸ್ಟ್ರಂ'ನಲ್ಲಿ ರೋಗಗಳ ವಿರುದ್ಧ ಹೋರಾಡಬಲ್ಲ ಪ್ರತಿವಿಷವನ್ನೂ ಹಾಗೂ ಪ್ರತಿಜೀರ್ಣಕಾರಿ ಕಿಣ್ವಗಳು

ಸಮೃದ್ಧವಾಗಿರುತ್ತವೆ. ಇವುಗಳ ಕ್ರಿಯೆ ಅನೇಕ ರೋಗ-ರುಜಿನಗಳು ತಟ್ಟದಂತೆ ರಕ್ಷಣೆ ನೀಡುತ್ತದೆ. ಈ 'ಕೊಲೊಸ್ಟ್ರಂ'ನಲ್ಲಿ 'ಎ' ಜೀವಸತ್ವ ಸಹ ಹೇರಳವಾಗಿದೆ. ಇದೂ ಎಳೆಗರುಗಳಿಗೆ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ." 'ಕೊಲೊಸ್ಟ್ರಂ' ಸೇವಿಸಿದ ಎಳೆಗರುಗಳ ಸಾವಿನ ಸಂಖ್ಯೆ, ಇದನ್ನು ಸೇವಿಸದೇ ಇದ್ದ ಕರುಗಳಿಗಿಂತ ಕಡಿಮೆಯಿಂದೆಯೆಂದು ಅಧ್ಯಯನಗಳಿಂದ ತಿಳಿದು ಬಂದಿದೆಯೆಂದೂ ಅವರು ಹೇಳುತ್ತಾರೆ.

ಈ ಹಾಲನ್ನು ನಮ್ಮ ಜನ ಸಾಮಾನ್ಯವಾಗಿ ಗಿಣ್ಣದ ಹಾಲು ಎಂದು ಕರೆಯುವುದುಂಟು. ಈ ಗಿಣ್ಣದ ಹಾಲು ಕರುಗಳಿಗೆ ಅಯೋಗ್ಯ, ಮೇವ, ಜೀರ್ಣಿಸಿಕೊಳ್ಳಲಾಗದಂಥದೆಂಬ ತಳಬುಡವಿಲ್ಲದ ಗೊಡ್ಡು ಕಂದಾಚಾರಗಳಿಗೆ ಗೋಣು ಹಾಕಿ ಪಶುಪಾಲಕರು ಇದನ್ನು ಕುಡಿಸದೆ ತಾತ ಹಾಕಿದ ಆಲದ ಮರಕ್ಕೇ ಈ ಮರಿಗಳನ್ನೂ ನೇತುಹಾಕುತ್ತಾರೆ. ಈ ಪ್ರಕೃತಿದತ್ತ ಕ್ಷೀರಪಾನ ವರದಾನವೆಂಬುದನ್ನು ಅದಷ್ಟು ಬೇಗ ಅರಿಯಬೇಕು. ಕ್ರಮೇಣ ತಮ್ಮ ಸ್ವಂತ ಅನುಭವದ ಮೇಲೇ ಈ ಹಾಲು ಅಮೂಲ್ಯವೆಂಬುದನ್ನು ಎಲ್ಲರೂ ತಿಳಿಯಬಹುದು.

ಆಗ ತಾನೆ ಹುಟ್ಟಿದ ಕರುಗಳ ಜೀರ್ಣಾಂಗಗಳು ಹೊಸದಾಗಿ ಕಾರ್ಯಪ್ರವೃತ್ತವಾಗಬೇಕಾಗುತ್ತದೆ. ಈ ಗಿಣ್ಣದ ಹಾಲು ಜೀರ್ಣಾಂಗಗಳಿಗೆ ಚಲನಶಕ್ತಿ ನೀಡುವ 'ಮೃದುಚಾಲಕ'ವಿದ್ದಂತೆ. ಕ್ರಮಬದ್ಧವಾಗಿ ಮುಂದಿನ ದಿನಗಳಲ್ಲಿ ಅರಗಿಸಿಕೊಳ್ಳಬೇಕಾದ ಹಾಲಿಗೆ ಅವಯವಗಳನ್ನು ಬಲಗೊಳಿಸುತ್ತದೆ. ಜೀರ್ಣಾಂಗಗಳಿಗೆ ಹೆಚ್ಚು ಭಾರವಾಗದಂತೆ ನೋಡಿಕೊಳ್ಳುತ್ತದೆ.

ಈ ಗಿಣ್ಣದ ಹಾಲು ಮೊದಲೇ ತಿಳಿಸಿದಂತೆ ಹೆತ್ತ ಪ್ರಪ್ರಥಮ ದಿನಗಳಲ್ಲಿ ಯಥೇಚ್ಛವಾಗಿರುತ್ತದೆ. ಹೆಚ್ಚಿನ ಈ ಹಾಲನ್ನು ಕ್ರಿಮಿಶುದ್ಧ ರೀತಿಯಲ್ಲಿ ಕರೆದು, ಶೈತ್ಯೀಕರಿಸಿ ಜೋಪಾನವಾಗಿಡಬಹುದು. ಈ ಹಾಲನ್ನು ಒಂದು ವಾರದ ವರೆಗೂ ಕರುಗಳಿಗೆ ಕುಕ್ಕಿಯಿಟ್ಟು ಮನೆಯಲ್ಲಿ ಮಡಕೆಗಳಲ್ಲಿ ಸಂಗ್ರಹಿಸಿಟ್ಟು ಮಜವಾಗಿ ಗಿಣ್ಣ ಮಾಡಿಕೊಂಡು ವಾರಗಟ್ಟಲೆ ಬಾಯಿಚಪ್ಪರಿಸುತ್ತಾ ತಿನ್ನುವುದು ರೂಢಿ. ಇದರ ಬದಲು ಕರುಗಳ ದಷ್ಟಪುಷ್ಟ ಆರೋಗ್ಯಕ್ಕಾಗಿ ಕ್ರಿಮಿಶುದ್ಧ ರೀತಿಯಲ್ಲಿ ಸಂಗ್ರಹಿಸಿ ಈ ಹಾಲಿನ ಕೊರತೆಯಿರುವ ಅಥವಾ ತಬ್ಬಲಿಗಳಿಗೆ ಉಣಿಸುವ ರೂಢಿ ಬೆಳೆಸಿಕೊಳ್ಳುವುದು ಒಳ್ಳೆಯದು.

ಅನೇಕ ತಾಯಂದಿರು ಮೊದಲ ದಿನದ ಹಾಲೇ ಏಕೆ, ಎದೆಹಾಲನ್ನೇ ಕಂದಮ್ಮಗಳಿಗೆ ಕುಡಿಸದೆ ಮಕ್ಕಳ ಭವಿಷ್ಯವನ್ನೇ ಕೊಲೆ ಮಾಡುವಂತೆ ಈ ಮೂಕಪ್ರಾಣಿಗಳ ಜೀವನವನ್ನೂ ಅವುಗಳಿಗೆ ಗಿಣ್ಣದ ಹಾಲು ನೀಡದೆ ಅನೇಕ ಕಷ್ಟ ಕೋಟಲೆಗಳಿಗೆ ಗುರಿಮಾಡದಿರಿ ✡

ನೀನು ಏನಾದರೂ ದುಷ್ಕರ್ಮವನ್ನು ಮಾಡಬೇಕಾದರೆ ಹಿರಿಯರೆದುರಿಗೆ ಮಾಡು.

—ವಿವೇಕಾನಂದ

ತಪ್ಪು ಮಾಡದವರು ಇಬ್ಬರೇ- ಸತ್ತವನು ಹುಟ್ಟದವನು. —ಚೀಣಿ

ಮನುಷ್ಯರು ಮನುಷ್ಯರೇ; ಹಣಕಾಸುಗಳಿದ್ದ ಮಾತ್ರದಿಂದಲೇ ಅವರು ದೇವತೆಗಳಾಗುತ್ತಾರೆಯೆ ?

—ಶಿವರಾಮ ಕಾರಂತ

ಸಂಗ್ರಹ: ಆನಂದರಾಯ ಪ್ರಭು

ನಗೆಮಲ್ಲಿಗೆ

ರಾಂಗ್ ನಂಬರ್

'ನಿನ್ನೆ ಪ್ರಧಾನ ಮಂತ್ರಿಯವರು ಫೋನಿನಲ್ಲಿ ನನ್ನೊಡನೆ ಮಾತನಾಡಿದರು.'

'ನಿಜವೇ?'

'ಸುಳ್ಳೇನು!'

'ಪ್ರಧಾನ ಮಂತ್ರಿಯವರು ಏನು ಮಾತನಾಡಿದರು?'

'ಸಾರಿ, ರಾಂಗ್ ನಂಬರ್!'

—ಎಸ್. ಕೆ. ನರಸಿಂಹಮೂರ್ತಿ

ಕಣ್ಣು ಪರೀಕ್ಷೆ

ಡಾಕ್ಟರ್– ನಿನಗೆ ಎಲ್ಲ ವಸ್ತುಗಳೂ ಎರಡಾಗಿ ಕಾಣುತ್ತವೆಯೋ? ಪರೀಕ್ಷೆ ಮಾಡುವ. ಈ ಖುರ್ಚಿಯಲ್ಲಿ ಕುಳಿತುಕೊಳ್ಳು.

ರೋಗಿ– ಯಾವುದರಲ್ಲಿ ಡಾಕ್ಟರ್, ಎಡಗಡೆಯದೋ? ಬಲಗಡೆಯದೋ?

—ಸರಸ್ವತಿ ಬೆಳಖಂಡ

ಸಾಕ್ಷಿ ಬಲ

ನ್ಯಾಯಾಧೀಶ: ಏನಯ್ಯಾ, ನೀನು ಸೈಕಲ್ ಕದ್ದಿದ್ದನ್ನು ನೋಡಿದೆವು ಅಂತ ಐದು ಜನ ಹೇಳಿದರಲ್ಲಾ?

ಅಪರಾಧಿ: ಇರಬಹುದು ಸ್ವಾಮಿ, ಕದ್ದಿದ್ದನ್ನು ನೋಡಲಿಲ್ಲ ಎಂದು ಹೇಳುವ ಐವತ್ತು ಜನರನ್ನು ನಾನು ತರಲೇ?

—ರಾಮಚಂದ್ರ ಇಬ್ರಾಹಿಂಪುರ

ಸಲಹೆ

ಬಾಲಕ: (ಉತ್ಸಾಹದಿಂದ) ಅಪ್ಪಾ, ನಾನು ಈ ಹೊತ್ತು ಶಾಲೆಯಿಂದ ಮನೆಯವರೆಗೆ ಬಸ್ಸಿನ ಹಿಂದಿಂದ ಓಡೋಡುತ್ತಾ ಬಂದು ಇಪ್ಪತ್ತು ಪೈಸೆ ಬಸ್ ಚಾರ್ಜ್ ಉಳಿಸಿದೆ.

ತಂದೆ: ಶಹಬ್ಬಾಸ್ ಮಗನೇ, ಆದರೆ ನೀನು ಟ್ಯಾಕ್ಸಿ ಅಥವಾ ರಿಕ್ಷಾದ ಹಿಂದಿನಿಂದ ಓಡಿ ಬಂದಿದ್ದರೆ ಎರಡು—ಮೂರು ರೂಪಾಯಿ ಉಳಿಸಬಹುದಿತ್ತಲ್ಲ?

—ಡಿ. ಎಚ್. ರಾಜೇಂದ್ರ

ಯಾವ ಕಣ್ಣಿಗೆ?

ಒಮ್ಮೆ ಒಬ್ಬ ಯುವಕ ಡಾಕ್ಟರೊಬ್ಬರ ಬಳಿ ಬಂದು, "ಮೊನ್ನೆ ನಿಮ್ಮ ಮಗಳು ನನ್ನ ಕಣ್ಣಿಗೆ ಬಿದ್ದಾಗಿನಿಂದ ಏಕೋ ನನ್ನ ಮನಸ್ಸು ಸರಿಯಾಗಿಲ್ಲ ಡಾಕ್ಟ್ರೆ," ಎಂದು ಹೇಳಿದ.

ಕೂಡಲೇ ಡಾಕ್ಟರ್ ಅವನ ಬಳಿಬಂದು ಅಭ್ಯಾಸ ಬಲದಿಂದ ಕಣ್ಣನ್ನು ಪರೀಕ್ಷಿಸುತ್ತಾ ಕೇಳಿದರು, "ಯಾವ ಕಣ್ಣಿಗೆ ಬಿದ್ದಿರೋದು? ಎಡಗಣ್ಣಿಗೋ, ಬಲಗಣ್ಣಿಗೋ?"

—ಪರಮೇಶ್ವರ ನರಸಿಂಹ ಉಡುಪ

ಅದಲ್ಲ ಇದು!

ಕಾಲೇಜಿನ ವಿಶೇಷ ಸಮಾರಂಭಕ್ಕೆ ಬಂದ ಆತನು ಭಾಷಣ ಮಾಡುತ್ತಿದ್ದನು. ಎದುರು ಕುಳಿತಿದ್ದ ಎಲ್ಲಾ ವಿದ್ಯಾರ್ಥಿಗಳು ಆತನ ಭಾಷಣವನ್ನೇ ಕೇಳುತ್ತಲೋ ಇಲ್ಲ ಕೇಳುವಂತೆ ನಟಿಸುತ್ತಲೋ ಇದ್ದರು. ಆದರೆ ಒಬ್ಬಾತ ವಿದ್ಯಾರ್ಥಿ ಮಾತ್ರವೇ ಏನೋ ಬರೆಯುವುದರಲ್ಲಿ ನಿರತನಾಗಿದ್ದ. ಭಾಷಣಕಾರ ಆತನನ್ನೇ ದಿಟ್ಟಿಸುತ್ತ ಇದ್ದ. ಸಭೆ ಕೊನೆಗೊಂಡಾಕ್ಷಣ ಆ ಭಾಷಣಕಾರನು ಆ ವಿದ್ಯಾರ್ಥಿಯನ್ನು ಕರೆದು,

"ತಾವು ಪತ್ರಿಕಾ ಪ್ರತಿನಿಧಿ ಎಂದು ತೋರುತ್ತದೆ" ಎಂದನು.

ಅದಕ್ಕೆ ಆ ವಿದ್ಯಾರ್ಥಿಯು ಆಶ್ಚರ್ಯದಿಂದ, "ಛೇ ಹಾಗೇನಿಲ್ಲ. ಯಾಕೆ?" ಎಂದು ಕೇಳಿದ

"ಮತ್ತೆ ತಾವು ಏನೋ ಬರೆಯುತ್ತಲೇ ಇದ್ದಿರಲ್ಲಾ ಆವಾಗ"

"ಓಹೋ! ಅದು ನಾನು ಇವತ್ತು ಕೊನೆ ಪೀರಿಯಡ್ ಕ್ಲಾಸಿಗೆ ಹೋಗಲಿಲ್ಲ ಸಮಯ ಹಾಳು ಮಾಡುವುದು ಬೇಡವೆಂದು ಆ ನೋಟ್ಸನ್ನು ಬರೆಯುತ್ತಿದ್ದೆ"

—ರಾಮದಾಸ ಆಶರಗೋಡ

ವ್ಯತ್ಯಾಸವಿಷ್ಟೇ...

ಆಗ ತಾನೇ ಒಂದು ವರ್ಷದ ಶಿಕ್ಷೆ ಪಡೆದು ಜೈಲಿನಲ್ಲಿ ಬಂಧಿತನಾದ ಒಬ್ಬ ಕೈದಿಯೊಂದಿಗೆ ಸೀನಿಯರ್ ಕೈದಿ ಕೇಳಿದ, "ನಿನಗೇಕೆ ಶಿಕ್ಷೆಯಾಯಿತು?"

"ಒಂದು ಹಗ್ಗವನ್ನು ಕದ್ದೆ ಅದಕ್ಕಾಗಿ" ಎಂದ ಜೂನಿಯರ್ ಕೈದಿ. ಅದಕ್ಕೆ ಅನುಮಾನ ವ್ಯಕ್ತಪಡಿಸುತ್ತಾ ಸೀನಿಯರ್ ಕೈದಿ ಹೇಳಿದ,

"ಇರಲಾರದು. ಕೇವಲ ಒಂದು ಹಗ್ಗವನ್ನು ಕದ್ದ ಮಾತ್ರಕ್ಕೆ ಒಂದು ವರ್ಷದ ಶಿಕ್ಷೆಯಾಗುವುದುಂಟೇ?"

ಆಗ ಜೂನಿಯರ್ ಕೈದಿ ನಗುತ್ತಾ ಹೇಳಿದ, "ನಿಜವಾಗಲೂ ಒಂದು ಹಗ್ಗ ಕದ್ದ ಅಪರಾಧ ಬಿಟ್ಟು ಬೇರೆಗೇ ನನಗೆ ಶಿಕ್ಷೆ ವಿಧಿಸಿರೋದು. ಆದರೆ ವ್ಯತ್ಯಾಸವಿಷ್ಟೇ, ಆ ಹಗ್ಗದ ಒಂದು ತುದಿಯು ಭಾರೀ ಬೆಲೆ ಬಾಳುವ ಒಂದು ಎಮ್ಮೆಯ ಕೊರಳನ್ನು ಸುತ್ತಿ ಹಾಕಿಕೊಂಡಿತ್ತು.

—ಮುಳಲಗೆರೆ ಶ್ರೀಧರ

ಕೊಡೋದಿಲ್ಲ

ಪೈಲವಾನರೊಬ್ಬರಿಗೆ ವಾಸಿಸಲು ಭಾಡಿಗೆಯಿಂದ ಮನೆ ಬೇಕಾಗಿದ್ದಿತು. ಅವರ ಮಿತ್ರನು ಒಂದು ಮನೆ ಖಾಲಿಯಾಗಿರುವುದಾಗಿ ಮಾಹಿತಿ ನೀಡಿದ. ಆ ಪೈಲವಾನರು ಮನೆಯ ಮಾಲಿಕನನ್ನು ಭೆಟ್ಟಿಯಾದರು:

ಪೈಲವಾನ: ಸ್ವಾಮಿ, ತಮ್ಮ ಚಾಳಿನಲ್ಲಿ ಒಂದು ಮನೆ ಖಾಲಿಯಾಗಿದೆಯಂತೆ. ನಮಗೆ ಬಾಡಿಗೆಯಿಂದ ಇರಲು ಕೊಡುವಿರಾ?

ಮಾಲಿಕ: ಕೊಡ್ತೀವಿ. ಆದರೆ ತಮ್ಮ ಹೆಸರು?

ಪೈಲವಾನ: ಸುಬ್ಬಣ್ಣ ಪೈಲವಾನ

ಮಾಲಿಕ: ತಾವು ಕುಸ್ತಿ ಆಡ್ತಿರೇನು?

ಪೈಲವಾನ: ಹೌದು, ನಾನು ಹೆಸರುವಾಸಿಯಾದ ಪೈಲವಾನ. ಅನೇಕ ಪ್ರಸಿದ್ಧ ಪೈಲವಾನರ ಜೊತೆ ಕುಸ್ತಿ ಆಡಿದ್ದೇನೆ.

ಮಾಲಿಕ: ತಾವು ಪೈಲವಾನರ ಜೊತೆ ಮಾತ್ರ ಕುಸ್ತಿ ಆಡ್ತೀರಾ?

ಪೈಲವಾನ: ಹಾಗೇನಿಲ್ಲ ಸ್ವಾಮಿ! ಅನಿವಾರ್ಯವಾದರೆ ಪೈಲವಾನರಲ್ಲದವರ ಜೊತೆಯೂ ಆಡಬಹುದು.

ಮಾಲಿಕ: ಹಾಗಾದರೆ ನನ್ನ ಚಾಳಿನಲ್ಲಿ ನಿಮಗೆ ಮನೆ ದೊರೆಯಲಾರದು ಹೋಗಿ.

—ಎಚ್. ಎಸ್. ಮುಜಾವರ

ಕೇಳಿಸಿದ್ದರೆ ಕಳಿಸಿಬಿಡಿ

ಓರ್ವ ಭಾರತೀಯನು ವಿದೇಶದಲ್ಲಿ ಕೆಲಸ ಮಾಡುತ್ತಿದ್ದ. ಅವನ ತಮ್ಮ ಭಾರತದಿಂದ ಅಣ್ಣನಿಗೆ ಫೋನ್ ಮಾಡಿದ, "ಅಣ್ಣಾ, ಅಲ್ಲಿ ಎಲ್ಲ ಕ್ಷೇಮವೇ?"

"ಓಹೋ ಚನ್ನಾಗಿದ್ದೇನೆ. ಇಲ್ಲಿಯ ಹವಾ ಆಹ್ಲಾದಕರವಾಗಿದೆ. ಇನ್ನೊಮ್ಮೆ ನಿನ್ನನ್ನೂ ಇಲ್ಲಿಗೆ ಕರೆದುಕೊಂಡು ಬರುತ್ತೇನೆ," ಎಂದುತ್ತರ ಬಂತು.

ಅದಕ್ಕೆ ತಮ್ಮ, "ಆಗಲಿ, ಆದರೆ ನೀನು ೧೦೦೦ ರೂ. ಕಳಿಸು ಎಂದು ಅಮ್ಮ ಹೇಳಿದ್ದಾಳೆ; ಬೇಗನೆ ಕಳಿಸು," ಎಂದ.

ಪದೇ ಪದೇ ಹೇಳಿದರೂ ಆ ಕಡೆಯಿಂದ ಉತ್ತರವೇ ಬರಲಿಲ್ಲ.

ಕಡೆಗೆ ಟೆಲಿಫೋನ್ ಆಪರೇಟರನೇ ವಿದೇಶದಲ್ಲಿದ್ದವನಿಗೆ ಫೋನ್ ಮಾಡಿ ಹೇಳಿದ, "ನಿಮ್ಮ ತಮ್ಮ ಹೇಳ್ತಿದ್ದಾನೆ, ನಿಮ್ಮ ತಾಯಿಗೆ ೧೦೦೦ ರೂ. ಕಳಿಸಬೇಕಂತೆ ಅಷ್ಟೂ ಕೇಳಿಸೋಲ್ಲವೇ ನಿಮಗೆ?"

ತಕ್ಷಣ ಆಪರೇಟರನಿಗೆ ಉತ್ತರ ಬಂತು, "ನಿಮಗೆ ನನ್ನ ತಮ್ಮ ಹೇಳಿದ್ದುದು ಕೇಳಿಸಿದ್ದರೆ ನೀವೇ ಕಳಿಸಿಬಿಡಿ."

-ಕೋಟ ವರದೇಂದ್ರ

‘ದುಡಿ’ಯ ಬಗ್ಗೆ ಕಾರಂತರೊಡನೆ

ಎ. ಮಾಧವ ಉಡುಪ

ಚೋಮನ ದುಡಿ’ಯು ಬಡಿತ ಭೋಗನಹಳ್ಳಿಯ ಸೀಮೆಯಿಂದ ದಿಲ್ಲಿಯನ್ನೂ ದಾಟಿ, ದೂರದ ಜೆಕೋಸ್ಲೋವೇಕಿಯಾವನ್ನೂ ಮುಟ್ಟಿದೆ. ಹುಟ್ಟಿದ ೪೨ ವರ್ಷಗಳಿಂದಲೂ ಕನ್ನಡನಾಡಿನಲ್ಲೇ ಮಾರ್ದನಿಗೊಳ್ಳುತ್ತಿದ್ದ ಅದು, ಕಳೆದೊಂದು ವರುಷದಲ್ಲಿ ಜಗತ್ತಿನ ಎಲ್ಲೆಗೆ ವಿಸ್ತರಿಸಿದೆ. ‘ದುಡಿಯ ಬಡಿತ’ಕ್ಕೆ ಜನ ತಡವಾಗಿ ಕಿವಿಗೊಟ್ಟರೂ ಅದರ ಹಿರಿಮೆಯನ್ನು ಗುರುತಿಸುವುದರಲ್ಲಿ ತಡಮಾಡಲಿಲ್ಲವೆಂಬುದು ಹೆಮ್ಮೆಯ ಸಂಗತಿ. ಮೂವತ್ತರ ಏರುವ ಹುಮ್ಮಸ್ಸಿನಲ್ಲಿ ಅದನ್ನು ಬರೆದ ಡಾ. ಶಿವರಾಮ ಕಾರಂತರು, ಈ ಅಕ್ಟೋಬರ್ ಹತ್ತಕ್ಕೆ ಎಪ್ಪತ್ತೈದಕ್ಕೆ ಕಾಲಿಡುತ್ತಾರೆ. ಬಾಳಿನ ಸಂಜೆಯನ್ನವರು ಸಮೀಪಿಸುತ್ತಿದ್ದರೂ ಚೋಮನಲ್ಲಿ ‘ತುಂಬಿದ್ದ ಆವೇಶ’ ಅವರಲ್ಲಿಂದೂ ಉಕ್ಕುತ್ತಿದೆ. ಪ್ರಶಸ್ತಿಗಳಿಗಾಗಿ ಹಾತೊರೆಯದ ಅವರು ಪ್ರಶಸ್ತಿ ಬಂದುದರಿಂದ ಮೈಮರೆಯರು. “ಬದುಕಿನಿಂದ ಪಡೆದ ಋಣವನ್ನು ಹೇಗಾದರೂ ತೀರಿಸಬೇಕು” ಎಂಬ ಅವರ ಬಯಕೆ, ಸಾಹಿತ್ಯಕಲೆಗಳ ಸಾಧನೆಗಳಿಗಾಗಿ, ಅವರನ್ನಿನ್ನೂ ಓಡಿಸುತ್ತಿದೆ. ಕಾರಂತರ ಅಂತಹ ಕಾಯಕದ ಎಡೆಯಲ್ಲೇ ಒಂದು ದಿನ ‘ಚೋಮನ ದುಡಿ’ಯ ಪ್ರಸ್ತಾಪವನ್ನೆತ್ತಿದೆ—

“‘ಚೋಮನ ದುಡಿ’ಗೂ ಮುಂಚೆ ನೀವು ಬೇರೆ ಕಾದಂಬರಿ ಬರೆದಿರಬೇಕಲ್ಲವೇ ?”

“ಹೌದು, ಬರೆದಿದ್ದೆ. ‘ವಿಚಿತ್ರ ಕೂಟ,’ ‘ಭೂತ’ ಎಂಬ ಪತ್ತೇದಾರಿ ಕಾದಂಬರಿ ಬರೆದಿದ್ದೆ. ಸೆಕ್ಸ್‌ಟನ್ ಬ್ಲೇಕನ ಕತೆಗಳನ್ನು ಓದಿದ್ದರ ಪ್ರೇರಣೆಗಳವು. ‘ನಿರ್ಭಾಗ್ಯ ಜನ್ಮ,’ ‘ದೇವದೂತರು,’ ‘ಸೂಳೆಯ ಸಂಸಾರ’ (ಕನ್ಯಾಬಲಿ) ಎಂಬ ಸಾಮಾಜಿಕ

ಕಾದಂಬರಿಗಳನ್ನೂ ಬರೆದಿದ್ದೆ. ಆದರೆ ಅವನ್ನೆಲ್ಲ ಬರೆದದ್ದು ಬಂಗಾಲಿ ಸಾಹಿತ್ಯದ ಸ್ಫೂರ್ತಿಯಿಂದ. ನನ್ನ ಅನುಭವವನ್ನೇ ಆಧರಿಸಿ ಬರೆದುದರಲ್ಲಿ 'ಚೋಮನ ದುಡಿ'ಯೇ ಪ್ರಥಮ."

"ನಿಮಗೆ ಆ ಅನುಭವವಾದುದು ಹೇಗೆ?"

"೧೯೩೦ ರ ಸುಮಾರಿಗೆ ಗ್ರಾಮೋದ್ಧಾರದ ಕನಸನ್ನು ಕಟ್ಟಿಕೊಂಡು ನಾನು ಪುತ್ತೂರು ತಾಲೂಕಿನ ೩೩ ಹಳ್ಳಿಗಳಲ್ಲಿ ಸಂಚರಿಸಿದೆ. ಆ ಸಂಚಾರವನ್ನು ಹೂಡಿದುದು, ಹಳ್ಳಿಗಳ ಆರ್ಥಿಕ ಸ್ಥಿತಿಗತಿಗಳ ಪರಿಶೀಲನೆಗಾಗಿ. ಮೊಳಹಳ್ಳಿ ಶಿವರಾಯರ ಕಾಲ ಅದು. ನನ್ನ ಕೆಲಸಕ್ಕೆ ಅವರ ಪ್ರೇರಣೆ, ಬೆಂಬಲ ಎರಡೂ ಇದ್ದೇ ಇದ್ದುವು. ನಾನೂ ಅವರೂ ಕುಳಿತು, ಜನಗಳಿಂದ ಯಾವ ಯಾವ ವಿಷಯಗಳಲ್ಲಿ ಉತ್ತರ ಸಂಗ್ರಹಿಸಬೇಕೆಂದು ಒಂದು ಪ್ರಶ್ನಾವಳಿ ತಯಾರಿಸಿದೆವು. ಬೇಸಾಯದ ವಿಚಾರದಲ್ಲಿ, ವಿನೋದ ವಿಲಾಸಗಳ ವಿಚಾರದಲ್ಲಿ, ಇನ್ನು ಉಪವೃತ್ತಿ, ವಿದ್ಯಾಭ್ಯಾಸ, ಆರ್ಥಿಕಸ್ಥಿತಿ, ಆರೋಗ್ಯ ಎಲ್ಲಕ್ಕೂ ಸಂಬಂಧಿಸಿದ ಪ್ರಶ್ನಾವಳಿಯನ್ನು ಮಾಡಿ, ಊರೂರು ತಿರುಗಾಡಿ ಬರಲು ನಿರ್ಧರಿಸಿದೆ. ಹೋದ ಪ್ರತಿ ಹಳ್ಳಿಯಲ್ಲಿಯೂ ಸಾಮಾನ್ಯವಾಗಿ ೫ ಮಂದಿ ಭೂಮಾಲಿಕರನ್ನೂ, ೫ ಮಂದಿ ಗೇಣಿ ಒಕ್ಕಲುಗಳನ್ನೂ, ೫ ಮಂದಿ ಕೂಲಿ ಇಲ್ಲವೇ ವೃತ್ತಿಕಾರರನ್ನು ಕಂಡು ಉತ್ತರ ದೊರಕಿಸಿಕೊಳ್ಳಬೇಕೆಂದು ನಿಶ್ಚಯಿಸಿದೆ. ಸುಮಾರು ೪ ತಿಂಗಳ ಆ ಸಂಚಾರದಲ್ಲಿ ನಾನು ಸಂದರ್ಶಿಸಿದ ಪ್ರತಿ ಹಳ್ಳಿಯಲ್ಲಿಯೂ ಮೂರು ಮೂರು ದಿನಗಳಂತೆ ಕಳೆದೆ. ನಾಟಕ ಆಡುವ ಸಲುವಾಗಿ, ನನ್ನ ಜತೆಗೆ ನಾಲ್ಕಾರು ಜನ ತರುಣ ಮಿತ್ರರನ್ನೂ ಕರೆದೊಯ್ದಿದ್ದೆ, ಹಗಲೆಲ್ಲ ಊರ ಒಬ್ಬೊಬ್ಬರನ್ನು ಕೂಡಿಕೊಂಡು ಮನೆ ಮನೆಗೇಗೆ ಅಲೆದಾಡುತ್ತಿದ್ದೆ. ರಾತ್ರಿ ಹೊತ್ತಿನಲ್ಲಿ ಭಾಷಣಗಳನ್ನು ಬಿಗಿದು, ನಾಟಕಗಳನ್ನು ಆಡಿ, ಗ್ರಾಮ ಜೀವನದ ಸುಧಾರಣೆಯ ಪ್ರಯತ್ನ ಮಾಡುತ್ತಿದ್ದೆ.

ಹತ್ತಾರು ಹೊಲೆಯರ ಮನೆಗಳಿಗೂ ತಿರುಗಿದ್ದೆ. ಅವರ ಜೀವನವನ್ನು ಸಾಕಷ್ಟು ಕಂಡಿದ್ದೆ. ದೀಪ ಉರಿಸದ ಮನೆಗಳನ್ನೂ ಬೆಂಕಿ ಹೊತ್ತಿಸದ ಒಲೆಗಳನ್ನೂ ನೋಡಿ ತಿಳಿಯುವ ಅವಕಾಶ ಆಗ ಒದಗಿಬಂದಿತ್ತು ನನಗೆ. ಅವರ ಹುಟ್ಟೂರುಗಳಿಂದ ಹಿಡಿದು ಸಾವಿನ ಕಾಫಿ ತೋಟಗಳಿಗೂ ನಾನು ಹೋಗಿ ಬಂದೆ. ಅವರ ಬಾಳಿನ ಹತ್ತು ಹಲವು ಸಮಸ್ಯೆಗಳ ಒಳಹೊಕ್ಕು ನೋಡಿದೆ. ಅವರಲ್ಲಿದ್ದ ದಾರಿದ್ರ್ಯದ ಜೊತೆ ಜೊತೆಗೇ ಅವರ ಅಜ್ಞಾನ ಅಂಧಃ ಶ್ರದ್ಧೆಗಳ ವಿಚಾರವೂ ಆಗ ನನಗೆ ತಿಳಿಯಿತು. ಒಟ್ಟಿನಲ್ಲಿ ಆ ಪ್ರವಾಸ ನನಗೆ ದೊಡ್ಡ ಶಿಕ್ಷಣವಾಯಿತು. ಅದರ ಫಲವೇ 'ಚೋಮನ ದುಡಿ.'

"ದುಡಿ ಬಾರಿಸುವ ಚೋಮನಂಥವರನ್ನು ನೀವಾಗ ನೋಡಿದ್ದೀರಾ?"

"ಯಾವುದೇ ವ್ಯಕ್ತಿಯನ್ನು ನಾನು ಕಣ್ಣ ಮುಂದಿಟ್ಟುಕೊಂಡು ಅವನಂತೆ ಚೋಮನನ್ನು ಸೃಷ್ಟಿಸಿದುದಲ್ಲ. ನನ್ನ ತಿರುಗಾಟದ ಕಾಲದಲ್ಲಿ ನಾನು ಹೊಲೆಯರ ಜೀವನದ ಅನೇಕ ಮುಖಗಳನ್ನು ಕಂಡಿದ್ದೆ. ಕಾಡಿನಿಂದ ಕಟ್ಟಿಗೆಯನ್ನು ಹೊತ್ತು, ಮಾರಿ, ಅಕ್ಕಿ ಕೊಳ್ಳುವ ಬದಲು, ಹೆಂಡತಿ ಮಕ್ಕಳ ಯೋಚನೆಯಿಲ್ಲದೆ ಹೆಂಡ ಕುಡಿದುಕೊಂಡು ಬರುವವರನ್ನೂ ನೋಡಿದೆ. ಮಲೇರಿಯಾದಿಂದ ಸತ್ತರೂ 'ದೆವ್ವದ ಬಡಿತದಿಂದ ಸತ್ತ' ಎಂಬವರನ್ನೂ ಕಂಡೆ. 'ಊಟಕ್ಕೇನು ಮಾಡುವಿ?' ಎಂದರೆ; "ಸೊಪ್ಪನ್ನು ಧನಿಯರ ಮನೆಗೆ ಹಾಕಿ, ಏನಾದರೂ ಭತ್ತ ಸಿಕ್ಕಿದರೆ, ಅಕ್ಕಿಮಾಡಿ ಉಣ್ಣಬೇಕು' ಎಂಬವರೂ ನೋಡ ಸಿಕ್ಕಿದರು. ಸಾಗುವಳಿ ಮಾಡಲು ಹಾತೊರೆಯುವವರೂ, ಅದರ ಆಸೆಗಾಗಿ ಮತಾಂತರ ಹೊಂದಿದವರೂ ಅವರಲ್ಲಿರುವುದು ತಿಳಿಯಿತು. ಎಷ್ಟು ಪ್ರಯತ್ನಿಸಿದರೂ ಮನುಷ್ಯನ ಮನಸ್ಸಿನ ಸ್ವಭಾವ ಹೇಗೆ ಸಂಪ್ರದಾಯಕ್ಕೆ ಅಂಟಿಕೊಂಡಿರುತ್ತದೆಂಬ ಅನುಭವವೂ ಆಯಿತು. ಈ ಎಲ್ಲ ಅನುಭವಗಳ



'ಚೋಮನ ದುಡಿ' ಕಾದಂಬರಿಯ ಪ್ರಥಮ ಆವೃತ್ತಿಯ ಮುಖಪುಟ. ಚಿತ್ರವನ್ನು ಬರೆದವರು ಡಾ. ಶಿವರಾಮ ಕಾರಂತ ಅವರೇ. ಆಗಿನ ಪ್ರಕಾಶಕರು ಮಂಗಳೂರಿನ ಶ್ರೀ ಶೆಟ್ಟಿ ಬಂಧುಗಳು. ಈ ಚಿತ್ರ ದೊರೆತುದು ಶ್ರೀ ಚಂದ್ರಶೇಖರ ಐಯ್ಯರ ಕೃಪೆ.

ಯಾಯಿತು. ಒಬ್ಬರಲ್ಲೇ ನಾನು ಅವನ್ನೆಲ್ಲ ಕಂಡೆ ಎಂದು ಮಾತ್ರ ತಿಳಿಯಬಾರದು.

"ಇನ್ನು ದುಡಿಯ ವಿಚಾರ; ಅದಕ್ಕೂ ಒಂದು ಕಾರಣವಿದೆ. ನನ್ನ ಸಂಚಾರದ ಕಾಲದಲ್ಲಿ ಒಮ್ಮೆ ಒಬ್ಬರ ಮನೆಗೆ ಹೋಗಿದ್ದೆ. 'ನಿಮಗೆ ಒಕ್ಕಲಿಗರಿದ್ದಾರೆಯೇ?' ಎಂದು ಕೇಳಿದೆ. 'ಹೌದು' ಎಂದರು. 'ಹೂಂ, ಕರೆಯಿಸಿ' ಎಂದೆ. ಒಬ್ಬ ಗಂಡಸು ನಾಲ್ಕಾರು ಜನ ಹೆಂಗಸರೂ ಮಕ್ಕಳೂ ಬಂದರು. ಅವರ ಕಷ್ಟ ಸುಖಗಳನ್ನೆಲ್ಲ ವಿಚಾರಿಸಿದ ನಂತರ, ಅವರೊಡನೆ 'ನಿಮಗೇನಾದರೂ ಹಾಡಲಿಕ್ಕೆ, ಕುಣಿಯಲಿಕ್ಕೆ ಬರುತ್ತಿದೆಯೇ?' ಎಂದು ಪ್ರಶ್ನಿಸಿದೆ. 'ಹೌದು' ಎಂದುತ್ತರ ಬಂತು. 'ಈಗ ಕುಣಿಯಿರಿ ನೋಡುವಾ' ಎಂದೆ. ತುಂಬ ದಾಕ್ಷಿಣ್ಯ ಮಾಡಿದರು. ಒತ್ತಾಯದ ನಂತರ ಅಂತೂ ಇಂತೂ ಸುರುಮಾಡಿದರು. ಗಂಡಸು ದುಡಿಯನ್ನು ಬಾರಿಸಿದ. ಹೆಂಗಸರೂ ಮಕ್ಕಳೂ ನಾಚಿಕೆಯಿಂದ ನಿಧಾನವಾಗಿ ಹೆಜ್ಜೆಹಾಕತೊಡಗಿದರು. ಒಂದರ್ಧ ಗಂಟೆ ಕಳೆದಿರಬಹುದು. ದುಡಿಯ ಆವೇಗ ಹೆಚ್ಚಿತು. ತುಂಬು ಆವೇಗದಿಂದ ಅವರೆಲ್ಲರೂ ಮೈಮರೆತು ಕುಣಿಯತೊಡಗಿದರು. ಬಾಳಿನ ಕಷ್ಟನಷ್ಟಗಳನ್ನೆಲ್ಲ ಮರೆತು ಅವರು ಹಾಗೆ ಕುಣಿಯತೊಡಗಿದುದನ್ನು ಕಂಡು, ಆ ದುಡಿಯ ನಾದದಲ್ಲಿ ನೋವನ್ನು ಮರೆಸುವ ಶಕ್ತಿಯಿದೆಯೆಂದು ತಿಳಿದೆ. ಭಾವನೆ ಏರಿಳಿತವನ್ನು ವ್ಯಂಜಿಸುವ ಅದರ ಸಾಮರ್ಥ್ಯಕ್ಕೆ ನಾ ಬೆರಗಾದೆ. ಹಾಗಾಗಿ ನಾನೂ ಚೋಮನ ಕೈಗೆ ದುಡಿಯನ್ನು ಕೊಟ್ಟೆ. ಪಿಟೀಲನ್ನು ಬಾರಿಸುತ್ತಾ, ದುಃಖದ ಭಾರವನ್ನೆಲ್ಲ ಕಳಚಿಕೊಳ್ಳುವ 'ಮರಳಿ ಮಣ್ಣಿಗೆ'ಯ ರಾಮನಂತೆ, ಕಲೆಯೊಂದು ಹೇಗೆ ನೋವನ್ನು ಮುಳುಗಿಸಬಲ್ಲದೆಂಬುದನ್ನೇ ನಾನು ಚೋಮನಲ್ಲಿ ತೋರಿಸಿರುವೆನಷ್ಟೇ."

"ಸಂಪ್ರದಾಯ ಶರಣತೆ ಎಂದಿರಲ್ಲ, ಆ ಕುರಿತು ನಿಮಗಾದ ಅನುಭವ ಯಾವುದು?"

'ಚೋಮನ ದುಡಿ'ಯನ್ನು ಬರೆಯುವ ಬಹುಕಾಲದ ಮುಂಚೆಯೇ ನನ್ನ ಹುಟ್ಟೂರಲ್ಲಿ ಒಂದು ಘಟನೆ ಜರುಗಿತ್ತು. ನಮ್ಮ ಮನೆಯ ಹೊರಗಿನ ಜಗುಲಿಯಲ್ಲಿ ನಾನು ಕುಳಿತು ರಸ್ತೆಯ ಮೇಲೆ ಹೋಗುವವರನ್ನು ನೋಡುತ್ತಿದ್ದೆ. ಆಗ ಹೊಲೆಯರ ಮಗುವೊಂದು ರಸ್ತೆಯ ಬದಿಯಲ್ಲಿ ಕುಳಿತಿತ್ತು. ಆ ಮಗುವಿಗೆ ಏನಾಯಿತೋ ಏನೋ; ಅದು ಧೊಪ್ಪನೆ ಚರಂಡಿಗೆ ಬಿದ್ದು, ಗಾಯವಾಗಿ, ರಕ್ತ ಸೋರತೊಡಗಿತು. ನಾನು ಅದನ್ನೆಲ್ಲ ನೋಡುತ್ತಿದ್ದೆನಾದರೂ ಓಡಿಹೋಗಿ ಮಗುವನ್ನೆತ್ತಲು ಹಿಂಜರಿದೆ. ಆ ಕಾಲಕ್ಕೆ ನಾನು ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ಬಹಳಷ್ಟು ಉಪನ್ಯಾಸ ಮಾಡಿದ್ದರೂ ಆ ಕ್ಷಣ, 'ಅದು ಹೊಲೆಯರ ಮಗು, ಮುಟ್ಟಬೇಡ' ಎಂದು ಯಾರೋ ನನ್ನ ಕಾಲನ್ನೇ ಹಿಡಿದು ಎಳೆದಂತಾಯಿತು. ಹೊಲೆಯರ ನೆರಳನ್ನೂ ಕೂಡ ದಾಟಿಕೊಂಡು ಹೋಗುವಷ್ಟು ಸಂಪ್ರದಾಯಸ್ಥರ ಮನೆಯಲ್ಲಿ ಬೆಳೆದ ನಾನು ಆ ಗಳಿಗೆಯಲ್ಲಿ ನಿಸ್ಸಹಾಯಕನಾದೆ. ಮನಸ್ಸಿನ ಸ್ವಭಾವಗಳನ್ನು ನಿಯಂತ್ರಿಸುವಲ್ಲಿ ಸಂಪ್ರದಾಯದ ಹಿಡಿತ ಎಷ್ಟೆಂದು ನನಗಂದು ತಿಳಿಯಿತು.

ಮುಂದೆ ಗ್ರಾಮ ಸಂಚಾರದ ಕಾಲದಲ್ಲೂ ನನ್ನ ಆ ಅನುಭವ ಮತ್ತಷ್ಟು ಬಲಗೊಂಡಿತು. ೩೩ ಗ್ರಾಮಗಳಲ್ಲೂ ಹೊಲೆಯರಿಗಾಗೇ ಒಂದೇ ಒಂದು ಬಾವಿಯಿಲ್ಲದಿರುವುದನ್ನು ಕಂಡು, ನಾನೇ ಹಣಕೊಟ್ಟು ಬಾವಿ ತೋಡಿಸಲು ಮುಂದಾದೆ. ಹೆಚ್ಚಿನ ಕಡೆ ಜನ ಔದಾಸೀನ್ಯ ತೋರಿಸಿದರು; ಒಂದೆರಡು ಕಡೆ ಮಾತ್ರ ಆ ಕೆಲಸದಲ್ಲಿ ತೊಡಗಿದರು. ಆದರೆ ಅಲ್ಲಿಗೂ ಆ ಹೊಲೆಯರ ಯಜಮಾನರುಗಳು ಬಂದು, 'ನಿಮಗೂ ಬಾವಿಯೇ?' ಎಂದು ಪರಿಹಾಸ್ಯ ಮಾಡಿದುದರಿಂದ ಆಗುವ ಕೆಲಸವೂ ನಿಂತು ಹೋಯಿತು.

ಬೆಳ್ಳಾರೆಯ 'ಶಾಂತಿ ಶಿಬಿರ'ದ ಕಾಲದಲ್ಲಿ, ಒಂದಿಷ್ಟು ಜನ ಮಿತ್ರರೊಡನೆ ಸೇರಿ, ಹೊಲೆಯರ ಕೊಪ್ಪದ ಬಳಿ ನಾನೇ ಬಾವಿ ತೋಡುವ ಹಟಕಟ್ಟಿದೆ. ಬಾವಿ ಅಗೆದು, ಹಾರೆ ಗುದ್ದಲಿಗಳನ್ನು ಅಲ್ಲಿಟ್ಟು ಬಂದರೆ, ಅವುಗಳನ್ನವರು

ಅಡಗಿಸಿಡುತ್ತಿದ್ದರು. 'ಹೊರಗಿನ ಜನ ನಮಗಾಗಿ ಬಾವಿ ತೋಡುವುದೇತಕ್ಕೆ? ಅದು ಅವರ ಲಾಭಕ್ಕೇ ಆಗಿರಬೇಕೆಂದೂ, ಏನಿದ್ದರೂ ಅದು ನಮ್ಮ ಪಾಲಿಗೆ ತೆಗೆದಿಟ್ಟಹೊಂಡ' ಎಂದೇ ಅವರು ಅನುಮಾನಗೊಳ್ಳುತ್ತಿದ್ದರು. ಹಾಗೂ ಹೀಗೂ ಎರಡು ಬಾವಿಗಳನ್ನಗೆದು ನೀರನ್ನು ಕಂಡರೂ, ಆ ವರ್ಷ ಅಲ್ಲಿನ ಹೊಲೆಯರು ಆ ಬಾವಿಯ ಸಮೀಪಕ್ಕೇ ಹೋಗಲಿಲ್ಲ.' 'ಬಾವಿಯ ನೀರು ನಮಗಲ್ಲ, ನಮಗೆ ಹಳ್ಳ ಹೊಂಡಗಳ ಕೊಳೆ ನೀರೇ ಗತಿ' ಎಂಬ ಭಾವನೆ ಅವರಲ್ಲಿ ಬೇರೂರಿ ಹೋಗಿತ್ತು. ಅದನ್ನು ಅಲುಗಾಡಿಸುವುದೇನು ಸುಲಭವಾಗಿರಲಿಲ್ಲ.

'ಚೋಮನ ದುಡಿ'ಯಲ್ಲೂ ಸಂಪ್ರದಾಯದ ಭದ್ರಮುಷ್ಟಿಯನ್ನು ತೋರಿಸುವ ಒಂದೆರಡು ಸನ್ನಿವೇಶಗಳಿವೆ. ಚೋಮನ ಮಗ ನೀರಿಗೆ ಬಿದ್ದು ಸಾಯುವ ಗಳಿಗೆಯಲ್ಲೂ, ಸಂಕಪ್ಪಯ್ಯ ಚೋಮನಿಗೆ ಭೂಮಿ ಕೊಡಲು ಹಿಂಜರಿಯುವುದರಲ್ಲೂ, ಮತಾಂತರ ಹೊಂದಲು ಚೋಮನ ಮನ ಸೋಲುವುದರಲ್ಲೂ ಅದರ ಛಾಯೆಯಿದೆ.

"ಈ ಎಲ್ಲ ಅನುಭವಗಳಿಂದ ಪಕ್ವವಾಗಿ, ಕಾದಂಬರಿಯನ್ನು ಬರೆಯಲು ನಿಮಗೆಷ್ಟು ದಿನ ಹಿಡಿಯಿತು?"

"ಸುಮಾರು ಐದಾರು ದಿನ ಇರಬೇಕಷ್ಟೇ"

"ಆಗ ಜನರದನ್ನು ಮೆಚ್ಚಿದ್ದರೇ?"

"ಹೌದು. ಆದರೆ ಮೊದಲ ಮೆಚ್ಚಿಗೆ ಮಾನವನಿಂದ ಬಂದುದಲ್ಲ; ಪಶುವಿನಿಂದ ಬಂದುದು. ಮಂಗಳೂರಲ್ಲಿ ನಾವಿದ್ದ ಮನೆಯ ಹೊರ ಜಗುಲಿಯಲ್ಲಿ ಪುಸ್ತಕವನ್ನಿರಿಸಿ, ಕಾಫೀ ಕುಡಿಯಲು ಒಳಕ್ಕೆ ಹೋದಾಗ, ಹೊಟ್ಟೆಗೆ ಹುಲ್ಲು ಕಾಣದ ದನವೊಂದು ಬಂದು ಅದನ್ನೆತ್ತಿಕೊಂಡು ಹೋಯಿತು. ಅರೆವಾಸಿ ಹಾಳೆಗಳನ್ನು ತಿಂದೂ ಹಾಕಿತು. ಅದನ್ನು ಬೆನ್ನಟ್ಟಿ, ನನ್ನ ಸಾಹಿತ್ಯದಲ್ಲಿ ಅಳಿದುಳಿದುದನ್ನು ಪಾರು ಮಾಡಿಕೊಂಡು, ಹೋದುದನ್ನು ಬರೆದು ಕೂಡಿಸಿ ಪ್ರಕಟಿಸಿದೆ. ಜನ ಮೆಚ್ಚಿ ಬೆನ್ನು ಚಪ್ಪರಿಸಿದುದರಿಂದ ಇದರ ಸಾವಿರ ಪ್ರತಿಗಳನ್ನು ಅಚ್ಚು ಹಾಕಿಸಲು ಒಪ್ಪಿಗೆ ಕೊಟ್ಟೆ. ಆ ಸಾವಿರ ಪ್ರತಿಗಳು ಮಾರಾಟವಾಗಲು ೧೨ ವರುಷಗಳೇ ಹಿಡಿದುವು! ಯಾರೋ ಖರೀದಿಸಿದ ಒಂದು ಪುಸ್ತಕವನ್ನೇ ಒಂದೈವತ್ತು ಜನ ಕಡಪಡೆದು ಓದುತ್ತಾರೆಯೇ ಹೊರತು, ಪುಸ್ತಕವನ್ನು ತಾವೇ ಕೊಂಡುಕೊಂಡು ಓದುವವರು ಈ ನಾಡಿನಲ್ಲಿ ಕಡಿಮೆಯಲ್ಲವೇ?"

"'ಚೋಮನ ದುಡಿ'ಯನ್ನು ಬರೆಯುವ ಮೊದಲು ನೀವು ಹೊಲೆಯರ ಜೀವನದ ಬಗ್ಗೆ ಬರೆದುದುಂಟೇ?"

"ಹೌದು, 'ಡೊಮಿಂಗೋ' ಎಂಬೊಂದು ಸಮಸ್ಯಾ ನಾಟಕವನ್ನು ಬರೆದಿದ್ದೆ; ಹಳ್ಳಿ ಹಳ್ಳಿಗಳಲ್ಲಿ ಆಡಿಸಿದ್ದೆ. ಅದು ಒಬ್ಬ ಬ್ರಾಹ್ಮಣ ಹುಡುಗ ಮತ್ತೊಬ್ಬ ಹೊಲೆಯರ ಹುಡುಗ–ಇವರ ಗೆಳೆತನದ ಕಥೆ. ಸಂಪ್ರದಾಯಸ್ಥರಾದ ಬ್ರಾಹ್ಮಣನ ಮನೆಯವರು ಆ ಗೆಳೆತನಕ್ಕೆ ಅಡ್ಡ ಬರುತ್ತಾರೆ. ಹೊಲೆಯ ಹುಡುಗನ ಸಂಗ ಬೆಳೆಸುವುದು ಸಂಪ್ರದಾಯಕ್ಕೆ ವಿರೋಧವೆನ್ನುತ್ತಾರೆ.

"ಮುಂದೆ [illegible] ಊರಿಗೊಬ್ಬ ತಹಶೀಲ್ದಾರ ಬರುತ್ತಾನೆ. ಆತನಿಂದ ಆ ಬ್ರಾಹ್ಮಣನಿಗೇನೋ ಕೆಲಸ ಆಗಬೇಕಿತ್ತು. ಹಾಗಾಗಿ ಆತನೇ ಆತ ತಹಶೀಲ್ದಾರರನ್ನು ತುಂಬ ಆದರದಿಂದ ಬರಮಾಡಿಕೊಳ್ಳುತ್ತಾನೆ. ಆತನೂ ಒಬ್ಬ ಹೊಲೆಯ. ಧೂಮಣ್ಣ ಎಂದಿದ್ದ ಅವನ ಹೆಸರು ಡೊಮಿಂಗೋ ಎಂದಾಗಿತ್ತು. ಹೊಲೆಯರ ಹತ್ತಿರ ಸುಳಿಯದ ಜನ, ಹೊಲೆಯ ಅಧಿಕಾರಿ ಬಂದರೆ, ಹೇಗೆ ಆತನನ್ನು ತಮ್ಮೆಡೆಗೇ ಬರಮಾಡಿಕೊಂಡು ಮಣೆ ಹಾಕುತ್ತಾರೆಂಬುದರೊಂದಿಗೆ ನಾಟಕ ಅಂತ್ಯವಾಗುತ್ತದೆ."

"ಜೀತಪದ್ಧತಿ, ಅಸ್ಪೃಶ್ಯತೆಗಳ ನಿವಾರಣೆಗಾಗಿ [illegible] ಕಾಲದಲ್ಲಿ ಕೆಲಸಗಳಾಗುತ್ತಿದ್ದುವೇ?"

"ಹೌದು, ಗಾಂಧೀಜಿಯವರ ಮುಂದಾಳುತನದಲ್ಲಿ ಆ ಕೆಲಸಗಳಾಗುತ್ತಿದ್ದುವು. ಗಾಂಧೀಜೀಯವರ ಪ್ರಭಾವಕ್ಕೆ ಸಿಕ್ಕಿದ ಹಲವರೂ ಆ ಕೆಲಸಕ್ಕೆ ಕೈ ಹಾಕಿದ್ದರು.

"ಅಸ್ಪೃಶ್ಯತೆಯನ್ನು ಹೇಗಾದರೂ, ಏನಿ

ಲ್ಲೆಂದರೆ ಒತ್ತಾಯ ಹೇರಿಯಾದರೂ ಹೋಗಲಾಡಿಸಬಹುದು. ಅವರ ಉದ್ಧಾರಕ್ಕಾಗಿ ರಾಶಿ ಹಣವನ್ನೂ ಸುರಿಯಬಹುದು. ಆದರೆ ಅವರಲ್ಲೇ ಒಂದು ವಿಶ್ವಾಸ ಹುಟ್ಟದಿದ್ದರೆ ಅವೆಲ್ಲ ವ್ಯರ್ಥ."

"ಹಾಗಾದರೆ ಅವರ ಉದ್ಧಾರ ಸಾಧ್ಯವಿಲ್ಲವೇ?"

"ಸಾಧ್ಯವಿಲ್ಲವೆಂದಲ್ಲ. 'ಹರಿಜನೋದ್ಧಾರ' ಎಂಬ ವಾಗಾಡಂಬರ ಮಾತ್ರದಿಂದ ಅದು ಸಾಧ್ಯವಾಗಲಾರದು ಖಂಡಿತ. ಆದರೆ ಅವರಿದ್ದೆಡೆಗೆ ತೆರಳಿ, ಅವರ ಮನವೊಲಿಸಿ ಜೀವನಕ್ಕೊಂದು ಹೊಸ ಹಾದಿ ಹಿಡಿಸಿದರೆ, ಇದು ಅಸಾಧ್ಯದ ಮಾತಾಗಿ ಉಳಿಯದು. ಅವರಿಗಾಗಿ ಭೂಮಿ ಹಂಚುವುದು, ಸಾಲ ತೆಗೆಸಿ ಕೊಡುವುದರೊಂದಿಗೇ ಅವುಗಳನ್ನು ಯೋಗ್ಯ ರೀತಿಯಲ್ಲಿ ಹೇಗೆ ಉಪಯೋಗಿಸಬೇಕೆಂದು ತಿಳಿಯಪಡಿಸಬೇಕು. ಅವರು ಉತ್ಪಾದಿಸಿದ ವಸ್ತುಗಳಿಗೆ ಯೋಗ್ಯ ಮಾರುಕಟೆಯನ್ನೂ ಒದಗಿಸಿ ಅವರನ್ನು ಪ್ರೋತ್ಸಾಹಿಸಬೇಕು. ಆಗ ಮಾತ್ರ ಅಂಥವರಲ್ಲಿ ದುಡಿಮೆಯ ಬಗ್ಗೆ ವಿಶ್ವಾಸ ಹೆಚ್ಚೀತು; ಅವರ ಜೀವನವು ಹೊಸ ಹಾದಿ ಹಿಡಿದೀತು. ಇಲ್ಲವಾದಲ್ಲಿ, ಸಾಲ ಪಡೆದುಕೊಳ್ಳಲು ಅವರೆಲ್ಲರೂ ಮುಂದೆ ಬಂದಾರಾದರೂ, ಕೊಟ್ಟ ಸಾಲದಿಂದ ಹೆಂಡದಂಗಡಿಯವನ ಹೊಟ್ಟೆ ಮಾತ್ರ ತುಂಬೀತಷ್ಟೇ."

"ಈ ಕಾದಂಬರಿಯ ಖ್ಯಾತಿ ಜಗತ್ತಿಗೆಲ್ಲ ಹಬ್ಬಿದ್ದು 'ಚೋಮನ ದುಡಿ' ಚಲನಚಿತ್ರವಾದ ಮೇಲೆ. ಅದ್ದರಿಂದ ಜನತೆಯ ಮೇಲೆ ಕಾದಂಬರಿಗಿಂತಲೂ, ಚಲನಚಿತ್ರವೇ ಹೆಚ್ಚು ಪರಿಣಾಮಕಾರಿ ಎನ್ನುವಿರಾ?"

"ಹೌದು, ಕಾದಂಬರಿಗಿಂತಲೂ ಚಲನಚಿತ್ರ ಹೆಚ್ಚು ಶಕ್ತಿಯುತವಾದದ್ದು. ಅದರ ದಾರಿ ಸ್ವತಂತ್ರವಾದುದು. ರಶಿಯಾ ದೇಶದಲ್ಲಂತೂ ಚಲನಚಿತ್ರಗಳಿಂದಲೇ ಜನಜಾಗೃತಿ ಹುಟ್ಟಿಸಿದ್ದರು. ಇಂದಿಗೂ ಚಲನಚಿತ್ರ ಮಾಧ್ಯಮವನ್ನು ಬಳಸಿ, ಪಾಶ್ಚಾತ್ಯರು ಮಾಡುವ ಕೃತಿಗಳನ್ನು ಕಂಡು ನನಗೂ ತುಂಬ ಆಸೆಯುಂಟಾಗಿದೆ. ಆದರೆ ನಮ್ಮ ದೇಶದ ಚಿತ್ರಗಳನ್ನು ಕಂಡಾಗ ಮಾತ್ರ ತಲೆ ಬೇನೆ ಬಂದಿದೆ."

"ಸ್ವರ್ಣಕಮಲವನ್ನು ಗೆದ್ದ ಚಲನಚಿತ್ರ 'ಚೋಮನ ದುಡಿ'ಯ ಬಗ್ಗೆ ನಿಮ್ಮ ಅಭಿಪ್ರಾಯವೇನು?"

"ಅದು ನನ್ನ ತೃಪ್ತಿಯ ಮಟ್ಟಕ್ಕೇರಿಲ್ಲ."

"ಆದರೆ ರಾಷ್ಟ್ರೀಯ ಪ್ರಶಸ್ತಿ ಸಿಕ್ಕಿದೆಯಲ್ಲಾ ಅದಕ್ಕೆ..."

"ರಾಷ್ಟ್ರೀಯ ಪ್ರಶಸ್ತಿಯಲ್ಲ, ಬ್ರಹ್ಮನೇ ಅದಕ್ಕೆ ಪ್ರಶಸ್ತಿ ಕೊಟ್ಟರೂ ನನ್ನೇಕೆಯುಂತಾಗಿದೆ ಅದೆನ್ನಲು ನಾನು ತಯಾರಿಲ್ಲ; ಒಂದು ಕೃತಿಯನ್ನು ಇನ್ನೂ ಚೆನ್ನಾಗಿ ಮಾಡುವ ಅವಕಾಶವೊಂದು ಕೈಜಾರಿ ಹೋಯಿತಲ್ಲಾ ಎಂಬುದೇ ನನ್ನ ವ್ಯಥೆ."

ಊರೆಲ್ಲ ಅದಕ್ಕೇ ಪ್ರಶಂಸೆಯ ಸುರಿಮಳೆಗರೆಯುತ್ತಿರುವುದರ ಮಾತೆತ್ತಿದಾಗ ಕಾರಂತರೆಂದರು. "ಮನೆಯಲ್ಲೊಂದು ಮದುವೆ ಆಗುತ್ತದೆನ್ನಿ. ಆಗ ಮನೆಯವರಲ್ಲಿ ಒಮ್ಮನಸ್ಸಿಲ್ಲದಿದ್ದರೆ ಎಷ್ಟೋ ಜಂಜಾಟಗಳಾಗುತ್ತವೆ. ಒಳಿತಾಗಲೆಂದು ಒಬ್ಬ ಆಡಿದ ಮಾತನ್ನು ಉಳಿದವರು ಕಡೆಗಣಿಸುವುದುಂಟು; ಒಬ್ಬರಿಗೊಪ್ಪದ ಹಾದಿಯಲ್ಲಿ ಇನ್ನೊಬ್ಬರು ಹೆಜ್ಜೆ ಇಡುವುದುಂಟು. ಆಗ ಅದೆಷ್ಟು ಬೇಸರ ಉಂಟಾಗುತ್ತದೆ; ವ್ಯಥೆ ಉಂಟಾಗುತ್ತದೆ! ಆದರೆ ಮದುವೆಗೆ ಬಂದವರಿಗೆಲ್ಲ ಅದು ಗೊತ್ತಾಗುತ್ತದೆಯೇ? ಮದುವೆಯಂತೂ ಹೇಗೋ ಹೇಗೋ ಆಗುತ್ತದೆ. ಅದನ್ನೇ ಒಳ್ಳೆಯದೆಂದು ಹೊಗಳುವ ಜನಕ್ಕೆ ಅದಿನ್ನೂ ಒಳ್ಳೆಯ ತರದಲ್ಲಾಗುತ್ತಿತ್ತೆಂದು ತಿಳಿಯುತ್ತದೆಯೇ?"

ಕಾರಂತರೆಣಿಕೆಯಂತೆಯೇ, 'ಚೋಮನ ದುಡಿ' ಬೆಳ್ಳಿ ತೆರೆಯ ಮೇಲೆ ಮೂಡಿದ್ದರೆ...! ಎಂಬ ಕನಸಾಗ ಮನದಲ್ಲಿ ಮಿಂಚಿತು. ಆ ಸತ್ತ ಕನಸನ್ನು ಹೊತ್ತು ಕಾರಂತರಿಂದ ದೂರಾದೆ.

✡

ಹೊಸ ಭಂಗಿ: ಹಳೆಯ ಕಥೆ

ರಂಗನಾಥ ದಿವಾಕರ

ಈಗ ಎರಡು ವರುಷಗಳಾಚೆ ಮನೋವೈಜ್ಞಾನಿಕರ ಒಂದು ಜಾಗತಿಕ ಸಮ್ಮೇಲನ ಕೂಡಿತ್ತು. ರಾಜ್ಯಕರ್ತರು ತಮ್ಮ ಶತ್ರುಗಳನ್ನೊ ವಿರೋಧಿಗಳನ್ನೊ ಪ್ರತಿಪಕ್ಷೀಯರನ್ನೊ ಪೀಡಿಸುವದಕ್ಕಾಗಿ, ಜಯಿಸುವದಕ್ಕಾಗಿ ಮನೋವಿಜ್ಞಾನದ ದುರುಪಯೋಗ ಮಾಡಿಕೊಳ್ಳುತ್ತಾರೆ ಎಂದು ಒಬ್ಬ ಮನೋವೈಜ್ಞಾನಿಕನು ಆಪಾದಿಸಿದನು. ಅದರಲ್ಲಿ ನಿಜಾಂಶವಿರಲಿ ಬಿಡಲಿ, ಈ ಬಗ್ಗೆ ನಡೆದು ಹೋದ ಒಂದು ಬಹಳ ಹಳೇ ಕಥೆಯನ್ನು ಹೇಳುವೆನು. ಆ ಮಾತಿಗೆ ಸುಮಾರು ಅರವತ್ತು ವರುಷಗಳಾಗಿ ಹೋಗಿರಬೇಕು.

ಆಗ ಆಸೇತುಹಿಮಾಚಲ ಬ್ರಿಟಿಶರ ಆಳಿಕೆ. ಆದರೆ ಅವರು ಇಡೀ ಭಾರತದಲ್ಲಿ ಐದು ನೂರಾ ಅರವತ್ತೆರಡು ಹಿಂದೀ ಸಂಸ್ಥಾನಗಳನ್ನು ಬೇರೆ ಬೇರೆ ಕಾರಣಗಳಿಗಾಗಿ ಹಾಗೂ ಬೇರೆ ಬೇರೆ ಒಪ್ಪಂದಗಳಿಗನುಗುಣವಾಗಿ ಕಾದಿರಿಸಿದ್ದರು. ಹಲವು ಸಂಸ್ಥಾನಿಕರಿಗೆ ಆಯಾ ಸಂಸ್ಥಾನಗಳಲ್ಲಿ ಅವರವರ ಪ್ರಜೆಗಳ ಮೇಲೆ ಸಂಪೂರ್ಣ ಅಧಿಕಾರಗಳು ಕೊಡಲ್ಪಟ್ಟಿದ್ದವು. ಹಲವು ಸಂಸ್ಥಾನಿಕರು ಬರೀ ಜಹಾಗೀರದಾರರಂತೆ ಇದ್ದರು. ನಾನು ಹೇಳುವ ಕಥೆ ಒಂದು ಚಿಕ್ಕ ಸಂಸ್ಥಾನದ್ದು. ಆದರೆ ಆ ಸಂಸ್ಥಾನಿಕರಿಗೆ ಅವರ ಪ್ರಜೆಗಳ ಮೇಲೆ ಜೀವನ ಮರಣದ ಅಧಿಕಾರವಿತ್ತು.

ಸಂಸ್ಥಾನಿಕರಲ್ಲಿ (ಅರಸರಲ್ಲಿ) ಅನೇಕರು ಒಳ್ಳೆಯವರಿದ್ದರು. ಹಲವರು ಮಾತ್ರ ಅತೀವ ವಿಷಯಲೋಲುಪರು, ಕ್ರೂರರು, ಸ್ವಾರ್ಥಿಗಳು, ಮನ ಬಂದಂತೆ ಆಚರಿಸುವವರು ಇದ್ದರು. ಈಗ ನಾಲ್ವತ್ತು ನಾಲ್ವತ್ತೈದು ವರುಷ ಪ್ರಾಯದ ಪೀಳಿಗೆಯವರಿಗೆ ಆಗಿನ ಸಂಸ್ಥಾನೀ ಪ್ರಜೆಗಳ ಸ್ಥಿತಿ ಎಷ್ಟು ಕಷ್ಟಕರವಿತ್ತು, ದಯನೀಯವಿತ್ತು ಎಂಬುದರ ಕಲ್ಪನೆ ಬರುವದು ಸಾಧ್ಯವಿಲ್ಲ; ಹಲವು ದೊಡ್ಡ ಹಾಗೂ ಹಲವೇ ಚಿಕ್ಕ ಸಂಸ್ಥಾನಗಳನ್ನು ಹೊರತುಪಡಿಸಿದರೆ ಆಯಾ ಪ್ರಜೆಗಳಿಗೆ ಯಾವ ಹಕ್ಕು ಬಾಧ್ಯತೆಗಳೆಂಬವೂ ಇರಲಿಲ್ಲ ಎಂದರೆ ತಪ್ಪಾಗಲಿಕ್ಕಿಲ್ಲ. ಈಗೇನೋ ನಾವು ಮೂಲಭೂತ ಹಕ್ಕುಗಳು, ಜನ್ಮಸಿದ್ಧ ಹಕ್ಕುಗಳು ಎಂಬ ಮಾತುಗಳನ್ನು ಎತ್ತುತ್ತೇವೆ. ಆದರೆ ಸಂಸ್ಥಾನೀ ಪ್ರಜೆಗಳು ಹುಟ್ಟಿದಂದಿನಿಂದ ಸಾಯುವವರೆಗೆ ಅರಸನಿಗೆ, ಅವನ ಕುಟುಂಬದವರಿಗೆ, ಅವನ ಆಶ್ರಿತರಿಗೆ, ಅಧಿಕಾರಿಗಳಿಗೆ ನಮೋ ನಮೋ ಎನ್ನುತ್ತಲೆ ಕಾಲ ಕಳೆಯಬೇಕಾಗುತ್ತಿತ್ತು. ಗರ್ಭದಲ್ಲಿಯೇ ಅವರಿಗೆ ರಾಜಭಕ್ತಿಯ ಶಪಥ ಮಾಡಿಸಲಾಗುತ್ತಿತ್ತೋ ಏನೋ! ಬ್ರಿಟಿಶರ ಆಳಿಕೆಯಲ್ಲಿದ್ದವರು ಸ್ವತಂತ್ರರಿದ್ದರು ಎಂದು ಇದರ ಅರ್ಥವಲ್ಲ. ಆದರೆ ಬ್ರಿಟಿಶರ ಆಳಿಕೆಯಲ್ಲಿದ್ದ ನಮಗೆ ಸಹ ಆ ಸಂಸ್ಥಾನೀ ಪ್ರಜೆಗಳ ಸ್ಥಿತಿ ನೋಡಿ ಕನಿಕರವುಂಟಾಗುತ್ತಿತ್ತು. ಸಂಸ್ಥಾನಗಳ ಅರಸರೆನಿಸಿಕೊಳ್ಳುವವರೂ ತಾವೇ ಬ್ರಿಟಿ-

ಕರ ದಾಸರಾಗಿದ್ದರು. ಆ ನಾಮಮಾತ್ರದ ಅರಸರ ಪ್ರಜೆಗಳು ಅವರು ದಾಸರು. ಅಂದರೆ ಅವರು ದಾಸರ ದಾಸರು, ಗುಲಾಮರ ಗುಲಾಮರು! ಅವರ ದುಃಸ್ಥಿತಿಯನ್ನು ನೆನೆಸುವದೇ ಬೇಡ! ಅನೇಕಾನೇಕ ಸಂಸ್ಥಾನಗಳಲ್ಲಿ ಯಾವದೇ ಸಂಘ-ಸಂಸ್ಥೆ- ಸಮಿತಿಗಳನ್ನೂ ನಡೆಸುವ ಸ್ವಾತಂತ್ರ್ಯ ಪ್ರಜೆಗಳಿಗಿರಲಿಲ್ಲ. ಒಂದು ನಾಲ್ಕು ಪುಸ್ತಕಗಳನ್ನು ಇಟ್ಟುಕೊಂಡು ವಾಚನಾಲಯ ನಡೆಸಬೇಕಾದರೆ ಅದರ ಮೇಲೆ ಪೋಲೀಸರ ಕಣ್ಣು ಇರುತ್ತಿತ್ತು. ಹಲವು ಪತ್ರಿಕೆಗಳನ್ನು- ಉದಾಹರಣೆಗೆ ಕೇಸರಿ, ಕಾಳ ಎಂಬ ಪತ್ರಿಕೆಗಳನ್ನು—ಯಾರೂ ತರಿಸಕೂಡದೆಂಬ ನಿರ್ಬಂಧವಿರುತ್ತಿತ್ತು!


ಇಂಥ ಒಂದು ಸಂಸ್ಥಾನದಲ್ಲಿ ಅರಸನು ಯಾವದೋ ಒಂದು ಕಾರಣದಿಂದ ಹಲವುಜನರ ಜಮೀನು ಮಾಲಕೀ ಹಕ್ಕನ್ನು ಕಸಿದುಕೊಂಡನು. ಅವರೆಲ್ಲರೂ ಕೂಡಿ ಒಬ್ಬ ಧರ್ಮಾತ್ಮನಿಗೆ ಶರಣು ಹೋಗಿ, ಏನಾದರೂ ಮಾಡಿ ನಮ್ಮ ಉಪಜೀವನದ ಸಾಧನಗಳನ್ನು ಮರಳಿ ಕೊಡಿಸಿರಿ ಎಂದು ಬೇಡಿಕೊಂಡರು. ಆ ಧರ್ಮಾತ್ಮರು ಬ್ರಿಟಿಶ್ ಆಡಳಿತಕ್ಕೆ ಸೇರಿದವರು. ಆ ಸಂಸ್ಥಾನದಲ್ಲಿ ಧರ್ಮಪ್ರಚಾರದ ಕೆಲಸವನ್ನು ಮಾಡುತ್ತಿದ್ದರು. ಅವರಿಗೆ ಸಂಸ್ಥಾನದ ಹೊರಗಿನ ಜನರ ಸಾಕಷ್ಟು ಪರಿಚಯವಿತ್ತು. 'ಅರಸನಿಗೆ ಹೇಳಿಕೊಳ್ಳೋಣ. ಬ್ರಿಟಿಶ್ ರೆಸಿಡೆಂಟ್ ಮುಂತಾದವರಿಗೆ ಮೊರೆ ಇಡೋಣ' ಎಂದು ಮುಂತಾಗಿ ಆ ಧರ್ಮಾತ್ಮರು ಆ ಸಂಕಷ್ಟಕ್ಕೀಡಾದ ಜನರಿಗೆ ಧೈರ್ಯ ಕೊಟ್ಟರು. ಅರಸನಿಗೆ ಇದೆಲ್ಲ ಸುದ್ದಿ ತಿಳಿಯಿತು. ಅವನೂ ಸ್ವಲ್ಪ ತೊಡಕಿಗೆ ಒಳಗಾದ. ಯಾಕಂದರೆ ಸಂಸ್ಥಾನದ ನಾಗರಿಕನಲ್ಲದವನ ಮೇಲೆ ಕೈ ಮಾಡುವದು ಕಠಿಣವಿತ್ತು. ಆಗ ಅವರಿಗೆ ಒಂದು ಶಕುನಿ ಸಲಹೆ ಕೊಡಲಾಯಿತು. ಆ ಧರ್ಮಾತ್ಮನನ್ನು ಬರಮಾಡಿಕೊಂಡು ಅವನನ್ನು ಡಾಕ್ಟರರಿಗೆ ಅಧೀನಪಡಿಸಿ, ಅವನ ತಲೆ ಸರಿಯಾಗಿಲ್ಲ, ಎಂದು ರಿಪೋರ್ಟು ಮಾಡಿಸಿ ಅವನನ್ನು ಮಾನಸಿಕ ಆಸ್ಪತ್ರೆಯಲ್ಲಿರಿಸಿಬಿಡಬೇಕು!

ಈ ಜಟಿಲ ಸಂಚು ಆ ಧರ್ಮಾತ್ಮನಿಗೆ ತಿಳಿಯಿತು. ಮರುದಿನವೇ ಈ ನಾಟಕವು ನಡೆಯು ತಕ್ಕದ್ದಿತ್ತು. ಆ ಧರ್ಮಾತ್ಮನು ಬೆಳಗಾಗುವಷ್ಟರಲ್ಲಿ ಯಾರಿಗೂ ಹೇಳದೆ ಕೇಳದೆ, ಸಂಗಡ ಯಾರನ್ನೂ ಕರೆಯದೆ ಏನೂ ತೆಗೆದುಕೊಳ್ಳದೆ ಆ ಸಂಸ್ಥಾನದ ಗಡಿ ದಾಟಿ ಬ್ರಿಟಿಶ್ ಹಿಂದುಸ್ತಾನದ ಹದ್ದಿನಲ್ಲಿ ಹೋಗಿಬಿಟ್ಟ! 'ಪಕ್ಷಿ ಹಾರಿ ಹೋಯಿತು' ಎಂಬುದೊಂದೇ ಟೀಕೆ ಅರಸನ ಓಲಗದಲ್ಲಿ.

ಈ ರೀತಿ ರಾಜಕೀಯ ಎಂಬುದು ಕೌಟಿಲ್ಯನ ಕಾಲದಿಂದ, ಅಥವಾ ಮಹಾಭಾರತ ಕಾಲದಿಂದ ಎಂದೂ ಹೇಳಬಹುದು, ವಿಶೇಷ ಬದಲಾಗಿಲ್ಲ. ಈಗ ವೈಜ್ಞಾನಿಕ ಹಾಗೂ ತಾಂತ್ರಿಕ ಸಾಧನಗಳು ಬೇಕಾದಷ್ಟು ಉಪಲಬ್ಧವಿರುವುದರಿಂದ ಅವುಗಳ ಉಪಯೋಗವೂ ನಡೆಯುವದು. ಸಿ. ಆಯ್. ಏ, ಕೆ. ಜಿ. ಬಿ. ಮುಂತಾದ ಸಂಸ್ಥೆಗಳ ಕಾರ್ಯಕಲಾಪಗಳನ್ನು ನೋಡಿದರೆ ರಾಜ್ಯಶಾಸ್ತ್ರ ಎಷ್ಟು ಅಗಾಧವಾಗಿದೆ ಎಂಬುದು ಗೊತ್ತಾಗುವದು. ಪೂರ್ವ ಕಾಲದಲ್ಲಿ ಯಾವುದನ್ನು ಅರಸರು, ಅವರ ಹಸ್ತಕರು ಬಹಿರಂಗವಾಗಿ ತೀರ ಬರ್ಬರರಂತೆ ಮಾಡುತ್ತಿದ್ದಾರೋ ಅದನ್ನೇ ಆಧುನಿಕರು ನಯವಾಗಿ, ಸೂಕ್ಷ್ಮವಾಗಿ ಮಾಡುವರು. ಮನೋವೈಜ್ಞಾನಿಕ ಶಾಸ್ತ್ರವನ್ನು ಈ ಕೆಲಸಕ್ಕೆ ಆಡಳಿತಗಾರರು ಉಪಯೋಗಿಸಿದರೆ ಅದರಲ್ಲೇನೂ ಆಶ್ಚರ್ಯವಿಲ್ಲ! ಆ ಸಮ್ಮೇಲನದಲ್ಲಿ ವೈಜ್ಞಾನಿಕನು ಹೇಳಿದುದಕ್ಕೆ ಏನಾದರೂ ಆಧಾರಗಳಿರಲಿಕ್ಕೆ ಸಾಕು. ✡




ಗರ್ಭಿಣಿಯರಿಗೆ ಹಾರ್ಲಿಕ್ಸ್ ಅತ್ಯುತ್ತಮ
ಪೋಷಣೆಯನ್ನು ನೀಡುತ್ತದೆ. ಆದ್ದರಿಂದ
ಸುಮಾರು 100 ವರ್ಷಗಳಿಂದ ವಿಶ್ವಾದ್ಯಂತ
ಡಾಕ್ಟರ್‌ಗಳು ಹಾರ್ಲಿಕ್ಸ್ ಅನ್ನು ಶಿಫಾರಸು
ಮಾಡುತ್ತಿದ್ದಾರೆ.
Horlicks
THE IDEAL FOOD DRINK FOR ALL
Hs.4127 Kan. A1
ಗರ್ಭಿಣಿಯೊಬ್ಬಳಿಗೆ ಅತ್ಯಂತ ವಿಶೇಷ ಬಗೆಯ ಆಹಾರ ಅತ್ಯಗತ್ಯ. ಸಮತೋಲದ, ಸುಲಭವಾಗಿ ಜೀರ್ಣವಾಗುವ ಮತ್ತು ಪೋಷಕಾಂಶಗಳಿಂದ ತುಂಬಿದ ಆಹಾರ.
ಆದ್ದರಿಂದಲೇ ಹೆಚ್ಚು ಕಡಿಮೆ ಒಂದು ಶತಮಾನದಿಂದ ಗರ್ಭಿಣಿ ಸ್ತ್ರೀಯರು ಹಾರ್ಲಿಕ್ಸ್ ಅನ್ನೇ ನಂಬಿಕೊಂಡಿದ್ದಾರೆ. ತಾನು ಗರ್ಭಿಣಿಯಾಗಿದ್ದ ಮೂರು ಸಲವೂ ಸುಚಿತ್ರ ಹಾರ್ಲಿಕ್ಸ್ ಅನ್ನೇ ಅವಲಂಬಿಸಿದ್ದಳು.
ತಾಯಿಗೂ, ಶಿಶುವಿಗೂ ಹಾರ್ಲಿಕ್ಸ್ ಅತ್ಯುತ್ತಮ. ಅದು ದೇಹ ನಿರ್ಮಿಸುವ ಪ್ರೋಟೀನ್‌ಗಳು ಮತ್ತು ಕಾರ್ಬೋಹೈಡ್ರೇಟ್‌ಗಳನ್ನು ಸರಿಯಾದ ಪ್ರಮಾಣದಲ್ಲಿ ಒದಗಿಸುವುದೆಂದು ಸುಚಿತ್ರಳಿಗೆ ಅವಳ ಡಾಕ್ಟರ್ ಹೇಳಿದ್ದರು. ಬೆಳಗಿನ ಹೊತ್ತು ಬರುವ ಓಕರಿಕೆಯನ್ನು ಅದು ಹೋಗಲಾಡಿಸುತ್ತದೆ. ಅದು ತಾಯಿಯ ಹಾಲಿನ ಗುಣ ಮತ್ತು ಪ್ರಮಾಣವನ್ನು ಹೆಚ್ಚಿಸುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಹಾರ್ಲಿಕ್ಸ್ ಲಘುವಾದ ಮತ್ತು ಜೀರ್ಣಿಸಿಕೊಳ್ಳಲು ಸುಲಭವಾದ ಆಹಾರ
ಹಾರ್ಲಿಕ್ಸ್‌ಗೆ ವಂದನೆಗಳು—ಅನ್ನುತ್ತಾಳೆ ಸುಚಿತ್ರ ತಾನು ಗರ್ಭಿಣಿಯಾಗಿದ್ದ ಮೂರು ಸಲವೂ ಅವಳು ದಿನಗಳನ್ನು ಸುಖವಾಗಿ ಕಳೆದಳು. ಮೂರು ಮಕ್ಕಳೂ ಆರೋಗ್ಯವಾಗಿದ್ದವು.
ಸಂಪೂರ್ಣ ಪೋಷಣೆಯನ್ನು ಪಡೆಯಲು
ಇದರಲ್ಲಿ ಆರೋಗ್ಯ ತುಂಬಿದೆ ಹಾರ್ಲಿಕ್ಸ್
ಹಾರ್ಲಿಕ್ಸ್ ಒಂದು ರಿಜಿಸ್ಟರ್ಡ್ ಟ್ರೇಡ್ ಮಾರ್ಕ್.



ಕಡುಗಲಿ ಕುಮಾರರಾಮ

–ದಲಿ

(ಕಂಪಿಲದೇವನ ಮಗ ಕುಮಾರರಾಮ ೧೪ ನೇ ಶತಮಾನದ ಆದಿಭಾಗದಲ್ಲಿ ಬಾಳಿ ಬೆಳಗಿದ ಕನ್ನಡ ಕಡುಗಲಿ. ಕುಮ್ಮಟ ದುರ್ಗದಲ್ಲಿ ರಾಜ್ಯವಾಳುತ್ತಿದ್ದ ಕಂಪಿಲದೇವನ ರಾಜ್ಯವನ್ನು ಈ ಯುವರಾಜ ಸುಸ್ಥಿರಗೊಳಿಸಿದ. ಉತ್ತರದಿಂದ ಬಂದ ಯವನರ ದಾಳಿಗಳನ್ನು ಧೂಳೀಪಟ ಮಾಡಿ ತನಗೆ ಯಾರೂ ಸರಿದೊರೆ ಇಲ್ಲ ಎಂದು ವೈರಿಗಳಿಂದಲೇ ಹೊಗಳಿಸಿಕೊಂಡವ. ದಿಲ್ಲಿ ಸುಲ್ತಾನನ ಮಗಳು ಕುಮಾರರಾಮನನ್ನೇ ವರಿಸಬಯಸಿ ಆ ಕೊರಗಿನಲ್ಲೇ ಮಡಿದಳು. ದುರ್ದೈವವಶಾತ್ ಮಲತಾಯಿ ರತ್ನಾಜಿಯ ಕಣ್ಣು ಈತನ ಮೇಲೆ ಬಿದ್ದರೂ- ಈತನು ಪರದಾರ ಸಹೋದರನಾಗಿದ್ದುದರಿಂದ ಸೋಲರಿಲ್ಲ. ರಾಣಿಯ ಚಾಡಿಯಿಂದ ಕ್ರುದ್ಧನಾದ. ರಾಜನಾಣತಿಯಂತೆ ಈತನನ್ನು ಕೊಲ್ಲಿಸಬೇಕಾಗಿದ್ದರೂ ಮಂತ್ರಿ ಹಾಗೆಮಾಡದೆ ಬಚ್ಚಿಟ್ಟು ಮುಂದೆ ಕುಮ್ಮಟದುರ್ಗವನ್ನು ಸುಲ್ತಾನನ ಸೈನ್ಯ ಮುತ್ತಿದಾಗ ಈತನ ಪ್ರಯೋಜನ ಪಡೆಯುತ್ತಾನೆ. ನೇಮಿಖಾನ ಸೋತು ಓಡಿ ಹೋಗುತ್ತಾನೆ. ಸುಲ್ತಾನನ ದರ್ಬಾರದಲ್ಲಿಯ ಮಾತಂಗಿ ಎಂಬವಳು ವೀಳೆಯ ಪಡೆದು ರಾಮನನ್ನು ಯುದ್ಧದಲ್ಲಿ ಸಂಧಿಸಿ ಕುಟಿಲತನದಿಂದ ಆತನನ್ನು ಸಂಹರಿಸುತ್ತಾಳೆ.

ಈ ಕಥೆ ಹೇಳುವ ನಂಜುಂಡ ಕವಿಯ (ಕ್ರಿ. ಶ. ೧೫೦೦) ಕುಮಾರರಾಮ ಸಾಂಗತ್ಯ ಒಂದು ಸುಮನೋಹರ ಐತಿಹಾಸಿಕ ಕಾವ್ಯ. ಅದನ್ನು ಪರಿಚಯಿಸುವ ಉದ್ದೇಶದಿಂದ ಈ ಕೆಲ ಶ್ಲೋಕಗಳನ್ನು ಇಲ್ಲಿ ಕೊಡಲಾಗಿದೆ. ಸಮಯೋಚಿತ ಶೈಲಿಯಿಂದ ಸರಸ ವರ್ಣನೆಗಳಿಂದ ಈ ಕಾವ್ಯ ಸುರಮ್ಯವಾಗಿದೆ.)

ಮೂವರು ರಾಯರ ಗಂಡನೆಂದೆಂಬೆನ್ನ ಜೀವದಂತಪ್ಪ ಬಿರುದನು
ಕಾವುದಕಾದನೀ ಮಗನೆಂದು ಕಂಪಿಲದೇವ ನಲಿದನೆದೆಯೊಳಗೆ ||೧||
ಕುಲವಿನ್ನು ಕೆಡದು ಕುಜನರ ಕೂಗಾಟದ ಕಲಕಲವಿನ್ನು ಸಡೆಯದು
ಕೆಲಬಲದರಸುಗಳಾಳಲರಿಯರಿನ್ನು ನೆಲವಹೆಂದರಸ ನಲಿದನು ||೨||
ನವಯೌವನನಾದ ಮಗನ ಮೊಗವನಂದವಲೋಕಿಸಿ ಕಂಪಿಲನು
ಹವಣಿಸಬಾರದ ಹರುಷಾಂಬು ನಿಧಿಯೊಳು ತವೆ ಮೂಡಿ ಮುಳುಗಾಡಿದನು. ||೩||
ಮದುವೆಯ ಮಾಡಿ ಕುಮಾರಗೆ ಯುವರಾಜ ಪದವಿಯನಿತ್ತು ಕಂಪಿಲನು
ಉದಧಿವೇಷ್ಟಿತ ಭೂತಳ ಕಯ್ಗೆ ಬಂದಂತೆ ಮುದವನೈದಿದನೆದೆಯೊಳಗೆ ||೪||

ಕಾಕತಿ ರುದ್ರನೊಡನೆ

ಶರಧಿ ಗೋದಾವರಿಯೊಳಗುಳ್ಳ ಭೂಮೀಶ್ವರರನೆಲ್ಲರ ಕೂಡಿಕೊಂಡು
ಇರದೆ ಕಾಕತಿರುದ್ರ ಬಂದೆಮ್ಮ ರಾಜ್ಯದ ಸಿರಿಯನಿರದೆ ಕೆಡಿಸಿದನು ||೫||
ಏಕಶಿಲಾ ಪುರಿಯು ಪರಿಯಂತವು ನಾನಾ ಕಾಕತಿ ರುದ್ರಮನ
ಜೋಕೆಗೆಡಿಸಿ ಕೊಲದಿರ್ದನಾದೊಡೆ ಧರಣೀಕಾಂತ ನಿನಗೆ ಪುಟ್ಟದೆನೆ ||೬||

ಎಲ್ಲಿ ನೋಡಿದರೆ ರಾಮನ ಬೊಬ್ಬೆಯುಬ್ಬರವೆಲ್ಲಿ ನೋಡಿದರೆ ರಾಮುಂಗನ
ಸೆಲ್ಲೆಹಶಕ್ತಿಗಳೀಡೆಸೆದವು ರಣದಲ್ಲಿ ರಾಮನ ಶೌರ್ಯವೆಂತೋ ॥೭॥
ಇರಿವುತ ತರಿವುತ ಕೊರೆವುತ ಜರೆವುತ ಪರಿಗಲಿಗಳು ಬೆಂಬತ್ತಿ
ಸೆರೆಹಿಡಿದುದು ಮಂದಿ ಕುದುರೆಯೆಲ್ಲವ ತೀರ ಮುರಿದುದು ರುದ್ರನ ಸೇವೆ ॥೮॥
ತೆಗೆದಪ್ಪಿಕೊಂಡು ಸಂತೋಷಾಂಬುನಿಧಿಯೊಳು ಮುಗೆ ತೇಂ ಕಾಮತಾತ್ಮಜನ
ಮೊಗವ ನಿಟ್ಟಿಸುತ ಮೋಹೋದ್ರೇಕದಿಂ ಕಣ್ಣುಗಿದವು ಕಂಪ.ನೃಪತಿಗೆ ॥೯॥
ಕಾಮನಿಂದಾ ಕಮಲಾಕಾಂತ ಬುಧನಿಂದ ಸೋಮ ಜಯಂತನಿಂದಿಂದ್ರ
ರಾಮನಿಂ ದಶರಥನೆಸೆವಂತೆಸೆದನಾ ರಾಮನಿಂ ಕಂಪ ರಾಜೇಂದ್ರ ॥೧೦॥


ನೇಮಿಖಾನನೊಡನೆ

ಕೊಲ್ಲದ ಕೊಲೆಯು ಕೊಂದಾ ನೇಮಿಯು ದಂಡನೆಲ್ಲವನಾ ವೀರರಾಮ
ಮೆಲ್ಲನೆ ತಿರುಗಿದ ಮುಂಗಿಲ ಮೋಹರಗಳ ಘಲ್ಲಿಸೆ ವಾದ್ಯ ನಿನದ ॥೧೧॥
ಎಲ್ಲಿ ನೋಡಿದರೆ ರಾಮನ ಬೊಬ್ಬೆಯುಬ್ಬರವೆಲ್ಲಿ ನೋಡಿದರೆ ರಾಮುಂಗನ
ಭಲ್ಲೆಯ ತಾಡಿಯಿಂದಳಿದ ಸುಭಟರಲ್ಲದಿಲ್ಲವಾ ರಣ ಭೂಮಿಯೊಳು ॥೧೨॥
ಚೆಲ್ಲಿತು ಕಂಡ ಕಂಡೆನಾ ನೇಮಿಯ ಬಲವೆಲ್ಲ ರಾಮನ ರಾವುತರು
ಅಲ್ಲಿ ಹಿಡಿದ ಕುದುರೆಯು ಲೆಕ್ಕಸಲಳವಲ್ಲ ಫೌಜಿನ್ಮುಡಿಸಿತ್ತು ॥೧೩॥

ರತ್ನಾಜಿಯ ಕುಹಕ

ಚೆಂಡಾಟವೆಂಬುದು ತರುಗಾಯಿ ಮಕ್ಕಳ ತಂಡಕಲ್ಲದೆ ನೃಪಸುತರ
ಮಂಡಳಿಗುಚಿತವೆ ಸಲ್ಲದು ಗಂಡರ ಗಂಡ ಬೇಡೀ ಚಂಡಿನಾಟ ॥೧೪॥
ಕುಂಡಲಮಂಡಿತ ಗಂಡನಾಖಂಡಲಚಂಡನಾ ರಾಮ
ಗಂಡುಗಲಿಗಳು ಮುಂಕೊಂಡೊಡವರೆ ಬಗೆಗೊಂಡು ಚೆಂಡಾಟಕೆಯ್ದಿದನು ॥೧೫॥
ಪಿಡಿದು ಲೀಲೆಯಿಂದಾನಲ್ಲೆಂದು ಬಾನೆಡೆಗಾಡಲದು ದೇವತೆಗಳ
ತಡಹಿನಿಂ ಕೈಗೆಬಾರದೆ ರತ್ನಿಯ ತಳಿರಡಿಗಳ ಮುಂ ದುರುಳಿದುದು ॥೧೬॥
ಅರುಬಲ್ಲರು ನಾರಿಯಂತರಂಗದ ಹೊರೆಯುವಾ ರಾಮನವಳ
ಮಾರ ವಿಕಾರವನರಿಯದೆ ನ್ಯಾಡು ಮಧುರಾರವದಿಂದ ನುಡಿದನು ॥೧೭॥
ಸಂದ ಮಹಾಮಹಿಮಾವಿರಹಿತ ವಿನಯೋಕ್ತಿಗಳಿಂದ ನುಡಿದ ಬಳಿಕನವು
ನಿಂದದೆ ಕಂತುಕಳೇಳಿ ಬೇಗದೊಳಮ್ಮ ತಂದುಕೊಡಿಸು ಚೆಂಡೆನಲು ॥೧೮॥
ಕಂತುಕ ಕೇಳಿಗೆ ನೀನೆಲ್ಲಿ ಪೋದಪೆ ಕಂತುಸನ್ನಿಭ ದಿವ್ಯಾಂಗ
ಕಂತುಕೇಳಿಯು ನೀನೆಸಗೆನ್ನೊಳೆಂದರ್ಥಾಂತರದಿಂದವಳುಸುರೆ ॥೧೯॥
ಹದಿನಾಲ್ಕು ವರುಷದ ಹರೆಯದೊಳಾ ರಾಮನೊದನಿ ಪಿಡಿದು ತಾಟಕಿಯು
ಒದೆದು ನಡೆದ ತೆರದಿಂದೀ ರಾಮನು ಸುದತಿಯನೊದರಿ ನಡೆದನು ॥೨೦॥
ಕನಸಿನೊಳಗೆ ಪರವೆಣ್ಣ ಕಂಡರಿಯದ ಘನಶುಚಿರತ್ನ ರಾಮುಂಗನ
ವಿನುತ ಚರಿತ್ರವನೊರೆವೆನು ಸುಜನರು ಮನವೊಲಿದಿದನಾಲಿಪುದು ॥೨೧॥







ಮೂಲ:

ಲಾರಿ ಕಾಲಿನ್ಸ್

ತ್ತು ಡೊಮಿನಿಕ್ ಲಾಪಿಯೆರೆ

ಸಂಗ್ರಹ:

ಮೌಂಟ್‌ಬ್ಯಾಟನ್ನರ ಭಾರತ

Freedom at Midnight ಭಾರತದ ಸ್ವಾತಂತ್ರ್ಯ ಹಾಗು ವಿಭಜನೆಯ ಕುರಿತ ಮಹತ್ವದ ಹೊತ್ತಿಗೆ. ದೇಶದ ಒಳಗೂ ಹೊರಗೂ ಸಾಕಷ್ಟು ಚರ್ಚಿಸಲ್ಪಟ್ಟ, ಟೀಕಿಸಲ್ಪಟ್ಟ ಈ ಪುಸ್ತಕದ ಹಿಂದೆ ಇದರ ಲೇಖಕರಿಬ್ಬರ ಕಾರ್ಯನಿಷ್ಠೆ, ಕರ್ತೃತ್ವ-ಶಕ್ತಿ, ಪರಿಶ್ರಮ ಹಾಗು ಕಾಲು ಶತಮಾನದ ಹಿಂದೆ ನಡೆದ ಘಟನೆಗಳನ್ನು ನೋಡುವ ನಿಷ್ಪಕ್ಷಪಾತ ದೃಷ್ಟಿಯನ್ನು ಅಲ್ಲಗಳೆಯುವಂತಿಲ್ಲ. ಆದರೆ ಒಂದು ಮಾತು ಮಾತ್ರ ಸತ್ಯ. ಭಾರತದ ಸ್ವಾತಂತ್ರ್ಯಕ್ಕಾಗಿ ನಡೆದ ಮಾತುಕತೆಗಳಲ್ಲಿ ನೇರವಾಗಿ ಭಾಗವಹಿಸಿದವರಲ್ಲಿ ಲೂಯಿ ಮೌಂಟ್‌ಬ್ಯಾಟನ್ ಹಾಗು ಆಚಾರ್ಯ ಕೃಪಲಾನಿ ಮಾತ್ರ ಈಗ ಬದುಕಿ ಉಳಿದಿದ್ದಾರೆ. ಅದರಿಂದಾಗಿ ಪ್ರಸ್ತುತ ಲೇಖಕರು ಮುಖ್ಯವಾಗಿ ಅವಲಂಬಿಸಿರುವುದು ಮೌಂಟ್‌ಬ್ಯಾಟನ್ನರ ಕಾಗದ ಪತ್ರಗಳು ಹಾಗು ಅವರ ನೆನಪುಗಳನ್ನು. ಅಂತೆಯೇ ಇದು 'ಮೌಂಟ್‌ಬ್ಯಾಟನ್ನರ ಪೂಜೆ'ಯೇ ಎಂಬ ಟೀಕೆಯೂ ಬಂದಿದೆ. ಶ್ರೀ ಸಂಜಯ ಹಾವನೂರ ಇದನ್ನು ಸಮರ್ಥವಾಗಿ 'ಕಸ್ತೂರಿ'ಗಾಗಿ ಸಂಗ್ರಹಿಸಿದ್ದಾರೆ.

ಲಂಡನ್, ೧೯೪೭ ಜನವರಿ ೧. ನಂ. ೧೦, ಡೌನಿಂಗ್ ರಸ್ತೆಯ ಎದುರಿನಲ್ಲಿ ತಮ್ಮ ಕಾರಿನಿಂದ ಕೆಳಗಿಳಿದ ರಿಯರ್ ಎಡ್ಮಿರಲ್ ಲೂಯಿ ಮೌಂಟ್‌ಬ್ಯಾಟನ್ನರಿಗೆ ತಾವು ಆ ಐತಿಹಾಸಿಕ ಭವನಕ್ಕೆ ಏಕೆ ಕರೆಯಿಸಲ್ಪಟ್ಟಿದ್ದೇವೆಂಬುದು ಚೆನ್ನಾಗಿ ಗೊತ್ತಿತ್ತು. ಬ್ರಿಟನ್ನಿನ ಪ್ರಧಾನಮಂತ್ರಿ ಆ್ಯಟ್ಲೀ ಅವರನ್ನು ಭಾರತದ ವೈಸ್‌ರಾಯ್ ಎಂದು ನೇಮಿಸಲಿದ್ದರು. ಇಡೀ ಬ್ರಿಟಿಶ್ ಸಾಮ್ರಾಜ್ಯದಲ್ಲಿ ಅತ್ಯಂತ ಮುಖ್ಯ ಅಧಿಕಾರ ಸ್ಥಾನಗಳಲ್ಲೊಂದಾದ ಆ ಸ್ಥಾನದಲ್ಲಿ ಇದ್ದುಕೊಂಡು ಆಂಗ್ಲ ಅಧಿಕಾರಿಗಳು ಕಳೆದ ನೂರು ವರ್ಷಗಳಲ್ಲಿ ಜಗತ್ತಿನ ಜನಸಂಖ್ಯೆಯ ಐದನೇ ಒಂದು ಭಾಗವನ್ನು ಆಳಿದ್ದರು. ಆದರೆ ಮೌಂಟ್‌ಬ್ಯಾಟನ್ನರ ಕೆಲಸವು ಅಧಿಕಾರವನ್ನು ಚಲಾಯಿಸುವುದಾಗಿರಲಿಲ್ಲ. ಅದನ್ನು ಬಿಟ್ಟುಕೊಡುವುದಾಗಿತ್ತು.

ಮೌಂಟ್‌ಬ್ಯಾಟನ್ನರಿಗೆ ಅದು ಎಳ್ಳಷ್ಟೂ ಬೇಕಿರಲಿಲ್ಲ. ಬ್ರಿಟಿಶರು ಭಾರತವನ್ನು ಬಿಡಬೇಕೆಂದು ಅವರು ಸಂಪೂರ್ಣ ಒಪ್ಪಿದ್ದರೂ, ಭಾರತದೊಡನೆಯ ಸಂಬಂಧಗಳನ್ನು ಕಡಿದುಕೊಳ್ಳುವ ಕಾರ್ಯ ತಮ್ಮ ಪಾಲಿಗೆ ಬಂದದ್ದಕ್ಕಾಗಿ ಅವರ ಮನಸ್ಸು ಕ್ಷೋಭೆಗೊಂಡಿತ್ತು. ಆ್ಯಟ್ಲೀಯವರ ನಿರ್ಣಯವನ್ನು ಬದಲಿಸಲು ಅವರು ಏನೆಲ್ಲ ಶರತ್ತುಗಳನ್ನು ಮುಂದೊಡ್ಡಿದ್ದರು. ಆದರೆ ಆ್ಯಟ್ಲಿ ಅವನ್ನೆಲ್ಲ ಒಪ್ಪಿಬಿಟ್ಟು ಮೌಂಟ್‌ಬ್ಯಾಟನ್ನರನ್ನು ನಿರಾಶಗೊಳಿಸಿದ್ದರು.

ಒಳಗೆ ಬಂದೊಡನೆಯೆ ಪ್ರಧಾನಮಂತ್ರಿ ಆ್ಯಟ್ಲಿ ಭಾರತದಲ್ಲಿಯ ಪರಿಸ್ಥಿತಿಯ ಪರಾಮರ್ಶೆಯೊಡನೆ ತಮ್ಮ ಮಾತನ್ನು ಆರಂಭಿಸಿದರು. ಪರಿಸ್ಥಿತಿ ದಿನೇ ದಿನೇ ಕೈಮೀರಿ ಹೋಗುತ್ತಿತ್ತು. ಈ ವಿಷಮ ಸ್ಥಿತಿಯಲ್ಲಿ, ಕೊನೆಗೊಮ್ಮೆ ಭಾರತಕ್ಕೆ ಸ್ವಾತಂತ್ರ್ಯ ನೀಡಬೇಕೆಂದು ನಿರ್ಧರಿಸಿದ್ದ ಬ್ರಿಟಿಶರು ಅದನ್ನು ಹೇಗೆ ನೀಡಬೇಕೆಂಬ ಸಂದಿಗ್ಧದಲ್ಲಿ ಸಿಲುಕಿದ್ದರು. ಇತರ ವಸಾಹತುಗಳೊಡನೆ ಹೋಲಿಸಿದಾಗ ತೀರ ಕಡಿಮೆ ರಕ್ತಪಾತ ಮಾಡಿ ಬ್ರಿಟಿಶರು ಭಾರತವನ್ನು ಗೆದ್ದು ಆಳಿದ್ದರು. ಆದರೆ ಅವರ ನಿರ್ಗಮನದಿಂದ ಊಹಿಸಲೂ

Abridged from the 'Freedom at Midnight' by Larry Collins and Dominique Lapierre, with the kind permissionof Vikas Publishing House Pvt. Ltd., Delhi/Bombay.

ಆಗದ ಪ್ರಮಾಣದಲ್ಲಿ ಹಿಂಸಾಚಾರ, ರಕ್ತಪಾತ ಆಗುವ ಭಯವುಂಟಾಗಿತ್ತು.

ಆ ಭಯಕ್ಕೆ ಭಾರತದ ೩೦ ಕೋಟಿ ಹಿಂದೂ ಹಾಗೂ ೧೦ ಕೋಟಿ ಮುಸ್ಲಿಮರ ನಡುವಿನ ಅತ್ಯಂತ ಹಳೆಯ ದ್ವೇಷವೇ ಮೂಲವಾಗಿತ್ತು. ಪ್ರತಿ ದಿನವೂ ಭಾರತದ ಮೂಲೆ ಮೂಲೆಗಳಲ್ಲಿ ನಡೆದ ಹಿಂಸಾತ್ಮಕ ಘಟನೆಗಳ ವರದಿ ಇರುತ್ತಿತ್ತು. ಆಗಿನ ವೈಸ್‌ರಾಯ್ ವೇವೆಲ್ಲರು ಮಿತಭಾಷಿತಗಳಾಗಿದ್ದು ಭಾರತೀಯರೊಡನೆ ಯಾವ ಹೊಂದಾಣಿಕೆಯನ್ನು ಸಾಧಿಸಲೂ ಅಸಮರ್ಥರಾಗಿದ್ದರು. ಆ್ಯಟ್ಲಿಯವರ ಪ್ರಕಾರ ಭಾರತ, ಬ್ರಿಟನ್ ಎರಡೂ ವಿಪತ್ಪರಂಪರೆಯ ಕಡೆಗೆ ತೀವ್ರವಾಗಿ ಸಾಗಿದ್ದುವು. ಇಂಥ ಸಂದರ್ಭದಲ್ಲಿ ತಮಗಿತ್ತ ಸ್ಥಾನವನ್ನು ಸ್ವೀಕರಿಸುವುದು ಮೌಂಟ್‌ಬ್ಯಾಟನ್ನರ ಕರ್ತವ್ಯವಾಗಿದೆಯೆಂದು ಆ್ಯಟ್ಲಿಯವರು ಸೂಚಿಸಿದರು.

ಭಾರತದ ಪರಿಸ್ಥಿತಿ ಕೈಮೀರಿದೆಯೆಂದು ಮೌಂಟ್‌ಬ್ಯಾಟನ್ನರಿಗೂ ತಿಳಿದಿತ್ತು. ಈಗ ತಮಗೆ ಒಪ್ಪಿಸಬೇಕೆಂದಿರುವ ಜವಾಬ್ದಾರಿಯಿಂದ ತಮಗೆ ಬಿಡುಗಡೆ ಇಲ್ಲವೆಂಬುದು ಅವರಿಗೆ ಅರಿವಾಯಿತು. ಅದನ್ನು ತಾವು ಒಪ್ಪಿಕೊಳ್ಳುವುದೇ ಆದಲ್ಲಿ, ಎರಡು ಮುಖ್ಯವಾದ ರಾಜಕೀಯ ಶರತ್ತುಗಳನ್ನು ಅವರು ಹಾಕುವವರಿದ್ದರು. ವೇವೆಲ್ಲರೊಡನೆ ನಡೆಸಿದ ಚರ್ಚೆಗಳಿಂದ, ತಾವು ಯಶಸ್ವಿಯಾಗುವುದಾದರೆ ಅವುಗಳಿಂದಲೇ ಎಂದವರು ನಂಬಿದ್ದರು. ಮೊದಲನೆಯದಾಗಿ, ಬ್ರಿಟಿಶರು ಭಾರತವನ್ನು ಬಿಡುವ ತಾರೀಖನ್ನು ಸ್ಪಷ್ಟವಾಗಿ ಹಾಗೂ ನಿರ್ದಿಷ್ಟವಾಗಿ ಘೋಷಿಸಬೇಕು. ಭಾರತದ ಮುಖಂಡರಿಗೆ ಆಂಗ್ಲರ ನಿರ್ಗಮನದ ಬಗ್ಗೆ ಆಶ್ವಾಸನೆ ನೀಡಿ, ಅರ್ಥಪೂರ್ಣ ಹಾಗೂ ಫಲಪ್ರದವಾದ ಮಾತುಕತೆಗಳಿಗೆ ಅವರನ್ನು ಅಣಿಗೊಳಿಸಬಹುದೆಂದು ಮೌಂಟ್‌ಬ್ಯಾಟನ್ನರ ಅಭಿಪ್ರಾಯವಾಗಿತ್ತು. ವೇವೆಲ್ಲರೂ ಆ್ಯಟ್ಲಿಯವರಿಗೆ ಇದನ್ನೇ ಹೇಳಿದ್ದರು.

ಎರಡನೆಯದಾಗಿ ಇದುವರೆಗೆ ಯಾವ ವೈಸ್‌ರಾಯನೂ ಕನಸಿನಲ್ಲಿ ಸಹ ಕೇಳಲು ಸಾಹಸ ಮಾಡಿರದ ಸವಲತ್ತೊಂದನ್ನು ಮೌಂಟ್‌ಬ್ಯಾಟನ್ ಕೇಳಿದರು. ತಮ್ಮ ಕಾರ್ಯದಲ್ಲಿ ಸಂಪೂರ್ಣ ಅಧಿಕಾರ, ಸ್ವಾತಂತ್ರ್ಯ ತಮಗೆ ಇರಬೇಕು, ಮಂತ್ರಿಮಂಡಲವೂ ಅದರಲ್ಲಿ ತಲೆ ಹಾಕಬಾರದು!

"ಬ್ರಿಟಿಶ್ ರಾಜಸತ್ತೆಯ ವ್ಯಾಪ್ತಿಯ ಎಲ್ಲೆಯನ್ನೂ ಮೀರಿದ ಸಂಪೂರ್ಣಾಧಿಕಾರವನ್ನು ನೀವು ಬಯಸುತ್ತಿಲ್ಲವಷ್ಟೆ?" ಆ್ಯಟ್ಲಿ ಕೇಳಿದರು.

"ನಾನು ಕೇಳುತ್ತಿರುವುದೂ ಅದೇ ಸರ್, ಪ್ರತಿ ಸಲವೂ ಮಂತ್ರಿಮಂಡಲವು ಅಡ್ಡ ಬಾಯಿ ಹಾಕುತ್ತಿದ್ದರೆ ನನಗೆ ಮಾತುಕತೆಗಳನ್ನಾಡಲು ಆಸ್ಪದವೆಲ್ಲಿ?"

ನೀರವತೆ ಕೋಣೆಯನ್ನಾವರಿಸಿತು. ತಮ್ಮ ಈ ದಿಟ್ಟವಾದ ಕೋರಿಕೆಯಿಂದ ಪ್ರಧಾನಿಯ ಮನಸ್ಸು ಬದಲೀತೆ ಎಂದು ಮೌಂಟ್‌ಬ್ಯಾಟನ್ ಆ್ಯಟ್ಲಿಯವರ ಮುಖ ನೋಡುತ್ತ ಕುಳಿತರು. ಆದರೆ ಆ್ಯಟ್ಲಿ ಎರಡನೆಯ ಶರತ್ತಿಗೂ ಒಪ್ಪಿಕೊಂಡರು.

ಒಂದು ಗಂಟೆಯ ನಂತರ, ತನ್ನ ದೇಶಬಾಂಧವರ ಅತಿ ನೆಚ್ಚಿನ ಸ್ವಪ್ನವೊಂದನ್ನು ಕೊನೆಗಾಣಿಸುವ ಅಪ್ರಿಯ ಕಾರ್ಯ ತನ್ನದೇ ಎಂದು ಖಚಿತಪಡಿಸಿಕೊಂಡೂ, ಮೌಂಟ್‌ಬ್ಯಾಟನ್ ಹೊರಗೆ ಬರುತ್ತಿದ್ದಂತೆ ಅವರಿಗೆ ನೆನಪಾಯಿತು: ಎಪ್ಪತ್ತು ವರ್ಷಗಳ ಹಿಂದೆ ಅದೇ ದಿನ ವಿಕ್ಟೋರಿಯಾ ರಾಣಿಯನ್ನು ಭಾರತದ ಸಾಮ್ರಾಜ್ಞಿಯೆಂದು ಘೋಷಿಸಲಾಗಿತ್ತು. ಆಗ ನೆರೆದಿದ್ದ ರಾಜ ಮಹಾರಾಜರುಗಳು ರಾಣಿಯ ಸಾರ್ವಭೌಮತ್ವ 'ಅಜರಾಮರ'ವಾಗಿರಲೆಂದು ಒಕ್ಕೊರಲಿನಿಂದ ದೇವರಲ್ಲಿ ಪ್ರಾರ್ಥಿಸಿದ್ದರು. ಇಂದು ಅದೇ ರಾಣಿಯ ಮರಿಮೊಮ್ಮಗ ಆ 'ಅಜರಾಮರತ್ವ'ವು ಕೊನೆಗೊಳ್ಳುವ ದಿನಾಂಕ ನಿಷ್ಕೃಷ್ಟವಾಗಿ ನಿರ್ಧಾರವಾಗಬೇಕೆಂದು ಕರಾರು ಹಾಕಿದ್ದ!*

---

* ಮೌಂಟ್‌ಬ್ಯಾಟನ್ನರನ್ನೇ ವೈಸ್‌ರಾಯರನ್ನಾಗಿ ನಿಯಮಿಸಬೇಕೆಂದು ಶ್ರೀ ಕೃಷ್ಣ ಮೆನನ್ನರು ಸರ್ ಸ್ಟ್ಯಾಫೋರ್ಡ್ ಕ್ರಿಪ್ಸರಿಗೆ ಸೂಚಿಸಿದ್ದರು.

ಲಂಡನ್, ೧೯೪೭ ಫೆಬ್ರುವರಿ ೧೮.

ಹೌಸ್ ಆಫ್ ಕಾಮನ್ಸಿನ ಸದಸ್ಯರು ಚಳಿಯಲ್ಲಿ ನಡುಗುತ್ತ, ಆ್ಯಟ್ಲಿಯವರ ಘೋಷಣೆಗಾಗಿ ಕಾಯುತ್ತಿದ್ದರು. ಕಳೆದ ನಾಲ್ಕು ದಶಕಗಳಿಂದ ಆ ಭವನದಲ್ಲಿ ಬ್ರಿಟಿಶ್ ರಾಜಸತ್ತೆಯ ವಕ್ತಾರರಾಗಿದ್ದ ವಿನ್‌ಸ್ಟನ್ ಚರ್ಚಿಲ್ಲರು ಆ ದಿನ ಮಾತ್ರ ವಿಷಣ್ಣವದನರಾಗಿ ಕುಳಿತಿದ್ದರು. ಭಾರತದಲ್ಲಿನ ಬ್ರಿಟಿಶ್ ಸತ್ತೆ ಸಂಪೂರ್ಣ ನ್ಯಾಯವಾದದ್ದು, ಭಾರತೀಯ ಹಿತಾಸಕ್ತಿಗಳ ಸಂರಕ್ಷಣೆಗಾಗಿಯೇ ಇದ್ದದ್ದು–ಎನ್ನುವುದು ಅವರ ಬಲವಾದ ನಂಬಿಕೆಯಾಗಿತ್ತು. ಅವರ ದೃಷ್ಟಿಯಲ್ಲಿ ಭಾರತೀಯ ಜನತೆ ತಮ್ಮ ಸಾರ್ವಭೌಮರನ್ನು ಪ್ರೀತ್ಯಾದರಗಳಿಂದಲೇ ಕಾಣುತ್ತಿತ್ತು; ಸ್ವಾತಂತ್ರ್ಯಕ್ಕಾಗಿ ಚಳುವಳಿ ನಡೆಸುತ್ತಿದ್ದ ನಾಯಕರು ಜನತೆಯ ಆಶೋತ್ತರಗಳನ್ನು ಪ್ರತಿಬಿಂಬಿಸದ ಅರೆ-ವಿದ್ಯಾವಂತರಾಗಿದ್ದರು. ಗಾಂಧೀ ಮತ್ತಿತರ ಕಾಂಗ್ರೆಸ್ ನಾಯಕರನ್ನವರು 'ಹುಲ್ಲುಕಡ್ಡಿಯ ನಾಯಕ'ರೆಂದು ಭಾವಿಸಿದ್ದರು.

ಕ್ಲೆಮೆಂಟ್ ಆ್ಯಟ್ಲಿಯವರ ಕೈಯಲ್ಲಿದ್ದ ಘೋಷಣೆಯನ್ನು ಹೆಚ್ಚು ಕಡಿಮೆ ಮೌಂಟ್‌ಬ್ಯಾಟನ್ನರೇ ಬರೆದಿದ್ದರು. ಹೊಸ ವೈಸ್‌ರಾಯರ ಗುರಿ ಏನೆಂಬುದನ್ನು ಸರಳವಾಗಿ ವಿವರಿಸುವುದಲ್ಲದೇ ಮೌಂಟ್‌ಬ್ಯಾಟನ್ನರು ಅತ್ಯವಶ್ಯವೆಂದು ಒತ್ತಿ ಹೇಳಿದ್ದ ಅಂಶವೂ ಅದರಲ್ಲಿತ್ತು: '೧೯೪೮ರ ಜೂನ್ ಒಳಗಾಗಿ, ಜವಾಬ್ದಾರಿ ಭಾರತೀಯರ ಕೈಗಳಿಗೆ ಅಧಿಕಾರವನ್ನು ಹಸ್ತಾಂತರಿಸುವ ನಿಶ್ಚಿತ ನಿರ್ಣಯವನ್ನು ಬ್ರಿಟಿಶ್ ರಾಜಸತ್ತೆ ಕೈಗೊಂಡಿದೆ...'

ಭಾವನಾವೇಶದಿಂದ ನಡುಗುತ್ತಿದ್ದ ಚರ್ಚಿಲ್ಲರು ಪ್ರತಿಭಟನೆಗಾಗಿ ಎದ್ದು ನಿಂತರು. "ಮಾನವ ಜನಾಂಗಕ್ಕೆ ಅಪಾರ ಸೇವೆ ಸಲ್ಲಿಸಿದ ಬ್ರಿಟಿಶ್ ರಾಜಸತ್ತೆ ನುಚ್ಚು-ನೂರಾಗುವುದನ್ನು ಇವತ್ತು ನಾನು ಅತ್ಯಂತ ವಿಷಾದದಿಂದ ನೋಡುತ್ತಿದ್ದೇನೆ. ಬ್ರಿಟನ್ನನ್ನು ಅದರ ವೈರಿಗಳಿಂದ ಕಾಪಾಡಲು ಎಷ್ಟೋ ಜನರು ಹೋರಾಡಿದ್ದಾರೆ; ಆದರೆ ಈಗ ಬ್ರಿಟನ್ನಿನವರ ವಿರುದ್ಧವೇ ಅದನ್ನು ರಕ್ಷಿಸುವುದು ಸಾಧ್ಯವಿಲ್ಲವೇನೋ!" ಸ್ವಾತಂತ್ರ್ಯಕ್ಕಾಗಿ ನಿರ್ದಿಷ್ಟವಾದ ಸಮಯ ಮಿತಿಯನ್ನು ತರುವುದರಿಂದ ಆ್ಯಟ್ಲಿಯವರು, ಚರ್ಚಿಲ್ಲರ ಪ್ರಕಾರ, "ಭಾರತವನ್ನು ದೇವರಿಗೆ ಒಪ್ಪಿಸಿ ಬಿಡಿರಿ" ಎಂಬ ಗಾಂಧೀಜಿಯ 'ಅತ್ಯಂತ ತಲೆತಿರುಕ' ಸಲಹೆಯನ್ನು ಜಾರಿಗೆ ತಂದಿದ್ದರು.

ನವದೆಹಲಿ, ಮಾರ್ಚ್–ಎಪ್ರಿಲ್ ೧೯೪೭

'ಒಳ್ಳೇ ಸಿನಿಮಾ ಹೀರೋನಂತಿದ್ದಾರೆ'–ಅಚ್ಚ ಬಿಳಿಯ ಯುನಿಫಾರ್ಮ್‌ನಲ್ಲಿ ಪತ್ನೀ-ಸಮೇತ ವೈಸ್‌ರಾಯ್ ಭವನಕ್ಕೆ ಪ್ರಯಾಣ ಬೆಳೆಸುತ್ತಿದ್ದ ಮೌಂಟ್‌ಬ್ಯಾಟನ್ನರನ್ನು ನೋಡಿ, ಅದೇ ತಾನೇ ಅವರ ಎ. ಡಿ. ಸಿ. ಎಂದು ನೇಮಕವಾಗಿದ್ದ ಗ್ರೂಪ್ ಕ್ಯಾಪ್ಟನ್ನನೆಂಬ ಅಂದುಕೊಂಡ. ವೈಸ್‌ರಾಯ್ ಭವನದ ಮೆಟ್ಟಿಲಿನ ಮೇಲೆ ನಿವೃತ್ತರಾಗಲಿದ್ದ ಲಾರ್ಡ್ ವೇವೆಲ್‌ರು ಹೊಸ ವೈಸ್‌ರಾಯನಿಗಾಗಿ ಕಾಯುತ್ತಿದ್ದರು. ಸಾಮಾನ್ಯವಾಗಿ ಹೊಸ ವೈಸ್‌ರಾಯ್ ಬರುವ ಮೊದಲೇ ಮುಂಬಯಿಯ 'ಭಾರತದ ಮಹಾದ್ವಾರ'ದಿಂದ ಹಳೆ ವೈಸ್‌ರಾಯ್ ಶ್ರೀಮದ್ಗಾಂಭೀರ್ಯದಿಂದ ನಿರ್ಗಮಿಸುತ್ತಿದ್ದ. ಆದರೆ ವೇವೆಲ್ಲರೊಡನೆ ಚರ್ಚಿಸುವ ಉದ್ದೇಶದಿಂದ ಮೌಂಟ್‌ಬ್ಯಾಟನ್ನರು ಸಂಪ್ರದಾಯವನ್ನು ಮುರಿದಿದ್ದರು. ಅವರನ್ನು ವೈಸ್‌ರಾಯನ ಕೋಣೆಗೆ ಕರೆದುಕೊಂಡು ಹೋಗಿ ವೇವೆಲ್ಲರು ಹೇಳತೊಡಗಿದರು: "ನಿಮ್ಮನ್ನು ಈ ಸ್ಥಾನಕ್ಕೆ ಕಳಿಸಿದ್ದನ್ನು ನೋಡಿದರೆ ನನಗೆ ತುಂಬ ವ್ಯಥೆಯಾಗುತ್ತದೆ."

ಮೌಂಟ್‌ಬ್ಯಾಟನ್ ಚಕಿತರಾದರು. "ಈ ಕಾರ್ಯ ನನ್ನ ಅಳವಿಗೆ ಮೀರಿದ್ದು ಎಂದು ನಿಮ್ಮ ಅಭಿಪ್ರಾಯವೇ?"

"ನಾನು ಹಾಗೆ ಹೇಳಲಿಲ್ಲ. ನಿಮ್ಮ ಬಗ್ಗೆ ನನಗೂ ಆದರವಿದೆ. ಆದರೆ ನಿಮಗೆ ಕೊಟ್ಟ ಜವಾಬ್ದಾರಿ ಅಸಾಧ್ಯವಾದದ್ದು. ನಮ್ಮ ಸರಕಾರದಿಂದ ಏನೂ ಸಹಾಯವಿಲ್ಲ. ಇಲ್ಲಿಯ

ಬಿಕ್ಕಟ್ಟನ್ನು ಪರಿಹರಿಸುವುದಕ್ಕೆ ಯಾವ ಉಪಾಯವೂ ಇಲ್ಲ."

ವೇವೆಲ್ಲರು ಸಂಧಾನಕ್ಕಾಗಿ ತಾವು ನಡೆಸಿದ ಪ್ರಯತ್ನಗಳನ್ನು ನಿಧಾನವಾಗಿ ವಿವರಿಸಿದರು. ಅನಂತರ ಹೊಸ ವೈಸ್‌ರಾಯನಿಗಾಗಿ ತಾವು ಬಿಟ್ಟು ಹೋಗಲಿದ್ದ ಎರಡು ವಸ್ತುಗಳನ್ನು ಹೊರಗೆ ತೆಗೆದರು. ಮೊದಲನೆಯದು: ವೈಸ್‌ರಾಯನು ಅಧಿಕೃತ ಅಧಿಕಾರ ಸ್ವೀಕಾರದ ಸಮಾರಂಭದಲ್ಲಿ ಮೌಂಟ್‌ಬ್ಯಾಟನ್ ಧರಿಸಬೇಕಿದ್ದ ಗ್ರ್ಯಾಂಡ್ ಮಾಸ್ಟರ್ ಆಫ್ ದಿ ಆರ್ಡರ್ ಆಫ್ ಸ್ಟಾರ್ ಆಫ್ ಇಂಡಿಯಾ ಎಂಬ ರತ್ನಖಚಿತ ಪದಕ; ಇನ್ನೊಂದು 'ಆಪರೇಶನ್ ಮ್ಯಾಡ್ ಹೌಸ್' ಎಂಬ ಶೀರ್ಷಿಕೆಯುಳ್ಳ ಫೈಲು.

"ನನಗೆ ತೋಚುವ ಏಕೈಕ ಪರಿಹಾರವೆಂದರೆ ಇದೇ." ವೇವೆಲ್ಲರು ವಿವರಿಸಿದರು. ಅವರ ಸೈನಿಕ ಬುದ್ಧಿಗೆ ಅದೊಂದೇ ದಾರಿಯಾಗಿ ಕಂಡಿತ್ತು. ಆ ಯೋಜನೆಯ ಪ್ರಕಾರ ತಮ್ಮಷ್ಟಕ್ಕೆ ತಾವು ಇಂಗ್ಲೀಷರು ಭಾರತದಿಂದ ತಳ ಕಿತ್ತಬೇಕು, ಮೊದಲು ಹೆಂಗಸರು ಮಕ್ಕಳು, ಆ ಮೇಲೆ ಇತರ ನಾಗರಿಕರು, ಕೊನೆಗೆ ಸೈನಿಕರು. ಆ ನಂತರ ಭಾರತವನ್ನು 'ದೇವರಿಗೆ ಒಪ್ಪಿಸಬೇಕು'!"

ಇತ್ತ ಮೇಲಿನ ಮಹಡಿಯೊಂದರಲ್ಲಿ ಲೇಡಿ ಮೌಂಟ್‌ಬ್ಯಾಟನ್ನರಿಗೆ ಇದಕ್ಕೂ ವರ್ಣರಂಜಿತ ಸ್ವಾಗತ ಸಿಕ್ಕಿತ್ತು. ಆಕೆ ಒಬ್ಬ ಸೇವಕನನ್ನು ಕರೆದು ತನ್ನೆರಡು ಸಾಕು ನಾಯಿಗಳಾದ ಮಿಝೆನ್ ಮತ್ತು ಜಿಬ್‌ಗಳಿಗೆ ಏನಾದರೂ ತಿಂಡಿ ತಿನಿಸನ್ನು ತರಲು ಆಜ್ಞೆ ಮಾಡಿದಳು. ಅರ್ಧ ಗಂಟೆಯ ನಂತರ ಚಲಿಸುವ ಗಾಡಿಯನ್ನು ನೂಕಿಕೊಂಡು ಇಬ್ಬರು ಸೇವಕರು ಹಾಜರಾದರು. ಬೆಳ್ಳಿಯ ಟ್ರೇಯ ಮೇಲೆ ಪಿಂಗಾಣಿ ತಟ್ಟೆಯಲ್ಲಿ ಅದೇ ಬೇಯಿಸಿದ ಕೋಳಿಯ ಮಾಂಸವನ್ನು ಕಂಡು ಲೇಡಿ ಎಡ್ವಿನಾ ಕಣ್ಣು ಕಣ್ಣು ಬಿಟ್ಟಳು. ಯುದ್ಧೋತ್ತರ ಬ್ರಿಟನ್ನಿನಲ್ಲಿ ಅಂಥ ಭಕ್ಷ್ಯಗಳ ದರ್ಶನವೂ ಅಪರೂಪವಾಗಿತ್ತು! ಅದನ್ನು ನಾಯಿಗಳಿಗೆ ಹಾಕಬೇಕೆ?

ಅವೆರಡೂ ಭಕ್ಷ್ಯದ ತಟ್ಟೆಗಳನ್ನು ಕೈಯಲ್ಲಿ ಹಿಡಿದುಕೊಂಡು ಆಕೆ ಸ್ನಾನದ ಮನೆಗೆ ಹೋಗಿ ಬಾಗಿಲು ಹಾಕಿಕೊಂಡಳು. ೨೫೦೦ಕ್ಕೂ ಹೆಚ್ಚಿನ ಜನರಿಗೆ ವೈಸ್‌ರಾಯ್ ಭವನದಲ್ಲಿ ಆ ಮುಂದೆ ಆತಿಥ್ಯವೀಯಲಿದ್ದ ಆ ಮಹಿಳೆ ತನ್ನ ನಾಯಿಗಳಿಗೆ ತರಿಸಿದ್ದ ಕೋಳಿಯ ಮಾಂಸವನ್ನು ತಾನೇ ತಿಂದು ಬಾಯಿ ಚಪ್ಪರಿಸಿದಳು!

*

ಹೊಸ ವೈಸ್‌ರಾಯ್ ಅಧಿಕಾರ ಸ್ವೀಕರಿಸಲಿದ್ದ ಆ ದಿನ ವೈಸ್‌ರಾಯ್ ಭವನದಲ್ಲಿ ವಿಕ್ಟೋರಿಯನ್ ಕಾಲದ ಭವ್ಯತೆಯೂ ಮೊಗಲ್ ವೈಭವವೂ ಏಕಕಾಲಕ್ಕೆ ಎದ್ದು ಕಾಣುತ್ತಿದ್ದವು. ಸಮಾರಂಭ ನಡೆಯಲಿದ್ದ ದರ್ಬಾರ ಭವನದಲ್ಲಿ ಭಾರತದ ಪ್ರತಿಷ್ಠಿತರೆಲ್ಲ ಸೇರಿದ್ದರು. ಹೈಕೋರ್ಟ್ ನ್ಯಾಯಾಧೀಶರು, ವರಿಷ್ಠ ಸರಕಾರೀ ಅಧಿಕಾರಿಗಳು, ಹಲವು ರಾಜಮಹಾರಾಜರು, ಜವಾಹರಲಾಲ ನೆಹರೂ ಮತ್ತು ಇತರ ಕಾಂಗ್ರೆಸ್ ನಾಯಕರೂ ಸಮಾರಂಭದಲ್ಲಿದ್ದರು. ತುತ್ತೂರಿಗಳ ಶಬ್ದ ದರ್ಬಾರ ಭವನದ ಗೋಲದಲ್ಲಿ ಮರುಧ್ವನಿಗೈಯುತ್ತಿದ್ದಂತೆಯೇ ಹೊಸ ವೈಸ್‌ರಾಯ್ ಸಪತ್ನೀಕರಾಗಿ ನಿಧಾನವಾಗಿ ತಮ್ಮ ಸಿಂಹಾಸನಗಳತ್ತ ನಡೆದು ಬಂದರು. ವರಿಷ್ಠ ನ್ಯಾಯಾಧೀಶರು ಒಂದು ಹೆಜ್ಜೆ ಮುಂದಿಟ್ಟರು. ಬಲಗೈ ಮೇಲೆತ್ತಿ ಗಂಭೀರವದನದಿಂದ ಮೌಂಟ್‌ಬ್ಯಾಟನ್ನರು ತಮ್ಮನ್ನು ವೈಸ್‌ರಾಯರನ್ನಾಗಿ ಮಾಡಲಿದ್ದ ಪ್ರತಿಜ್ಞೆಯನ್ನು ಕೈಕೊಂಡರು.

ಹೊರಗೆ ಹೊಸ ವೈಸ್‌ರಾಯರ ಗೌರವಾರ್ಥ ೩೧ ತೋಪುಗಳು ಹಾರಿದವು. ಅದೇ ಕ್ಷಣಕ್ಕೆ ಭಾರತದ ತುಂಬೆಲ್ಲ ತೋಪುಗಳು ಹಾರಿ ಹೊಸ ವೈಸ್‌ರಾಯನ ಅಧಿಕಾರ ಸ್ವೀಕಾರವನ್ನು ಘೋಷಿಸಿದವು. ಆಗಿನ ಪರಿಸ್ಥಿತಿಯ ಗಂಭೀರತೆಯನ್ನು ಗಮನಿಸಿ, ತಮ್ಮ ಚಿಕ್ಕ ಭಾಷಣದಲ್ಲಿ ಮೌಂಟ್‌ಬ್ಯಾಟನ್ ಇನ್ನೊಂದು ಸಂಪ್ರದಾಯವನ್ನು ಮುರಿದರು.

"ನನ್ನ ಕೆಲಸ ಎಷ್ಟು ಕಷ್ಟದ್ದೆಂಬುದರ ಸಂಪೂರ್ಣ ಅರಿವು ನನಗಿದೆ. ನನಗೆ ಅತ್ಯವಶ್ಯವಾದದ್ದು ಪ್ರತಿಯೊಬ್ಬರ ಸದಿಚ್ಛೆ. ಆ ಸದಿಚ್ಛೆಗಾಗಿ ನಾನು ಸಮಗ್ರ ಭಾರತವನ್ನು ಕೇಳಿಕೊಳ್ಳುತ್ತಿದ್ದೇನೆ." ಈ ಹಿಂದೆ ಯಾವ ವೈಸ್‌ರಾಯನೂ ಪ್ರಜೆಗಳ ಸದಿಚ್ಛೆ ಸಹಕಾರಗಳನ್ನು ಕೇಳಿರಲಿಲ್ಲ!

ಮುಕ್ಕಾಲು ಗಂಟೆಯ ನಂತರ ಸಾದಾ ಉಡುಪಿನಲ್ಲಿ ಹೊಸ ವೈಸ್‌ರಾಯ್ ತಮ್ಮ ಕುರ್ಚಿಯಲ್ಲಿ ಬಂದು ಕುಳಿತರು. ಅತಿ ಸಂಭ್ರಮದಿಂದ ಚಪರಾಸಿಯೊಬ್ಬ 'ಡಿಸ್‌ಪ್ಯಾಚ್ ಬಾಕ್ಸ'ನ್ನು ಅವರ ಮುಂದಿಟ್ಟ; ಒಂದು ಲಕೋಟೆಯನ್ನು ಹರಿದು ನೋಡಿದರು. ಒಬ್ಬ ಅಪರಾಧಿ ತನ್ನ ಪತ್ನಿಯನ್ನು ಎಲ್ಲರೆದುರು ಅಮಾನುಷವಾಗಿ ಹೊಡೆದು ಅವಳ ಸಾವಿಗೆ ಕಾರಣನಾಗಿದ್ದ. ಅವನಿಗೆ ವಿಧಿಸಿದ ಮರಣದಂಡನೆಯ ವಿರುದ್ಧ ಕ್ಷಮಾಯಾಚನೆಗಾಗಿ ಮಾಡಿದ ಅಪೀಲು ಅದಾಗಿತ್ತು. ದಿಗ್ಭ್ರಾಂತಿಯಿಂದ ಆ ಕೇಸಿನ ವಿವರಗಳನ್ನೆಲ್ಲ ಓದಿ, ಮೌಂಟ್‌ಬ್ಯಾಟನ್ನರು ಪೆನ್ ಹಿಡಿದು ವೈಸ್‌ರಾಯಿಕೆಯ ಮೊದಲ ಅಧಿಕೃತ ಕಾರ್ಯವನ್ನು ನಿರ್ವಹಿಸಿದರು:


'ಜೀವಭಿಕ್ಷೆಯ ವಿಶೇಷ ಅಧಿಕಾರವನ್ನು ಚಲಾಯಿಸಲು ಯಾವ ಕಾರಣವೂ ಇಲ್ಲ!'

*

ಭಾರತೀಯ ನಾಯಕರ ಮುಂದೆ ತಮ್ಮ ವಿಚಾರಗಳನ್ನು ಮಂಡಿಸುವ ಮೊದಲು ಅವರ ಮೇಲೆ ತಮ್ಮ ವ್ಯಕ್ತಿತ್ವದ ಪ್ರಭಾವ ಬೀರುವುದು ಅತ್ಯವಶ್ಯವೆಂದು ಮೌಂಟ್‌-ಬ್ಯಾಟನ್ನರು ತಿಳಿದಿದ್ದರು. ಹಿಂದೆ ಎಂದೂ ಕಾಣದ ವೈಸ್‌ರಾಯನನ್ನು ಆ ಕೊನೆಯ ವೈಸ್‌ರಾಯನಲ್ಲಿ ಕಾಣಲು ಅವರು ಆಶಿಸಿದ್ದರು. ಆ ಕಾರಣದಿಂದ ಮೌಂಟ್‌ಬ್ಯಾಟನ್ ಅಲ್ಲಿಯವರೆಗೆ ವೈಸ್‌ರಾಯ್ ಭವನದಲ್ಲಿ ರೂಢಿಯಾಗಿಬಿಟ್ಟಿದ್ದ ಜಡತ್ವವನ್ನು ಉಚ್ಚಾ-ಟಿಸಲು ಕ್ರಮ ಕೈಕೊಂಡರು. ಮುಂದಿನ ಎಲ್ಲ ಚರ್ಚೆಗಳೂ ತಮ್ಮ ಕೋಣೆಯಲ್ಲಿ ನಡೆಯ

ಹಚ್ಚಿಸುವುದರಿಂದ ತಮ್ಮ ಕಾರ್ಯಕ್ರಮ-ವನ್ನಾರಂಭಿಸಿದರು. ನೋಡುತ್ತಿದ್ದಂತೆಯೇ ಕ್ರಮೇಣ ವೈಸ್‌ರಾಯ್ ಭವನಕ್ಕೆ ಮಿಲಿಟರಿ ಹೆಡ್‌ಕ್ವಾರ್ಟರ್ಸಿನ ಕಳೆ ಬಂದುಬಿಟ್ಟಿತು.

ಆಡಳಿತದ ವಿಷಯಗಳಲ್ಲಿ, ತಮ್ಮ ಕಾರ್ಯೋತ್ಸಾಹ, ಚುರುಕುತನ ಹಾಗೂ ಯಾವುದೇ ಸಮಸ್ಯೆಯ ಮೂಲವನ್ನು ಥಟ್ಟನೆ ಪತ್ತೆ ಹಚ್ಚುವ ಸಾಮರ್ಥ್ಯಗಳಿಂದ ಅವರು ತಮ್ಮ ಸಹಾಯಕರನ್ನು ಚಕಿತಗೊಳಿಸುತ್ತಿದ್ದರೂ ಪ್ರತಿಯೊಂದು ಕಾಗದವನ್ನು ತಮ್ಮೆಡೆಗೆ ತಂದು ತಾವು ಟಿಪ್ಪಣಿ ಬರೆದ ಮೇಲೆ ಒಯ್ಯುತ್ತಿದ್ದ ಚಪರಾಶಿಗಳ ಪರೇಡನ್ನು ನಿಲ್ಲಿಸಿದರು. ಮುಖತಃ ಆಜ್ಞೆ ನೀಡುವುದು ಅವರಿಗೆ ಹಿತವೆನಿಸುತ್ತಿತ್ತು. ಅವರ ಕೈಕೆಳಗಿ-ನವರೊಬ್ಬರು ಯಾವುದೇ ಕಾಗದದ ಮೇಲೆ 'ನಾನೇ ವಿವರಿಸಲೇ?' ಎಂದು ಟಿಪ್ಪಣಿ ಬರೆದು ಕಳಿಸಿದೊಡನೆ, ತಮಗೆ ವಿವರಿಸುವ ಅವಕಾಶ



ಖಂಡಿತ ಸಿಗುತ್ತಿತ್ತು ಎಂದು ನೆನಪಿಸಿಕೊಂಡಿದ್ದಾರೆ.

ಸಾರ್ವಜನಿಕರಲ್ಲಿ ತಮ್ಮ ವ್ಯಕ್ತಿತ್ವವನ್ನು ಸ್ಥಾಪಿಸಲು ಮೌಂಟ್‌ಬ್ಯಾಟನ್ ದಿಟ್ಟ ಕ್ರಮಗಳನ್ನು ಕೈಗೊಂಡರು. ಹಿಂದಿನ ವೈಸ್‌ರಾಯರುಗಳ ಮೇಲಾದ ಹತ್ಯೆಯ ಎರಡು ಪ್ರಯತ್ನಗಳು ವೈಸ್‌ರಾಯನನ್ನು ದರ್ಶನಕ್ಕೆ ತೀರ ದುರ್ಲಭವಾದ ದೇವತೆಯೆಂಬಂತೆ ಮಾಡಿಬಿಟ್ಟಿದ್ದವು. ಅವನು ಗೋಲ್ಫ್ ಆಡಿದರೆ ಮೈದಾನದ ಪ್ರತಿ ಗಿಡದ ಹಿಂದೆಯೂ ಒಬ್ಬೊಬ್ಬ ಸೈನಿಕನಿರುತ್ತಿದ್ದ. ಕುದುರೆ ಸವಾರಿ ಮಾಡಿದರೆ ಅವನ ಹಿಂದೆ ಸೈನ್ಯದ ತುಕಡಿಯೇ ಧಾವಿಸುತ್ತಿತ್ತು. ಮೌಂಟ್‌ಬ್ಯಾಟನ್ ತಾವು ಪತ್ನಿ-ಪುತ್ರಿ ಸಮೇತರಾಗಿ ಯಾವ ಅಂಗರಕ್ಷಕರೂ ಇಲ್ಲದೇ ಕುದುರೆ ಸವಾರಿ ಮಾಡುತ್ತೇವೆಂದಾಗ ವೈಸ್‌ರಾಯ್ ಭವನದಲ್ಲಿ ಬಿರುಗಾಳಿಯೇ ಎದ್ದಿತು. ಪರಿಣಾಮವಾಗಿ ಸುತ್ತಲಿನ ಹಳ್ಳಿಗರಿಗೆ ತಮ್ಮತ್ತ ಹಸನ್ಮುಖರಾಗಿ ಕೈ ಬೀಸುತ್ತ ಪ್ರತಿ ಮುಂಜಾನೆ ಸವಾರಿಗೈಯುತ್ತಿದ್ದ ಭಾರತದ ವೈಸ್‌ರಾಯ್ ಮತ್ತು ವೈಸ್‌ರಾಯಿಣಿಯ ದರ್ಶನಲಾಭವಾಗಲಾರಂಭಿಸಿತು.

ಅನಂತರ ಯಾವ ವೈಸ್‌ರಾಯನೂ ೨೦೦ ವರ್ಷಗಳಲ್ಲಿ ಮಾಡದ ಕೆಲಸವನ್ನು ಅವರು ಮಾಡಿದರು—ಮಹಾರಾಜನಲ್ಲದ ಭಾರತೀಯನೊಬ್ಬನ ಮನೆಗೆ ಹೋದರು! ದಿಲ್ಲಿಯ ತಮ್ಮ ಸಾದಾ ಮನೆಯ ತೋಟದಲ್ಲಿ ನೆಹರೂರವರು ಕೊಡುತ್ತಿದ್ದ ಪಾರ್ಟಿಗೆ ಅನಿರೀಕ್ಷಿತವಾಗಿ ಹಾಜರಾದ ವೈಸ್‌ರಾಯರನ್ನು ನೋಡಿ ಅತಿಥಿಗಳು ಕಕ್ಕಾಬಿಕ್ಕಿಯಾದರು. ಅದಾವುದನ್ನೂ ಗಮನಿಸದೇ ಮೌಂಟ್‌ಬ್ಯಾಟನ್ ಎಲ್ಲರ ಕೈಕುಲುಕಿ ನಿರಾತಂಕವಾಗಿ ಮಾತನಾಡಿದರು. ಅದನ್ನು ಕಂಡು ನೆಹರೂರವರು, "ವೈಸ್‌ರಾಯ್ ಜಾಗಕ್ಕೆ ಕೊನೆಗೂ ಮನುಷ್ಯ ಜಾತಿಗೆ ಸೇರಿದವನೊಬ್ಬ ಬಂದಿದ್ದಾನೆ," ಎಂದು ಉದ್ಗಾರವೆತ್ತಿದರು. ಬ್ರಿಟಿಶ್ ಸರಕಾರಕ್ಕೆ ಅಲ್ಲಿಯವರೆಗೂ ನಿಷ್ಠೆಯಿಂದ ಸೇವೆ ಮಾಡಿದ್ದ ಭಾರತೀಯ ಸೈನ್ಯಕ್ಕೆ ಯಾವಾಗಲೋ ದೊರಕಬೇಕಿದ್ದ ಒಂದು ಗೌರವವನ್ನು ಮೌಂಟ್‌ಬ್ಯಾಟನ್ ಸಲ್ಲಿಸಿದರು. ಎಂದರೆ ತಮ್ಮ ಎ. ಡಿ. ಸಿ. ಗಳಲ್ಲಿ, ಮೂವರು ಭಾರತೀಯರನ್ನು ನೇಮಕ ಮಾಡಿದರು. ವೈಸ್‌ರಾಯ್ ಭವನದಲ್ಲಿ ಕೊಡುವ ಔತಣ ಕೂಟಗಳಲ್ಲಿ ಅರ್ಧಕ್ಕೂ ಹೆಚ್ಚು ಭಾರತೀಯ ಅತಿಥಿಗಳಿರಬೇಕೆಂದು ಕಟ್ಟಾಜ್ಞೆ ಮಾಡಿದರು. ಅಷ್ಟೇ ಅಲ್ಲ, ಭಾರತೀಯ ಅತಿಥಿಗಳು ಕೈಯಿಂದ ಊಟ ಮಾಡಿ ಕೈ ಬಾಯಿಗಳನ್ನು ವೈಸ್‌ರಾಯರ ಸಮಕ್ಷಮವೇ ಟೇಬಲ್ಲಿನಲ್ಲಿರುವಾಗ ತೊಳೆದುಕೊಳ್ಳಲೂ ಲೇಡಿ ಮೌಂಟ್‌ಬ್ಯಾಟನ್ನರು ವ್ಯವಸ್ಥೆ ಮಾಡಿದರು!

ಇದೆಲ್ಲದರ ಒಟ್ಟು ಪರಿಣಾಮ ನಿರೀಕ್ಷಿತವೇ ಆಗಿತ್ತು. ಭಾರತದಲ್ಲಿ ಬೇರಾರಿಗಿಂತಲೂ ಈ ವೈಸ್‌ರಾಯರು ಹೆಚ್ಚು ಜನ ಜಂಗುಳಿಯನ್ನು ಆಕರ್ಷಿಸಲಾರಂಭಿಸಿದ್ದರು.

*

ಮೌಂಟ್‌ಬ್ಯಾಟನ್ನರಿಗೇ ತಮ್ಮ ಕಿವಿಗಳನ್ನು ನಂಬಲಾಗಲಿಲ್ಲ, ಆದರೆ ನಂಬಲೇಬೇಕಿತ್ತು. ಅವರ ಎದುರಿಗೆ ಕುಳಿತಿದ್ದ ಜಾರ್ಜ್ ಅಬೆಲ್ಲರಿಗಿಂತ ಭಾರತವನ್ನು ಚೆನ್ನಾಗಿ ಅರಿತವರು ವೈಸ್‌ರಾಯರ ಕಚೇರಿಯಲ್ಲಿ ಯಾರೂ ಇರಲಿಲ್ಲ. ಮತ್ತೆ ಅಬೆಲ್ಲರ ತೀಕ್ಷ್ಣ ಬುದ್ಧಿಯ ಬಗೆಗೂ ಸಂಶಯವಿರಲಿಲ್ಲ. ಕಟುವಾದ ಸರಳತೆಯಿಂದ ಅವರು, ಭಾರತವು ಆಂತರಿಕ ಯುದ್ಧದತ್ತ ಸಾಗುತ್ತಿದೆ ಎಂದು ವೈಸ್‌ರಾಯರಿಗೆ ತಿಳಿಸಿದರು. ಸಾಧ್ಯವಿದ್ದಷ್ಟು ಬೇಗ ಸಂಧಾನ ಮಾಡಿಸುವುದರ ಹೊರತು ಬೇರೆ ಯಾವುದೂ ಮುಂದಿನ ಘನಘೋರ ರಕ್ತಪಾತವನ್ನು ತಡೆಗಟ್ಟಲಾರದೆಂದೂ ಅವರು ಅಭಿಪ್ರಾಯಪಟ್ಟರು.

ಈ ಕರಾಳ ಭವಿಷ್ಯವಾಣಿಯ ಆಘಾತದಿಂದ ಚೇತರಿಸಿಕೊಳ್ಳಬೇಕೆನ್ನುತ್ತಿದ್ದಂತೆಯೇ ಮುಂದಿನ ದಿನಗಳಲ್ಲಿ ಒಂದಾದ ಮೇಲೊಂದರಂತೆ ಬಂದ ವರದಿಗಳು ಅದನ್ನು ದೃಢೀಕರಿಸಿದವು. ತನ್ನ ಪ್ರಾಂತದಲ್ಲೆಲ್ಲ ಆಂತರಿಕ ಯುದ್ಧದ ಪ್ರಕ್ಷುಬ್ಧ ವಾತಾವರಣವಿದೆಯೆಂದು ಪಂಜಾಬ ಗವರ್ನರನು ವರದಿ ಮಾಡಿ

ದ್ದನು. ವರದಿಯಲ್ಲಿನ ಒಂದು ಉದಾಹರಣೆಯಂತೂ ಭಯಾವಹವಾಗಿತ್ತು. ರಾವಳಪಿಂಡಿಯ ಹೊರಗೆ ಒಬ್ಬ ಮುಸ್ಲಿಮನ ಎಮ್ಮೆ ಆವನ ಸಿಖ್ ನೆರೆಯವನ ಹೊಲವನ್ನು ಪ್ರವೇಶಿಸಿತ್ತು. ಅದನ್ನು ಮರಳಿ ಪಡೆಯಲು ಮುಸ್ಲಿಮನು ಬಂದಾಗ ಆದ ಜಗಳವು ದೊಂಬಿಯಲ್ಲಿ ಅವಸಾನವಾಯಿತು. ಎರಡೇ ತಾಸುಗಳಲ್ಲಿ ನೂರು ಹೆಣಗಳು ಉರುಳಿದ್ದುವು ಒಂದು ಎಮ್ಮೆಯ ತುಂಟತನಕ್ಕಾಗಿ.

ಐದು ದಿನಗಳ ನಂತರ ಕಲ್ಕತ್ತೆಯಲ್ಲಿ ನಡೆದ ಹಿಂಸಾಕಾಂಡ ೯೯ ಜನರ ಬಲಿ ತೆಗೆದುಕೊಂಡಿತು. ಮುಂಬಯಿಯಲ್ಲಿನ ಹಿಂಸಾಕಾಂಡಕ್ಕೆ ೪೧ ಜನ ಬಲಿಯಾದರು. ಮೌಂಟ್‌ಬ್ಯಾಟನ್ ಕೂಡಲೇ ತಮ್ಮ ವರಿಷ್ಠ ಸೇನಾ ಹಾಗೂ ಪೋಲೀಸ್ ಅಧಿಕಾರಿಗಳನ್ನು ಕರೆದು ಭಾರತದಲ್ಲಿ ಕಾಯದೆಯನ್ನು ಜಾರಿಯಲ್ಲಿಡುವುದು ಸಾಧ್ಯವೇ ಎಂದು ಪ್ರಶ್ನಿಸಿದರು. "ಇಲ್ಲ" ಎಂದು ಸ್ಪಷ್ಟ ಉತ್ತರ ಬಂತು.

ಅದರ ಜೊತೆಗೇ ಸದ್ಯದ ಕಾಂಗ್ರೆಸ್ ಹಾಗೂ ಮುಸ್ಲಿಂ ಲೀಗುಗಳ ಸಂಯುಕ್ತ ಸರಕಾರದಲ್ಲಿನ ಒಡಕು ಯಾವ ಮಟ್ಟದಲ್ಲಿದೆ ಎನ್ನುವುದೂ ಅವರ ಗಮನಕ್ಕೆ ಬಂತು. ಸರಕಾರದ ಬೇರೆ ಬೇರೆ ಸದಸ್ಯರಲ್ಲಿ ಮಾತೇ ಇಲ್ಲದಾಗಿತ್ತು. ತಾವು ಕಷ್ಟಪಟ್ಟು ಆಟ್ಲೀಯವರನ್ನು ಒಪ್ಪಿಸಿದ ಸಮಯಮಿತಿ ಎಷ್ಟು ಅಸಂಗತವಾಗಿ ಆಶಾದಾಯಕವಾಗಿತ್ತೆನ್ನುವುದೂ ಮನದಟ್ಟಾಯಿತು. ಸಮಸ್ಯೆಯ ಪರಿಹಾರ ತಿಂಗಳುಗಳಲ್ಲಿ ಅಲ್ಲ, ವಾರಗಳಲ್ಲಿಯೇ ಆಗಬೇಕಿತ್ತು.

*

ಭಾರತೀಯ ನಾಯಕರೊಡನೆ ನಡೆಸಲಿದ್ದ ಚರ್ಚೆಗಳಲ್ಲಿ ಹೊಸದೊಂದು ಕ್ರಮವನ್ನು ಮೌಂಟ್‌ಬ್ಯಾಟನ್ ಅನುಸರಿಸಲಿದ್ದರು. ಎಲ್ಲರನ್ನೂ ಕರೆಸಿ ಸಮ್ಮೇಳನ ನಡೆಸುವುದಕ್ಕಿಂತ ಪ್ರತಿಯೊಬ್ಬರೊಡನೆ ಆತ್ಮೀಯವಾಗಿ ಚರ್ಚಿಸುವುದೇ ಅವರ ವಿಚಾರವಾಗಿತ್ತು. ಅವಿಭಕ್ತ ಭಾರತವೇ ಬ್ರಿಟಿಶರು ಬಿಟ್ಟು ಹೋಗಬಹುದಾದ ...

ಎಂದವರು ಭಾವಿಸಿದ್ದರು. ಭಾರತವನ್ನು ಒಡೆಯುವ ಮುಸ್ಲಿಂ ಲೀಗಿನ ಬೇಡಿಕೆಯನ್ನು ಮಾನ್ಯ ಮಾಡುವುದು ದುರ್ದೈವದ ಬೀಜಗಳನ್ನು ಬಿತ್ತಿದಂತೆಯೇ ಆಗುತ್ತಿತ್ತು. ಯಾವುದೊಂದು ಒಪ್ಪಂದಕ್ಕೆ ಬರಲು ಅಲ್ಲಿಯ ವರೆಗಿನ ಔಪಚಾರಿಕ ಮಾತುಕತೆಗಳೆಲ್ಲ ನಡುವೆಯೇ ಸ್ತಬ್ಧವಾಗಿದ್ದುವು. ಆದರೆ ತಮ್ಮ ಖಾಸಗೀ ಕೋಣೆಯಲ್ಲಿ ಪ್ರತಿಯೊಬ್ಬರೊಡನೆಯೂ ವಾದ ಹಾಕಿ ಅವರನ್ನು ಮಣಿಸುವುದು ಸಾಧ್ಯವೆಂದು ಮೌಂಟ್‌ಬ್ಯಾಟನ್ ಭಾವಿಸಿದ್ದರು. ತಮ್ಮ ಮೊದಲ ಸುತ್ತಿನ ಮಾತುಕತೆಗಳಿಗಾಗಿ ಅವರು ನೆಹರೂರನ್ನು ಆಮಂತ್ರಿಸಿದ್ದರು. ಭಾರತದ ನಾಲ್ವರು ನಾಯಕರಲ್ಲಿ ಮೌಂಟ್‌ಬ್ಯಾಟನ್ನರಿಗೆ ಕೇವಲ ಅವರೊಬ್ಬರದೇ ಪರಿಚಯವಿತ್ತು. (ದ್ವಿತೀಯ ಮಹಾಯುದ್ಧದ ನಂತರ ಇಬ್ಬರೂ ಸಿಂಗಾಪುರದಲ್ಲಿ ಭೆಟ್ಟಿಯಾಗಿದ್ದರು.)

ಇಬ್ಬರೂ ತಮ್ಮ ಚರ್ಚೆಯಲ್ಲಿ ಎರಡು ಅಂಶಗಳನ್ನು ಸ್ವೀಕರಿಸಿದರು. ಒಂದು, ಎಷ್ಟು ಸಾಧ್ಯವೋ ಅಷ್ಟು ಬೇಗ ನಿರ್ಣಯವನ್ನು ತೆಗೆದುಕೊಳ್ಳದಿದ್ದರೆ ರಕ್ತಪಾತ ಖಂಡಿತ. ಇನ್ನೊಂದು ನಿರ್ಣಯ ಭಾರತದ ವಿಭಜನೆಯಿಂದ ಅನರ್ಥವಾಗುವುದೂ ಖಂಡಿತ.

ಅನಂತರ ಮಾತುಕತೆ ಆಗ ಬಿಹಾರ ಮತ್ತು ನೌಖಾಲಿಗಳಲ್ಲಿ ಶಾಂತಿಗಾಗಿ ಯಾತ್ರೆ ಮಾಡುತ್ತಿದ್ದ ಗಾಂಧೀಜಿಯತ್ತ ತಿರುಗಿತು. ಅಷ್ಟು ವರ್ಷ ಗಾಂಧೀಜಿಯ ಭಕ್ತರಾಗಿದ್ದ ನೆಹರೂ, ಅಂದು 'ತಮ್ಮ ಗುರು ಭಾರತದ ದೇಹದಲ್ಲಿನ ಗಾಯ, ಕೀವುಗಳಿಗೆ ಮುಲಾಮು ಲೇಪಿಸುವ ಕಾರ್ಯದಲ್ಲಿ ಮಗ್ನರಾಗಿದ್ದಾರೆ; ಆದರೆ ಆ ಗಾಯಗಳು ಹೇಗೆ ಉತ್ಪನ್ನವಾಗುತ್ತವೆ ಮತ್ತು ಇಡೀ ದೇಹಕ್ಕೇನೆ ಚಿಕಿತ್ಸೆ ಮಾಡಬೇಕೆನ್ನುವುದನ್ನು ಮರೆತುಬಿಟ್ಟಿದ್ದಾರೆ' ಎಂದು ಒಪ್ಪಿಕೊಂಡರು.

ಭಾರತದ ಮುಕ್ತಿದಾತ, ಮತ್ತವನ ನಿಕಟವರ್ತಿಗಳ ನಡುವಿನ ಅಂತರದ ಸುಳಿವು ಸಿಕ್ಕಾಗ ಮೌಂಟ್‌ಬ್ಯಾಟನ್ನರಿಗೆ ...

ಕಾರ್ಯಾಚರಣೆಯ ನೀತಿಯ ಬಗ್ಗೆ ಒಂದು ಮಹತ್ವದ ಹೊಳವು ತೋಚಿತು. ಭಾರತದ ಐಕ್ಯವನ್ನು ಕಾಪಾಡಲು ಅದರ ನಾಯಕರು ಅಸಮರ್ಥರಾದಲ್ಲಿ ಅವರು ದೇಶವನ್ನು ಭಾಗ ಮಾಡುವವರೇ ಇದ್ದರು. ಆದರೆ ಈ ಕಾರ್ಯದಲ್ಲಿ ಗಾಂಧೀಜಿಯ ಉಗ್ರ ಪ್ರತಿಭಟನೆ ಅಡ್ಡ ಬರುತ್ತದೆಂದು ಅವರಿಗೆ ಮನವರಿಕೆಯಾಗಿತ್ತು. ಅವರಿಗಿದ್ದ ಒಂದೇ ಆಸೆಯೆಂದರೆ ಕಾಂಗ್ರೆಸ್ಸಿನ ಇತರ ನಾಯಕರನ್ನು, ಗಾಂಧೀಜಿಗೆ ವಿರುದ್ಧವಾಗಿ ವಿಭಜನೆಗೆ ಒಪ್ಪಿಸುವುದು. ಅದೇ ನೆಹರೂ ಈಗ ಗಾಂಧೀಜಿ ಹಾಗೂ ಕಾಂಗ್ರೆಸ್ ನಾಯಕರ ನಡುವೆ ಭಿನ್ನಾಭಿಪ್ರಾಯವಿದೆಯೆಂದು ಒಪ್ಪಿದ್ದರು. ಈ ಭಿನ್ನಾಭಿಪ್ರಾಯವನ್ನು ಬಲಪಡಿಸಿ ಅದನ್ನು ಉಪಯೋಗಿಸಿಕೊಳ್ಳಲು ನೆಹರೂರವರ ಬೆಂಬಲ (ಗಾಂಧೀಜಿಯ ವಿರುದ್ಧ...) ಮೌಂಟ್‌ಬ್ಯಾಟನ್ನರಿಗೆ ಅತ್ಯವಶ್ಯವಾಗಿತ್ತು. ಆ ದಿನ ಪ್ರಾರಂಭವಾದ ಅವರ ಮೈತ್ರಿ ಮುಂದಿನ ಎಷ್ಟೋ ದಿನಗಳಲ್ಲಿ ತನ್ನ ಪ್ರಭಾವ ಬೀರದೇ ಇರಲಿಲ್ಲ.

ಬೀಳ್ಕೊಡಲು ಬಾಗಿಲವರೆಗೆ ಬಂದ ಮೌಂಟ್‌ಬ್ಯಾಟನ್ನರೆಂದರು, "ನೀವು ನನ್ನನ್ನು ಬ್ರಿಟಿಶ್ ರಾಜ್ಯವನ್ನು ಸಮಾಪ್ತಿಗೊಳಿಸಲು ಬಂದ ಕೊನೆಯ ವೈಸ್‌ರಾಯನೆಂದು ತಿಳಿಯದೇ, ಹೊಸ ಭಾರತದ ಮಾರ್ಗದರ್ಶಕನೆಂದು ತಿಳಿಯಬೇಕು." ಮೃದುವಾಗಿ ನಗುತ್ತ ನೆಹರೂ, "ನಿಮ್ಮ ಆಕರ್ಷಕ ವ್ಯಕ್ತಿತ್ವವು ಬಹಳ ಅಪಾಯಕಾರಿಯಾಗಿದೆ ಎಂದು ಜನರಾಡುವ ಮಾತಿನ ಅರ್ಥ ನನಗೆ ಈಗೀಗ ಆಗುತ್ತಿದೆ!" ಎಂದು ಉತ್ತರಿಸಿದರು.

*

ತಮ್ಮ ಎದುರಿಗೆ ವಿಶಾಲವಾದ ಆಸನದಲ್ಲಿ ಕುಳಿತ ಗಾಂಧೀಜಿಯವರ ಕೃಶಕಾಯವನ್ನು ನೋಡಿ ಮೌಂಟ್‌ಬ್ಯಾಟನ್ನರಿಗೆ ಪುಟ್ಟ ಪಕ್ಷಿಯೊಂದು ಕುಳಿತಂತೆ ಅನಿಸಿತು. ಅಲ್ಲಿಯವರೆಗಿನ ಜೀವನದಲ್ಲಿ ಇವರಿಬ್ಬರೂ ಎರಡು ಧ್ರುವಗಳಷ್ಟು ಭಿನ್ನವಾಗಿದ್ದರು. ಒಬ್ಬರು ಕಟ್ಟುಮಸ್ತಾದ ತನ್ನ ದೇಹವನ್ನು

ಕಣ್ಣು ಕುಕ್ಕುವ ವಸ್ತ್ರಗಳಿಂದ ಅಲಂಕರಿಸಿದ ಕಟ್ಟಾ ಸೈನಿಕ, ಇನ್ನೊಬ್ಬ ಜನ್ಮವಿಡೀ ಎರಡೇ ಬಟ್ಟೆಗಳನ್ನು ಧರಿಸಿ ಅಹಿಂಸೆಯನ್ನು ಬೋಧಿಸಿದ ಶಾಂತಿದೂತ. ಇಬ್ಬರೂ ಭಿನ್ನಾಭಿಪ್ರಾಯ ತಳೆಯಲೆಂದೇ ಇದ್ದಾರೆನ್ನುವ ಮಟ್ಟಿಗೆ ಅವರಲ್ಲಿ ವೈಷಮ್ಯವಿದ್ದರೂ ಮುಂದಿನ ದಿನಗಳಲ್ಲಿ ಗಾಂಧೀಜಿ ಈ ಸೈನಿಕನ ಮನೋಭೂಮಿಕೆಯಲ್ಲಿ ತಮಗೆ ಆತ್ಮೀಯವಾದ ಹಲವಾರು ನೈತಿಕ ವಿಚಾರಗಳ ಪ್ರತಿಧ್ವನಿಯನ್ನು ಗುರುತಿಸಿದರು. ಮೌಂಟ್‌ಬ್ಯಾಟನ್ನರ ಮೇಲೆ ಅವರ ಪ್ರಭಾವವೆಷ್ಟಾಯಿತೆಂದರೆ ಗಾಂಧೀ ಹತ್ಯೆಯ ನಂತರ "ಗಾಂಧೀಜಿಯ ಸ್ಥಾನ ಇತಿಹಾಸದಲ್ಲಿ ಬುದ್ಧ ಮತ್ತು ಕ್ರಿಸ್ತರೊಡನೆ ಇದೆ" ಎಂದು ಅವರು ಉದ್ಗರಿಸಿ ಭವಿಷ್ಯತ್ತಿನಲ್ಲಿ ಅವರ ಸ್ಥಾನವನ್ನು ಗುರುತಿಸಿದರು.

ಗಾಂಧೀಜಿಯವರೊಡನೆ ಸ್ನೇಹಪೂರ್ಣ ಸಂಬಂಧಗಳನ್ನು ಬೆಳೆಸಿಕೊಳ್ಳಲು ಮೌಂಟ್‌ಬ್ಯಾಟನ್ ವಿಶೇಷ ಕಾಳಜಿ ವಹಿಸಿದ್ದರು. ತಮ್ಮ ಆಮಂತ್ರಣದೊಡನೆ ಬಿಹಾರಕ್ಕೆ ವಿಶೇಷ ವಿಮಾನವನ್ನು ಕಳಿಸಿ ಗಾಂಧೀಜಿಯನ್ನು ದಿಲ್ಲಿಗೆ ಕರೆಸುವ ಸೂಚನೆಯನ್ನೂ ಮಾಡಿದ್ದರು. ಗಾಂಧೀಜಿ ಅದನ್ನು ನಿರಾಕರಿಸಿ ಮೂರನೇ ದರ್ಜೆಯ ಗಾಡಿಯಲ್ಲಿಯೇ ಬಂದಿದ್ದರು. ಮೊದಲನೇ ಭೆಟ್ಟಿಯಲ್ಲಿ ಲೇಡಿ ಮೌಂಟ್‌ಬ್ಯಾಟನ್ನರೂ ಹಾಜರಿದ್ದರು. ಮಹಾತ್ಮರು ಚಿಂತೆಯಲ್ಲಿ ಮುಳುಗಿದ್ದನ್ನು ನೋಡಿ ಗಂಡ ಹೆಂಡಿರಿಬ್ಬರಿಗೂ ಕಳವಳವಾಯಿತು. ಸಾಧ್ಯವಿದ್ದಷ್ಟು ನಾಜೂಕಾಗಿ, "ಏನಾದರೂ ತೊಂದರೆಯೆ?" ಎಂದು ಕೇಳಿದರು.

"ಹೌದು ಅದನ್ನು ಯಾರೋ ಕದ್ದಿದ್ದಾರೆ," ವಿಷಣ್ಣರಾಗಿ ಮಹಾತ್ಮರು ಹೇಳಿದರು. "ದಿಲ್ಲಿಗೆ ಬರುವಾಗ ರೈಲಿನಲ್ಲಿ ಯಾರೋ ನನ್ನ ವಾಚನ್ನು ಕದ್ದಿದ್ದಾರೆ." ಮೌಂಟ್‌ಬ್ಯಾಟನ್ನರಿಗೆ ಬೇಗನೆ ಅರ್ಥವಾಯಿತು. ವಾಚು ಹೋದುದಕ್ಕೆ ಗಾಂಧೀಜಿ ದುಃಖಿಸುತ್ತಿರಲಿಲ್ಲ. ಅವರಿಟ್ಟ ವಿಶ್ವಾಸದ ಒಂದು ತುಣುಕನ್ನೇ

ಯಾರೋ ಅಪಹರಿಸಿದ್ದರು.

ಸುದೀರ್ಘ ಮೌನದ ನಂತರ ಮಾತು ಪುನಃ ಪ್ರಾರಂಭವಾಯಿತು:

"ಗಾಂಧೀಜಿ, ಮೊದಲು ನಿಮ್ಮ ಬಗ್ಗೆ ನನಗೆ ಹೇಳಿರಿ."

ಇದೊಂದು ಪೂರ್ವಯೋಜಿತ ಪ್ರಶ್ನೆಯಾಗಿತ್ತು. ಮೊದಲು ಎಲ್ಲ ನಾಯಕರನ್ನೂ ಸರಿಯಾಗಿ ಅರ್ಥ ಮಾಡಿಕೊಳ್ಳುವುದು, ಹಾಗೂ ತಮ್ಮೊಡನೆ ಮನಬಿಚ್ಚಿ ಮಾತನಾಡಲು ಅವರನ್ನು ಪ್ರೋತ್ಸಾಹಿಸುವುದು ಮೌಂಟ್‌ಬ್ಯಾಟನ್ನರ ಹುಂಚಿಕೆಯಾಗಿತ್ತು. ಮುಂದೆ ಅವರೆಲ್ಲರ ಮೇಲೆ ತಮ್ಮ ವ್ಯಕ್ತಿತ್ವದ ವಶೀಕರಣ ಬೀರುವ ಸಂದರ್ಭದಲ್ಲಿ ಈಗ ನಿರ್ಮಿಸುವ ಪರಸ್ಪರ ವಿಶ್ವಾಸದ ವಾತಾವರಣ ಸಹಾಯಕವಾದೀತೆಂದು ಅವರ ಭಾವನೆ.

ಈ ಪ್ರಶ್ನೆಯಿಂದ ಗಾಂಧೀಜಿಗೆ ಸಂತೋಷವೇ ಆಯಿತು. ಆಸಕ್ತಿಯಿಂದ ಕೇಳುತ್ತಿದ್ದ ಆ ದಂಪತಿಗಳಿಗೆ ದಕ್ಷಿಣ ಆಫ್ರಿಕದ ಅನುಭವಗಳಿಂದ ಉಪ್ಪಿನ ಸತ್ಯಾಗ್ರಹದವರೆಗಿನ ತಮ್ಮ ಕಥೆ, ತಮ್ಮ ವಿಚಾರಗಳ ಕುರಿತು ಎರಡು ಗಂಟೆ ಮಾತನಾಡಿದರು.

ಚಹಾಪಾನದ ವೇಳೆಗೆ ಮೌಂಟ್‌ಬ್ಯಾಟನ್ ಗಾಂಧೀಜಿಯನ್ನು ಟೆರೇಸಿಗೆ ಒಯ್ದರು. ಗಾಂಧೀಜಿಯವರೊಡನೆ ಬಂದಿದ್ದ ಮನೂ ಲಿಂಬೆರಸ, ಆಡಿನ ಮೊಸರನ್ನು ಅವರ ಟಿನ್ನಿನ ಪ್ಲೇಟಿನಲ್ಲಿ ಹಾಕಿ ಇಟ್ಟಳು. ಗಾಂಧೀಜಿ ಅದನ್ನು ಸ್ವೀಕರಿಸಲು ತಮ್ಮ ಅತಿಥೇಯನನ್ನು ಕೇಳಿದರು. "ಇದು ಚೆನ್ನಾಗಿದೆ, ಸ್ವಲ್ಪ ರುಚಿ ನೋಡಿರಲ್ಲ"

"ಮೊದಲೆಂದೂ ನಾನು ತಿಂದ ನೆನಪಿಲ್ಲ" ಎಂದೇನೋ ಮೌಂಟ್‌ಬ್ಯಾಟನ್ ಗುಣುಗುಣಿಸಿದರು. ಆ ಹಳದಿ ಮುದ್ದೆಯನ್ನು ನೋಡಿದಾಗ ಅವರಿಗೇನೂ ತಿನ್ನುವ ತವಕವಾಗಿರಲಿಲ್ಲ.

"ನಡೆಯುತ್ತದೆ. ಪ್ರತಿಯೊಂದಕ್ಕೂ ಮೊದಲ ಸಲ ಎನ್ನುವುದು ಇದ್ದೇ ಇದೆ. ಈಗ ಪ್ರಯತ್ನಿಸಿ!" ಗಾಂಧೀಜಿ ನಗುತ್ತಿದ್ದರು. ಕಟ್ಟುಬಿದ್ದ ಮೌಂಟ್‌ಬ್ಯಾಟನ್ ಒಂದು ಚಮಚೆ ರುಚಿ ನೋಡಲೇಬೇಕಾಯಿತು.

ಈ ಉಪಚಾರಗಳೆಲ್ಲ ಮುಗಿದ ಮೇಲೆ ಗಂಭೀರವಾಗಿ ಮಾತುಕತೆಗಳನ್ನು ಪ್ರಾರಂಭ ಮಾಡಿದರು. ಗಾಂಧೀಜಿಯಿಂದ ಸಮಸ್ಯೆಗೆ ಪರಿಹಾರ ಸಿಗುತ್ತದೆ ಎಂದು ಅವರು ತಿಳಿದಿರಲಿಲ್ಲವಾದರೂ ತಮ್ಮ ಯಾವುದೇ ಪ್ರಯತ್ನವನ್ನು ಮಣ್ಣು ಮುಕ್ಕಿಸುವ ಸಾಮರ್ಥ್ಯ ಅವರಿಗಿದೆ ಎಂದು ವೈಸ್‌ರಾಯರಿಗೆ ಗೊತ್ತಿತ್ತು. ಕ್ರಿಪ್ಸ್, ವೇವೆಲ್ ಮೊದಲಾದ ಸಂಧಾನಕರ್ತರು ಬರಿಗೈಯಿಂದ ಮರಳಲು ಗಾಂಧಿಯೇ ಕಾರಣರಾಗಿದ್ದರು. ಹಿಂದಿನ ದಿನವೇ ಪ್ರಾರ್ಥನಾ ಸಭೆಯ ನಂತರ ಅವರು, "ಭಾರತದ ವಿಭಜನೆ, ನನ್ನ ಕಳೇಬರದ ಮೇಲೆ ಆದೀತು. ಬದುಕಿರುವ ವರೆಗೂ ವಿಭಜನೆಗೆ ಒಪ್ಪುವುದಿಲ್ಲ," ಎಂದು ಘೋಷಿಸಿದ್ದರು.

ಗಾಂಧೀಜಿಯ ಅಹಿಂಸಾತ್ಮಕ ಯುದ್ಧ ಕೊನೆಗೂ ಗೆದ್ದಿದೆಯೆಂದು ಮೌಂಟ್‌ಬ್ಯಾಟನ್ ವಿಶದೀಕರಿಸಿದರು. ಬ್ರಿಟಿಶರು ನಿರ್ಗಮನಕಾಲಕ್ಕೆ ಒಂದು ಕೆಲಸ ಮಾಡಿದರೆ ಸಾಕೆಂದು ಗಾಂಧೀಜಿ ಹೇಳಿದರು— "ಭಾರತವನ್ನು ಒಡೆಯಬೇಡಿರಿ." ರಕ್ತದ ನದಿಗಳು ಹರಿದರೂ ಚಿಂತೆ ಇಲ್ಲ, ದೇಶ ಇಬ್ಭಾಗವಾಗಬಾರದು. ವಿಭಜನೆ ತಮ್ಮ ಕೊಟ್ಟ ಕೊನೆಯ ವಿಚಾರವೆಂದು ಮೌಂಟ್‌ಬ್ಯಾಟನ್ನರೂ ಹೇಳಿದರು. ಆದರೆ ಅದನ್ನು ಬಿಟ್ಟು ಬೇರೆ ಮಾರ್ಗಗಳಿವೆಯೆ ?

"ಹೌದು, ಇದೆ. ದೇಶವನ್ನು ಕತ್ತರಿಸುವ ಬದಲು ಮುಸ್ಲಿಮರಿಗೇ ಅದನ್ನು ಒಪ್ಪಿಸಿರಿ. ಜಿನ್ನಾರಿಗೆ ತಮ್ಮ ಮುಸ್ಲಿಂ ಲೀಗಿನ ಸರಕಾರ ಸ್ಥಾಪಿಸಲು ಹೇಳಿರಿ. ಮೂವತ್ತು ಕೋಟಿ ಹಿಂದುಗಳ ಮೇಲೆ ಮುಸ್ಲಿಂ ಆಳಿಕೆ ನಡೆಯಲಿ!" ಸಲಹೆ ಅತ್ಯಂತ ವಿಚಿತ್ರವಾಗಿತ್ತು. ಆದರೆ ಇದಕ್ಕೂ ವಿಚಿತ್ರವಾದ ಸಲಹೆಗಳನ್ನು ಮಾಡಿ ಗಾಂಧೀಜಿ ಯಶಸ್ವಿಯಾಗಿಸಿದ್ದರಲ್ಲ!

"ಜಿನ್ನಾ ಏನನ್ನಬಹುದು?" ಮೌಂಟ್‌ಬ್ಯಾಟನ್ ಕೇಳಿದರು.

"ಇದರ ಯೋಜಕ ನಾನೆಂದು ತಿಳಿದರೆ— 'ಕುತಂತ್ರಿ ಗಾಂಧಿ' ಎಂದು ಹೇಳಿಯಾರು."

ಗಾಂಧಿ ನಕ್ಕರು.

ಮೌಂಟ್‌ಬ್ಯಾಟನ್ ಮೌನವಾಗಿದ್ದರು. ಈ ಸಲಹೆಯಲ್ಲಿ ಅವ್ಯವಹಾರ್ಯವಾದದ್ದು ಬಹಳವಿತ್ತು; ಹಾಗೆಂದು ಅವರು ಅದನ್ನು ತಿರಸ್ಕರಿಸಲೂ ಹೋಗಲಿಲ್ಲ.

"ಕಾಂಗ್ರೆಸ್ ಈ ಯೋಜನೆಯನ್ನು ಒಪ್ಪಿ ಅದನ್ನು ಕಾರ್ಯರೂಪಕ್ಕೆ ತರಲು ಪ್ರಾಮಾಣಿಕವಾಗಿ ಯತ್ನಿಸುತ್ತದೆಂದು ನೀವು ಭರವಸೆ ಕೊಟ್ಟರೆ ಅದನ್ನು ಒಪ್ಪಲು ನಾನೂ ಸಿದ್ಧನಿದ್ದೇನೆ," ಎಂದರು. ಇದನ್ನು ಕೇಳಿ ಗಾಂಧೀಜಿ ಪುಟಿದೆದ್ದರು

"ಈ ವಿಷಯದಲ್ಲಿ ನಾನು ಸಂಪೂರ್ಣ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ನೀವು ಒಪ್ಪಿದರೆ ಸಾಕು. ನಾನು ಸ್ವತಃ ಭಾರತದ ಉದ್ದಗಲಕ್ಕೂ ಪ್ರವಾಸ ಮಾಡಿ ಜನತೆಯನ್ನು ಇದಕ್ಕೆ ಒಪ್ಪಿಸುತ್ತೇನೆ."

*

"ಎಲಾ, ಈತ ನನ್ನನ್ನೇ ದಬಾಯಿಸುತ್ತಿದ್ದಾನಲ್ಲ!" ಅಚ್ಚರಿಯಿಂದ ಮೌಂಟ್‌ಬ್ಯಾಟನ್ ಯೋಚಿಸಿದರು. ನಾಯಕರ ಮೇಲೆ ವರ್ಚಸ್ಸು ಬೀರುವ ಅವರ ಯೋಜನೆ ಸರ್ದಾರ ಪಟೇಲರ ಉಕ್ಕಿನಂತಹ ವ್ಯಕ್ತಿತ್ವದ ಎದುರಿಗೆ ಸ್ತಬ್ಧವಾಗಿತ್ತು. ಪಟೇಲರು ವೈಸ್‌ರಾಯರಂತೆಯೇ ಕಾರ್ಯದೃಷ್ಟಿಯುಳ್ಳವರೂ ವ್ಯಾವಹಾರಿಕರೂ ಆಗಿದ್ದರಿಂದ ಇಬ್ಬರ ನಡುವೆ ಎಲ್ಲವೂ ಸುಸೂತ್ರವಾಗಿ ಸಾಗಬೇಕಿತ್ತು. ಆದರೆ ಸದ್ಯಕ್ಕೆ ಅವರ ನಡುವಿನ ಬಿಕ್ಕಟ್ಟಿನ ಕಾರಣ ಒಂದು ಮಾಮೂಲಿ ಸರಕಾರೀ ನೇಮಕವಾಗಿತ್ತು. ಪಟೇಲರು ಅದನ್ನು ಬರೆದಿದ್ದ ರೀತಿ ವೈಸ್‌ರಾಯರಿಗೆ ಸವಾಲು ಹಾಕುವಂತಿತ್ತು.

ಪಟೇಲರಿಗೆ ಗಟ್ಟಿತನಕ್ಕೆ ಸಾರ್ಥಕವಾದ ಪ್ರಸಿದ್ಧಿ ಇತ್ತು. ಈ ಹೊಸ ಸಂಧಾನಕರ್ತನ ಅಳವೆಷ್ಟು, ಅವನನ್ನು ಎಷ್ಟರ ಮಟ್ಟಿಗೆ ದಬಾಯಿಸಬಹುದು? ಇದನ್ನವರಿಗೆ ಗೊತ್ತು ಮಾಡಿಕೊಳ್ಳಬೇಕಿತ್ತೆಂದು ಮೌಂಟ್‌ಬ್ಯಾಟನ್ನರಿಗೆ ಕೂಡಲೇ ತಿಳಿಯಿತು. ತಮ್ಮ ಮಾತುಕತೆಗಳ ಮೊದಲು ಈ ಪರೀಕ್ಷೆಯು ಇತ್ಯರ್ಥವಾಗಿಬಿಡಲೆಂದು ಅವರೂ ನಿರ್ಧರಿಸಿದರು. ನೇಮಕ ಪತ್ರವನ್ನು ಪಟೇಲರಿಗೆ ಹಿಂತಿರುಗಿಸಿ ಅದನ್ನು ರದ್ದುಮಾಡಲು ಸೌಮ್ಯವಾಗಿ ಕೇಳಿಕೊಂಡರು. ಪಟೇಲರು ನಿರಾಕರಿಸಿದರು.

"ಹಾಗಿದ್ದರೆ ನಾನು ನನ್ನ ವಿಮಾನಕ್ಕಾಗಿ ಆಜ್ಞೆ ಮಾಡಿಬಿಡುತ್ತೇನೆ." ಮೌಂಟ್‌ಬ್ಯಾಟನ್ ನುಡಿದರು.

"ಅದೇಕೆ ?"

"ಏಕೆಂದರೆ, ನಾನು ಮರಳಿ ಹೋಗುವೆ. ಮೊದಲನೆಯದಾಗಿ ಈ ಕೆಲಸವೇ ನನಗೆ ಬೇಕಿರಲಿಲ್ಲ. ನಿಮ್ಮಂಥವರು ಯಾರಾದರೂ ನನಗೆ ಈ ದುಸ್ಸಾಧ್ಯ ಜವಾಬ್ದಾರಿಯಿಂದ ಪಾರಾಗಲು ನೆವ ಒದಗಿಸುತ್ತಾರೇನೋ ಎಂದು ಕಾಯುತ್ತಿದ್ದೆ."

"ನೀವು ನಿಜಕ್ಕೂ ಹಾಗೆ ಮಾಡುತ್ತಿಲ್ಲವಷ್ಟೆ!"

"ಮತ್ತೇನು ? ಇಲ್ಲಿದ್ದು ನಿಮ್ಮಂಥವರಿಂದ

ದಬಾಯಿಸಿಕೊಳ್ಳುತ್ತೇನೆಂದು ತಿಳಿದಿದ್ದೀರಾ ? ಹೇಗೆ ಬೇಕಾದರೂ ಒರಟುತನದಿಂದ ನನ್ನೊಡನೆ ನಡೆದುಕೊಳ್ಳಬಹುದೆಂದು ನೀವು ತಿಳಿದಿದ್ದರೆ ಅದು ನಿಮ್ಮ ತಪ್ಪು. ನೀವು ಆ ನೇಮಕವನ್ನು ರದ್ದು ಮಾಡಿದರೆ ಸೈ. ಇಲ್ಲದಿದ್ದರೆ ನಮ್ಮಲ್ಲಿ ಒಬ್ಬರು ರಾಜೀನಾಮೆ ನೀಡಬೇಕಾಗುತ್ತದೆ. ನಾನು ಹೋಗುವುದಾದರೆ ನಿಮ್ಮ ಪ್ರಧಾನಮಂತ್ರಿ ಹಾಗೂ ಜಿನ್ನಾರಿಗೆ ಅದರ ಕಾರಣವನ್ನು ವಿವರಿಸಿ ಹೋಗುತ್ತೇನೆ. ಮುಂದಾಗುವ ಅನಾಹುತ, ರಕ್ತಪಾತಗಳಿಗೆ ನೀವೇ ಜವಾಬ್ದಾರರಾಗುತ್ತೀರಿ."

"ಅದ್ಹೇಗೆ ಆದೀತು ?" ಪಟೇಲರೆಂದರು, "ಒಂದೇ ತಿಂಗಳ ನಂತರ ವೈಸ್‌ರಾಯಿಕೆಯನ್ನು ಬಿಟ್ಟು ಹೋಗಲು ಸಾಧ್ಯವೆ ?"

"ಮಿಸ್ಟರ್ ಪಟೇಲ್, ನಿಮಗೆ ನನ್ನ ಬಗ್ಗೆ ಗೊತ್ತಿಲ್ಲ. ಇಲ್ಲಿಯೋ ಆ ನೇಮಕವನ್ನು ರದ್ದು ಮಾಡಿರಿ. ಇಲ್ಲದಿದ್ದರೆ ನಾನು ನಿಮ್ಮ ಪ್ರಧಾನ ಮಂತ್ರಿಯನ್ನು ಕರೆದು ಈಗಿಂದೀಗ ರಾಜೀನಾಮೆ ನೀಡುತ್ತೇನೆ."

ಬಹಳ ಹೊತ್ತು ಮೌನವಾಗಿದ್ದು ನಂತರ ಪಟೇಲರೆಂದರು : "ಹೌದು, ನೀವು ಹಾಗೆ ಮಾಡಬಹುದೆಂದು ನನಗೀಗ ನಂಬಿಕೆ ಹುಟ್ಟಿದೆ." ಪಟೇಲರು ನೇಮಕ ಪತ್ರವನ್ನು ಹರಿದು ಚೂರುಮಾಡಿದರು.

*

ಏಪ್ರಿಲ್ ಮಧ್ಯದ ದಿನವಾಗಿದ್ದರೂ ಅಂದು ಏರ್-ಕಂಡಿಶನರಿನ ಆವಶ್ಯಕತೆ ವೈಸ್‌ರಾಯರ ಕೋಣೆಯಲ್ಲಿ ಇರಲಿಲ್ಲ. ಮುಹಮ್ಮದ ಅಲಿ ಜಿನ್ನಾರ ಕಠೋರ ಮುದ್ರೆಯಿಂದ ಪಸರಿಸುತ್ತಿದ್ದ ಕೊರೆಯುವ ಚಳಿ ವಾತಾವರಣವನ್ನು ತಂಪಾಗಿಡಲು ಸಾಕಾಗಿತ್ತು ! ಕಾಲು ಶತಮಾನದ ನಂತರವೂ ಮೌಂಟ್‌ಬ್ಯಾಟನ್ನರು, "ಸಂಧಾನ ಮಾಡಿಸುವ ನನ್ನ ಜವಾಬ್ದಾರಿ ಎಷ್ಟು ಅಸಾಧ್ಯವಾಗಿತ್ತೆನ್ನುವುದು ನನಗೆ ಮೊದಲ ಸಲ ಜಿನ್ನಾರನ್ನು ಕಂಡಾಗಲೇ ಅರಿವಾಯಿತು," ಎಂದು ಜ್ಞಾಪಿಸಿಕೊಳ್ಳುವಂತಾಯಿತು.

ಅವರ ಭೆಟ್ಟಿಯು ಪ್ರಾರಂಭದಲ್ಲಿಯೇ ಗಸ ಭಂಗವಾಗಿತ್ತು. ಪ್ರತಿಯೊಂದನ್ನೂ ಲೆಕ್ಕ ಹಾಕಿ, ಮಾಡುತ್ತಿದ್ದ ಜಿನ್ನಾರಿಗೆ ಸಹಜ ಪ್ರತಿಕ್ರಿಯೆಗಳು ಎಳ್ಳಷ್ಟೂ ಇರಲಿಲ್ಲವೆಂಬುದನ್ನು ಅದು ತೋರಿಸಿತ್ತು. ತಮ್ಮ ಭಾವಚಿತ್ರಕ್ಕಾಗಿ 'ಪೋಸ್' ಮಾಡಬೇಕೆಂಬುದನ್ನು ಮೊದಲೇ ತಿಳಿದಿದ್ದ ಜಿನ್ನಾ, ಭಾವಚಿತ್ರದಲ್ಲಿ ತಮ್ಮ ಮತ್ತು ಲಾರ್ಡ್ ಮೌಂಟ್‌ಬ್ಯಾಟನ್ನರ ನಡುವೆ ಲೇಡಿ ಎಡ್ವಿನಾ ಮೌಂಟ್‌ಬ್ಯಾಟನ್ನರು ನಿಲ್ಲುತ್ತಾರೆಂದು ಭಾವಿಸಿದ್ದರು. ಆ ಸಂದರ್ಭದಲ್ಲಿ ಲೇಡಿ ಎಡ್ವಿನಾರನ್ನು ಹೊಗಳಲು ಒಂದು ಚಟಾಕಿಯನ್ನು ಸಿದ್ಧಗೊಳಿಸಿಟ್ಟುಕೊಂಡಿದ್ದರು. ಆದರೆ ಅವರ ದುರ್ದೈವಕ್ಕೆ ಲೇಡಿ ಎಡ್ವಿನಾರ ಬದಲು ತಾವೇ ಉಳಿದಿಬ್ಬರ ನಡುವೆ ನಿಲ್ಲಬೇಕಾಯಿತು. ಆದರೆ ಅವರ ನಡೆನುಡಿಗಳೆಲ್ಲ ಪೂರ್ವನಿರ್ಧರಿತ ಕಾಂಪ್ಯೂಟರ್ ಕಾರ್ಯಕ್ರಮದಂತೆ. ಭಾವಚಿತ್ರಕ್ಕಾಗಿ ವೈಸ್‌ರಾಯ್ ದಂಪತಿಗಳ ಮಧ್ಯೆ ತಾವು ನಿಲ್ಲಬೇಕಾಗಿ ಬಂದಾಗಲೂ ಮೊದಲೇ ಸಿದ್ಧ ಮಾಡಿಟ್ಟುಕೊಂಡಿದ್ದ ಹಾಸ್ಯ ಚಟಾಕಿ ಅನಿವಾರ್ಯವಾಗಿ ಹೊರಕ್ಕೆ ಬಂದೇಬಿಟ್ಟಿತು:

"ಓಹ್, ಎರಡು ಮುಳ್ಳುಗಳ ನಡುವೊಂದು ಗುಲಾಬಿ !"

ವೈಸ್‌ರಾಯರ ಕೋಣೆಯಲ್ಲಿ ಅವರು ತಾವು ಎಷ್ಟರ ಮಟ್ಟಿಗೆ ಸವಲತ್ತುಗಳನ್ನು ಕೊಡಲು ತಯಾರಿದ್ದೇವೆಂದು ಹೇಳಲು ಪ್ರಾರಂಭಿಸಿದರು. ಗಾಂಧೀಜಿಗೆ ಮಾಡಿದಂತೆ ಜಿನ್ನಾರನ್ನೂ ಮೌಂಟ್‌ಬ್ಯಾಟನ್ ತಡೆದರು. "ಸವಲತ್ತು, ಷರತ್ತುಗಳನ್ನು ಈಗ ಚರ್ಚಿಸುವುದು ಬೇಡ. ಮೊದಲು ನಮ್ಮಿಬ್ಬರ ಪರಿಚಯ ಚೆನ್ನಾಗಿ ಆಗಲಿ."

ಜಿನ್ನಾ ಮಂಜಿಗಿಂತ ತಣ್ಣಗಾಗಿಬಿಟ್ಟರು. ತಮ್ಮ ಅತಿ ನಿಕಟ ಸಹಕಾರಿಗಳಲ್ಲೂ ಮನ ಬಿಚ್ಚಿ ಮಾತನಾಡದ ಆ ಮುಸ್ಲಿಂ ನಾಯಕನಿಗೆ, ಸಂಪೂರ್ಣ ಅಪರಿಚಿತನ ಮುಂದೆ ತನ್ನ ಜೀವನ ಮತ್ತು ವ್ಯಕ್ತಿತ್ವದ ಬಗ್ಗೆ ಹೇಳಿಕೊಳ್ಳುವ ವಿಚಾರವೇ ಗಲಿಬಿಲಿಯನ್ನುಂಟು ಮಾಡಿರಬೇಕು. ಮುಂದಿನ ಎರಡು ತಾಸುಗಳವರೆಗೆ ತಮ್ಮಲ್ಲಿದ್ದ ಆಕರ್ಷಣೆಯನ್ನೆಲ್ಲ

ಜಿನ್ನಾರ ಮೇಲೆ ಪ್ರಯೋಗಿಸಲು ಮೌಂಟ್‌ಬ್ಯಾಟನ್ ಹೆಣಗಿದರು. ಪ್ರತಿಫಲವಾಗಿ ಅವರಿಗೆ ಸಿಕ್ಕಿದ್ದು ಜಿನ್ನಾರು ಒಂದೆರಡು ಶಬ್ದಗಳಲ್ಲಿ ಚುಟುಕಾಗಿ ಕೊಡುತ್ತಿದ್ದ ಉತ್ತರಗಳು. ಜಿನ್ನಾ ಹೋದ ಮೇಲೆ ತಮ್ಮ ಸಹಾಯಕನಿಗೆ ಮೌಂಟ್‌ಬ್ಯಾಟನ್ ಹೇಳಿದರು: "My God, he was cold! It took most of the interview to unfreeze him."

ಮುಂದೆ, ೧೯೪೭ ಎಪ್ರಿಲ್ ಮೊದಲೆರಡು ವಾರಗಳಲ್ಲಿ ಜಿನ್ನಾ ಮತ್ತು ಮೌಂಟ್‌ಬ್ಯಾಟನ್ನರ ನಡುವೆ ಆರು ಸಲ ಚರ್ಚೆಗಳಾದವು. ವೈಸ್‌ರಾಯರ ಶಬ್ದಗಳಲ್ಲಿ, "ಈ ಚರ್ಚೆಗಳಿಗೆ ನಾನು, ಒಂದು ಒಳ್ಳೆಯ ಕೆಲಸವನ್ನು ಮಾಡುವಂತೆ ಇನ್ನೊಬ್ಬರ ಮನವನ್ನು ಒಲಿಸುವದರಲ್ಲಿ, ನನಗಿದ್ದ ಸಾಮರ್ಥ್ಯವನ್ನೆಲ್ಲ ಒಟ್ಟುಗೂಡಿಸಿಕೊಂಡು ಹೋಗುತ್ತಿದ್ದೆ. ಮನವೊಲಿಸುವಂತೆ ಮಾತನಾಡುವುದರಲ್ಲಿ ನನಗೆ ಪರಿಣತಿ ಇಲ್ಲದಿದ್ದರೂ ನಿಜ ಸ್ಥಿತಿಯನ್ನು ಅತ್ಯಂತ ಅನುಕೂಲಕರವಾದ ದೃಷ್ಟಿಕೋನದಿಂದ ವಿವರಿಸುವ ಕಲೆ ನನಗೆ ಸಾಧಿಸಿತ್ತು. ನನಗೆ ಗೊತ್ತಿದ್ದ ಎಲ್ಲ ತಂತ್ರಗಳನ್ನೂ ಉಪಯೋಗಿಸಿದೆ. ನನಗೆ ಸಾಧ್ಯವಿದ್ದ ಎಲ್ಲ ರೀತಿಗಳಿಂದಲೂ ಜಿನ್ನಾರಿಗೆ ವಿಭಜನೆ ಬೇಡವೆಂದು ವಿನಂತಿಸಿಕೊಂಡೆ." ಜಿನ್ನಾ ಬಗ್ಗಲಿಲ್ಲ. ಪಾಕಿಸ್ತಾನದ ದುಸ್ಸಾಧ್ಯ ಕನಸು ನನಸಾಗಲೇಬೇಕಿತ್ತು.

ಎರಡು ಕಾರಣಗಳಿಂದಾಗಿ ಪರಿಸ್ಥಿತಿಯನ್ನು ತಮ್ಮ ಲೆಕ್ಕದಂತೆಯೇ ರೂಪಿಸಲು ಜಿನ್ನಾರಿಗೆ ಸಾಧ್ಯವಾಗಿತ್ತು. ಮುಸ್ಲಿಂ ಲೀಗಿನ ಏಕಮೇವ ಸರ್ವಾಧಿಕಾರಿ ನಾಯಕತ್ವ ಅವರಿಗಿತ್ತು. ಅವರ ಕೆಳಗಿನವರು ರಾಜಿಗೆ ಸಿದ್ಧರಿದ್ದಿರಬಹುದು, ಆದರೆ ಜಿನ್ನಾ ಇರುವವರೆಗೆ ಅವರು ತೆಪ್ಪಗಿರಬೇಕಿತ್ತು. ಅದಕ್ಕೂ ಮಹತ್ವದ ಕಾರಣವೆಂದರೆ ಎಂಟು ತಿಂಗಳ ಹಿಂದೆ ಕಲ್ಕತ್ತೆಯಲ್ಲಾದ ಹಿಂಸಾಚಾರದ ನೆನಪು ಇನ್ನೂ ಹಸಿಯಾಗಿಯೇ ಇತ್ತು. ೧೯೪೬ರ ಆಗಸ್ಟ್ ೧೬ರನ್ನು ಮುಸ್ಲಿಂ ಲೀಗು ನೇರ ಕಾರ್ಯಾಚರಣೆಯ ದಿನವಾಗಿ ಘೋಷಿಸಿತ್ತು. ಬ್ರಿಟಿಶರು ಮತ್ತು ಕಾಂಗ್ರೆಸ್ಸಿಗರಿಗೆ ತಾವು ಪಾಕಿಸ್ತಾನವನ್ನು 'ನೇರ ಕಾರ್ಯಾಚರಣೆ'ಯಿಂದ ಪಡೆಯಲೂ ಹಿಂಜರಿಯುವುದಿಲ್ಲವೆಂದು ಮನವರಿಕೆ ಮಾಡಿಕೊಡಲು ಅಂದು ಮುಸ್ಲಿಮರು ಗುಂಪಾಗಿ ತಮ್ಮ ಸ್ಲಮ್ (Slum)ಗಳಿಂದ ಹೊರಬಂದರು. ಬಡಿಗೆ, ಕಬ್ಬಿಣದ ಸಲಾಕೆ, ಗುದ್ದಲಿ, ಹೀಗೆ ತಲೆ ಒಡೆಯಲು ಅನುಕೂಲವಾದ ಯಾವುದೇ ಆಯುಧವನ್ನು ಹಿಡಿದು ಬಂದ ದೊಂಬಿಗಾರರು ಜನವಸತಿ ವಿಪರೀತವಾಗಿದ್ದ ಕಲ್ಕತ್ತೆಯ ಸ್ಲಮ್‌ಗಳಲ್ಲಿ ಕೈಗೆ ಸಿಕ್ಕ ಹಿಂದುಗಳನ್ನು ಜಜ್ಜಿ ರಟಾರಕ್ಕೆಸೆದರು. ಆನಂತರ ಹಿಂದೂಗಳೂ ಪ್ರತೀಕಾರ ಕೈಕೊಂಡರು. ಹಿಂಸಾಚಾರ ಎಷ್ಟು ಅಮಾನುಷವಾಗಿತ್ತೆಂದರೆ ಹುಗಳಿ ನದಿಯಲ್ಲಿ ಹೆಣಗಳು ಸಾಲುಸಾಲಾಗಿ ತೇಲಿಕೊಂಡು ಸಮುದ್ರದ ಪಾಲಾದುವು. ಅಲ್ಲದೆ ನಗರದಲ್ಲಿ ೬೦೦೦ ಹೆಣಗಳು ರಸ್ತೆಗಳಲ್ಲಿ ಬಿದ್ದಿದ್ದುವು.

ಶೀಘ್ರವಾಗಿ ನಿರ್ಣಯಕ್ಕೆ ಬರುವ ಅಗತ್ಯ

ವನ್ನು ಇಬ್ಬರೂ ಒಪ್ಪಿಕೊಂಡೇ ಬಿಟ್ಟಿದ್ದರು. ಜಿನ್ನಾರ ಪ್ರಕಾರ, "ಭಾರತವು ಸಂಧಾನದ ಪರಿಸ್ಥಿತಿಗಿಂತ ಬಲು ದೂರ ಬಂದಿತ್ತು. 'ಶಸ್ತ್ರ ಚಿಕಿತ್ಸೆ'ಯೊಂದೇ ಈಗುಳಿದ ದಾರಿ. ಇಲ್ಲದಿದ್ದರೆ ಭಾರತದ ಸರ್ವನಾಶ ಖಂಡಿತ."

ಆದರೆ ವಿಭಜನೆಯೂ ರಕ್ತಪಾತಕ್ಕೆಡೆ ಮಾಡಿಕೊಡದಿದ್ದೀತೆ ಎಂದು ಮೌಂಟ್‌ಬ್ಯಾಟನ್ ಪ್ರಶ್ನಿಸಿದರು. ಅದಕ್ಕೂ ಜಿನ್ನಾರ ಉತ್ತರ ಸಿದ್ಧವಿತ್ತು. 'ಶಸ್ತ್ರಚಿಕಿತ್ಸೆ' ಮುಗಿದ ಮೇಲೆ ಎಲ್ಲ ತೊಂದರೆಗಳೂ ನಿಂತು ಎರಡೂ ಭಾಗಗಳು ಶಾಂತಿಯುತ ಸಹಜೀವನ ನಡೆಸುವವು. ತಮ್ಮ ಕೋರ್ಟಿನ ಪ್ರಕರಣವೊಂದನ್ನು ಜಿನ್ನಾ ಉದಾಹರಿಸಿದರು : ಇಬ್ಬರು ಸಹೋದರರಲ್ಲಿ ತಂದೆಯ ಆಸ್ತಿಗಾಗಿ ಘನಘೋರ ಕದನ ನಡೆಯಿತು. ಆದರೆ ಕೋರ್ಟು ಅವರ ಕೇಸನ್ನು ಬಗೆಹರಿಸಿದ ಎರಡು ವರ್ಷದಲ್ಲಿಯೇ ಇಬ್ಬರೂ ನಿಕಟ ಮಿತ್ರರಾಗಿದ್ದರು. ಭಾರತದಲ್ಲಿಯೂ ಹೀಗಾಗುವುದು ಖಂಡಿತ. ಇದು ಜಿನ್ನಾರ ವಾದ.

ಭಾರತದ ಮುಸ್ಲಿಮರು ತಮ್ಮ 'ಪ್ರತ್ಯೇಕವಾದ ಸಂಸ್ಕೃತಿ ಮತ್ತು ನಾಗರಿಕತೆ, ಭಾಷೆ ಮತ್ತು ಸಾಹಿತ್ಯ, ಕಲೆ ಮತ್ತು ಶಿಲ್ಪ, ಕಾನೂನು ಮತ್ತು ನೈತಿಕ ಆಚಾರ, ಇತಿಹಾಸ ಮತ್ತು ಸಂಪ್ರದಾಯ'ಗಳ ಕಾರಣ ಪ್ರತ್ಯೇಕರೇ ಆಗಿದ್ದರು. "ಹಿಂದೂ ಮತ್ತು ಮುಸ್ಲಿಮರಲ್ಲಿ ಸಾಮಾನ್ಯವಾಗಿರುವ ಒಂದೇ ಅಂಶವೆಂದರೆ ಬ್ರಿಟಿಶರ ಗುಲಾಮಗಿರಿ ಮಾತ್ರ!" ಎಂದು ಜಿನ್ನಾ ಸಾರಿದರು.

ಬರುಬರುತ್ತ ಅವರಿಬ್ಬರ ವಾದಗಳೆಲ್ಲವೂ ಗೊತ್ತುಗುರಿಯಿಲ್ಲದೇ ಚಕ್ರಾಕಾರವಾಗಿ ಸುತ್ತಲಾರಂಭಿಸಿದವು. ಜಿನ್ನಾರಿಗೆ ವಿಭಜನೆ ಸ್ವಾಭಾವಿಕವೆನಿಸಿತ್ತು.

ಮೌಂಟ್‌ಬ್ಯಾಟನ್ನರು ಒಪ್ಪಲಿಲ್ಲ. ಭಾರತದ ಬಹುಸಂಖ್ಯಾತ ಹಿಂದುಗಳು ಅಲ್ಪಸಂಖ್ಯಾತ ಮುಸ್ಲಿಮರನ್ನು ಆಳಬಾರದೆಂದ ಮೇಲೆ ಪಂಜಾಬ, ಬಂಗಾಲಗಳಲ್ಲಿನ ಅಲ್ಪಸಂಖ್ಯಾತ ಹಿಂದೂಗಳನ್ನು ಮುಸ್ಲಿಂ ರಾಷ್ಟ್ರಕ್ಕೆ ಹೇಗೆ ಸೇರಿಸಬಹುದು ? ಜಿನ್ನಾರ ತರ್ಕವನ್ನೇ ಮುಂದುವರಿಸಿದರೆ ಪಂಜಾಬ ಮತ್ತು ಬಂಗಾಲಗಳನ್ನೂ ಮತ್ತೆ ವಿಭಜಿಸಬೇಕಾದೀತು.

ಜಿನ್ನಾ ಪ್ರತಿಭಟಿಸಿದರು. ಅವರಿಗೆ ಅದರ ನಂತರ ಸಿಗುವುದು 'ಗೆದ್ದಲು ತಿಂದ' ಪಾಕಿಸ್ತಾನ ಮಾತ್ರ. ಮೌಂಟ್‌ಬ್ಯಾಟನ್ನರಿಗೋ ಯಾವ ಪಾಕಿಸ್ತಾನವನ್ನೂ ಕೊಡುವುದು ಬೇಕಿರಲಿಲ್ಲ. ಜಿನ್ನಾರಿಗೆ 'ಗೆದ್ದಲು ತಿಂದ' ಪಾಕಿಸ್ತಾನ ಬೇಡವಾಗಿದ್ದರೆ ಅವರು ಪಾಕಿಸ್ತಾನದ ವಿಚಾರವನ್ನೇ ಬಿಟ್ಟುಬಿಡಬಹುದೆಂದು ಸೂಚಿಸಿದರು !

"ಆದರೆ ನಿಮಗೆ ಇದು ತಿಳಿಯಲಾರದು. ಯಾವನೇ ಆಗಲಿ ಹಿಂದೂ ಅಥವಾ ಮುಸ್ಲಿಮನಾಗುವ ಮೊದಲು ಪಂಜಾಬಿ ಅಥವಾ ಬಂಗಾಲಿಯಾಗಿರುತ್ತಾನೆ. ಅವರಿಗೆಲ್ಲ ಒಂದೇ ಇತಿಹಾಸ, ಭಾಷೆ, ಸಂಸ್ಕೃತಿ ಮತ್ತು ಅರ್ಥವ್ಯವಸ್ಥೆ ಇದೆ. ಅವರನ್ನು ವಿಭಜಿಸಿದರೆ ಕೊನೆಯಿಲ್ಲದ ಅನರ್ಥಕ್ಕೆ ಎಡೆಯಾದೀತು." ಜಿನ್ನಾ ವಾದಿಸಿದರು.

"ನಾನು ಸಂಪೂರ್ಣ ಒಪ್ಪುತ್ತೇನೆ," ಎಂದರು ಮೌಂಟ್‌ಬ್ಯಾಟನ್.

"ಖಂಡಿತ ?"

"ಹೌದು. ಯಾರೇ ಆಗಲಿ ಹಿಂದೂ ಅಥವಾ ಮುಸ್ಲಿಮನಾಗುವ ಮುನ್ನ ಪಂಜಾಬಿ ಅಥವಾ ಬಂಗಾಲಿಯಿರುತ್ತಾನಷ್ಟೇ ಅಲ್ಲ, ಎಲ್ಲಕ್ಕೂ ಮೊದಲು ಭಾರತೀಯನೂ ಆಗಿರುತ್ತಾನೆ. ಭಾರತದ ಐಕ್ಯಕ್ಕೆ ಪ್ರತಿ ಹೇಳಲಾಗದ ವಾದವನ್ನು ನೀವೇ ಕೊಟ್ಟಿದ್ದೀರಿ," ಎಂಬುದಾಗಿ ಕಾಯದೆ ಆಜು ಜಿನ್ನಾರ ಬಾಯಿ ಮುಚ್ಚಿಸಲೆಂದು ಮೌಂಟ್‌ಬ್ಯಾಟನ್ ಉತ್ತರಿಸಿದರು.

"ಆದರೆ ನಿಮಗೆ ಯಾವುದೂ ಅರ್ಥವಾಗುತ್ತಿಲ್ಲ," ಎನ್ನುತ್ತಿದ್ದರು ಜಿನ್ನಾ. ವಾದ ಮುಂದುವರಿದು ಕೊನೆಯಿಲ್ಲದಂತೆ ಸಾಗುತ್ತಿತ್ತು.

ಜಿನ್ನಾರ ಅಮಿತ ಶಾಠ್ಯವನ್ನು ನೋಡಿ ಮೌಂಟ್‌ಬ್ಯಾಟನ್ ದಂಗುಬಡಿದಿದ್ದರು.

"ಅವರಿಗೆ ನನ್ನ ವಾದ ಅರ್ಥವಾಗುತ್ತಿರ-

ಲಿಲ್ಲವೆಂದಲ್ಲ. ಆಗುತ್ತಿತ್ತು. ಆದರೂ ಅವರ ವಿಚಾರ ಬದಲಾಗುತ್ತಿರಲಿಲ್ಲ." ಎಂದು ಮೌಂಟ್‌ಬ್ಯಾಟನ್ ಹೇಳುತ್ತಿದ್ದರು.

ಅವರ ಮಾತುಕತೆಗಳು ಎಪ್ರಿಲ್ ೧೦ರಂದು ಕೊನೆಯ ಹಂತಕ್ಕೆ ಬಂದವು. ಎರಡು ತಾಸು ಮೌಂಟ್‌ಬ್ಯಾಟನ್ ಜಿನ್ನಾರೊಡನೆ ವಾದಿಸಿದರು, ಪುಸಲಾಯಿಸಿದರು, ಬೇಡಿಕೊಂಡರು. ಅಖಂಡ ಭಾರತದ ಭವ್ಯತೆಯ ಚಿತ್ರವನ್ನೇ ಜಿನ್ನಾರ ಮುಂದೆ ತಂದು ನಿಲ್ಲಿಸಿದರು. ೪೦ ಕೋಟಿ ಜನರ ಮಹಾನ್ ರಾಷ್ಟ್ರ ಜಗತ್ತಿನ ಅತ್ಯಂತ ಬಲಶಾಲೀ ರಾಷ್ಟ್ರಗಳಲ್ಲಿ ಒಂದಾದೀತು. ಜಿನ್ನಾರವರು ಅದನ್ನು ಚೂರು ಮಾಡಿ, ಮೂರನೇ ದರ್ಜೆಯ ರಾಷ್ಟ್ರದ ಸ್ಥಾನಕ್ಕೆ ತಮ್ಮ ಉಪಖಂಡವನ್ನು ತಂದಿಡಬಯಸುತ್ತಾರೆಯೇ,....?

ಇಲ್ಲ, ಜಿನ್ನಾ ತಮ್ಮ ಮೊಂಡುತನ ಬಿಡಲಿಲ್ಲ. ವಿಷಾದದಿಂದ ಮೌಂಟ್‌ಬ್ಯಾಟನ್ನರು ಜಿನ್ನಾ ಒಬ್ಬ ಮನೋರೋಗಿ ಎಂದು ತೀರ್ಮಾನಿಸಿದರು. ಜಿನ್ನಾ ಹೋದ ಮೇಲೆ ಅವರು ಒಬ್ಬರೇ ತಮ್ಮ ಕೋಣೆಯಲ್ಲಿ ಕುಳಿತು ವಿಚಾರ ಮಾಡಿದರು. ವಿಚಾರ ಮಾಡಿದಷ್ಟೂ ಜಿನ್ನಾರ ಬೇಡಿಕೆಯನ್ನು ಮನ್ನಿಸಲೇಬೇಕಾದೀತೆಂಬ ನಿರ್ಣಯಕ್ಕೆ ಬರಬೇಕಾಯಿತು. ಭಾರತದ ನಾಯಕರನ್ನು ವಶೀಕರಿಸಿಕೊಳ್ಳುವ ತಮ್ಮ ಯೋಜನೆ ಜಿನ್ನಾರೊಬ್ಬರ ಮೇಲೆ ವಿಫಲವಾಗಿತ್ತೆಂದು ಅವರು ಒಪ್ಪಿಕೊಂಡರು. ಆಕಾಶ ಕಡಿದುಕೊಂಡು ಬೀಳುವ ತನಕ ತಾವು ಜಿನ್ನಾರೊಡನೆ ವಾದ ಹಾಕಿದರೂ ಅದು ವ್ಯರ್ಥವಾದೀತೆಂದು ಅವರಿಗೆ ಖಚಿತವಾಗಿತ್ತು. ಅದಲ್ಲದೇ ಅವರ ಮೊದಲ ಕರ್ತವ್ಯ ತಮ್ಮ ಸ್ವದೇಶದ ಕಡೆಗೆ ಇತ್ತು. ಭಾರತದ ಐಕ್ಯವನ್ನು ಕಾಪಾಡುವ ಆಸೆ ಅವರಿಗೆ ಬಲವಾಗಿತ್ತು. ಆದರೆ ಅದರಿಂದಾಗಿ ಅರಾಜಕತೆ, ಆಂತರಿಕ ಯುದ್ಧಗಳಿಂದ ನುಚ್ಚು ನೂರಾಗುತ್ತಿರುವ ಭಾರತದಲ್ಲಿ ಬ್ರಿಟನ್ ಅಸಹಾಯವಾಗಿ ಸಿಲುಕಬಾರದಷ್ಟೇ?

ನಿರ್ಣಯ ಯಾವುದೇ ಇರಲಿ ಅದನ್ನು ಅತ್ಯಂತ ಶೀಘ್ರವಾಗಿ ಕೈಕೊಳ್ಳಬೇಕಿತ್ತು. ಸೈನ್ಯದಲ್ಲಿಯ ಅನುಭವದಿಂದಾಗಿ ಅವರಿಗೆ ನಿರ್ಣಯಗಳನ್ನು ಶೀಘ್ರವಾಗಿ ತೆಗೆದುಕೊಳ್ಳುವುದು ರೂಢಿಯಾಗಿ ಬಿಟ್ಟಿತ್ತು. (ಮುಂದಿನ ವಿಮರ್ಶಕರು ಅವರು ಒಬ್ಬ ಕುಶಲ ರಾಜನೀತಿಜ್ಞನ ಬದಲು ದುಡುಕಿನ ಸೈನಿಕನಂತೆ ವರ್ತಿಸಿದರೆಂದು ಕಟುವಾಗಿ ಟೀಕಿಸಿದ್ದುದೂ ಇದೆ) ಆದರೆ ತಾವು ಜಿನ್ನಾರೊಡನೆ ವ್ಯರ್ಥ ವಾದಿಸುವಷ್ಟರಲ್ಲಿ ಇಡೀ ಭಾರತದ ಮೇಲೆಯೇ ಆಕಾಶ ಕಡಿದುಕೊಂಡು ಬೀಳಬಾರದಲ್ಲ ಎಂಬ ಚಿಂತೆಯಿಂದ ಮೌಂಟ್‌ಬ್ಯಾಟನ್ ವಿಭಜನೆಯೇ ಪಾರಾಗುವ ದಾರಿ ಎಂಬ ನಿರ್ಣಯಕ್ಕೆ ಬಂದರು.

ಮರುದಿನವೇ ತಮ್ಮ ಚೀಫ್ ಆಫ್ ಸ್ಟಾಫ್ ಆಗಿದ್ದ ಲಾರ್ಡ್ ಇಸ್ಮೆಯವರನ್ನು ಕರೆದು ಭಾರತದ ವಿಭಜನೆಗಾಗಿ ಒಂದು ಯೋಜನೆಯನ್ನು ತಯಾರಿಸಲು ಸೂಚಿಸಿದರು.

*

ಟೇಬಲ್ಲಿನ ಸುತ್ತ ಕುಳಿತಿದ್ದ ಹನ್ನೊಂದು ಪ್ರಾಂತಗಳ ಗವರ್ನರರು ಕಾತುರದಿಂದ ಸಭೆಯ ಪ್ರಾರಂಭಕ್ಕಾಗಿ ಕಾಯುತ್ತಿದ್ದರು. ೪೬ ವರ್ಷದ ಮೌಂಟ್‌ಬ್ಯಾಟನ್ ಅವರಲ್ಲಿ ಅತೀ ಚಿಕ್ಕವರಾಗಿದ್ದರಲ್ಲದೇ ಉಳಿದವರೊಡನೆ ಹೋಲಿಸಿದಾಗ ಭಾರತಕ್ಕೆ ಸಂಪೂರ್ಣ ಹೊಸಬರಾಗಿದ್ದರು. ಆ ಗವರ್ನರರಲ್ಲಿ ಹೆಚ್ಚಿನವರ ಜೀವನ ಭಾರತದಲ್ಲೇ ಕಳೆದಿತ್ತು. ಈ ಹಳೆಯ ಹುಲಿಗಳು ತಮ್ಮ ನಡುವೆ ಬಂದಿದ್ದ ಈ ಹೊಸಬನ ಯೋಜನೆಗಳನ್ನು ನೋಡಿ ಮೂಗು ಮುರಿಯುವರೆನ್ನುವುದು ನಿರೀಕ್ಷಿತವೇ ಆಗಿತ್ತು. ಪ್ರಾರಂಭದಲ್ಲಿ ಮೌಂಟ್‌ಬ್ಯಾಟನ್ ಎಲ್ಲರಿಗೂ ತಮ್ಮ ಪ್ರಾಂತದ ಬಗ್ಗೆ ವರದಿ ಮಾಡಲು ಕೇಳಿಕೊಂಡರು. ಎಂಟು ಪ್ರಾಂತಗಳಲ್ಲಿ ಪರಿಸ್ಥಿತಿ ಅತ್ಯಂತ ಗಂಭೀರವಾಗಿದ್ದರೂ ನಿಯಂತ್ರಣದಲ್ಲಿತ್ತು. ಉಳಿದ ಮೂರು ಕಡೆಗಳಲ್ಲಿ ಮಾತ್ರ ತೀರ ಹದಗೆಟ್ಟಿತ್ತು.

ವಾಯುವ್ಯ ಗಡಿ ಪ್ರಾಂತದ ಗವರ್ನರ್ ಸರ್ ಓಲಾಫ್ ಕಾರೋ ತುಂಬ ದಣಿದಿದ್ದರು. ರಾತ್ರಿಯಿಡೀ ಪ್ರಾಂತದ ನಾನಾ ಮೂಲೆಗಳಿಂದ

ಹೊಸ ಹೊಸ ಗಲಭೆಗಳ ವರದಿಗಳು ಅವರನ್ನು ಕಂಗೆಡಿಸಿದ್ದವು. ತಮ್ಮ ಪ್ರಾಂತವು ಸಂಪೂರ್ಣ ತಮ್ಮ ಕೈಬಿಡುತ್ತಿದೆ ಎಂದು ಅವರು ಎಚ್ಚರಿಕೆ ನೀಡಿದರು. ಹಾಗೇನಾದರೂ ಆದಲ್ಲಿ, ಇಂಥದೊಂದು ಅವಕಾಶಕ್ಕಾಗಿ ಹಾತೊರೆದು ಕುಳಿತಿದ್ದ ಪಠಾಣರು ಭಾರತದಲ್ಲಿ ನುಗ್ಗುವುದೂ ಖಂಡಿತ. "ನಾವು ಬಹಳ ಎಚ್ಚರಿಕೆಯಿಂದ ಕಾರ್ಯ ಸಾಧಿಸದಿದ್ದರೆ ಅಂತಾರಾಷ್ಟ್ರೀಯ ಬಿಕ್ಕಟ್ಟು ನಮ್ಮ ಕೊರಳಿಗೆ ಬೀಳುವುದು ನಿಸ್ಸಂಶಯ."

ಪಂಜಾಬಿನ ಗವರ್ನರ್ ಸರ್ ಜೆಂಕಿನ್ಸರ ವರದಿಯೂ ಅಷ್ಟೇ ಗಂಭೀರವಾಗಿತ್ತು. ಪಂಜಾಬಿನ ಮೇಲೆ ಅವರ ಪ್ರೇಮ ಎಷ್ಟೆಂದರೆ ಅವರಿಗೆ, "ಭಾರತದಲ್ಲಿ ಇತರ ಪ್ರಾಂತಗಳಿವೆ ಎನ್ನುವುದೂ ಮರೆತುಹೋಗಿತ್ತು. ಇಂದು ಅವರೂ, ಭಾರತದ ಬಗ್ಗೆ ಯಾವ ನಿರ್ಣಯ ಕೈಕೊಂಡರೂ ಪಂಜಾಬಿನಲ್ಲಿ ಹಿಂಸಾಚಾರವಾಗುವುದು ಖಂಡಿತವೆಂದು ಸಾರಿದ್ದರು. "ವಿಭಜನೆಯಾದರೆ ಪಂಜಾಬ ಕೋಪಾಗ್ನಿಯಲ್ಲಿ ಉಳಿದೀತೆನ್ನುವ ಭಯ ಮೂರ್ಖತನದ್ದೇ, ಏಕೆಂದರೆ ಪಂಜಾಬ ಈಗಾಗಲೇ ಉರಿಯುತ್ತಿದೆ." ಕೊನೆಯದಾಗಿ ಬಂಗಾಲದ ಗವರ್ನರರ ವರದಿಯನ್ನು ಅನಾರೋಗ್ಯ ನಿಮಿತ್ತದಿಂದ ಅವರ ಅನುಪಸ್ಥಿತಿಯಲ್ಲಿ ಓದಲಾಯಿತು. ಗಡಿ ಪ್ರಾಂತ ಮತ್ತು ಪಂಜಾಬಗಳಷ್ಟೇ ಅದೂ ಗಂಭೀರವಾಗಿತ್ತು. ವರದಿಗಳೆಲ್ಲ ಮುಗಿದಾಗ ಪ್ರತಿಯೊಬ್ಬ ಗವರ್ನರನೆದುರಿಗೆ 'ಬಾಲ್ಕನೀಕರಣ ಯೋಜನೆ' (Plan Balkanization) ಎಂಬ ಶೀರ್ಷಿಕೆಯ ಕಾಗದಗಳನ್ನಿಡಲಾಯಿತು. ಭಾರತದ ವಿಭಜನೆಗೆ ಲಾರ್ಡ್ ಇಸ್ಮೇ ತಯಾರಿಸಿದ ಯೋಜನೆಯದು. ಓದುತ್ತಿದ್ದಂತೆಯೇ ಎಲ್ಲ ಗವರ್ನರರಿಗೂ ಆಘಾತವಾಯಿತು. ಏಕೆಂದರೆ ಅವರೆಲ್ಲ ಭಾರತದ ಒಕ್ಕಟ್ಟಿನ ಕಟ್ಟಾ ಅಧ್ವರ್ಯುಗಳಾಗಿದ್ದರು. ಈಗ ಅವರ ಸರಕಾರ ಮುರಿಯಲಿದ್ದ ಸಂಬಂಧಗಳನ್ನು ಭದ್ರಗೊಳಿಸಲು ಅವರಲ್ಲಿ ಹೆಚ್ಚಿನವರು ತಮ್ಮ ಜೀವಮಾನವೆಲ್ಲ ಶ್ರಮಿಸಿದ್ದರು.

ಅವಿಭಜಿತ ಭಾರತದ ಆಶೆಯನ್ನು ತಾವು ಇನ್ನೂ ಬಿಟ್ಟುಕೊಟ್ಟಿಲ್ಲವೆಂದು ಮೌಂಟ್‌ಬ್ಯಾಟನ್ ನುಡಿದರು. ಅದಕ್ಕಾಗಿ ಬ್ರಿಟನ್ ಸಾಧ್ಯವಿದ್ದ ಎಲ್ಲ ಪ್ರಯತ್ನಗಳನ್ನೂ ಮಾಡಿದೆಯೆಂದು ಜಗತ್ತಿಗೆ ಸಾರಿಹೇಳುವುದು ಅವಶ್ಯವಾಗಿತ್ತು. ಅವರ ಸ್ವಂತ ಅಭಿಪ್ರಾಯ, ಪಾಕಿಸ್ತಾನದ ಕಲ್ಪನೆಯೇ 'ಅಸಂಭಾವ್ಯವಾಗಿರುವುದರಿಂದ ತನ್ನ ಅವಗುಣಗಳ ಮೂಲಕ ತಂತಾನೇ ಅವನತಿಗೆ ಬರಲು ಪಾಕಿಸ್ತಾನಕ್ಕೆ ಅವಕಾಶ ಕೊಡಬೇಕು. ಅಂದರೆ, ಮುಸ್ಲಿಂ ಲೀಗು ಗೌರವಪೂರ್ವಕ ಭಾರತಕ್ಕೆ ತಿರುಗಿ ಶರಣು ಹೋಗುವುದು' ಎಂಬುದಾಗಿತ್ತು.

ಎಲ್ಲ ಗವರ್ನರರೂ ವಿಭಜನೆಯ ಬಗ್ಗೆ ಅತ್ಯಂತ ನಿರುತ್ಸಾಹ ತಾಳಿದ್ದರೂ ಯಾರೂ ಅದನ್ನು ವಿರೋಧಿಸಲೂ ಇಲ್ಲ. ಏಕೆಂದರೆ ಅವರಿಗೂ ಬೇರೆ ಯಾವ ಪರಿಹಾರವೂ ಗೊತ್ತಿರಲಿಲ್ಲ!

ಅದೇ ಸಂಜೆ ಒಂದು ಔಪಚಾರಿಕ ಔತಣ ಕೊಟದೊಡನೆ ಗವರ್ನರರು ತಮ್ಮ ಭೆಟ್ಟಿಯನ್ನು ಮುಕ್ತಾಯಗೊಳಿಸಿದರು. ಊಟದ ಕೊನೆಯಲ್ಲಿ ಮದ್ಯಪಾನ ಮಾಡುವಾಗ, ಭಾರತದ ವೈಸ್‌ರಾಯನೊಬ್ಬ ತನ್ನ ಗವರ್ನರರಿಗೆ ಬ್ರಿಟಿಶ್ ಸಾರ್ವಭೌಮನ ಹೆಸರಿನಲ್ಲಿ ಸ್ವಸ್ತಿಪಾನ ಮಾಡುವುದು ಇದೇ ಕೊನೆಯ ಸಲ ಎಂಬ ಅರಿವು ಅವರಲ್ಲಿ ಯಾರಿಗೂ ಇದ್ದಂತಿರಲಿಲ್ಲ.

*

ವೈಸ್‌ರಾಯರನ್ನು ಹೊತ್ತಿದ್ದ ವಿಮಾನ ಪೇಶಾವರದ ಹತ್ತಿರ ಬರುತ್ತಿದ್ದಂತೆ ಅದರ ಪ್ರವಾಸಿಕರಿಗೆ ಒಮ್ಮೆಲೇ ಅಗಾಧ ಜನಜಂಗುಳಿ ತಮ್ಮ ಸ್ವಾಗತಕ್ಕೆ ನಿಂತದ್ದು ಗೋಚರವಾಯಿತು. ಅರಾಜಕತೆ ತೀವ್ರವಾಗಿದ್ದ ಎರಡು ಪ್ರಾಂತಗಳನ್ನು ಸ್ವತಃ ಭೆಟ್ಟಿಮಾಡಿ ಪರಿಸ್ಥಿತಿಯನ್ನು ಪರಿಶೀಲಿಸಲು ಮೌಂಟ್‌ಬ್ಯಾಟನ್ ನಿರ್ಧರಿಸಿದ್ದರು. ಗಡಿ ಪ್ರಾಂತಕ್ಕೆ ಅವರು ಬರುವ ಸುದ್ದಿ ಕಾಳ್ಗಿಚ್ಚಿನಂತೆ ಹಬ್ಬಿತ್ತು. ೨೪ ಗಂಟೆಗಳಲ್ಲಿ ಮುಸ್ಲಿಂ ಲೀಗಿನ ಆಣತಿಯಂತೆ ಪ್ರಾಂತದ ಮೂಲೆ ಮೂಲೆಗಳಿಂದ ಸಾವಿರಗಟ್ಟಲೆ

ಪಠಾಣರು ಕೈಗೆ ಸಿಕ್ಕ ವಾಹನವನ್ನೇರಿ ಪೇಶಾವರಕ್ಕೆ ಬಂದಿದ್ದರು. ಮೊದಲೇ ಎಲ್ಲರಿಗೂ ದಣಿವಾಗಿತ್ತು. ಮೇಲೆ ಬಿಸಿಲು, ಧೂಳು ತುಂಬಿದ ಹವೆ ಇವುಗಳಿಂದ ಪಠಾಣರ ತಾಳ್ಮೆ ಕ್ಷಣಕ್ಷಣಕ್ಕೂ ಕೆಡುತ್ತ ಬಂದಿತ್ತು. ಒಂದು ಲಕ್ಷ ಕೆರಳಿದ ಪಠಾಣರ ಆ ಜನಸ್ತೋಮ ಆಗಲೇ ಉನ್ಮಾದಾವಸ್ಥೆಯನ್ನು ತಲುಪಿತ್ತು. ವೈಸ್‌ರಾಯರ ರಕ್ಷಣೆಯ ಬಗ್ಗೆ ಚಿಂತೆಗೊಳಗಾದ ಗವರ್ನರರು ಕಾರಿನಲ್ಲಿ ವೈಸ್‌ರಾಯ್, ಅವರ ಪತ್ನಿ ಮತ್ತು ಮಗಳನ್ನು ಕೂಡಿಸಿ ತಕ್ಷಣವೇ ಗವರ್ನರರ ನಿವಾಸಕ್ಕೆ ಕಳಿಸುವ ಹವಣಿಕೆಯಲ್ಲಿದ್ದರು. ಆದರೆ ಜನಜಂಗುಳಿಯು ನಾಮಮಾತ್ರದ ಪೋಲೀಸ್ ದಲವನ್ನು ಬದಿಗೊತ್ತಿ ಗವರ್ನರರ ನಿವಾಸಕ್ಕೆ ಧಾವಿಸಲಾರಂಭಿಸಿತು. ಒಂದು ವೇಳೆ ಅವರು ಭವನವನ್ನು ಸುತ್ತುಗಟ್ಟಿದರೆ ಅದನ್ನು ಕಾಯುತ್ತಿದ್ದ ಸೈನಿಕರಿಗೆ ಗುಂಡು ಹಾರಿಸದೆ ಗತ್ಯಂತರವಿಲ್ಲದಾಗುವುದು. ಮುಂದಿನ ಅನಾಹುತವು ವೈಸ್‌ರಾಯ್, ಅವರ ಪತ್ನಿ, ಮತ್ತು ಭಾರತದ ಸಮಸ್ಯಾ ಪರಿಹಾರದ ಆಶೆ–ಎಲ್ಲವನ್ನೂ ಒಟ್ಟಿಗೇ ಮಣ್ಣುಗೂಡಿಸಬಹುದಾಗಿತ್ತು.

ಗವರ್ನರರಿಗೆ ಒಂದೇ ಉಪಾಯವುಳಿದಿತ್ತು, ಸ್ವತಃ ಮೌಂಟ್‌ಬ್ಯಾಟನ್ನರೇ ಗುಂಪಿನ ಎದುರು ನಿಂತರೆ? ಬಹುಶಃ ಜನ ಶಾಂತರಾದಾರು ಎಂದವರು ಸೂಚಿಸಿದರು. ಪೋಲಿಸ್ ಅಧಿಕಾರಿಗಳ ಉಗ್ರ ಪ್ರತಿಭಟನೆಯನ್ನೂ ಲೆಕ್ಕಿಸದೇ ಮೌಂಟ್‌ಬ್ಯಾಟನ್ ಒಪ್ಪಿದರು. ಪೋಲಿಸರನ್ನು ಇನ್ನೂ ಕಂಗೆಡಿಸುವಂತೆ ಲೇಡಿ ಮೌಂಟ್‌ಬ್ಯಾಟನ್ನರೂ ಹೊರಟು ನಿಂತರು. ಕೆಲ ನಿಮಿಷಗಳಲ್ಲಿಯೇ ಜೀಪೊಂದು ವೈಸ್‌ರಾಯ್ ದಂಪತಿಗಳನ್ನೂ ಗವರ್ನರರನ್ನೂ ತಂದು ಉನ್ಮತ್ತ ಪಠಾಣರ ಎದುರು ನಿಲ್ಲಿಸಿತು. ರೋಷದಿಂದ ಗರ್ಜಿಸುತ್ತಿದ್ದ ಒಂದು ಲಕ್ಷದ ಜನಸ್ತೋಮದಿಂದ ಕೇವಲ ಹದಿನೈದು ಅಡಿ ದೂರವಿದ್ದ ಮೌಂಟ್‌ಬ್ಯಾಟನ್ನರಿಗೆ ಒಂದು ಕ್ಷಣ ತಲೆ ತಿರುಗಿದಂತಾಯಿತು. ಆ ಜನರಲ್ಲಿ ಕನಿಷ್ಠ ಇಪ್ಪತ್ತು ಸಾವಿರ ರೈಫಲ್‌ಗಳಾದರೂ ಇದ್ದಾವು! ಅವರಲ್ಲಿ ಯಾರು ಬೇಕಾದರೂ ವೈಸ್‌ರಾಯನನ್ನು ಅಲ್ಲಿಯೇ ಗುಂಡಿಕ್ಕಬಹುದಾಗಿತ್ತು.

ಇತ್ತ ಮೌಂಟ್‌ಬ್ಯಾಟನರಿಗೆ ತಾವೇನು ಮಾಡಬೇಕೆಂದು ತಿಳಿದಿರಲಿಲ್ಲ. ಪುಷ್ತು ಭಾಷೆಯ ಗಂಧವೂ ಅವರಿಗಿರಲಿಲ್ಲ, ದಿಙ್ಮೂಢರಾಗಿ ಅವರು ನಿಂತಿದ್ದಂತೆಯೇ ಅನಿರೀಕ್ಷಿತವಾಗಿ ಗುಂಪು ಶಾಂತವಾಗಿ ಬಿಟ್ಟಿತು. ಈ ಭೆಟ್ಟಿಗೆ ಅನುದ್ದೇಶಿತವಾಗಿ ಮೌಂಟ್‌ಬ್ಯಾಟನ್ ತಮ್ಮ ಮಿಲಿಟರಿ ಉಡುಪಿನಲ್ಲಿ ಬಂದಿದ್ದರು. ಅದರ ಅಚ್ಚ ಹಸಿರು ಬಣ್ಣ ಪಠಾಣರ ಗಮನ ಸೆಳೆದಿತ್ತು; ಹಸಿರು ಮುಸ್ಲಿಮರಿಗೆ ಪವಿತ್ರವಾದ ಬಣ್ಣ; ತಮ್ಮ ಧರ್ಮವನ್ನು ಗೌರವಿಸಲೆಂದೇ ವೈಸ್‌ರಾಯರು ಆ ಉಡುಪನ್ನು ಧರಿಸಿದ್ದರೆಂದು ಭಾವಿಸಿ ಜನ ತಮ್ಮ ರೋಷವನ್ನು ಮರೆತಿದ್ದರು. ಅವರತ್ತ ಕೈ ಬೀಸುತ್ತಿದ್ದ ಮೌಂಟ್‌ಬ್ಯಾಟನ್ ತಮ್ಮ ಪತ್ನಿಗೆ ಉಸುರಿದರು, "ನೀನೂ ಕೈ ಬೀಸು." ನಿಧಾನವಾಗಿ, ಗಾಂಭೀರ್ಯದಿಂದ ಲೇಡಿ ಎಡ್ವಿನಾ ಸಹ ಕೈಯೆತ್ತಿ ಅಲ್ಲಾಡಿಸಿದರು. ಆ ಕ್ಷಣಕ್ಕೆ ಪಠಾಣರ ಭಾವನೆಗಳು ಸಂಪೂರ್ಣ ತಿರುವು ಮುರುವಾಗಿದ್ದವು. ಕೆಲವೇ ಕ್ಷಣಗಳ ಹಿಂದೆ ರೋಷದಿಂದ ಪೂತ್ಕರಿಸುತ್ತಿದ್ದ ಜನ ಈಗ ಒಕ್ಕೊರಲಿನಿಂದ ಕೂಗಿದರು– "ಮೌಂಟ್‌ಬ್ಯಾಟನ್ ಜಿಂದಾಬಾದ್!"

ಪಠಾಣರನ್ನು ಎದುರಿಸಿದ ನಲವತ್ತೆಂಟು ತಾಸುಗಳ ನಂತರ ಮೌಂಟ್‌ಬ್ಯಾಟನ್ ಪಂಜಾಬಿನಲ್ಲಿ ಅಡಿಯಿರಿಸಿದರು. 'ಪಂಜಾಬ ಈಗಾಗಲೇ ಉರಿಯುತ್ತಿದೆ' ಎಂದು ವರದಿಸಿದ್ದ ತಮ್ಮ ಮಾತಿನ ಸತ್ಯಾಂಶವನ್ನು ಖಚಿತಪಡಿಸಲು ಅಲ್ಲಿಯ ಗವರ್ನರರು ಅವರನ್ನು ಕೇವಲ ೨೫ ಮೈಲು ದೂರದ ಕಹುತಾ ಎಂಬ ಹಳ್ಳಿಗೆ ಕರೆದೊಯ್ದರು; ಅಲ್ಲಿ ವೈಸ್‌ರಾಯರಿಗೆ ಭಾರತವನ್ನು ವ್ಯಾಪಿಸುತ್ತಿದ್ದ ಭಯಾನಕತೆಯು ನೇರ ಸಂಪರ್ಕವಾಯಿತು. ಶತಮಾನಗಳಿಂದ ಮಾಡಿದಂತೆ ಹಿಂದಿನ ರಾತ್ರಿಯೂ ಹಳ್ಳಿಯ ಎರಡು ಸಾವಿರ

ಹಿಂದುಗಳು, ಶೀಖರು ಹಾಗೂ ೧೫೦೦ ಮುಸ್ಲಿಮರು ಹಾಯಾಗಿ ನಿದ್ರೆ ಹೋಗಿದ್ದರು. ರಾತ್ರೋರಾತ್ರಿ ಮುಸ್ಲಿಮರ ತಂಡವೊಂದು ಹಳ್ಳಿಯಲ್ಲಿ ಬಂದು ಎಲ್ಲಾ ಹಿಂದೂ, ಸಿಖ್ ಮನೆಗಳಿಗೆ ಬೆಂಕಿ ಹಚ್ಚಿತು. ಪಾರಾಗಲು ಯತ್ನಿಸಿದವರನ್ನು ಹಿಡಿದು ಅವರ ಮೇಲೆ ಎಣ್ಣೆ ಸುರಿದು ಸಜೀವ ಸುಡಲಾಯಿತು. ಮಾನಭಂಗ ಹೊಂದಿ ಇಸ್ಲಾಮಿಗೆ ಸೇರಿಸಲ್ಪಟ್ಟಿದ್ದ ಕೆಲವೇ ಹಿಂದೂ ಸ್ತ್ರೀಯರು ಬದುಕಿದರು. ಉಳಿದವರೆಲ್ಲ ಹೇಗೋ ಬಿಡಿಸಿಕೊಂಡು ಬೆಂಕಿಯಲ್ಲಿ ತಿರುಗಿ ಹಾರಿಕೊಂಡಿದ್ದರು.

ಬೆಂಕಿ ಮುಸ್ಲಿಂ ಮನೆಗಳಿಗೂ ಹರಡಿದ್ದರಿಂದ ಮುಂಜಾವಿನಷ್ಟೊತ್ತಿಗೆ ಇಡೀ ಹಳ್ಳಿಯೇ ಬೂದಿಯಾಗಿತ್ತು. ದ್ವಿತೀಯ ಮಹಾಯುದ್ಧದ ಕೆಲವು ಘನಘೋರ ಕಾಳಗಗಳ ನಾಯಕತ್ವ ವಹಿಸಿದ್ದ ಸೇನಾನಿ ಮೌಂಟ್‌ಬ್ಯಾಟನ್ನರಿಗೂ ಈ ಅತ್ಯಾಚಾರಗಳನ್ನು ನೋಡಿ ಮೈ ನಡುಗಿತು.

"ಕಹುತಾಕ್ಕೆ ಹೋಗುವ ಮೊದಲು ಇಲ್ಲಿನ ಸ್ಥಿತಿ ಎಷ್ಟು ಕರಾಳವಾಗಿದೆ ಎಂಬುದರ ಕಲ್ಪನೆಯೇ ನನಗಿರಲಿಲ್ಲ," ಎಂದು ಮೌಂಟ್‌ಬ್ಯಾಟನ್ ಲಂಡನ್ನಿಗೆ ವರದಿ ಮಾಡಿದರು.

ಏನೇ ಇತ್ಯರ್ಥ್ಯವನ್ನು ಯೋಜಿಸಿದರೂ ಅದನ್ನು ಶೀಘ್ರವಾಗಿ ಮುಗಿಸಬೇಕೆಂದು ತಾವು ಹಾತೊರೆದದ್ದು ಅತ್ಯಂತ ಸಮರ್ಪಕವಾಗಿತ್ತೆಂದು, ಪಠಾಣರೊಡನೆಯ ಅನುಭವ ಮತ್ತು ಕಹುತಾದ ದರ್ಶನಗಳು ಮೌಂಟ್‌ಬ್ಯಾಟನ್ನರಿಗೆ ಖಚಿತಪಡಿಸಿದವು. ಹಾಗೂ ಶೀಘ್ರವಾಗಿ ತೆಗೆದುಕೊಳ್ಳಬಹುದಾದ ಒಂದೇ ಒಂದು ನಿರ್ಣಯವು ಅಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಸಾಧ್ಯವಿತ್ತು; ಅದುವೇ ಭಾರತದ ವಿಭಜನೆ.

*

ಸಿಮ್ಲಾ, ಮೇ, ೧೯೪೭

ಹಲವಾರು ವಾರಗಳ ಪರಿಶ್ರಮದಿಂದ ದಣಿದಿದ್ದ ಮೌಂಟ್‌ಬ್ಯಾಟನ್ ತಮ್ಮ ಹಿಂದಿನ ವೈಸ್‌ರಾಯರುಗಳ ಪರಂಪರೆಯನ್ನು ಪಾಲಿಸಿ ಸಿಮ್ಲಾಕ್ಕೆ ಬಂದು ತಳವೂರಿದ್ದರು. ಭಾರತದ ವಿಭಜನೆಗಾಗಿ ತಯಾರಿಸಿದ ಯೋಜನೆಯನ್ನು ಆಗಲೇ ಇಂಗ್ಲಂಡಿಗೆ ಕಳಿಸಿದ್ದರು. ಭಾರತವನ್ನು ಒಡೆದ ವ್ಯಕ್ತಿ ಎಂಬ ಬಿರುದು ತಮಗೆ ಬರುತ್ತದಲ್ಲ ಎಂದವರಿಗೆ ಬಹಳ ವ್ಯಥೆಯಾಗಿತ್ತು; ತಮ್ಮ ವರದಿಯಲ್ಲಿ, "ಮತೀಯ ಉನ್ಮಾದ ಪ್ರತಿಯೊಬ್ಬನ ತಲೆಯನ್ನೂ ಕೆಡಿಸಿರದಿದ್ದಲ್ಲಿ ವಿಭಜನೆಗೆ ನನ್ನನ್ನು ಒಪ್ಪಿಸುವದು ಯಾರಿಂದಲೂ ಸಾಧ್ಯವಾಗುತ್ತಿರಲಿಲ್ಲ. ಜಗತ್ತಿನ ದೃಷ್ಟಿಯಲ್ಲಿ ಈ ಹುಚ್ಚು ನಿರ್ಣಯದ ಹೊಣೆಯನ್ನು ಸಂಪೂರ್ಣವಾಗಿ ಭಾರತೀಯರ ಮೇಲೆಯೇ ಹೊರಿಸಬೇಕಾಗಿದೆ. ಈಗ ತಾವು ಮಾಡಲಿರುವ ನಿರ್ಣಯಕ್ಕಾಗಿ ಅವರು ಮುಂದೆ ಖಂಡಿತ ಪಶ್ಚಾತ್ತಾಪ ಪಡುತ್ತಾರೆ," ಎಂದವರು ಬರೆದಿದ್ದರು.

ಏನಿದ್ದರೂ ಮೌಂಟ್‌ಬ್ಯಾಟನ್ ಸದ್ಯಕ್ಕೆ ಉಲ್ಲಾಸದಿಂದಲೇ ಇದ್ದರು. ಅವರ ಹಿಂದಿನವರು ವರ್ಷಗಳಲ್ಲಿಯೂ ಮಾಡದಿದ್ದುದನ್ನು ಅವರು ಆರೇ ವಾರಗಳಲ್ಲಿ ಯಶಸ್ವಿಯಾಗಿ ಮುಗಿಸಿದ್ದರು. ಬ್ರಿಟಿಶರು ಮರ್ಯಾದೆಯಿಂದ ಭಾರತವನ್ನು ಬಿಟ್ಟು ಹೋಗಲು ಸಾಧ್ಯವಾಗುವಂತಹ ಯೋಜನೆಯನ್ನು ಒದಗಿಸಿದ್ದರು. ವೇದನಾದಾಯಕವಾದರೂ ಚಿಂತೆಯಿಲ್ಲ, ಸದ್ಯದ ರಾಜಕೀಯ ಬಿಕ್ಕಟ್ಟಿನಿಂದ ಪಾರಾಗಲು ಭಾರತಕ್ಕೊಂದು ದಾರಿಯನ್ನು ತೋರಿಸಿದ್ದರು. ಭಾರತದ ನಾಯಕರ ಮನೋಧರ್ಮವನ್ನು ಈಗ ಚೆನ್ನಾಗಿ ಅರಿತಿದ್ದ ಮೌಂಟ್‌ಬ್ಯಾಟನ್, ತಾವು ಹೆಚ್ಚು ಕಡಿಮೆ ಎಲ್ಲರೂ ಒಪ್ಪುವಂತಹ ಯೋಜನೆಯನ್ನೇ ತಯಾರಿಸಿದ್ದೇವೆಂಬ ಸಂಪೂರ್ಣ ಭರವಸೆಯಲ್ಲಿದ್ದರು. ತಾವು ಸಿಮ್ಲಾದಿಂದ ಬಂದಕೂಡಲೇ ಮೇ ೧೭ ಕ್ಕೆ ಅದನ್ನು ಘೋಷಿಸುವುದಾಗಿ ಮೊದಲೇ ಹೇಳಿಯೂಬಿಟ್ಟಿದ್ದರು.

ಆದರೆ ಸಿಮ್ಲಾಕ್ಕೆ ಹೋದಮೇಲೆ ತಮ್ಮ ಯೋಜನೆಯ ಬಗೆಗೆ ಅವರಲ್ಲಿ ಸಂಶಯಗಳು ಏಳಲಾರಂಭಿಸಿದವು. ಯೋಜನೆಯ ಒಂದು ಉಪಕಲಮಿನ ಪ್ರಕಾರ ಯಾವುದೇ ಪ್ರಾಂತ, ಅದರಲ್ಲಿನ ಎರಡೂ ಕೋಮುಗಳ ಬಹುಸಂಖ್ಯಾತರು ಇಚ್ಛಿಸಿದಲ್ಲಿ, ಸ್ವತಂತ್ರವಾಗ

ಬಹುದಾಗಿತ್ತು. ಈ ಕಲಮಿನ ಉದ್ದೇಶ ಬಂಗಾಲದ ಆರೂವರೆ ಕೋಟಿ ಹಿಂದೂ-ಮುಸ್ಲಿಂ ಜನಸಂಖ್ಯೆ ಯಾವ ಕಡೆಗೂ ಸೇರದೇ ಸ್ವತಂತ್ರವಾಗಬೇಕೆಂಬುದಾಗಿತ್ತು. ಮೌಂಟ್‌ಬ್ಯಾಟನ್ನರ ತಲೆಯಲ್ಲಿ ಈ ವಿಚಾರವನ್ನು ಹಾಕಿದವರು, ಕಲಕತ್ತೆಯ ಮುಸ್ಲಿಂ ಲೀಗಿನ ನಾಯಕ ಸುಹ್ರವರ್ದಿಯವರು (ಹತ್ತು ತಿಂಗಳು ಮೊದಲು 'ನೇರ ಕಾರ್ಯಾಚರಣೆ'ಗಾಗಿ ಕರೆಯನ್ನು ಸುಹ್ರವರ್ದಿಯೇ ಕೊಟ್ಟಿದ್ದರು.) ಮೌಂಟ್‌ಬ್ಯಾಟನ್ನರಿಗೆ ಜಿನ್ನಾರ ಎರಡು ತಲೆಯ ರಾಜ್ಯಕ್ಕಿಂತ, ಸ್ವತಂತ್ರ ಬಂಗಾಲವೇ ವಾಸಿಯೆನಿಸಿತ್ತು. ಬಂಗಾಲದ ಕಾಂಗ್ರೆಸ್ ನಾಯಕರೂ ಅದರಲ್ಲಿ ಆಸಕ್ತಿ ತಳೆದಿದ್ದರು. ಜಿನ್ನಾ ಕೂಡ ಸ್ವತಂತ್ರ ಬಂಗಾಲವನ್ನು ವಿರೋಧಿಸಲಿಕ್ಕಿಲ್ಲವೆಂದು ಗೊತ್ತು ಮಾಡಿಕೊಂಡಿದ್ದರು. ನೆಹರೂ, ಪಟೇಲರಿಗೆ ಮಾತ್ರ ಅದನ್ನು ತೋರಿಸಿರಲಿಲ್ಲ. ಸಂಪದ್ಭರಿತವಾದ ಬಂಗಾಲವನ್ನು ಕಳೆದುಕೊಳ್ಳಲು ಅವರು ಒಪ್ಪಿಯಾರೇ ಎನ್ನುವುದೇ ಮೌಂಟ್‌ಬ್ಯಾಟನ್ನರ ಸಂಶಯವಾಗಿತ್ತು. ಕೊನೆಯ ಗಳಿಗೆಯಲ್ಲಿ ಅವರಿಬ್ಬರೂ ಅದನ್ನು ತಿರಸ್ಕರಿಸಿದರೆ, ಈ ಯೋಜನೆಯನ್ನು ಎಲ್ಲರೂ ಖಂಡಿತವಾಗಿ ಒಪ್ಪುತ್ತಾರೆಂದು ಲಂಡನ್ನಿಗೆ ಭರವಸೆ ನೀಡಿದ್ದ ಮೌಂಟ್‌ಬ್ಯಾಟನ್ ಮಹಾ ಮೂರ್ಖನಾಗುವುದು ಖಂಡಿತ.

ಅವರಿಗೊಮ್ಮೆಲೇ ವಿಚಾರ ಬಂತು. ತಮ್ಮೊಡನೆ ವಿಶ್ರಾಂತಿ ಪಡೆಯಲು ಅವರು ಒಂದು ದಿನದ ಮಟ್ಟಿಗೆ ನೆಹರೂರನ್ನೂ ಸಿಮ್ಲಾಕ್ಕೆ ಆಮಂತ್ರಿಸಿದ್ದರು. ಅವರಿಗೆ ಈ ಯೋಜನೆಯನ್ನು ಖಾಸಗಿಯಾಗಿ ತೋರಿಸಿಬಿಟ್ಟರೆ ಆ ಚಿಂತೆಯೂ ಬಗೆಹರಿದಂತೆಯೇ. ಆದರೆ ಮರುದಿನ ಅವರ ಆಡಳಿತ ಸಿಬ್ಬಂದಿ ಅದನ್ನು ಸಂಪೂರ್ಣ ವಿರೋಧಿಸಿತು. ನೆಹರೂರಿಗೆ ಯೋಜನೆಯನ್ನು ತೋರಿಸುವುದು ಜಿನ್ನಾರೊಡನೆ ವಿಶ್ವಾಸಭಂಗ ಮಾಡಿದಂತೆ ಆಗುತ್ತದೆ. ಜಿನ್ನಾ ಅದನ್ನೆಂದಿಗೂ ಕ್ಷಮಿಸಲಾರರು. "ನಿಮ್ಮ ವಾದಗಳು ಅತ್ಯಂತ ಸಮರ್ಪಕವಾಗಿವೆ," ಮೌಂಟ್‌ಬ್ಯಾಟನ್ ಹೇಳಿದರು. "ಆದರೂ ನೆಹರೂರಿಗೆ ತೋರಿಸಲೇಬೇಕೆಂದು ನನಗೆ ಅನಿಸುತ್ತದೆ."

ಆ ರಾತ್ರಿಯೇ ನೆಹರೂರನ್ನು ತಮ್ಮ ಕೋಣೆಗೆ ಕರೆದು ಸಹಜವಾಗಿ ಮಾತನಾಡುತ್ತ ಯೋಜನೆಯನ್ನು ಅವರಿಗೆ ಕೊಟ್ಟರು. ಇದಕ್ಕೆ ಕಾಂಗ್ರೆಸ್ ಪ್ರತಿಕ್ರಿಯೆ ಏನು ಎಂಬುದನ್ನು ನೆಹರೂ ಹೇಳಿಯಾರೆ? ನೆಹರೂ ಆ ಕ್ಷಣಕ್ಕೇನೊ ವಿಭಜನೆಗೆ ಒಪ್ಪಿದರು. ಆದರೆ ಮರಳಿ ಬಂದು ತಮ್ಮ ಕೋಣೆಯಲ್ಲಿ ಕುಳಿತು ಸೂಕ್ಷ್ಮವಾಗಿ ಅದನ್ನು ಅವಲೋಕಿಸಿದ ನೆಹರೂಗೆ ಆಘಾತವಾಯಿತು. ಭಾರತ ಎರಡಲ್ಲ ಹತ್ತು ಹೋಳಾಗಲು ಆ ಯೋಜನೆಯಲ್ಲಿ ಆಸ್ಪದವಿತ್ತು. ಬಂಗಾಲಕ್ಕೆಂದು ಮೌಂಟ್‌ಬ್ಯಾಟನ್ ಮಾಡಿದ್ದ ಗಾಯದಿಂದ ಇಡೀ ಭಾರತದ ರಕ್ತವೆಲ್ಲ ಹರಿದುಹೋಗಬಹುದಿತ್ತು. ಬರಿಯ ಬಂಗಾಲವೊಂದೇ ಅಲ್ಲ, ಅವರ ನೆಚ್ಚಿನ ಕಾಶ್ಮೀರ, ನಿಜಾಮನ ಆಳಿಕೆಯಲ್ಲಿದ್ದ ಹೈದರಾಬಾದುಗಳ ಜೊತೆಗೆ ಯಾವ ಚಿಲ್ಲರೆ ರಾಜ್ಯವೂ ಸ್ವತಂತ್ರವಾಗಬಹುದಿತ್ತು. 'ಒಡೆದು ಒಡೆತನ ಮಾಡು'ವ ಆಡಳಿತ ಸೂತ್ರವನ್ನು ಪಾಲಿಸಿಕೊಂಡು ಬಂದಿದ್ದ ಬ್ರಿಟಿಶರು 'ಹರಿದು ಹಂಚಿ ಹೊರಗೆ ಹೋಗು'ವ ಹವಣಿಕೆಯಲ್ಲಿದ್ದರು! ಕೋಪದಿಂದ ನಡುಗುತ್ತ ನೆಹರೂ ತಮ್ಮ ಸಮೀಪವರ್ತಿ ಕೃಷ್ಣ ಮೆನನ್ನರ ಕೋಣೆಗೆ ಬಿರುಗಾಳಿಯಂತೆ ನುಗ್ಗಿ ಆ ಯೋಜನೆಯನ್ನು ಹಾಸಿಗೆಯ ಮೇಲೆಸೆದರು.

"ಎಲ್ಲಾ ಮುಗಿದೇ ಹೋಯಿತು!" ಎಂದವರು ಕೋಪದಿಂದ ಗರ್ಜಿಸಿದರು.

ಮರುದಿನ ಮುಂಜಾನೆಯೇ ಬಂದ ಪತ್ರ ಮೌಂಟ್‌ಬ್ಯಾಟನ್ನರಿಗೆ ಅವರ ಮಿತ್ರನ ಉಗ್ರ ಪ್ರತಿಕ್ರಿಯೆಯನ್ನು ತಿಳಿಸಿತು. ಅವರ ಯೋಜನೆಯ ಒಟ್ಟು ಪರಿಣಾಮ 'ಸಂಘರ್ಷ, ಅಶಾಂತಿ'ಗಳದ್ದಾಗಿದ್ದರಿಂದ ಕಾಂಗ್ರೆಸ್ ಅದನ್ನು 'ತೀವ್ರವಾಗಿ ವಿರೋಧಿಸುವುದು ಖಂಡಿತ'ವೆಂದು ಪತ್ರ ತಿಳಿಸಿತು. ಆರು ವಾರಗಳಿಂದ ಮೌಂಟ್‌ಬ್ಯಾಟನ್ ಕಟ್ಟಿದ್ದ ಆಶಾ-ಸೌಧ ಇಸ್ಪೀಟು ಮನೆಯಂತೆ ಕುಸಿದು ಬಿದ್ದಿತ್ತು. ಇನ್ನು ಹತ್ತೇ ದಿನಗಳಲ್ಲಿ ಭಾರತದ

ಸಂಕೀರ್ಣ ಸಮಸ್ಯೆಗೆ ಪರಿಹಾರ ಒದಗಿಸುತ್ತೇನೆಂದು ಗರ್ವದಿಂದ ಹೇಳಿಕೊಂಡ ಮೌಂಟ್‌ಬ್ಯಾಟನ್ ಒಮ್ಮೆಲೇ ತಮ್ಮ ಹತ್ತಿರ ಯಾವ ಪರಿಹಾರವೂ ಇಲ್ಲದಂತಾಗಲು ಗಾಬರಿಯಾದರು.

ಅವರ ಟೀಕಾಕಾರರು ಅತಿಯಾದ ಆತ್ಮವಿಶ್ವಾಸಕ್ಕಾಗಿ ಅವರನ್ನು ಟೀಕಿಸಬಹುದು. ಆದರೆ ಮೌಂಟ್‌ಬ್ಯಾಟನ್ ತಮ್ಮ ತಪ್ಪುಗಳ ಬಗ್ಗೆ ತಿಳಿ ಕೊಡಿಸಿಕೊಂಡು ಕೂಡುವವರಾಗಿದ್ದಿಲ್ಲ. ನೆಹರೂರಿಗೆ ಅದನ್ನು ತೋರಿಸಿದ್ದಕ್ಕಾಗಿ ಮನಸ್ಸಿನಲ್ಲೇ ತಮ್ಮನ್ನು ಅಭಿನಂದಿಸಿಕೊಂಡು ಮರುದಿನ ರಿಪೇರಿ ಕಾರ್ಯವನ್ನಾರಂಭಿಸಿದರು. ಅವರ ವಿನಂತಿಯ ಮೇರೆಗೆ ನೆಹರೂ ಅಲ್ಲಿಯೇ ಇನ್ನೊಂದು ದಿನ ಉಳಿದು ಹೊಸ ಯೋಜನೆಯನ್ನು ನೋಡಲು ಒಪ್ಪಿದರು. ಹೊಸ ಯೋಜನೆಯಲ್ಲಿ ಎಲ್ಲ ರಾಜರಿಗೆ ಹಾಗೂ ಪ್ರಾಂತಗಳಿಗೆ ಎರಡೇ ಆಯ್ಕೆಗಳಿದ್ದವು: ಭಾರತ ಅಥವಾ ಪಾಕಿಸ್ತಾನ.

ಹೊಸದೊಂದು ಯೋಜನೆಯನ್ನು ತಯಾರಿಸಲು ಮೌಂಟ್‌ಬ್ಯಾಟನ್ ತಮ್ಮ ಸಿಬ್ಬಂದಿಯ ಅತ್ಯಂತ ವರಿಷ್ಠ ಭಾರತೀಯರಾಗಿದ್ದ ವಿ. ಪಿ. ಮೆನನ್ನರನ್ನು ಕರೆದು ಸಂಜೆಯೊಳಗಾಗಿ ಭಾರತ ಸ್ವಾತಂತ್ರ್ಯವನ್ನು ನೀಡಬಹುದಾದ ಸನದನ್ನು ತಿರುಗಿ ಬರೆಯಲು ಹೇಳಿದರು. ಪ್ರತಿಯೊಂದು ಪ್ರಾಂತದಲ್ಲಿಯೂ ಪ್ರಾಂತೀಯ ಸರಕಾರಗಳು ತಮ್ಮ ಪ್ರಾಂತ ಎಲ್ಲಿ ಸೇರಬೇಕೆಂಬುದನ್ನು ನಿರ್ಧಾರ ಮಾಡಬೇಕೆಂದು ಸೂಚನೆಯಿತ್ತರು.

ಸಾದಾ ಟೈಪಿಸ್ಟ ಎಂದು ವೈಸ್‌ರಾಯರ ಕಚೇರಿಯನ್ನು ಕೇವಲ ಹದಿನೆಂಟು ವರ್ಷಗಳ ಹಿಂದೆ ಸೇರಿದ್ದ ವಿ. ಪಿ. ಮೆನನ್ ಜಗತ್ತಿನ ಭೂಪಟವನ್ನು ಬದಲಿಸಲಿದ್ದ ಯೋಜನೆಯನ್ನು ಸಿಮ್ಲಾದ ವೈಸ್‌ರಾಯ್ ಭವನದ ಜಗಲಿಯಲ್ಲಿ ಕುಳಿತು ಕೇವಲ ಆರು ಗಂಟೆಗಳಲ್ಲಿ ಬರೆದು ಮುಗಿಸಿದರು.

*

೨, ಜೂನ್, ೧೯೪೭,

ಭಾರತದ ೪೦ ಕೋಟಿ ಜನರ ಪ್ರತಿನಿಧಿಗಳಾಗಿ ಏಳು ಜನರು ಆ ದಿನ ವೈಸ್‌ರಾಯರ ಖಾಸಗಿ ಕೋಣೆಯಲ್ಲಿ ಸೇರಿದ್ದರು. ತಮ್ಮ ಮಾತೃಭೂಮಿಯನ್ನು ಮರಳಿದೊರಕಿಸಲಿದ್ದ ಸನದನ್ನು ಪರೀಕ್ಷಿಸಲು ಕಾಂಗ್ರೆಸ್ಸಿನ ಪ್ರತಿನಿಧಿಗಳಾಗಿ ನೆಹರೂ, ಪಟೇಲ ಹಾಗೂ ಕಾಂಗ್ರೆಸ್ ಅಧ್ಯಕ್ಷ ಆಚಾರ್ಯ ಕೃಪಲಾನಿ, ಮುಸ್ಲಿಂಲೀಗಿನ ಪರವಾಗಿ ಜಿನ್ನಾ, ಲಿಯಾಕತ್ ಅಲಿಖಾನ, ಅಬ್ದುರ್ ರಬ್ ನಿಷ್ತಾರ್, ಹಾಗೂ ಸಿಖ್ಖರ ಪ್ರತಿನಿಧಿಯಾಗಿ ಬಲದೇವಸಿಂಗ್ ದುಂಡು ಮೇಜಿನ ಸುತ್ತ ನೆರೆದಿದ್ದರು. ಸಭೆಯಲ್ಲಿ ಮಾತನಾಡುವುದನ್ನೆಲ್ಲ ತಾವೇ ವಹಿಸಿಕೊಳ್ಳಬೇಕೆಂದು ಮೌಂಟ್‌ಬ್ಯಾಟನ್ ನಿರ್ಧರಿಸಿದ್ದರು. ಸಂಕ್ಷಿಪ್ತವಾಗಿ ಅವರು ಈ ವರೆಗಿನ ತಮ್ಮ ಸಂಧಾನಯತ್ನಗಳನ್ನೆಲ್ಲ ವಿವರಿಸಿದರು. ತುರ್ತಾಗಿ ನಿರ್ಣಯಕ್ಕೆ ಬರಬೇಕಾದ ಆವಶ್ಯಕತೆಯನ್ನು ಒತ್ತಿ ಹೇಳಿದರು.

ಅನಂತರ ಔಪಚಾರಿಕವಾಗಿ ಕೊನೆಯು ಬಾರಿಗೆ ಜಿನ್ನಾರನ್ನು ಅಖಂಡ ಭಾರತದ ಯೋಜನೆಗೆ ಒಪ್ಪಿಕೊಳ್ಳುವಂತೆ ಕೇಳಿಕೊಂಡರು. ಅಷ್ಟೇ ಔಪಚಾರಿಕವಾಗಿ ಜಿನ್ನಾ ನಿರಾಕರಿಸಿದರು. ಅಷ್ಟಾದ ಮೇಲೆ ಅವರಿಗೆ ತಮ್ಮ ಯೋಜನೆಯನ್ನು ವಿವರಿಸಿದರು. ಯೋಜನೆಯನ್ನು ಮನಃಪೂರ್ವಕ ಒಪ್ಪಲು ಯಾರಿಗೂ ಬಲವಂತ ಮಾಡಲಿಲ್ಲ. ಆದರೆ ಶಾಂತಿಯುತ ಮನೋಭಾವದಿಂದ ಅದನ್ನು ಸ್ವೀಕರಿಸಿ, ರಕ್ತಪಾತವಿಲ್ಲದೆಯೇ ಅದನ್ನು ಕಾರ್ಯರೂಪಕ್ಕಿಳಿಸಲು ಶ್ರಮಿಸಬೇಕೆಂದು ಕೇಳಿಕೊಂಡರು. ಆ ದಿನ ಮಧ್ಯರಾತ್ರಿಯೊಳಗಾಗಿ ಅವರು ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ಮರುದಿನ ಮುಂಜಾನೆ ಕೊನೆಯ ಸಲ ಭೇಟಿಯಾಗಿ ಅದೇ ಸಾಯಂಕಾಲ ಆಕಾಶವಾಣಿಯಲ್ಲಿ ಸ್ವಾತಂತ್ರ್ಯದ ಘೋಷಣೆಯನ್ನು ಮಾಡುವುದು ತಮ್ಮ ವಿಚಾರವೆಂದು ತಿಳಿಸಿದರು.

ಅಲ್ಲಿ ನೆರೆದ ಮುಂದಾಳುಗಳೆಲ್ಲ ತಮ್ಮ ಯೋಜನೆಯನ್ನು ಒಪ್ಪುತ್ತಾರೆಂದು ಭರವಸೆ ಇತ್ತಾದರೂ, ಆ ಸಭೆಗೆ ಬಂದಿರದಿದ್ದ ಇನ್ನೊಬ್ಬ ಅತಿ ಪ್ರಮುಖ ನೇತಾರನ ಪ್ರತಿ-

ಕ್ರಿಯೆಯ ಬಗ್ಗೆ ವೈಸ್‌ರಾಯರಿಗೆ ಆತಂಕವಾಗಿತ್ತು. ಕಾಂಗ್ರೆಸ್ಸಿನಲ್ಲಿ ತಮಗೆ ಯಾವ ಅಧಿಕಾರವೂ ಇಲ್ಲವೆಂದು ಹೇಳಿ ಗಾಂಧೀಜಿ ಮುಂಜಾನೆ ನಡೆದ ಸಭೆಗೆ ಬರಲು ನಿರಾಕರಿಸಿದ್ದರು. ಐಕ್ಯದ ಕನಸನ್ನು ಮಣ್ಣುಗೂಡಿಸಲು ಜಿನ್ನಾಗೆ ಸಾಧ್ಯವಾಗಿದ್ದರೆ, ವಿಭಜನೆಯ ಯೋಜನೆಯನ್ನು ಮಣ್ಣುಗೂಡಿಸಲು ಗಾಂಧೀಜಿಗೆ ಸಾಧ್ಯವಿತ್ತು. ಗಾಂಧೀಜಿಯನ್ನು ಎದುರಿಸುವ ಸಂದರ್ಭವೇ ಬಂದಲ್ಲಿ ಇಡೀ ಕಾಂಗ್ರೆಸ್ ಮುಖಂಡತ್ವವೆಲ್ಲ ತಮ್ಮ ಕಡೆಗೆ ಇರಬೇಕೆಂದು ಮೌಂಟ್‌ಬ್ಯಾಟನ್ ಬಗೆದಿದ್ದರು. ಅದಕ್ಕಾಗಿಯೇ, ಅತ್ತ ಲಂಡನ್ನಿನಲ್ಲಿ ಬ್ರಿಟಿಶ್ ಸರಕಾರ ವಿಭಜನೆಯ ಅಂತಿಮ ಯೋಜನೆಯನ್ನು ಚರ್ಚಿಸುತ್ತಿದ್ದಾಗ, ಇತ್ತ ತಾವು ಕಾಂಗ್ರೆಸ್ ನಾಯಕರನ್ನೆಲ್ಲ ತಮ್ಮ ಕಡೆಗೆ ಮಾಡಿಕೊಂಡಿದ್ದರು. ಅವರು ತಿಳಿದಿದ್ದಕ್ಕಿಂತಲೂ ಆ ಕೆಲಸ ಸರಳವಾಗಿತ್ತು. "ಗಾಂಧೀಜಿಯ ವಿರುದ್ಧ ಹೋಗಲೆಂದೇ ಅವರೆಲ್ಲ ನನ್ನ ಹಿಂದೆ ಸೇರುತ್ತಿದ್ದಾರೆಂಬ ವಿಚಿತ್ರ ಭಾವನೆ ನನಗೆ ಕೆಲವೊಮ್ಮೆ ಬರುತ್ತಿತ್ತು. ತಮ್ಮೆಲ್ಲರ ಪರವಾಗಿ ಗಾಂಧಿಯನ್ನು ಎದುರಿಸುವಂತೆ ನನ್ನನ್ನು ಒಂದು ಬಗೆಯಾಗಿ ಹುರಿದುಂಬಿಸುತ್ತಿದ್ದರು," ಎಂದು ಮೌಂಟ್‌ಬ್ಯಾಟನ್ ಹೇಳಿದ್ದುಂಟು. ಆದರೂ ಮೌಂಟ್‌ಬ್ಯಾಟನ್ನರಿಗೆ ಸಮಾಧಾನವಾಗಿರಲಿಲ್ಲ. ಏಕೆಂದರೆ ತನ್ನ ಯಾವುದೇ ನಾಯಕರಿಗಿಂತ ಹೆಚ್ಚಾಗಿ ಕಾಂಗ್ರೆಸ್ ಪಕ್ಷ ಗಾಂಧೀಜಿಗೆ ವಿಧೇಯವಾಗಿತ್ತು, ಗಾಂಧೀಜಿ ಮನಸ್ಸು ಮಾಡಿದರೆ ಎಲ್ಲ ಮುಖಂಡರ ತಲೆ ಮೆಟ್ಟಿ ಜನತೆಯನ್ನು ವಿಭಜನೆಯ ವಿರುದ್ಧ ಪ್ರೇರಿಸಬಹುದಾಗಿತ್ತು. ಸದ್ಯದ ಲಕ್ಷಣಗಳನ್ನು ನೋಡುತ್ತಿದ್ದಾಗ ಅವರು ಅದನ್ನೇ ಮಾಡುತ್ತಾರೆಂದು ಅನಿಸುತ್ತಿತ್ತು. ಹಿಂದಿನ ದಿನವೇ ಅವರು ಹೇಳಿದ್ದರು, "ಇಡೀ ರಾಷ್ಟ್ರವೇ ಕಾಳ್ಗಿಚ್ಚಿನಲ್ಲಿ ಉರಿದರೂ ಚಿಂತೆಯಿಲ್ಲ, ಪಾಕಿಸ್ತಾನವೆಂದು ಒಂದು ಇಂಚನ್ನೂ ನಾವು ಕೊಡುವುದು ಬೇಡ," ಎಂದು.

ವೈಸ್‌ರಾಯರ ಭವನದಲ್ಲೆಲ್ಲ ಕತ್ತಲೆ ಆವರಿಸಿದ್ದರೂ ಮೌಂಟ್‌ಬ್ಯಾಟನ್ನರ ಕೋಣೆಯಲ್ಲಿ ದೀಪವಿನ್ನೂ ಉರಿಯುತ್ತಿತ್ತು. ದಿನದ ಕೊನೆಯ ಭೇಟಿಗಾಗಿ ಬಂದಿದ್ದ ಜಿನ್ನಾರನ್ನು ಪಿಳಿಪಿಳಿ ನೋಡಿದರು. ಕಾಂಗ್ರೆಸ್ ಮತ್ತು ಸಿಖ್ಖರಿಗೆ ಹಲವಾರು ಆಕ್ಷೇಪಣೆಗಳಿದ್ದರೂ ಅವರೆಲ್ಲ ಹೆಚ್ಚು ಕಡಿಮೆ ವಿಭಜನೆಗೆ ಒಪ್ಪಿದ್ದರು. ಈಗ, ಯಾರನ್ನು ಮೆಚ್ಚಿಸಲು ವಿಭಜನೆಯಾಗಲಿತ್ತೊ ಆ ವ್ಯಕ್ತಿ ಯೋಜನೆಗೆ ಒಪ್ಪಿಗೆ ಕೊಡಲು ನಿರಾಕರಿಸುತ್ತಿದ್ದ! ಮುಸ್ಲಿಂ ಲೀಗಿನ ಪ್ರತಿನಿಧಿಗಳ ಎದುರು ಆ ಯೋಜನೆಯನ್ನಿಡದೇ ತಾವು ಅದರ ಬಗ್ಗೆ ನಿರ್ಣಯ ಕೊಡುವುದು ಸಾಧ್ಯವಿಲ್ಲವೆಂದು ಜಿನ್ನಾ ಹೇಳಿದರು. ಅವರನ್ನೆಲ್ಲ ದಿಲ್ಲಿಗೆ ಕರೆದು ಚರ್ಚಿಸಲು ಒಂದು ವಾರವಾದರೂ ಬೇಕು. ಮೌಂಟ್‌ಬ್ಯಾಟನ್ನರಿಗೆ ನಿಧಾನವಾಗಿ ಕೋಪವೇರಲಾರಂಭಿಸಿತು.

"ಮಿಸ್ಟರ್ ಜಿನ್ನಾ, ನೀವು ನಿಮ್ಮ ಪ್ರತಿನಿಧಿಗಳನ್ನು ಕರೆಸಿ ಚರ್ಚೆ ಮಾಡುವತನಕ ನಾನು ಸುಮ್ಮನೇ ಕೂಡುತ್ತೇನೆಂದು ನೀವು ತಿಳಿದಿದ್ದರೆ ಅದು ನಿಮ್ಮ ಮೂರ್ಖತನ. ನಿಮಗೆ ನಿಮ್ಮ ಪಾಕಿಸ್ತಾನ ಸಿಕ್ಕಿದೆ. ಒಂದು ಕಾಲಕ್ಕೆ ನಿಮಗೆ ಅದು ಸಿಕ್ಕೀತೆಂದು ಯಾರಿಗೂ ನಂಬಿಕೆ ಇರಲಿಲ್ಲ. ನೀವು ಒಪ್ಪಿದರೆ ಮಾತ್ರ ತಾನೂ ಒಪ್ಪುವುದಾಗಿ ಕಾಂಗ್ರೆಸ್ ಕರಾರು ಹಾಕಿದೆ. ಈಗ ನೀವು ಹಿಂದೇಟು ಹಾಕುತ್ತಿದ್ದೀರೆಂದು ಗೊತ್ತಾದರೆ ಕಾಂಗ್ರೆಸ್ ತನ್ನ ಬೆಂಬಲವನ್ನು ಹಿಂದೆ ತೆಗೆದುಕೊಳ್ಳುವುದು."

ಆದರೆ ಕಾಯದೇ ಅಜಮ್ ಅವರಿಗೆ ಎಲ್ಲವೂ ಕಾಯದೇಶೀರವಾಗಿ ಆಗಬೇಕಿತ್ತು! "ನಾವೊಬ್ಬನೇ ಮುಸ್ಲಿಂ ಲೀಗ್ ಆಗಲಾರೆ" ಎಂದರವರು.

"ಅದನ್ನು ಬೇರೆ ಯಾರಿಗಾದರೂ ಹೇಳಿಕೊಳ್ಳಿ. ಮುಸ್ಲಿಂ ಲೀಗಿನಲ್ಲಿ ಯಾರು ಏನಿದ್ದಾರೆ ಎನ್ನುವುದು ನನಗೆ ಚೆನ್ನಾಗಿ ಗೊತ್ತಿದೆ. ಈಗ ನನ್ನ ಮಾತು ಕೇಳಿ. ನಾಳೆ ಸಭೆಯಲ್ಲಿ ನಾನು, ನಿನ್ನೆ ರಾತ್ರಿ ನಾವಿಬ್ಬರೂ ಯೋಜನೆಯನ್ನು ಚರ್ಚಿಸಿದ್ದೇವೆಂದೂ ನೀವು ಅದಕ್ಕೆ ನಿಮ್ಮ ಅನುಮತಿಯನ್ನು ನೀಡಿದ್ದೀ-

ರೆಂದು ಹೇಳುತ್ತೇನೆ. ಹೇಳಿದ ಮೇಲೆ ನಿಮ್ಮ ಕಡೆಗೆ ತಿರುಗುತ್ತೇನೆ. ಆ ಕ್ಷಣಕ್ಕೆ ನೀವು ಮಾತಾಡಬೇಕಿಲ್ಲ. ಬರೀ ನಿಮ್ಮ ತಲೆಯಲ್ಲಾಡಿಸಿ ಒಪ್ಪಿಗೆ ಸೂಚಿಸಿದರೆ ಸಾಕು. ನೀವು ಅಷ್ಟು ಮಾಡದಿದ್ದರೆ ನಮ್ಮ-ನಿಮ್ಮ ವ್ಯವಹಾರ ಮುಗಿಯಿತು. ನನಗೆ ಮುಂದೆ ಏನೂ ಮಾಡಲು ಸಾಧ್ಯವಿಲ್ಲ. ನಿಮಗೆ ಪಾಕಿಸ್ತಾನವೂ ಸಿಗುವುದಿಲ್ಲ. ಅನಂತರ ನೀವು ಯಾವ ನರಕದಲ್ಲಿ ಬಿದ್ದರೂ ನನಗೆ ದುಃಖವಿಲ್ಲ."

ಭಾರತದ ಮುಂದಾಳುಗಳು ವಿಭಜನೆಯನ್ನು ಅಧಿಕೃತವಾಗಿ ಒಪ್ಪಲಿದ್ದ ಸಭೆಯಲ್ಲಿ ಮತ್ತೆ ಮೌಂಟ್‌ಬ್ಯಾಟನ್ನರೇ ಮುಂದಾಳ್ತನವನ್ನು ವಹಿಸಿಕೊಂಡರು. ಮೂರೂ ಪಕ್ಷಗಳಿಗೂ ಯೋಜನೆಯ ಬಗೆಗೆ ಬಲವಾದ ಆಕ್ಷೇಪಗಳಿದ್ದರೂ ತತ್ತ್ವಶಃ ಎಲ್ಲರೂ ಅದನ್ನು ಒಪ್ಪಿದ್ದಾರೆಂದು ಹೇಳಿದರು. ಆಕ್ಷೇಪಣೆಗಳನ್ನು ಸ್ಪಷ್ಟವಾಗಿ ವಿವರಿಸಿದ್ದಕ್ಕೆ ತಾವು ಕೃತಜ್ಞರೆಂದೂ ಹಿಂದಿನ ಸಾಯಂಕಾಲ ಜಿನ್ನಾರೊಡನೆ ದೀರ್ಘವಾದ ಮಾತುಕತೆಗಳನ್ನು ನಡೆಸಿದ್ದು, ಜಿನ್ನಾ ಸಹ ಎಲ್ಲರೊಡನೆ ಒಪ್ಪಿದ್ದಾರೆಂದೂ ಹೇಳಿ ಅವರತ್ತ ತಿರುಗಿದರು.

ಆ ಕ್ಷಣಕ್ಕೆ ಜಿನ್ನಾ ಏನು ಮಾಡುತ್ತಾರೆನ್ನುವ ಬಗ್ಗೆ ಯಾವ ಭರವಸೆಯೂ ಇರಲಿಲ್ಲ. ಒಂದು ಸೆಕೆಂಡು ಜಿನ್ನಾರ ಭಾವನಾಹೀನ ಮುಖವನ್ನು ನೋಡುತ್ತಿದ್ದಂತೆ ಜಿನ್ನಾ ತಮಗೆ ಸಾಧ್ಯವಿದ್ದ ಸೂಕ್ಷ್ಮಾತಿಸೂಕ್ಷ್ಮ ತಲೆದೂಗಿನಿಂದ ಒಪ್ಪಿಗೆ ಸೂಚಿಸಿದರು.

ಅದೇ ಸಂಜೆ ಏಳು ಗಂಟೆಗೆ ನಾಲ್ವರೂ ನಾಯಕರು ಆಕಾಶವಾಣಿಯಲ್ಲಿ ವಿಭಜನೆಯ ಸುದ್ದಿಯನ್ನು ಘೋಷಿಸಿದರು.

ಮರುದಿನ ನಾಲ್ಕು ಗಂಟೆಯ ಸುಮಾರಿಗೆ ತುರ್ತು ಸಮಾಚಾರವೊಂದು ಮೌಂಟ್‌ಬ್ಯಾಟನ್ನರಿಗಾಗಿ ಕಾಯ್ದಿತ್ತು. ಕಾಂಗ್ರೆಸ್ ನಾಯಕರಿಗೆ ತಿರುಗಿ ನಿಂತು ವಿಭಜನೆಯನ್ನು ಖಂಡಿಸಲು ಗಾಂಧೀಜಿ ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ತತ್‌ಕ್ಷಣವೇ ಅವರನ್ನು ಕರೆದುಕೊಂಡು ಬರಲು ದೂತನೊಬ್ಬನನ್ನು ಕಳಿಸಲಾಯಿತು. ಕೊನೆಗೂ ಗಾಂಧೀಜಿ ಬಂದಾಗ ಆರು ಗಂಟೆಯಾಗಿತ್ತು. ಪ್ರಾರ್ಥನಾ ಸಭೆಗೆ ಒಂದೇ ತಾಸು ಬಾಕಿಯಿತ್ತು. ವಿಶಾಲವಾದ ಖುರ್ಚಿಯಲ್ಲಿ ಮುದುರಿಕೊಂಡು ಕುಳಿತಿದ್ದ ಗಾಂಧೀಜಿಯನ್ನು ನೋಡಿದಾಗ ಅವರ ಮಾನಸಿಕ ತಳಮಳ ಯಾರಿಗೂ ಅರ್ಥವಾಗುಮತಿತ್ತು.

ಆ ಸ್ಥಿತಿಯಲ್ಲಿ ಗಾಂಧೀಜಿಗೆ ಯಾವುದೂ ಅಶಕ್ಯವಲ್ಲವೆಂದು ಮೌಂಟ್‌ಬ್ಯಾಟನ್ನರಿಗೆ ಗೊತ್ತಿತ್ತು. ಪ್ರಾರ್ಥನಾ ಸಭೆಯಲ್ಲಿ ಅವರು ವಿಭಜನೆಯನ್ನು ಖಂಡಿಸಿದ್ದರೆ ಕಾಂಗ್ರೆಸ್ ಮುಖಂಡರು ತಮ್ಮ ಒಪ್ಪಿಗೆಯನ್ನು ಹಿಂತೆಗೆಯಬೇಕಿತ್ತು, ಇಲ್ಲವೇ ಗಾಂಧೀಜಿಯ ಮೇಲೆ ತಿರುಗಿ ಬೀಳಬೇಕಿತ್ತು. ಏನಾದರೂ ಮಾಡಿ ಗಾಂಧೀಜಿಯನ್ನು ಒಪ್ಪಿಸಲು ಮೌಂಟ್‌ಬ್ಯಾಟನ್, ಗಾಂಧೀಜಿಯ ದುಃಖ ತಮಗೆ ಅರ್ಥವಾಗುತ್ತದೆ ಮತ್ತು ತಾವೂ ಅದರಲ್ಲಿ ಭಾಗಿಯಾಗಿದ್ದೇವೆಂದು ಪ್ರಾರಂಭಿಸಿದರು.

ಮಾತನಾಡುತ್ತಿದ್ದಂತೆಯೇ ಅವರಿಗೆ ಹೊಸ ವಿಚಾರವೊಂದು ಸ್ಫುರಣವಾಯಿತು. ಪತ್ರಿಕೆಗಳು 'ಮೌಂಟ್‌ಬ್ಯಾಟನ್ ಯೋಜನೆ' ಎಂದು ಕರೆದಿದ್ದು ನಿಜವಾಗಿ 'ಗಾಂಧಿ ಯೋಜನೆ'. ಏಕೆಂದರೆ ಅದರಲ್ಲಿನ ಹೆಚ್ಚಿನಂಶ ಗಾಂಧಿಯಿಂದಲೇ ಸೂಚಿತವಾಗಿತ್ತು. ಗಾಂಧಿಗೆ ಈ ವಾದ ಅರ್ಥವಾಗಲಿಲ್ಲ.

ಹೌದು, ಮೌಂಟ್‌ಬ್ಯಾಟನ್ ಮುಂದುವರೆಸಿದರು. ಕೊನೆಯ ಆಯ್ಕೆಯನ್ನು ಜನತೆಗೆ ಬಿಡಲು ಗಾಂಧಿ ಹೇಳಿದ್ದರು. ಈ ಯೋಜನೆ ಅಷ್ಟೇ ಮಾಡಲಿತ್ತು. ಏಕೆಂದರೆ ಪ್ರತಿ ಪ್ರಾಂತದ ಚುನಾಯಿತ ಸದಸ್ಯರು ಮತ ಹಾಕಿ ತಮ್ಮ ಪ್ರಾಂತದ ಭವಿಷ್ಯವನ್ನು ನಿರ್ಧರಿಸಲಿದ್ದರು. ಗಾಂಧಿ ಹೇಳಿದಂತೆ ಬ್ರಿಟಿಶರು ಸಾಧ್ಯವಿದ್ದಷ್ಟು ಬೇಗ ಭಾರತವನ್ನು ಬಿಡುವವರಿದ್ದರು. "ಒಂದು ವೇಳೆ ಏನಾದರೂ ಪವಾಡವಾಗಿ ಎಲ್ಲ ಪ್ರಾಂತಗಳೂ ಐಕ್ಯಕ್ಕೆ ಒಪ್ಪಿದರೆ ಒಳ್ಳೆಯದೇ ಆಯಿತು. ಇಲ್ಲದಿದ್ದರೆ, ಬಲಾತ್ಕಾರದಿಂದ ಅವರನ್ನು ಒಪ್ಪಿಸಬೇಕೆಂದು

ನಿಮ್ಮ ಅಭಿಪ್ರಾಯವಿಲ್ಲವೆಂದು ನಾನು ನಂಬಿದ್ದೇನೆ." ಮೌಂಟ್‌ಬ್ಯಾಟನ್ ತಮಗೆ ಸಾಧ್ಯವಿದ್ದಷ್ಟು ಮಟ್ಟಿಗೆ ಗಾಂಧೀಜಿಯವರೊಡನೆ ವಾದಿಸಿದರು. ಬೇಡಿಕೊಂಡರು. ಗಾಂಧೀಜಿ ವಿಭಜನೆಯ ಕಟ್ಟಾ ವಿರೋಧಿಗಳಾಗಿದ್ದರೂ ಮೌಂಟ್‌ಬ್ಯಾಟನ್ನರ ವಾದಸರಣಿ ಅವರನ್ನು ವಿಚಲಿತರನ್ನಾಗಿ ಮಾಡುವಂತೆ ಕಂಡಿತು. ತಮ್ಮ ೭೮ನೇ ವಯಸ್ಸಿನಲ್ಲಿ, ಮೂವತ್ತು ವರ್ಷಗಳಲ್ಲಿ ಮೊದಲ ಸಲ ಗಾಂಧೀಜಿಗೆ ಜನತೆಯ ಮೇಲೆ ತಮ್ಮ ಪ್ರಭಾವ ಎಷ್ಟೆಂಬುದು ಗೊತ್ತಿರಲಿಲ್ಲ; ಕಾಂಗ್ರೆಸ್ ಮುಖಂಡರೊಡನೆಯ ಘರ್ಷಣೆ ಬೇರೆ. ತಮ್ಮ ಸಹಜ ಪ್ರೇರಣೆಗೆ ಬದ್ಧರಾಗಿ ದೇಶವನ್ನು ಹಿಂಸಾಚಾರ, ಅರಾಜಕತೆಗಳಲ್ಲಿ ನೂಕುವ ಅಪಾಯವನ್ನು ಕಡೆಗಣಿಸಿ ವಿಭಜನೆಯನ್ನು ವಿರೋಧಿಸಬೇಕೆ?

ಮೌಂಟ್‌ಬ್ಯಾಟನ್ನರು ತಮ್ಮೆಲ್ಲ ವಾದಗಳನ್ನು ಮಂಡಿಸುವ ಮೊದಲೇ, ಪ್ರಾರ್ಥನೆಯ ಸಮಯವಾಗಿದ್ದರಿಂದ ಗಾಂಧೀಜಿ ಹೊರಟು ನಿಂತರು. ಆ ದಿನದ ಪ್ರಾರ್ಥನಾ ಸಭೆಗೆ ಎಷ್ಟೋ ಜನ ಕೇವಲ 'ಮೌಂಟ್‌ಬ್ಯಾಟನ್ ಯೋಜನೆ'ಯ ವಿಷಯದಲ್ಲಿ ಗಾಂಧೀಜಿಯ ತೀರ್ಪನ್ನು ಕೇಳಲು ಬಂದಿದ್ದರು. ಯೋಜನೆಯ ವಿರುದ್ಧ ಯುದ್ಧ ಸಾರಲು ಗಾಂಧೀ ಕರೆ ಕೊಟ್ಟಾರೆಂದು ಅವರ ಭಾವನೆಯಾಗಿತ್ತು. ಆದರೆ ಹಾಗೆ ಆಗಲಿಲ್ಲ. ವೈಸ್‌ರಾಯರನ್ನು ನಿಂದಿಸಿ ಪ್ರಯೋಜನವಿಲ್ಲವೆಂದು ಗಾಂಧಿ ಹೇಳಿದರು. ಆಗಿಹೋದದ್ದರ ಕಾರಣಗಳನ್ನು ಪ್ರತಿಯೊಬ್ಬನೂ ತನ್ನ ಹೃದಯದಲ್ಲಿ ಹುಡುಕಬೇಕು. ಮೌಂಟ್‌ಬ್ಯಾಟನ್ನರ ಪ್ರೇರಣಾಸಾಮರ್ಥ್ಯ ಅವರಿಗೊಂದು ದೊಡ್ಡ ವಿಜಯವನ್ನು ತಂದುಕೊಟ್ಟಿತ್ತು.

*

ಬ್ರಿಟಿಷ್ ರಾಜ್ಯಭಾರದ ಇತಿಹಾಸದಲ್ಲಿಯೇ ವೈಸ್‌ರಾಯನೊಬ್ಬನು ಪತ್ರಿಕಾ ಸಮ್ಮೇಳನವನ್ನು ನಡೆಸುವುದು ಅದು ಎರಡನೆಯ ಸಲವಾಗಿತ್ತು, ಯಾವ ಟಿಪ್ಪಣಿಗಳ ಸಹಾಯವೂ

ಇಲ್ಲದೇ ಮೌಂಟ್‌ಬ್ಯಾಟನ್ ಜಗತ್ತಿನ ಅತ್ಯಂತ ಮಹತ್ವದ ಜನ್ಮಪತ್ರಿಕೆಯ ವಿವರಗಳನ್ನು ಹೊರಗೆಡವಿದರು. ಈ ಸಮ್ಮೇಳನ ಮೌಂಟ್‌ಬ್ಯಾಟನ್ನರ ಕಾರ್ಯಸಾಮರ್ಥ್ಯಕ್ಕೆ ಕಿರೀಟವಿಟ್ಟಂತಿತ್ತು. ಕೇವಲ ಎರಡು ತಿಂಗಳಲ್ಲಿ ಒಬ್ಬಂಟಿಯಾಗಿ, ಅಸಾಧ್ಯವೆನಿಸಿದ್ದನ್ನವರು ಸಾಧಿಸಿ ತೋರಿಸಿದ್ದರು. ಅವರ ಭಾಷಣ ಮುಗಿದ ಮೇಲೆ ಭರ್ಜರಿ ಚಪ್ಪಾಳೆಯ ನಂತರ ಪ್ರಶ್ನೆಗಳ ಭರಾಟೆ ಪ್ರಾರಂಭವಾಯಿತು.

ಅದು ಮುಗಿಯುತ್ತಿದ್ದಂತೆ ಅನಿರೀಕ್ಷಿತವಾಗಿ, ಅಜ್ಞಾತ ಪತ್ರಕರ್ತನೊಬ್ಬನಿಂದ, ಬಂತು ಪ್ರಶ್ನೆ:

"ಸರ್, ಅಧಿಕಾರದ ಹಸ್ತಾಂತರ ಶೀಘ್ರವಾಗಿ ಆಗಲೇಬೇಕೆಂದು ಎಲ್ಲರೂ ಒಪ್ಪಿರುವಾಗ, ಅದಕ್ಕಾಗಿ ಒಂದು ತಾರೀಖನ್ನು ನೀವು ಈಗಾಗಲೇ ನಿರ್ಧರಿಸಿರಬೇಕಲ್ಲ?"

"ಹೌದು, ನಿರ್ಧರಿಸಿದ್ದೇವೆ," ಎಂದರು ಮೌಂಟ್‌ಬ್ಯಾಟನ್. ಅವರು ನಿರ್ಧರಿಸಿರಲಿಲ್ಲ. ಆದರೆ ಅವರು ಹೇಳುತ್ತಿದ್ದಂತೆಯೇ ತಲೆಯಲ್ಲಿ ವಿಚಾರಚಕ್ರ ಪ್ರಾರಂಭವಾಯಿತು. ಯಾವ ತಾರೀಖು ಆಗಬಹುದು? ಸಪ್ಟೆಂಬರ್ ಮಧ್ಯದಲ್ಲಿ? ಸಪ್ಟೆಂಬರ್ ಮೊದಲ ವಾರ? ಆಗಸ್ಟ್ ಮಧ್ಯದಲ್ಲಿ? ವಿಚಾರಚಕ್ರ ಒಮ್ಮೆಲೇ ನಿಂತಿತು. ಎರಡೇ ವರ್ಷಗಳ ಹಿಂದೆ, ಅವರು ಬರ್ಮಾದಲ್ಲಿ ಮಿತ್ರ ರಾಷ್ಟ್ರದ ಸೈನ್ಯಗಳನ್ನು ನಡೆಸುತ್ತಿದ್ದಾಗ ಆಗಸ್ಟ್ ೧೫ ರಂದು ಜಪಾನೀಯರು ಶರಣಾಗಿದ್ದರು. ಅವರ ಜೀವನದ ಸಫಲ ಗಳಿಗೆಗಳಲ್ಲಿ ಅದೊಂದಾಗಿತ್ತು. ವಿಶ್ವದಲ್ಲಿನ ಹೊಸ ರಾಜ್ಯವೊಂದರ ನಿರ್ಮಾಣಕ್ಕೆ ಅದಕ್ಕಿಂತ ದೊಡ್ಡ ದಿನ ಬೇರೆ ಯಾವುದಿದೆ?

ಭಾವನಾವಶರಾಗಿ ಅವರು ಘೋಷಿಸಿದರು, "ಭಾರತೀಯ ಕೈಗಳಿಗೆ ಅಧಿಕಾರದ ಕೊನೆಯ ಹಸ್ತಾಂತರ ೧೫ ನೇ ಆಗಸ್ಟ್ ೧೯೪೭ ರಂದು ಆಗುವುದು."

ಏಕಾಏಕಿಯಾಗಿ ಮೌಂಟ್ ಬ್ಯಾಟನ್ ಕೊನೆಯ ದಿನಾಂಕವನ್ನು ತೀರ್ಮಾನಿಸಿದ್ದನ್ನು ಕೇಳಿ ಲಂಡನ್ನಿನ ಅಧಿಕಾರವಲಯಗಳಲ್ಲಿ ಬಿರುಗಾಳಿಯೆದ್ದಿತು. ಸ್ವತಃ ವೈಸ್‌ರಾಯರ ಸಹಾಯಕರಿಗೂ ಅವರು ಈ ಪರಿಯ ಆತುರವನ್ನು ತೋರಿಸುತ್ತಾರೆಂಬ ಕಲ್ಪನೆ ಇರಲಿಲ್ಲ. ಇತ್ತ ಭಾರತದ ಉದ್ದಗಲಕ್ಕೂ ಜ್ಯೋತಿಷಿಗಳು ಆ ದಿನದ ಗ್ರಹಗತಿಗಳನ್ನು ನೋಡಲು ಪ್ರಾರಂಭಿಸಿದರು. ಕಲ್ಕತ್ತೆಯಲ್ಲಿ ಗ್ರಹಗತಿಗಳನ್ನು ಲೆಕ್ಕ ಹಾಕಿದ ಸ್ವಾಮಿ ಮದನಾನಂದರಿಗೆ ಆಘಾತವೊಂದು ಕಾದಿತ್ತು. ಅಂದು ಪ್ರತಿಯೊಂದು ಗ್ರಹವೂ ಅನರ್ಥವನ್ನೇ ಸೂಚಿಸುತ್ತಿತ್ತು. ಮದನಾನಂದರು ತಕ್ಷಣವೇ ವೈಸ್‌ರಾಯರಿಗೆ ಪತ್ರ ಬರೆದರು: 'ದಯಮಾಡಿ ಆಗಸ್ಟ್ ೧೫ ಕ್ಕೆ ಸ್ವಾತಂತ್ರ್ಯ ಕೊಡಬೇಡಿರಿ ಆ ದಿನ ಎಲ್ಲಾ ಗ್ರಹ ನಕ್ಷತ್ರಗಳಿಂದಲೂ ಶಪಿತವಾಗಿದೆ.'

ಕೊನೆಗೂ ಈ ಭಾರತೀಯ ಮುಖಂಡರು ಒಪ್ಪುವಂತೆ ಮಾಡಿದೆನಲ್ಲ ಎಂದು ವೈಸ್‌ರಾಯರು ತೃಪ್ತಿಯ ಉಸಿರು ಬಿಡುವಷ್ಟರಲ್ಲಿ ಅವರಿಗಿನ್ನೊಂದು ಕುತ್ತು ಕಾದಿತ್ತು. ಅದುವೆ ಭಾರತದ ೫೬೫ ಮಹಾರಾಜ, ನವಾಬರುಗಳ ಸಮಸ್ಯೆ. ರಾಜಕೀಯ ನಾಯಕರು, ಭಾರತವನ್ನು ಕೇವಲ ವಿಭಜಿಸಿದ್ದರೆ ಇವರು ಅದನ್ನು ಪುಡಿಪುಡಿ ಮಾಡಬಹುದಾಗಿತ್ತು. ತಮ್ಮದೇ ಆದ ಸೈನ್ಯ, ಅಂಚೆ, ನಗದು, ರೈಲು. ರಸ್ತೆಗಳನ್ನು ಹೊಂದಿ ಪ್ರತ್ಯೇಕವಾಗಿದ್ದ ಈ ರಾಜರುಗಳು ಪ್ರತ್ಯೇಕ ಸ್ವಾತಂತ್ರ್ಯಕ್ಕಾಗಿ ಒತ್ತಾಯ ಮಾಡಲಾರಂಭಿಸಿದ್ದರು. ಮಹಾರಾಜರುಗಳ ವಿಷಯದಲ್ಲಿ ಅತ್ಯಂತ ಸಹಾನುಭೂತಿಯುಳ್ಳವರಾಗಿದ್ದ 'ಸರ್' ಕೋನ್ರಾಡ್ ಕೋರ್‌ಫೀಲ್ಡರು ಮೇ ತಿಂಗಳಲ್ಲಿ ಗುಟ್ಟಾಗಿ ಇಂಗ್ಲೆಂಡಿಗೆ ಹೋಗಿ ಸರಕಾರದೊಡನೆ ಮಹಾರಾಜರುಗಳ ವತಿಯಿಂದ ಅವರ ಬೇಡಿಕೆಗಳನ್ನು ಮಂಡಿಸಿದ್ದರು. ರಾಜರುಗಳು ಬ್ರಿಟಿಶ್ ಸತ್ತೆಗೆ ಒಳಗಾಗುವ ಮೊದಲು ಅವರಿಗಿದ್ದ ಸವಲತ್ತುಗಳೆಲ್ಲ ಅವರಿಗೆ ಈಗ ತಿರುಗಿ ದೊರೆಯಬೇಕೆಂಬುದನ್ನು ಬ್ರಿಟಿಶ್ ಸರಕಾರ ತತ್ತ್ವಶಃ ಒಪ್ಪಿಕೊಂಡಿತ್ತು.

'ನಾನು ಇಂಗ್ಲೆಂಡಿನಲ್ಲಿದ್ದಾಗ ರಾಜ ಮಹಾ-

ರಾಜರುಗಳ ಸಮಸ್ಯೆ ಇಷ್ಟು ಆಳವಾಗಿರಬಹುದೆಂಬ ಸುಳಿವನ್ನು ಸಹ ನನಗೆ ಕೊಟ್ಟಿರಲಿಲ್ಲ' ಎಂದು ವರದಿಯೊಂದರಲ್ಲಿ ಮೌಂಟ್‌ಬ್ಯಾಟನ್ ಆಕ್ಷೇಪಿಸಿದರು.

ಏನಿದ್ದರೂ ಮಹಾರಾಜರ ಸಮಸ್ಯೆಯನ್ನು ಬಗೆಹರಿಸಲು ಮೌಂಟ್‌ಬ್ಯಾಟನ್ನರಿಗಿಂತ ಯೋಗ್ಯರು ಬೇರಾರೂ ಇರಲಿಲ್ಲ. ಬ್ರಿಟಿಶ್ ರಾಜವಂಶದ ರಕ್ತ ಅವರಲ್ಲಿ ಹರಿಯುತ್ತಿತ್ತಲ್ಲದೇ ಹಿಂದಕ್ಕೆ ಪ್ರಿನ್ಸ್ ಆಫ್ ವೇಲ್ಸರೊಡನೆ ಅವರು ಬಂದಾಗ ಎಷ್ಟೋ ಮಹಾರಾಜರು ಅವರ ಆಪ್ತ ಮಿತ್ರರೂ ಆಗಿದ್ದರು. ಹೆಚ್ಚಿನ ಮಹಾರಾಜರು, ಮೌಂಟ್‌ಬ್ಯಾಟನ್ ತಮ್ಮ ವಿಮೋಚಕರಾಗಿ ತಮಗೆ ಸ್ವಾತಂತ್ರ್ಯ ಕೊಡಿಸುತ್ತಾರೆಂದು ನಂಬಿದ್ದರು. ವೈಸ್‌ರಾಯರಿಗೆ ಅದನ್ನು ಮಾಡುವ ಸಾಮರ್ಥ್ಯ, ಅಥವಾ ಇಚ್ಛೆ—ಎರಡೂ ಇರಲಿಲ್ಲ. ಅವರು ಮಾಡಬಹುದಾಗಿದ್ದ ಅತಿ ದೊಡ್ಡ ಉಪಕಾರವೆಂದರೆ ಮಹಾರಾಜರನ್ನು ಪ್ರತ್ಯೇಕ ಸ್ವಾತಂತ್ರ್ಯದ ಭ್ರಮೆಯಿಂದ ಪಾರು ಮಾಡುವುದು. ಆ ಹುಚ್ಚನ್ನು ಬಿಟ್ಟು ಆಗಸ್ಟ್ ೧೫ರೊಳಗಾಗಿ ಭಾರತ ಅಥವಾ ಪಾಕಿಸ್ತಾನದಲ್ಲಿ ಸೇರಿಕೊಳ್ಳಲು ಅವರನ್ನು ಒತ್ತಾಯಿಸಬೇಕೆಂದು ನಿರ್ಧರಿಸಿದ್ದರು. ಆದರೆ ಅದಕ್ಕೆ ಪ್ರತಿಯಾಗಿ ಅವರ ಸ್ವಂತದ ಭದ್ರತೆಗಾಗಿ ಕಾಂಗ್ರೆಸ್ ವಿಶೇಷ ಸವಲತ್ತುಗಳನ್ನು ಕೊಡಬೇಕಾಗುವುದು. ತಮ್ಮ ಒಪ್ಪಂದವನ್ನು ಅವರು ವಲ್ಲಭಭಾಯಿ ಪಟೇಲರಿಗೆ ವಿವರಿಸಿದರು. ರಾಜರಿಗೆ ಬಿರುದುಗಳು, ಅರಮನೆಗಳು, ರಾಜಧನ ಇತ್ಯಾದಿ ಸವಲತ್ತುಗಳನ್ನು ಬಿಟ್ಟುಕೊಟ್ಟರೆ ತಾವು ಅವರನ್ನು ಭಾರತದಲ್ಲಿ ಸೇರಲು ಒಪ್ಪಿಸುವುದಾಗಿ ಹೇಳಿದರು.

ಪಟೇಲರಿಗೆ ನೀರೂರಿತು. ರಾಜರೊಡನೆ ಮೌಂಟ್‌ಬ್ಯಾಟನ್ನರಷ್ಟು ಸಮರ್ಥವಾಗಿ ವ್ಯವಹರಿಸಲು ಬೇರೆ ಯಾರಿಂದಲೂ ಆಗದೆಂದು ಅವರು ಅರಿತಿದ್ದರು. ಆದರೆ ಅವರು ಷರತ್ತು ಹಾಕಿದರು. "ನೀವು ಎಲ್ಲರನ್ನೂ ತರಬೇಕು. ಗಿಡದಲ್ಲಿದ್ದ ಎಲ್ಲ ಹಣ್ಣುಗಳೂ ನಿಮ್ಮ ಬುಟ್ಟಿಗೆ ಬೀಳಬೇಕು. ಅಂದರೆ ಮಾತ್ರ ನಾನು ಬುಟ್ಟಿಯನ್ನು ಕೊಳ್ಳುವೆ."

"ಒಂದು ಡಝನ್ ನನಗಾಗಿ ಬಿಟ್ಟುಕೊಡುತ್ತೀರಾ?" ಮೌಂಟ್‌ಬ್ಯಾಟನ್ ಕೇಳಿದರು.

"ಬಹಳವಾಯಿತು. ಹೆಚ್ಚೆಂದರೆ ಎರಡು ಕೊಡಬಲ್ಲೆ."

"ತೀರ ಕಡಿಮೆ."

ಕೆಲ ನಿಮಿಷಗಳವರೆಗೆ ಭಾರತದ ಕೊನೆಯ ವೈಸ್‌ರಾಯ್ ಮತ್ತು ಅದರ ಭಾವೀ ಗೃಹಮಂತ್ರಿ ಚೌಕಾಸಿ ಮಾಡಿದರು. ಕೊನೆಗೆ ಆರನ್ನು ಬಿಡಬಹುದೆಂದು ನಿರ್ಧಾರವಾಯಿತು.

*

ಮೌಂಟ್‌ಬ್ಯಾಟನ್ನರಿಗೆ ನೆಹರೂ ಮಾಡಿಕೊಳ್ಳುತ್ತಿದ್ದ ವಿನಂತಿ ಅಭೂತಪೂರ್ವವಾದಷ್ಟೇ ವಿಲಕ್ಷಣವೂ ಆಗಿತ್ತು. ಭಾರತದ ಆ ಕೊನೆಯ ವೈಸ್‌ರಾಯನನ್ನು ಅವರು ಮೊದಲ ಗವರ್ನರ್ ಜನರಲ್ಲನಾಗಲು ಕೇಳಿಕೊಳ್ಳುತ್ತಿದ್ದರು. ಹಾಗೆ ನೋಡಿದರೆ ಈ ವಿಚಾರ ಮೂಲತಃ ಜಿನ್ನಾರದಾಗಿತ್ತು. ಪಾಕಿಸ್ತಾನಕ್ಕೆ ದೇಶದ ಆಸ್ತಿಯಲ್ಲಿ ನ್ಯಾಯವಾದ ಪಾಲು ಸಿಗುತ್ತದೆಂದು ಖಚಿತಪಡಿಸಲು ಮೌಂಟ್‌ಬ್ಯಾಟನ್ ಮಧ್ಯವರ್ತಿಯಾಗಬೇಕೆಂದು ಜಿನ್ನಾ ಕೇಳಿಕೊಂಡಿದ್ದರು. ಎಷ್ಟೇ ಗೌರವಾಸ್ಪದವಾಗಿದ್ದರೂ ನೆಹರೂರ ಕೊಡುಗೆಯನ್ನು ಒಪ್ಪಲು ಮೌಂಟ್‌ಬ್ಯಾಟನ್ ತಯಾರಿರಲಿಲ್ಲ. ಇಲ್ಲಿಯವರೆಗೆ ಅವರಿಗೆ ಸಿಕ್ಕ ಯಶಸ್ಸು ಅದ್ಭುತವಾದದ್ದು ನಿಜ. ಆದರೆ ವಿಭಜನೆಯ ನಂತರ ಆಗಲಿದ್ದ ಅನಾಹುತಗಳ ಮುನ್ಸೂಚನೆಯೂ ಅವರಿಗಿತ್ತು. ಅದರಲ್ಲಿ ಸಿಕ್ಕಿದರೆ ತಮ್ಮ ಮೊದಲಿನ ಕೀರ್ತಿ ಹಾಳಾಗಿ ಹೋದೀತು. ಅದಲ್ಲದೆ ಮಧ್ಯವರ್ತಿಯಾಗಿ ತಮ್ಮಿಂದೇನಾದರೂ ಕೆಲಸವಾಗುವಂತಿದ್ದರೆ ಅದು ತಾವು ಪಾಕಿಸ್ತಾನದ ಗವರ್ನರ ಜನರಲ್ ಆದರೆ ಮಾತ್ರ ಸಾಧ್ಯ...

ಆದರೆ ರಾಜ್ಯವೊಂದರ ವರಿಷ್ಠನಿಗೆ ಸಿಗಬಹುದಾದ ವೈಭವ ಅದ್ದೂರಿಯ ಸಮಾ-

ರಂಭಗಳ ಪ್ರಲೋಭನೆಯನ್ನು ತಡೆದು ಕೊಳ್ಳಲು ಜಿನ್ನಾರಿಂದ ಸಾಧ್ಯವಿರಲಿಲ್ಲ. ಪಾಕಿಸ್ತಾನದ ಗವರ್ನರ್ ಜನರಲ್ ತಾವೇ ಎಂದವರು ನಿರ್ಧರಿಸಿದ್ದರು.

ಮೌಂಟ್‌ಬ್ಯಾಟನ್ ಆಕ್ಷೇಪಿಸಿದರು. ಎರಡೂ ರಾಷ್ಟ್ರಗಳು ಅನುಸರಿಸಲಿದ್ದ ಬ್ರಿಟಿಶ್ ಸಂವಿಧಾನದ ಪ್ರಕಾರ ರಾಷ್ಟ್ರದ ವರಿಷ್ಠನ ಹುದ್ದೆ ನಾಮಮಾತ್ರಕ್ಕೆ. ನಿಜವಾದ ಅಧಿಕಾರ ಪ್ರಧಾನಮಂತ್ರಿಯ ಕೈಯಲ್ಲಿರಬೇಕಲ್ಲವೆ ? ಆದರೆ ಜಿನ್ನಾರ ವಿಚಾರವೇ ಬೇರೆ.

"ಪಾಕಿಸ್ತಾನದಲ್ಲಿ ನಾನು ಗವರ್ನರ್ ಜನರಲ್ ಆಗುತ್ತೇನೆ. ಪ್ರಧಾನಮಂತ್ರಿಯಾದವನು, ನಾನು ಏನು ಮಾಡಲು ಹೇಳುತ್ತೇನೋ ಅದನ್ನು ಮಾಡುತ್ತಾನೆ."

ಮೌಂಟ್‌ಬ್ಯಾಟನ್ನನ್ನರು ಹುದ್ದೆಯನ್ನು ಸ್ವೀಕರಿಸಬೇಕೆಂದು ಲಂಡನ್ನಿನಿಂದಲೂ ಒತ್ತಾಯ ಬಂತು. ಆ್ಯಟ್ಲಿ, ಚರ್ಚಿಲ್, ಮೌಂಟ್‌ಬ್ಯಾಟನ್ನರ ಕಕ್ಕನ ಮಗನೇ ಆಗಿದ್ದ ಚಕ್ರವರ್ತಿ ಆರನೇ ಜಾರ್ಜ್ ಎಲ್ಲರೂ ನೆಹರೂರ ಈ ವಿನಂತಿಯನ್ನು ಬ್ರಿಟಿಶರ ಸರಕಾರಕ್ಕೆ ಸಲ್ಲಿಸಿದ ಮಹಾ ಗೌರವವೆಂದು ಭಾವಿಸಿ ಅದನ್ನು ಸ್ವೀಕರಿಸಲು ವೈಸ್‌ರಾಯರನ್ನು ಒತ್ತಾಯ ಪಡಿಸಿದರು.

ಮೌಂಟ್‌ಬ್ಯಾಟನ್ ಒಪ್ಪುವುದೇ ಆದಲ್ಲಿ ಪೂರ್ವಭಾವಿಯಾಗಿ ಒಬ್ಬ ವ್ಯಕ್ತಿಯ ಅನುಮತಿ ಅತ್ಯವಶ್ಯವಾಗಿತ್ತು. ತನ್ನ ಆಯುಷ್ಯದ ಬಹುಭಾಗ ಯುದ್ಧದಲ್ಲಿ ಕಳೆದಿದ್ದ ವ್ಯಕ್ತಿಯೊಬ್ಬ ತಮ್ಮ ಕನಸಿನ ಸ್ವತಂತ್ರ ಭಾರತದ ವರಿಷ್ಠನ ಹುದ್ದೆಯನ್ನು ಅಲಂಕರಿಸುವುದು ಗಾಂಧೀಜಿಗೆ ಒಪ್ಪಿಗೆಯಾಗಲಿಕ್ಕಿಲ್ಲವೆಂದು ಮೌಂಟ್‌ಬ್ಯಾಟನ್ ತಿಳಿದಿದ್ದರು. ಅವರು ಗಾಂಧೀಜಿಯಿಂದ ಬಹಳಷ್ಟು ಆಕರ್ಷಿತರಾಗಿದ್ದರು. ಅವರಿಬ್ಬರ ಪ್ರತಿ ಭೆಟ್ಟಿಯಲ್ಲೂ ಗಾಂಧೀಜಿಯ ಬಗೆಗಿನ ಅವರ ಪ್ರೇಮ ಹೆಚ್ಚುತ್ತಿತ್ತು. ಒಂದು ಮಧ್ಯಾಹ್ನ ಗಾಂಧೀಜಿ ಸ್ವತಃ ಬಂದು ಭಾರತದ ಗವರ್ನರ್ ಜನರಲ್ಲನ ಹುದ್ದೆಯನ್ನು ಸ್ವೀಕರಿಸಲು ಕೇಳಿಕೊಂಡಾಗ ಮೌಂಟ್‌ಬ್ಯಾಟನ್ನರ ಕಣ್ಣು ತುಂಬಿ ಬಂದವು.

'ಇಷ್ಟು ವರ್ಷ ಅವರನ್ನು ಜೇಲಿನಲ್ಲಿ ಕೊಳೆಸಿದ್ದೇವೆ, ಹಿಂಸಿಸಿದ್ದೇವೆ, ತಿರಸ್ಕರಿಸಿದ್ದೇವೆ. ಆದರೂ ನನಗೆ ವಿನಂತಿಸಿಕೊಳ್ಳುವ ದೊಡ್ಡ ಗುಣ ಅವರಲ್ಲಿದೆ' ಎಂದಂದುಕೊಂಡ ಮೌಂಟ್‌ಬ್ಯಾಟನ್ ಕೂಡಲೇ ಒಪ್ಪಿದರು.

ಆದರೆ, ಗಾಂಧಿ ಮುಂದುವರಿಸಿದರು, ಈ ಭವ್ಯ ಬಂಗಲೆ, ವೈಸರಾಯಿಕೆಯ ವೈಭವ, ಐಷಾರಾಮುಗಳನ್ನೆಲ್ಲ ಸ್ವತಂತ್ರ ಭಾರತದ ಪ್ರಪ್ರಥಮ ವರಿಷ್ಠನು ತ್ಯಜಿಸಬೇಕು. ಇತರರಿಗೆ ಮೇಲ್ಪಂಕ್ತಿ ಹಾಕಿಕೊಡಲು ಮೌಂಟ್‌ಬ್ಯಾಟನ್ ಆಳು ಹೋಳುಗಳಿಲ್ಲದ ಸಾದಾ ಬಂಗಲೆಯಲ್ಲಿ ವಾಸಿಸಬೇಕು.

ಚಿಕ್ಕ ನಗುವೊಂದು ಮೌಂಟ್‌ಬ್ಯಾಟನ್ನರ ಮುಖದಲ್ಲಿ ಹಾಯ್ದುಹೋಯಿತು. 'ಘಾಟಿ ಮುದುಕ ! ನಾಳೆ ನನ್ನ ಪಾಯಖಾನೆಯನ್ನು ನಾನೇ ತೊಳೆಯಬೇಕೆಂದು ಹೇಳಲೂ ಹಿಂದೆ ಮುಂದೆ ನೋಡಲಿಕ್ಕಿಲ್ಲ!!...'

*

ನವದೆಹಲಿ ಜುಲೈ ೧೯೪೭

ಜಗತ್ತಿನಲ್ಲೇ ಅತಿ ವಿಶಿಷ್ಟವಾದ ಸಂಘದ ಕೊನೆಯ ಸಭೆ ನಡೆಯುತ್ತಿತ್ತು, 'ಚೇಂಬರ್ ಆಫ್ ಪ್ರಿನ್ಸಸ್'ನ ಸುಮಾರು ೧೫೦ ಸದಸ್ಯರು ವೈಸರಾಯರ ಭಾಷಣವನ್ನು ಕೇಳಲು ಕಾಯ್ದು ಕುಳಿತಿದ್ದರು. ಪಟೇಲರ ಬುಟ್ಟಿಯಲ್ಲಿ ಹಣ್ಣುಗಳನ್ನು ಉದುರಿಸುವ ಕಾರ್ಯ ಪ್ರಾರಂಭವಾಗಿತ್ತು.

ಬಿಚ್ಚು ನುಡಿಗಳಿಂದ ಮೌಂಟ್‌ಬ್ಯಾಟನ್ ಅವರಿಗೆಲ್ಲ ಭಾರತಕ್ಕೆ ಅಥವಾ ಪಾಕಿಸ್ತಾನಕ್ಕೆ ಸೇರಲು ಮನವಿ ಮಾಡಿಕೊಂಡರು. ಯುದ್ಧಕ್ಕೆ ಕರೆ ಕೊಡುವುದಾದರೆ ರಕ್ತಪಾತ ಅನರ್ಥಗಳನ್ನು ಬಿಟ್ಟು ಮತ್ತೇನೂ ಸಾಧಿಸುವುದಿಲ್ಲ. ಹೊರಗಿನ ಜಗತ್ತು ಬದಲಾಗಿ ಬಿಟ್ಟಿದೆ. ರಾಜ ಮಹಾರಾಜರುಗಳ ಸಂತತಿ ನಿಧಾನವಾಗಿ ಕಣ್ಮರೆಯಾಗುತ್ತಿದೆ. ಆದರೆ ಅವರಲ್ಲಿ ಹೆಚ್ಚಿನವರಿಗೆ ಸಮಾಧಾನ ನೀಡಿದ ಒಂದೇ ಮಾತೆಂದರೆ 'ತಾವು ಎಲ್ಲಿಯೇ ಸೇರಿದರೂ ಸಾರ್ವಭೌಮರು

ತಮಗೆ ನೀಡಿದ ಬಿರುದು ಬಾವಲಿಗಳಿಗೆ ಧಕ್ಕೆ ಬರುವುದಿಲ್ಲ' ಎಂಬುದು !

ಅವರ ಕೆಲವು ಸಂಶಯಗಳನ್ನು ಕೇಳಿ ಮೌಂಟ್‌ಬ್ಯಾಟನ್ ನಿಬ್ಬೆರಗಾದರು. ಈ ರಾಜರಿಗೆ ಭಾರತ ಅಥವಾ ಪಾಕಿಸ್ತಾನಕ್ಕೆ ಸೇರುವುದೆಂದರೆ ಏನೆಂದು ಗೊತ್ತಿದೆಯೇ ಎಂಬ ಸಂಶಯ ಬರುವಂತಾಯಿತು. ತಾನು ಭಾರತಕ್ಕೆ ಸೇರಿದ ಮೇಲೆಯೂ ಹುಲಿ ಬೇಟೆಯಾಡಲು ತನಗೆ ಅನುಮತಿ ದೊರಕುತ್ತದೆಯೇ ಎಂದೊಬ್ಬ ರಾಜನಿಗೆ ಚಿಂತೆಯಾಗಿತ್ತು.

ಈ ಮಹತ್ವದ ಪ್ರಸಂಗದಲ್ಲಿ ಒಬ್ಬ ರಾಜ ಯುರೋಪಿನ ಜೂಜುಕಟ್ಟೆಗಳ ದರ್ಶನಕ್ಕಾಗಿ ಹೋಗಿದ್ದರಿಂದ ಅವನ ಮಂತ್ರಿಗೆ ಏನು ಮಾಡಲೂ ತೋಚದಾಗಿತ್ತು.

ಮೌಂಟ್‌ಬ್ಯಾಟನ್ ತಮ್ಮ ಮೇಜಿನ ಮೇಲಿದ್ದ ಗಾಜಿನ ಪೇಪರ್‌ವೇಟನ್ನು ಎತ್ತಿಕೊಂಡು ಘೋಷಿಸಿದರು:-"ನಿಮ್ಮ ಪ್ರಶ್ನೆಯ ಉತ್ತರಕ್ಕಾಗಿ ನಾನು ನನ್ನ ಸ್ಫಟಿಕಶಿಲೆಯಲ್ಲಿ ನೋಡುತ್ತೇನೆ." ಸಭೆ ನಿಶ್ಶಬ್ದವಾಯಿತು. ದೀರ್ಘವಾಗಿ ಪೇಪರ್‌ವೇಟನ್ನು ಒಂದೇ ದೃಷ್ಟಿಯಿಂದ ನೋಡಿ, ಎಷ್ಟು ಸಾಧ್ಯವೋ ಅಷ್ಟು ನಾಟಕೀಯವಾಗಿ, ಮೌಂಟಬ್ಯಾಟನ್ ಮೆತ್ತಗೆ ಉಸುರಲಾರಂಭಿಸಿದರು:

"ಹಾ,... ಅದೋ ನಿಮ್ಮ ಯುವರಾಜರು ಕಾಣುತ್ತಿದ್ದಾರೆ... ಕೇಳುತ್ತಿದ್ದಾರೆ... ಏನದು?... ಅವರು ಹೇಳುತ್ತಾರೆ ಸಮಾವೇಶ ಪತ್ರಕ್ಕೆ ಸಹಿ ಹಾಕಿ ಬಿಡಿ ಎಂದು."

ಕಾಶ್ಮೀರದ ಮಹಾರಾಜ ಹರಿಸಿಂಗರದೂ, ಮೌಂಟ್‌ಬ್ಯಾಟನ್ನರದೂ ಹಳೆಯ ಮೈತ್ರಿಯಾಗಿತ್ತು. ಈಗ, ಯಾವುದಾದರೊಂದು ಕಡೆ ಸೇರುವಂತೆ ಮಹಾರಾಜರ ಮನವೊಲಿಸಲು ಮೌಂಟ್‌ಬ್ಯಾಟನ್ ಶ್ರೀನಗರಕ್ಕೆ ಧಾವಿಸಿದ್ದರು. ಅವರ ದೃಷ್ಟಿಯಲ್ಲಿ ಜನಸಂಖ್ಯೆಯ ಆಧಾರದ ಮೇಲೆ ಕಾಶ್ಮೀರ ಪಾಕಿಸ್ತಾನಕ್ಕೆ ಸೇರಬೇಕಿತ್ತು. ಅದಕ್ಕೆ ಭಾರತದ ಯಾವ ಆಕ್ಷೇಪಣೆಯೂ ಇಲ್ಲವೆಂದು ಪಟೇಲರ ಆಶ್ವಾಸನೆಯನ್ನು ಮೌಂಟ್‌ಬ್ಯಾಟನ್ ತಂದಿದ್ದರು.

"ಯಾವ ಕಾರಣಕ್ಕೂ ನಾನು ಪಾಕಿಸ್ತಾನವನ್ನು ಸೇರಲಾರೆ," ಮಹಾರಾಜರು ದೃಢವಾಗಿ ಹೇಳಿದರು.

"ನಿಮ್ಮ ಜನಸಂಖ್ಯೆಯಲ್ಲಿ ೯೦% ಮುಸ್ಲಿಮರಿರುವುದರಿಂದ ನನಗಂತೂ ಅದೇ ಸರಿ ಕಾಣುತ್ತದೆ. ಚಿಂತೆಯಿಲ್ಲ ನೀವು ಭಾರತವನ್ನೇ ಸೇರಿಕೊಳ್ಳಿ. ಬೇಕಿದ್ದರೆ ನಿಮ್ಮ ಗಡಿಗಳ ರಕ್ಷಣೆಗಾಗಿ ಸೈನ್ಯವನ್ನು ಕಳಿಸಿಕೊಡುತ್ತೇನೆ," ಮೌಂಟ್‌ಬ್ಯಾಟನ್ ಹೇಳಿದರು.

"ನಾನು ಭಾರತವನ್ನೂ ಸೇರುವುದಿಲ್ಲ; ಸ್ವತಂತ್ರನಾಗುತ್ತೇನೆ."

ಯಾವುದನ್ನು ಕೇಳಲು ವೈಸ್‌ರಾಯರಿಗೆ ಮನಸ್ಸಿರಲಿಲ್ಲವೋ ಅದನ್ನೇ ಮಹಾರಾಜರು ಹೇಳಿದ್ದರು. ಮೌಂಟ್‌ಬ್ಯಾಟನ್ ಸಿಡಿದೆದ್ದರು. "ಸ್ವತಂತ್ರನಾಗುವುದು ಸುಮ್ಮನೇ ಆಗುವ ವಿಷಯವಲ್ಲ. ಎರಡು ಬಲಿಷ್ಠ ದೇಶಗಳ ನಡುವೆ ಸಿಕ್ಕಿಕೊಂಡಿದ್ದೀರಿ. ನಿಮ್ಮಿಂದಾಗಿ ಅವರಲ್ಲಿ ಅನಾವಶ್ಯಕ ಮನಸ್ತಾಪವಾಗುತ್ತದಷ್ಟೇ. ಕೊನೆಗೆ ನಿಮ್ಮ ರಾಜ್ಯ ಅವರಿಬ್ಬರ ರಣರಂಗವಾಗಿ ಪರಿಣಮಿಸುತ್ತದೆ. ನಿಮ್ಮ ಸಿಂಹಾಸನವನ್ನಷ್ಟೇ ಅಲ್ಲ, ಪ್ರಾಣವನ್ನೂ ಕಳೆದುಕೊಳ್ಳಬೇಕಾದೀತು. ಜೋಕೆ!"

ಮುಂದಿನ ಎರಡು ದಿನ ವೈಸ್‌ರಾಯರು ಮಹಾರಾಜರ ಮೇಲೆ ಸಾಧ್ಯವಿದ್ದಷ್ಟೂ ಒತ್ತಡವನ್ನು ತಂದರು. ಮೂರನೇ ದಿನ ಮಹಾರಾಜರು ಡೋಲಾಯಮಾನರಾದಂತೆ ಅವರಿಗೆ ಭಾಸವಾಯಿತು. ಮರುದಿನವೇ ತಾವು ಹೊರಡಬೇಕಿದ್ದುದರಿಂದ ನಾಲ್ಕನೆಯ ಮುಂಜಾವು ಮಹಾರಾಜರೊಡನೆ ಕೊನೆಯ ಭೇಟಿಯನ್ನು ಗೊತ್ತು ಮಾಡಿಕೊಂಡರು.

ಕಾಶ್ಮೀರದ 'ಹಣ್ಣು' ಅಷ್ಟು ಸುಲಭವಾಗಿ ಉದುರುವುದಿರಲಿಲ್ಲ. ಮರುದಿನ ಹೊಟ್ಟೆನೋವಿನ ನೆಪ ಮಾಡಿ ಮಹಾರಾಜರು ಭೇಟಿಯನ್ನು ತಪ್ಪಿಸಿದರು. ಈ 'ಹೊಟ್ಟೆನೋವಿ'ನ ಸ್ವರೂಪದ ಬಗ್ಗೆ ಮೌಂಟ್‌ಬ್ಯಾಟನ್ನರಿಗೆ ಬಲವಾದ ಸಂಶಯವಿತ್ತಾದರೂ ಅವರೇನೂ ಮಾಡುವಂತಿರಲಿಲ್ಲ; ಕಾಶ್ಮೀರದ

ಕಹಿಯಾದ ಸಮಸ್ಯೆ ಒಂದು ರಾಜಕೀಯ ಹೊಟ್ಟೆನೋವಿನಲ್ಲಿ ಉದ್ಭವಗೊಂಡಿತ್ತು.

ಬೇರೆ ಕಡೆಗೆಲ್ಲ ಮೌಂಟ್‌ಬ್ಯಾಟನ್ನರಿಗೆ ಕಾಶ್ಮೀರಕ್ಕಿಂತ ಹೆಚ್ಚಿನ ಯಶಸ್ಸು ದೊರಕಿತು. ಕೆಲವೇ ಜನ ರಾಜರು ಪಟೇಲ, ವಿ. ಪಿ. ಮೆನನ್, ಮೌಂಟ್‌ಬ್ಯಾಟನ್ನರ ಬಂಟ್ಟಿಗೆ ಬೀಳಲು ನಿರಾಕರಿಸಿದರು. ಅಗಸ್ಟ ೧೫ ಹತ್ತಿರ ಬಂದಂತೆ ಅವರ ಮೇಲೆ ತೀವ್ರವಾದ ಒತ್ತಡಗಳನ್ನು ಹೇರಲಾಯಿತು. ಕಾಂಗ್ರೆಸ್ ಸಂಘಟನೆಗಳು ಬಲವಾಗಿದ್ದಲ್ಲೆಲ್ಲ ಹರತಾಳ, ಮೆರವಣಿಗೆ, ಪ್ರತಿಭಟನೆಗಳನ್ನು ನಡೆಸಲು ಪಟೇಲರ ಆಜ್ಞೆಯಾಯಿತು. ಓಡಿಸಾದ ರಾಜನನ್ನು ಅವನ ಅರಮನೆಯಲ್ಲಿ ಘೇರಾವ್ ಮಾಡಿದ ಜನತೆ ಅವನು ಸಮಾವೇಶ ಪತ್ರಕ್ಕೆ ಸಹಿ ಹಾಕಿದ ಹೊರತು ಬಿಡುವುದಿಲ್ಲವೆಂದು ಬೆದರಿಸಿತು. ತಿರುವನಂತಪುರದಲ್ಲಿ ಕಾಂಗ್ರೆಸ್ ಮೆರವಣಿಗೆಗಾರನೊಬ್ಬ ಸಂಸ್ಥಾನದ ಮಂತ್ರಿಯ ಮುಖವನ್ನು ತಿವಿದುಬಿಟ್ಟ. ಮಹಾರಾಜರು ಗಾಬರಿಯಾಗಿ ತಕ್ಷಣವೇ ದಿಲ್ಲಿಗೆ ಸಮ್ಮತಿಯ ತಂತಿ ಕಳಿಸಿದರು.

ಕೊನೆಗೂ ಮೌಂಟ್‌ಬ್ಯಾಟನ್ ತಮ್ಮ ಕರಾರನ್ನು ಪಾಲಿಸಿದರು. ಆದರೆ ಮೂರು ಮಹತ್ವದ ಹಣ್ಣುಗಳು ಹಾಗೇ ಉಳಿದವು: ಹೈದರಾಬಾದಿನ ನಿಜಾಮ, ಕಾಶ್ಮೀರದ ಮಹಾರಾಜರು ಪ್ರತ್ಯೇಕ ಸ್ವಾತಂತ್ರ್ಯವನ್ನು ಬೇಡಿದರು. ಮೂರನೆಯವರಾದ ಜುನಾಗಢದ ನವಾಬರ ಕಾರಣ ಬೇರೆಯಾಗಿತ್ತು. ತಮ್ಮ ಹಿಂದೂ ರಾಜ್ಯಕ್ಕೂ ಪಾಕಿಸ್ತಾನಕ್ಕೂ ಕೂಡಿಕೊಂಡು ಯಾವ ಗಡಿಯೂ ಇಲ್ಲದಿದ್ದರೂ ಅವರು ಪಾಕಿಸ್ತಾನ ಸೇರಬೇಕು ಇಲ್ಲವೇ ಸ್ವತಂತ್ರರಾಗಬೇಕು ಎಂದು ನಿಶ್ಚಯಿಸಿದ್ದರು. ಅವರ ನಾಯಿಗಳಿಗೆ ವಿಷವಿಕ್ಕಿ ಕೊಲ್ಲುವುದೇ ಸ್ವತಂತ್ರ ಭಾರತದ ಮೊಟ್ಟ ಮೊದಲ ಕೆಲಸವೆಂದು ಲೀಗಿನ ಪ್ರತಿನಿಧಿಯೊಬ್ಬ ಜುನಾಗಢದ ನವಾಬರನ್ನು ನಂಬಿಸಿದ್ದ.*

"ಇವರು ಪಂಜಾಬ್ ಸಿ. ಐ. ಡಿ.ಯಲ್ಲಿರುವ ಎಂ. ಸ್ಯಾವೇಜ್," ಮೌಂಟ್‌ಬ್ಯಾಟನ್ನರು ಜಿನ್ನಾ ಮತ್ತು ಲಿಯಾಕತ್ ಅಲಿ ಖಾನರಿಗೆ ಪರಿಚಯ ಮಾಡಿಕೊಟ್ಟರು. "ಅವರು ನಿಮಗೊಂದು ಕಥೆ ಹೇಳಲಿದ್ದಾರೆ."

'ಕಥೆ' ಎಷ್ಟು ಗಂಭೀರವೂ ಮಹತ್ವದ್ದೂ ಆಗಿತ್ತೆಂದರೆ ಸ್ಯಾವೇಜರಿಗೂ ಅವರ ವಿಮಾನ ಹೊರಡುವ ಒಂದೇ ಗಂಟೆ ಮೊದಲು ಅದನ್ನು ಹೇಳಲಾಗಿತ್ತು. ಲಾಹೋರಿನ ಹುಚ್ಚಾಸ್ಪತ್ರೆಯ ರಹಸ್ಯ ಕೊಠಡಿಯೊಂದರಲ್ಲಿ ವಿಚಾರಣೆಗೊಳಗಾಗಿದ್ದ ಕೈದಿಗಳು ಮಹತ್ವದ ಮಾಹಿತಿಯನ್ನು ಹೊರಗೆಡವಿದ್ದರು. ಮಾಸ್ಟರ್ ತಾರಾಸಿಂಗರ ನೇತೃತ್ವದಲ್ಲಿ ಮುಸ್ಲಿಮರ ವಿರುದ್ಧ ಭಯೋತ್ಪಾದಕ ಚಟುವಟಿಕೆಗಳಲ್ಲಿ ನಿರತರಾಗಿದ್ದ ಸಿಖ್ ಉಗ್ರಗಾಮಿಗಳು ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್. ಎಸ್. ಎಸ್.)ದೊಡನೆ ಒಟ್ಟಾಗಿದ್ದರು. ಹೆಚ್ಚು ಸಂಘಟನೆ, ಸ್ಫೋಟಕಗಳ ತಾಂತ್ರಿಕ ಜ್ಞಾನ ಎರಡೂ ಇದ್ದ ಸಿಖ್ಖರು ಕರಾಚಿಗೆ ಸಾಮಾನುಗಳನ್ನು ಸಾಗಿಸುತ್ತಿದ್ದ 'ಪಾಕಿಸ್ತಾನ ಸ್ಪೆಶಲ್' ಗಳನ್ನು ನಾಶ ಮಾಡುವ ಕಾರ್ಯವನ್ನು ವಹಿಸಿಕೊಂಡಿದ್ದರು. ತಾರಾಸಿಂಗರು ಒಂದು ವೈರ್‌ಲೆಸ್ ಕೇಂದ್ರವನ್ನು ಸ್ಥಾಪಿಸಿ ಸಿಖ್ ದಾಳಿಗಾರ ತಂಡಗಳಿಗೆ ರೈಲುಗಳ ಮಾರ್ಗ, ಸಮಯಗಳ ಬಗ್ಗೆ ಮಾಹಿತಿ ಕೊಡಲು ಪ್ರಾರಂಭಿಸಿದ್ದರು.

ಆರ್. ಎಸ್. ಎಸ್. ನ ಹಿಂದೂ ಕಾರ್ಯಕರ್ತರಿಗೆ, ಮುಸ್ಲಿಮರಂತೆ ತೋರಿಸಿಕೊಳ್ಳುವುದು ಸಿಖ್ಖರಿಗಿಂತ ಸರಳವಾಗಿದ್ದುದರಿಂದ, ಕಾರ್ಯಾಚರಣೆಯ ಎರಡನೇ ಭಾಗವನ್ನು ಅವರಿಗೆ ಒಪ್ಪಿಸಲಾಗಿತ್ತು. ಸದ್ಯಕ್ಕೆ ಸಂಘವು

---

* ಜುನಾಗಢದ ನವಾಬರು ಬಹು ದೊಡ್ಡ ಶ್ವಾನ ಪ್ರೇಮಿ. ಅವರು ತಮ್ಮ ಪ್ರೀತಿಯ ಎರಡು ನಾಯಿಗಳ ವಿವಾಹವನ್ನು ರಾಜರಿಗೆ ಸಲ್ಲುವ ವೈಭವದಿಂದಲೇ ನಡೆಸಿದ್ದರಲ್ಲದೆ, ಅದಕ್ಕಾಗಿ ತಾವು ಕಳಿಸಿದ ಆಮಂತ್ರಣ ಮನ್ನಿಸಿ ವೈಸ್‌ರಾಯರು ಬರಲಿಲ್ಲವೆಂದು ಕುಪಿತರೂ ಆಗಿದ್ದರು. ಈ ಶ್ವಾನದಂಪತಿಯ 'ಪ್ರಥಮ ರಾತ್ರಿ'ಗಾಗಿ ಅವರ ಮಾಡಿದ್ದ ವ್ಯವಸ್ಥೆ ಕೂಡ ಎಂಥ ಲಕ್ಷ್ಮೀಪುತ್ರನನ್ನೂ ನಾಚಿಸುವಂತಿತ್ತು.

ತನ್ನ ಅತ್ಯುಗ್ರ ಸದಸ್ಯರನ್ನು ಕರಾಚಿಗೆ ಗುಟ್ಟಾಗಿ ಕಳಿಸಲಾರಂಭಿಸಿತ್ತು. ಪ್ರತಿಯೊಬ್ಬನ ಕೈಯಲ್ಲೂ ಒಂದು ಸೈನ್ಯದ ಹ್ಯಾಂಡ್-ಗ್ರೆನೇಡನ್ನು ಕೊಡಲಾಗಿತ್ತು. ಅವರಲ್ಲಿ ಯಾರಿಗೂ ಬೇರೆ ಯಾರ ಬಗ್ಗೆಯೂ ಏನೂ ಗೊತ್ತಿರಲಿಲ್ಲ. ಹೀಗಾಗಿ ಒಬ್ಬಿಬ್ಬರನ್ನು ಬಂಧಿಸಿದರೂ ಯಾವ ಪ್ರಯೋಜನವೂ ಇರಲಿಲ್ಲ. ಕರಾಚಿಯಲ್ಲಿದ್ದ ಉಗ್ರಗಾಮಿಗಳ ಒಟ್ಟು ಸಂಖ್ಯೆಯೂ ಎಷ್ಟೆಂದು ಗೊತ್ತಿರಲಿಲ್ಲ. ಆಗಸ್ಟ್ ೧೪ ರಂದು ಜಿನ್ನಾರು ಕರಾಚಿಯ ರಸ್ತೆಗಳಲ್ಲಿ ಮೆರವಣಿಗೆಯಲ್ಲಿ ಸಾಗುವಾಗ ಈ ಜನರು ಅವರ ಮೇಲೆ ಗ್ರೆನೇಡುಗಳನ್ನು ಎಸೆಯಲಿದ್ದರು ಅದರ ಪರಿಣಾಮವಾಗಿ ಉಪಖಂಡದಲ್ಲಿ ಆಂತರಿಕ ಯುದ್ಧವಾಗುವುದು ಖಂಡಿತ. ಅಲ್ಲದೆ ಆ ಯುದ್ಧದಲ್ಲಿ ಬಹುಸಂಖ್ಯಾತ ಹಿಂದೂಗಳು ವಿಜಯಿಗಳಾಗುವುದೂ ಖಂಡಿತ–ಇದು ಸ್ಯಾವೇಜರ ಹೇಳಿಕೆಯಾಗಿತ್ತು.

ಜಿನ್ನಾರ ಮುಖ ಬೆಳ್ಳಗಾಯಿತು. ಲಿಯಾಕತ್ ಅಲಿಖಾನರು ಎಲ್ಲ ಸಿಖ್ ಮುಖಂಡರನ್ನೂ ತಕ್ಷಣವೇ ಬಂಧಿಸಬೇಕೆಂದು ಹೇಳಿದರು. ಮೌಂಟ್‌ಬ್ಯಾಟನ್ನರಿಗೆ ಏನೂ ತೋಚಲಿಲ್ಲ. ಎಲ್ಲ ಸಿಖ್ ನಾಯಕರನ್ನು ಬಂಧಿಸಿದರೆ ಆಂತರಿಕ ಯುದ್ಧ ಕೂಡಲೇ ಪ್ರಾರಂಭವಾಗಬಹುದಿತ್ತು. ಅದಲ್ಲದೇ ಸಿಖ್ ನಾಯಕರನ್ನು ಬಂಧಿಸುವುದು ಹೆಚ್ಚು ಕಡಿಮೆ ಅಸಾಧ್ಯವೇ ಆಗಿತ್ತು. ಅವರೆಲ್ಲ ಅಮೃತಸರದ ಸ್ವರ್ಣಮಂದಿರದ ಒಳಗಡೆ ಸೇರಿಕೊಂಡಿದ್ದರು. ಯಾವ ಹಿಂದೂ ಅಥವಾ ಸಿಖ್ ಪೋಲೀಸನೂ ಒಳಗೆ ನುಗ್ಗಿ ಅವರನ್ನು ಬಂಧಿಸಲಾರ. ಮುಸ್ಲಿಂ ಪೋಲೀಸರನ್ನು ಕಳಿಸುವ ವಿಚಾರವನ್ನೂ ಮಾಡುವಂತಿರಲಿಲ್ಲ.

ಮುಂದೇನು ಮಾಡಬೇಕೆಂಬುದನ್ನು ಪಂಜಾಬಿನ ಗವರ್ನರ್ ಜೆಂಕಿನ್ಸ್ ಮತ್ತು ವಿಭಜನೆಯ ನಂತರ ಭಾರತೀಯ ಹಾಗೂ ಪಾಕಿಸ್ತಾನದ ಪಂಜಾಬಗಳ ಗವರ್ನರರಾಗಲಿದ್ದವರೊಡನೆ ಚರ್ಚಿಸಿ ನಿರ್ಧರಿಸುವುದಾಗಿ ಮೌಂಟ್‌ಬ್ಯಾಟನ್ ಸಾರಿದರು. ಲಿಯಾಕತರು ಸಿಡಿದೆದ್ದರು: "ಕಾಯಿದೆ ಅಜ್ಞರು ಕೊಲೆಯಾಗಬೇಕೆಂದು ನಿಮ್ಮ ಇಚ್ಛೆಯೇ?"

"ನಿಮಗೆ ಹಾಗೆನ್ನಿಸುತ್ತಿದ್ದರೆ ಜಿನ್ನಾರೊಡನೆ ತೆರೆದ ಕಾರಿನಲ್ಲಿ ನಾನೂ ಹೋಗಿ ಅವರೊಡನೆ ಕೊಲೆಯಾಗುತ್ತೇನೆ." ಮೌಂಟ್‌ಬ್ಯಾಟನ್ ಹೇಳಿದರು. "ಆದರೆ ಅವರೊಡನೆ (ಗವರ್ನರರು) ಚರ್ಚಿಸದೆ ಅರ್ಧ ಕೋಟಿ ಸಿಖ್ಖರ ಮುಖಂಡರನ್ನು ಬಂಧಿಸಲಾರೆ."

ಆ ರಾತ್ರಿಯೇ ಪಂಜಾಬಿನ ಗವರ್ನರ್ ಸರ್ ಜೆಂಕಿನ್ಸರಿಗಾಗಿ ಮೌಂಟ್‌ಬ್ಯಾಟನ್ ಬರೆದ ಪತ್ರವನ್ನು ಇಟ್ಟುಕೊಂಡು ಸ್ಯಾವೇಜ್ ಮರಳಿ ಹೋದರು.

ಐದು ದಿನಗಳ ನಂತರ ಮೊಟ್ಟ ಮೊದಲ 'ಪಾಕಿಸ್ತಾನ ಸ್ಪೆಶಲ'ನ್ನು ಫಿರೋಜಪುರದ ಬಳಿ ಸಿಖ್ಖರು ಉರುಳಿಸಿದರು.

ಆಗಸ್ಟ್ ೧೫ ರ ನಂತರ ಪಂಜಾಬಿನಲ್ಲಿ ಶಾಂತಿಯನ್ನು ಕಾಪಾಡಲು ಮೌಂಟ್‌ಬ್ಯಾಟನ್ ೫೫,೦೦೦ ಸೈನಿಕರ ಪಡೆಯನ್ನು ಸಿದ್ಧಗೊಳಿಸಿದ್ದರು. ಅದರಲ್ಲಿ ಹೆಚ್ಚಿನವರು ಗೂರ್ಖಾಗಳಾಗಿದ್ದರು. ಅದರ ಕಮಾಂಡರರಾಗಿ ಮೇಜರ್ ಜನರಲ್ ರೀಸ್ ಅವರನ್ನು ನಿಯಮಿಸಿದ್ದರು. ಸೈನ್ಯದ ಬಲ, ಪಂಜಾಬ ಗವರ್ನರರು ಅಂದಾಜು ಮಾಡಿದ್ದರ ಎರಡರಷ್ಟಿತ್ತು. ಆದರೆ ಮತಾಂಧತೆಯ ಬಿರುಗಾಳಿ ನಿಜಕ್ಕೂ ಪ್ರಾರಂಭವಾದಾಗ ಅದು ಈ ಸೈನ್ಯವನ್ನೂ ತರಗೆಲೆಯಂತೆ ಕೊಚ್ಚಿಕೊಂಡು ಹೋಗಲಿತ್ತು.

ನಿಜವೆಂದರೆ ಜಿನ್ನಾ, ನೆಹರೂ, ಮೌಂಟ್‌ಬ್ಯಾಟನ್ ಇವರಾರಿಗೂ, ಅದರಂತೆ ಯಾವುದೇ ವಿದೇಶೀಯನಿಗಿಂತಲೂ ಪಂಜಾಬನ್ನು ಚೆನ್ನಾಗಿ ಅರಿತಿದ್ದ ಅದರ ಗವರ್ನರರಿಗೆ, ಸಹ ಮುಂದಾಗಲಿದ್ದ ಅನರ್ಥದ ಯಾವ ಮುನ್ಸೂಚನೆಯೂ ಇರಲಿಲ್ಲ. ಈ ಅಜ್ಞಾನ ಮುಂದಿನ ಇತಿಹಾಸಕಾರರನ್ನು ಅಚ್ಚರಿಗೊಳಿಸುವುದಲ್ಲದೇ ವಿಶೇಷವಾಗಿ ವೈಸ್‌ರಾಯರತ್ತ ಟೀಕೆಗಳ ಸುರಿಮಳೆಯನ್ನೇ ಕರೆಯಲಿತ್ತು.

ಮೌಂಟ್‌ಬ್ಯಾಟನ್ನರ ನಿಜವಾದ ದುಃಸ್ವಪ್ನ ಕಲ್ಕತ್ತೆಯಾಗಿತ್ತು. ಅಲ್ಲಿ ಶಾಂತಿಯನ್ನು

ಕಾಪಾಡಲು ಸೇನೆಯನ್ನು ಕಳಿಸುವುದು ಮೂರ್ಖತನವಾಗಿತ್ತು. ಕಲ್ಕತ್ತೆಯ ಸಹಸ್ರಾವಧಿ ಗಲ್ಲಿ, ಓಣಿಗಳಲ್ಲಿ, ಬಜಾರುಗಳಲ್ಲಿ, ಜನವಸತಿ ವಿಪರೀತ ದಟ್ಟವಾಗಿದ್ದ ಅದರ ಕೊಳಚೆ ಪ್ರದೇಶಗಳಲ್ಲಿ ಗಲಭೆ ನಡೆದದ್ದೇ ಆದರೆ ಅದನ್ನು ತಡೆಯಲು ಯಾವ ಸೈನ್ಯಕ್ಕೂ ಶಕ್ಯವಿರಲಿಲ್ಲ. ಅದಲ್ಲದೇ ಮತೀಯ ಗಲಭೆಗಳಲ್ಲಿ ಸಮರ್ಥವಾಗಿ ಕಾರ್ಯ ಮಾಡಬಲ್ಲ ಸೈನಿಕರನ್ನೆಲ್ಲ ಪಂಜಾಬ್ ಗಡಿ ದಲಗಳಲ್ಲಿ ಬಳಸಿಕೊಳ್ಳಲಾಗಿತ್ತು.

ಕಲ್ಕತ್ತೆಯಲ್ಲಿ ಶಾಂತಿಯನ್ನು ಕಾಪಾಡಲು ಉಪಾಯವಲ್ಲ, ಪವಾಡವನ್ನು ಮಾಡಬೇಕಿತ್ತು. ಈ ಹತಾಶ ಪರಿಸ್ಥಿತಿ ಮತ್ತು ಯಾವುದೇ ರೀತಿಯ ಸಹಾಯದ ಅಭಾವ ಮೌಂಟ್‌ಬ್ಯಾಟನ್ನರನ್ನು ಹುಚ್ಚು ಸಾಹಸವೊಂದನ್ನು ಕೈಕೊಳ್ಳುವಂತೆ ಪ್ರೇರಿಸಿದವು. ಮತೀಯ ಉನ್ಮಾದದ ವಿರುದ್ಧ ಅವರು ತಮ್ಮ 'ತಿರಸ್ಕೃತ ಪುಟ್ಟ ಹಕ್ಕಿ' ಮಹಾತ್ಮಾ ಗಾಂಧಿಯವರನ್ನು ನಿಲ್ಲಿಸಲೆಂದರು.

ಜುಲೈ ಕೊನೆಯಲ್ಲಿ ಅವರು ಈ ವಿಚಾರವನ್ನು ಗಾಂಧೀಜಿಯ ಮುಂದಿಟ್ಟರು. "ಪಂಜಾಬ ಗಡಿ ದಲವು ಪಂಜಾಬನ್ನು ನೋಡಿಕೊಳ್ಳಬಹುದು. ಆದರೆ ಕಲಕತ್ತೆಯಲ್ಲಿ ತೊಂದರೆ ಪ್ರಾರಂಭವಾದರೆ?" ಮೌಂಟ್‌ಬ್ಯಾಟನ್ ಗಾಂಧೀಜಿಗೆ ಹೇಳಿದರು, "ನಾವು ಮುಳುಗಿದಂತೆಯೇ. ಈಗ ಅಲ್ಲಿ ಒಂದು ಬ್ರಿಗೇಡ್ ಸೈನ್ಯ ಇದೆ. ಆದರೆ ಅದನ್ನು ಉಪಯೋಗಿಸುವ ವಿಚಾರವೂ ನನಗಿಲ್ಲ."

"ಹೌದು. ಇದು ನಿಮ್ಮ ಯೋಜನೆಯ ಫಲ," ಎಂದರು ಗಾಂಧೀಜಿ. ಮೌಂಟ್‌ಬ್ಯಾಟನ್ ಒಪ್ಪಿದರು. ಆದರೆ ಬೇರೆ ಯಾವ ಮಾರ್ಗವೂ ಇರಲಿಲ್ಲವಲ್ಲ. ಗಾಂಧೀಜಿ ಈಗಲೂ ಏನಾದರೂ ಮಾಡುವುದು ಸಾಧ್ಯವಿತ್ತು. ಅವರು ಕಲ್ಕತ್ತೆಯಲ್ಲಿ ನೆಲೆಸಿದರೆ, ಅವರ ಸನ್ನಿಧಾನದಿಂದಾಗಿ ಕಲ್ಕತ್ತೆಯಲ್ಲಿ ಶಾಂತಿ ನೆಲಸುವುದು ಸಾಧ್ಯವಾದೀತು. ಹೀಗೆ ಗಾಂಧೀಜಿ ಕಲ್ಕತ್ತೆಗೆ ಮೌಂಟ್‌ಬ್ಯಾಟನ್ ಕಳಿಸಲಿದ್ದ ಸೈನ್ಯದ ಏಕಮೇವ ಸೈನಿಕರಾಗಲಿದ್ದರು.*

ಆಗಸ್ಟ್ ೧೯೪೭

ಈ ಮಹಾನ್ ಗಳಿಗೆ ಸನ್ನಿಹಿತವಾಗುತ್ತಿತ್ತು. ಮೂರು ಶತಮಾನಗಳ ಬ್ರಿಟಿಶ್ ಸತ್ತೆ ಮೂವತ್ತಾರು ಗಂಟೆಗಳಲ್ಲಿ ಮುಗಿಯಲಿತ್ತು. ಈ ಕೊನೆಯ ಗಂಟೆಗಳಲ್ಲಿ ಅವರಿಗೆ ಒಂದೇ ಯೋಚನೆಯಾಗಿತ್ತು. ಬ್ರಿಟಿಶ್ ರಾಜ್ಯ ತನ್ನೆಲ್ಲ ವೈಭವವನ್ನೂ ಒಟ್ಟುಗೂಡಿಸಿಕೊಂಡು ಭಾರತವನ್ನು ಬಿಡಬೇಕು. ಸ್ನೇಹಭಾವನೆಯಿಂದಲೇ ಭಾರತೀಯರು ಇಂಗ್ಲೀಷರನ್ನು ಬೀಳ್ಕೊಡುವಂತಾಗಬೇಕು. ಭಾರತ, ಪಾಕಿಸ್ತಾನಗಳು ಬ್ರಿಟನ್ನಿನೊಡನೆ ಇಟ್ಟುಕೊಳ್ಳಬೇಕಾದ ದೃಢವಾದ ಸಂಬಂಧಗಳಿಗೆ ಬುನಾದಿಯನ್ನು ಈಗಲೇ ಹಾಕಬೇಕು.

ಈ ಎಲ್ಲ ಸಂಭ್ರಮಗಳಲ್ಲಿ ಹುಳಿ ಹಿಂಡುವ ಸಾಮರ್ಥ್ಯ ರ‍್ಯಾಡ್‌ಕ್ಲಿಫ್ ವರದಿಗಿತ್ತು. ಸರ್ ರ‍್ಯಾಡ್‌ಕ್ಲಿಫ್‌ರಿಗೆ ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಗಡಿಯನ್ನು ಗುರುತಿಸುವ ಅಪ್ರಿಯ ಕೆಲಸವನ್ನು ಕೊಡಲಾಗಿತ್ತು. ಅವರ ವರದಿ, ಅದು ಏನೇ ಇದ್ದರೂ, ಎರಡು ಕಡೆಯ ನಾಯಕರನ್ನು ಅಸಂತುಷ್ಟಗೊಳಿಸುವುದು ಹೆಚ್ಚುಕಡಿಮೆ ಮೊದಲೇ ತಿಳಿದಿತ್ತು. ಯಾವ ಕಾರಣಕ್ಕಾಗಿಯೂ ಆ ವರದಿಯನ್ನು ಬಹಿರಂಗಪಡಿಸಿ ಹೊಸ ಜಗಳವನ್ನು ಆರಂಭಿಸುವ ಇಚ್ಛೆ ಮೌಂಟ್‌ಬ್ಯಾಟನ್ನರಿಗಿರಲಿಲ್ಲ.

ಕರಾಚಿ, ೧೩, ಆಗಸ್ಟ್ ೧೯೪೭

"ಸರ್ ಒಳಸಂಚು ಪೂರ್ತಿಯಾಗಿದೆ!" ಪಂಜಾಬ್ ಸಿ ಐ ಡಿ ವರದಿ ಮಾಡಿದ.

ಮೌಂಟ್‌ಬ್ಯಾಟನ್ ಸೆಟೆದು ನಿಂತರು. ಅಲ್ಲಿಯವರೆಗಿನ ಎಲ್ಲ ಗೂಢಚಾರ ವರದಿಗಳು ಒಳಸಂಚಿನ ಕಥೆಯನ್ನು ದೃಢೀಕರಿಸಿದ್ದವು.

---

* ಗಾಂಧೀಜಿ ಮೌಂಟ್‌ಬ್ಯಾಟನ್ನರಿಂದ ಬಂದ ಈ ಬೇಡಿಕೆಯನ್ನು ಒಪ್ಪಲಿಲ್ಲ. ಆದರೆ ಸ್ವಾತಂತ್ರ್ಯ ದಿನವಂದು ಕಲ್ಕತ್ತೆಯ ಮುಸ್ಲಿಮರಿಗೆ ಉಳಿಗಾಲವಿಲ್ಲವೆಂದು ಗೊತ್ತಿದ್ದ, ಬಂಗಾಲದ ಮುಖ್ಯಮಂತ್ರಿ ಸುಹ್ರವರ್ದಿ ಕೂಡ ಗಾಂಧೀಜಿಯನ್ನು ಕಂಡು ಕಳಕಳಿಯಿಂದ ಬಿನ್ನವಿಸಿದ ನಂತರವೇ ಅವರು ಒಪ್ಪಿದರು

ಪಂಜಾಬ್ ಸಿ ಐ ಡಿ ಶತಪ್ರಯತ್ನ ಮಾಡಿದ್ದರೂ ಆರ್ ಎಸ್ ಎಸ್ ನ ಒಬ್ಬ ಸದಸ್ಯನೂ ಸಿಕ್ಕಿಬಿದ್ದಿರಲಿಲ್ಲ. ಜಿನ್ನಾರ ಮೆರವಣಿಗೆಯ ಕಾಲಕ್ಕೆ ಒಂದಲ್ಲ ಹಲವಾರು ಬಾಂಬುಗಳು ಬೀಳುವುದರ ಬಗ್ಗೆ ಈಗ ಎಲ್ಲರಿಗೂ ನಂಬಿಕೆಯಾಗಿತ್ತು.

ಮೌಂಟ್‌ಬ್ಯಾಟನ್ನರ ದುರ್ದೈವಕ್ಕೆ ಅವರ ಪತ್ನಿ ಮೆತ್ತಗೆ ಹಿಂದಿನಿಂದ ಬಂದು ಇಬ್ಬರ ಮಾತುಗಳನ್ನೂ ಕೇಳಿಸಿಕೊಂಡಿದ್ದರು. ಅವರು ಮೌಂಟ್‌ಬ್ಯಾಟನ್ನರ ಕಾರಿನಲ್ಲಿ ತಾವೂ ಬರುವುದಾಗಿ ಹಟ ಹಿಡಿದರು.

"ಏನೂ ಅವಶ್ಯವಿಲ್ಲ. ನಾವಿಬ್ಬರೂ ಕೂಡಿಯೇ ಸಾಯಬೇಕೆಂದೇನೂ ನಿಯಮವಿಲ್ಲ," ಮೌಂಟ್‌ಬ್ಯಾಟನ್ ನುಡಿದರು.

ಅವರೊಡನೆ ಇದ್ದ ಗೂಢಚಾರ ಮುಂದುವರಿಸಿದ: "ತೆರೆದ ಕಾರಿನಲ್ಲೇ ಮೆರವಣಿಗೆಯಾಗಬೇಕೆಂದು ಜಿನ್ನಾ ಒತ್ತಾಯಿಸುತ್ತಿದ್ದಾರೆ. ಸಾಲದ್ದಕ್ಕೆ ಆ ಜನಜಂಗುಳಿಯಲ್ಲಿ ನೀವು ಅತ್ಯಂತ ಸಾವಕಾಶವಾಗಿ ಹೋಗಬೇಕಾಗುತ್ತದೆ." ಸಿ ಐ ಡಿ ಯ ಅಭಿಪ್ರಾಯದಲ್ಲಿ ಅನಾಹುತವನ್ನು ತಪ್ಪಿಸಲು ಒಂದೇ ಉಪಾಯವಿತ್ತು.

"ಸರ್, ಮೆರವಣಿಗೆಯನ್ನು ನೀವು ರದ್ದು ಮಾಡಿಸಲೇಬೇಕು."

ನಿಜವೇ. ಆದರೆ ಜಿನ್ನಾರನ್ನು ಒಲಿಸುವುದರಲ್ಲಿ ಮೌಂಟ್‌ಬ್ಯಾಟನ್ ಎರಡನೇ ಸಲ ವಿಫಲರಾದರು. ಮುಚ್ಚಿದ ಕಾರಿನಲ್ಲಿ ಹೋಗಲೂ ಜಿನ್ನಾ ಒಪ್ಪಲಿಲ್ಲ. ಅವರ ದೃಷ್ಟಿಯಲ್ಲಿ ಅದು ಹೇಡಿತನವಾಗಿತ್ತು. ಅಂತೂ, ತಮಗೆ ಸರ್ವಥಾ ಬೇಡವಾದ ರಾಷ್ಟ್ರವೊಂದು ನಿರ್ಮಾಣವಾಗುವ ಸಂದರ್ಭದಲ್ಲಿ, ತಮಗೆ ಎಳ್ಳಷ್ಟೂ ಸರಿಬರದ ವ್ಯಕ್ತಿಯೊಬ್ಬನ ಹಟದಿಂದಾಗಿ, ಅವನೊಡನೆಯೇ ತೆರೆದ ಕಾರಿನಲ್ಲಿ ಬಾಂಬಿಗೆ ಆಹುತಿಯಾಗುವ ಅಪಾಯಕ್ಕೆ ಒಳಗಾಗುವುದು ಮೌಂಟ್‌ಬ್ಯಾಟನ್ನರಿಗೆ ಅನಿವಾರ್ಯವಾಯಿತು.

ಮರುದಿನ ಆಗಸ್ಟ್ ೧೪ ರ ಮುಂಜಾನೆ ಔಪಚಾರಿಕ ಭಾಷಣಗಳು ಶೀಘ್ರವಾಗಿ ಮುಗಿದುಹೋದುವು. ಯಾವ ಸಂದರ್ಭ ಎಂದಿಗೂ ಬರಬಾರದೆಂದು ಅವರು ಆಶಿಸಿದ್ದರೋ, ಅದೇ ಸಂದರ್ಭದಲ್ಲಿ ಶುಭಾಕಾಂಕ್ಷೆಗಳನ್ನು ಕೋರುತ್ತ ಮೌಂಟ್‌ಬ್ಯಾಟನ್ ಹೇಳಿದರು : ಪಾಕಿಸ್ತಾನದ ನಿರ್ಮಾಣ ಇತಿಹಾಸದಲ್ಲಿ ಒಂದು ವಿಶೇಷ ಘಟನೆಯಾಗಿದೆ. ಹಿಂದಾಗಿದ್ದುದನ್ನು ವಿಮರ್ಶಿಸುತ್ತ ಕೂಡುವ ಸಂದರ್ಭ ಇದಲ್ಲ. ಇದು ಮುಂದೆ ನೋಡಬೇಕಾದ ಸಂದರ್ಭ.

"ಶ್ರೀ ಜಿನ್ನಾರಿಗೆ ನನ್ನ ಹಾರ್ದಿಕ ಶುಭೇಚ್ಛೆಗಳು. ನಮ್ಮ ವೈಯುಕ್ತಿಕ ಸ್ನೇಹ, ಪರಸ್ಪರ ವಿಶ್ವಾಸ, ತಿಳುವಳಿಕೆಗಳು ನಮ್ಮಿಬ್ಬರ ದೇಶಗಳ ನಡುವಣ ಸಂಬಂಧಗಳು ಸೌಹಾರ್ದಯುತವಾಗುತ್ತವೆ ಎಂಬ ಭರವಸೆಯನ್ನು ನನ್ನಲ್ಲಿ ಮೂಡಿಸಿವೆ."

ಯಾಂತ್ರಿಕವಾಗಿ ವಾಕ್ಯಗಳನ್ನು ಹೇಳುತ್ತಿದ್ದಂತೆ ಮೌಂಟ್‌ಬ್ಯಾಟನ್ ಜಿನ್ನಾರತ್ತ ನೋಡಿದರು. ಆ ಚರಮ ಕ್ಷಣದಲ್ಲಿಯೂ ಅವರ ಮುಖ ಯಥಾಪ್ರಕಾರ ನಿರ್ವಿಕಾರವಾಗಿಯೇ ಇತ್ತು.

"ನಿಮಗೆಲ್ಲ ವಿದಾಯ ಹೇಳುವ ಸಮಯ ಬಂದಿದೆ. ಪಾಕಿಸ್ತಾನ ಎಂದೆಂದಿಗೂ ಅಭಿವೃದ್ಧಿ ಹೊಂದಲಿ," ಮೌಂಟ್‌ಬ್ಯಾಟನ್ ಮಾತು ಮುಗಿಸಿದರು. ನೋಡನೋಡುತ್ತಿದ್ದಂತೆಯೇ ಎಲ್ಲರ ಭಾಷಣಗಳೂ ಮುಗಿದವು.

ತಮಗಾಗಿ ಕಾಯುತ್ತಿದ್ದ ವಾಹನದಲ್ಲಿ ಸಾಗುತ್ತಿದ್ದಂತೆಯೇ ಮೌಂಟ್‌ಬ್ಯಾಟನ್ನರ ಮನಃಪಟಲದಲ್ಲಿ ಈ ಹಿಂದೆ ಹಂತಕರ ಬಾಂಬುಗಳಿಗೆ ಬಲಿಯಾದ ತಮ್ಮ ವಂಶದ ಇತರರ ನೆನಪಾಯಿತು. ಅವರೆಲ್ಲ ತಮ್ಮೊಡನೆ ಕಾರಿನಲ್ಲಿಯೇ ಇದ್ದಾರೆಂದು ಭಾಸವಾಗಹತ್ತಿತು. ಅವರು ಒಮ್ಮೆಯೇ ಜಿನ್ನಾರ ಮುಖ ನೋಡಿದರು. ಯಾವಾಗಲೂ ಬಿಗುವಾಗಿ ಇರುತ್ತಿದ್ದ ಅವರ ಮುಖದಲ್ಲೂ ಈಗ ಉದ್ವೇಗ ಒಡೆದು ಕಾಣುತ್ತಿತ್ತು. ಅವರ ಕಾರು ಪ್ರಾರಂಭವಾಗುತ್ತಿದ್ದಂತೆಯೇ ೩೧ ತೋಪುಗಳನ್ನು ಹಾರಿಸಲಾಯಿತು.

ಮುಂದಿನ ಅರ್ಧ ಗಂಟೆ ಮೌಂಟ್‌

ಬ್ಯಾಟನ್ನರಿಗೆ ಒಂದು ದಿನಕ್ಕಿಂತಲೂ ದೀರ್ಘವೆನಿಸಿಬಿಟ್ಟಿತು. ತೆರೆದ ಕಾರಿನೊಳಗಿನ ಜನರು ಅನುಭವಿಸುತ್ತಿದ್ದ ಮೃತ್ಯುಭಯದ ಯಾವ ಪರಿವೆಯೂ ಇಲ್ಲದೇ ಜನ ರಸ್ತೆಯ ಎರಡೂ ಬದಿಗಳಲ್ಲಿ ನಿಂತು ಜಯಜಯಕಾರ ಮಾಡುತ್ತಿತ್ತು. ರಸ್ತೆಯ ಬದಿಯಲ್ಲಿ, ಕಿಟಕಿಗಳಲ್ಲಿ, ಸಂದಿಗೊಂದಿಗಳಲ್ಲಿ, ಮಾಳಿಗೆಗಳ ಮೇಲೆ ಕಿಕ್ಕಿರಿದು ನೆರೆದಿದ್ದ ಜನರ ನಡುವೆ ಅವರ ಮೇಲೆ ಬಾಂಬೆಸೆಯಲು ಸಿದ್ಧರಾಗಿದ್ದ ಹಂತಕರಿದ್ದರು. ಕಷ್ಟಪಟ್ಟು ನಸುನಗುತ್ತ ಯಾಂತ್ರಿಕವಾಗಿ ಕೈಬೀಸುತ್ತಿದ್ದ ಮೌಂಟ್‌ಬ್ಯಾಟನ್ ಸಾಧ್ಯವಿದ್ದಷ್ಟು ಚುರುಕಾಗಿ ಜನರಲ್ಲಿ ಪ್ರತಿಯೊಬ್ಬನ ಮುಖವನ್ನೂ ನಿರುಕಿಸುತ್ತಿದ್ದರು. ಯಾರ ಮುಖದಲ್ಲಾದರೂ ಹಂತಕನ ಸುಳಿವು ಸಿಕ್ಕೀತೇ ಎಂದು ನೋಡುತ್ತಿದ್ದರು. ಯಾವ ಕ್ಷಣದಲ್ಲಿ ತಮ್ಮ ಮೇಲೆ ಬಾಂಬ್ ಬೀಳಬಹುದೋ ಎಂದು ಮೈಯೆಲ್ಲ ಕಣ್ಣಾಗಿ ನೋಡುತ್ತಿದ್ದರು.

ಅವರ ವಿಮರ್ಶಕರಿಗೆ ಆಹಾರವಾಗಿದ್ದ ಅವರ ಅತಿಯಾದ ಆತ್ಮವಿಶ್ವಾಸವೇ ಈಗ ಅವರ ನೆರವಿಗೆ ಬಂತು. 'ಈ ಜನರು ನನ್ನನ್ನು ಕೊಲ್ಲಲಾರರು,' ಅವರು ಯೋಚಿಸಿದರು. 'ಎಷ್ಟೆಂದರೂ ನಾನು ಅವರಿಗೆ ಸ್ವಾತಂತ್ರ್ಯ ಕೊಡಿಸಿದ್ದೇನಲ್ಲವೆ! ಜಿನ್ನಾರೊಡನೆ ನನ್ನನ್ನೂ ಕೊಲ್ಲಬೇಕೆನ್ನುವುದು ಗೋಚರವಾದಾಗ ಅವರು ಹಿಂಜರಿಯುತ್ತಾರೆ.'

'ಜಿಂದಾಬಾದ್'ಗಳು ಕ್ರಮೇಣ ನಿಂತವು. ಅದು ಹಿಂದೂ ವಸತಿಯೆಂದು ಮೌಂಟ್‌ಬ್ಯಾಟನ್ನರಿಗೆ ಅರ್ಥವಾಯಿತು, 'ಅದಾಗುವುದು ಈಗಲೇ, ಇಲ್ಲಿಯೇ.' ನಿಶ್ಶಬ್ದವಾಗಿದ್ದ ಜನಜಂಗುಳಿಯ ನಡುವೆ ಯಾತನಾದಾಯಕವಾದ ಮೆರವಣಿಗೆ ಐದು ನಿಮಿಷಗಳ ಕಾಲ ಮುನ್ನಡೆಯಿತು.

ಏನೂ ಆಗಲಿಲ್ಲ! ಒಮ್ಮೆಲೇ ತಮ್ಮ ಈ ಪ್ರವಾಸ ಮುಗಿದೇಹೋಯಿತೆಂದು ಅವರ ಗಮನಕ್ಕೆ ಬಂತು. ಗವರ್ನಮೆಂಟ್ ಹೌಸಿನ ಗೇಟುಗಳು ತೆರೆಯುತ್ತಿದ್ದಂತೆ ಮೌಂಟ್‌ಬ್ಯಾಟನ್ನರ ಜೀವನದಲ್ಲಿಯ ಅತ್ಯಂತ ಘೋರವಾದ ಸವಾರಿ ಮುಕ್ತಾಯವಾಗಿತ್ತು.

ದಾರಿಯುದ್ದಕ್ಕೂ ಅವರಿಗೆ ಜಿನ್ನಾರ ಮುಖ ನೋಡಲೂ ಆಗಿರಲಿಲ್ಲ. ಅವರಿಬ್ಬರ ಪರಿಚಯವಾದಂದಿನಿಂದ ಮೊದಲ ಬಾರಿಗೆ ಜಿನ್ನಾರ ಮುಖದಲ್ಲಿ ನಗೆಯೊಂದು ಮೂಡಿತ್ತು. "ದೇವರ ದಯೆಯಿಂದ ನಿಮ್ಮನ್ನು ಸುರಕ್ಷಿತವಾಗಿ ಕರೆದುಕೊಂಡು ಬಂದೆ," ಜಿನ್ನಾ ಹೇಳಿದರು!

ಮೌಂಟ್‌ಬ್ಯಾಟನ್ ನಿಬ್ಬೆರಗಾದರು. 'ಎಲಾ ಈ ಭಂಡನೇ' ಎಂದಿತು ಅವರ ಮನಸ್ಸು. "ನನ್ನನ್ನು ನೀವು ಸುರಕ್ಷಿತವಾಗಿ ತಂದೆನೆಂದು ತಿಳಿದಿದ್ದೀರಾ?" ಅಚ್ಚರಿಯಿಂದ ಅವರು ಪ್ರಶ್ನಿಸಿದರು. "ನಿಮ್ಮನ್ನು ಜೀವಂತವಾಗಿ ಕರೆತಂದವ ನಾನು, ತಿಳಿಯಿತೆ?"

*

ನವದೆಹಲಿ, ಆಗಸ್ಟ್ ೧೪ರ ಮಧ್ಯರಾತ್ರಿ. ವೈಸ್‌ರಾಯರ ಮುಂದೆ, ಮೊಹರುಗಳನ್ನೆಲ್ಲ ತೆಗೆದಿಡುವ ಕ್ಷಣ ತೀರ ಹತ್ತಿರದಲ್ಲೇ ಇತ್ತು. ಒಬ್ಬಂಟಿಯಾಗಿ ತಮ್ಮ ಕೋಣೆಯಲ್ಲಿ ಕುಳಿತಿದ್ದ ಮೌಂಟ್‌ಬ್ಯಾಟನ್ ಉಲ್ಲಾಸದಿಂದಿದ್ದರು. 'ಇನ್ನು ಕೆಲವು ಕ್ಷಣಗಳ ವರೆಗೆ ಮಾತ್ರ ಜಗತ್ತಿನ ಅತಿ ಪ್ರಬಲ ಜನರಲ್ಲಿ ನಾನೊಬ್ಬನಾಗಿರುತ್ತೇನೆ.' ಅವರಿಗೆ ಎಚ್. ಜಿ. ವೇಲ್ಸರ ಕತೆಯೊಂದು ನೆನಪಾಯಿತು. ಅದರಲ್ಲಿ ಒಬ್ಬ ಮನುಷ್ಯನಿಗೆ, ಒಂದು ದಿನದ ಮಟ್ಟಿಗೆ ಪವಾಡಗಳನ್ನು ಮಾಡಲು ಸಾಮರ್ಥ್ಯ ಬರುತ್ತದೆ. 'ನನ್ನ ಹುದ್ದೆಯಲ್ಲಿ ಪವಾಡಗಳನ್ನು ಮಾಡುವುದು ನನಗೂ ಸಾಧ್ಯವಿದೆ. ಅಂದಮೇಲೆ ಈ ಕೊನೆಯ ನಿಮಿಷಗಳಲ್ಲಿ ಏನಾದರೂ ಪವಾಡವನ್ನು ಮಾಡಿ ತೋರಿಸಲೇಬೇಕು. ಏನು ಮಾಡಲಿ?' ಎಂದು ಅವರು ಯೋಚಿಸಿದರು.

ಮಿಂಚಿನಂತೆ ಅವರಿಗೊಂದು ವಿಚಾರ ಹೊಳೆಯಿತು. ಪಾಲನಪುರದ ನವಾಬರು ಅವರ ಹಳೆಯ ಮಿತ್ರರಾಗಿದ್ದರು. ನವಾಬರು ಆಸ್ಟ್ರೇಲಿಯನ್ ಮಹಿಳೆಯೊಬ್ಬಳನ್ನು ಮದುವೆಯಾಗಿದ್ದರು. ಆ ಮಹಿಳೆ ಇಸ್ಲಾಂ ಧರ್ಮ ಸ್ವೀಕರಿಸಿ ಎಲ್ಲ ಸಂಪ್ರದಾಯಗಳನ್ನೂ ಅನು-

ಮೂರನೇ ತಿಂಗಳಲ್ಲಿ ಮಗುವಿಗೆ ಕೊಡುವ ಘನ ಆಹಾರ - ಮಗುವಿನ ಪೂರ್ತಿ ಜೀವಮಾನಕ್ಕೆ ಆಧಾರ

ಡಾಕ್ಟರರು ಹೇಳುತ್ತಾರೆ ಹಾಲು ಒಂದೇ ಸಾಕಾಗದು



ಡಾಕ್ಟರರು ಶಿಫಾರಸು ಮಾಡುತ್ತಾರೆ:

ಫೆರೆಕ್ಸ್®

ಸಂತುಲಿತ ಘನ ಆಹಾರ
ಶೀಘ್ರ,ಸರ್ವಾಂಗೀಣ ಬೆಳವಣಿಗೆಗಾಗಿ

ಮಗುವಿನ ಶರೀರ ಮತ್ತು ಮೆದುಳು ತ್ವರಿತ ಗತಿಯಿಂದ ಬೆಳೆಯುತ್ತಿರುವ ಕಾಲಾವಧಿಯಲ್ಲಿ ಹಾಲೊಂದೇ ಸಾಕಾಗುವುದಿಲ್ಲ. ತಾಯಿಯ ಹಾಲು ಕಡಿಮೆ ಮಾಡಿ ಘನಾಹಾರಗಳನ್ನು ಕೊಡಲು ಆರಂಭಮಾಡಬೇಕು— 3ನೇ ತಿಂಗಳಿನಲ್ಲಿಯೇ. ಅಗಿದು ತಿನ್ನಲು ಮಗು ಕಲಿಯಬೇಕು. ಅದಕ್ಕಾಗಿ... ಡಾಕ್ಟರರು ಫೆರೆಕ್ಸ್ ಶಿಫಾರಸು ಮಾಡುತ್ತಾರೆ. ಕಾರಣ : ಅದು ಮಗುವಿನ ಬೆಳವಣಿಗೆಯ ಅನೇಕ ಆವಶ್ಯಕತೆಗಳನ್ನು ಪೂರೈಸುವ ಸಂತುಲಿತ ಆಹಾರ. ರಕ್ತದ ಆರೋಗ್ಯಕ್ಕಾಗಿ ಮತ್ತು ಚೈತನ್ಯಕ್ಕಾಗಿ ಸರಿಯಾದ ಪ್ರಮಾಣದಲ್ಲಿ ಕಬ್ಬಿಣ ಸತ್ವ; ಎಲುಬುಗಳ ಮತ್ತು ಹಲ್ಲುಗಳ ಗಟ್ಟಿಮುಟ್ಟುತನಕ್ಕಾಗಿ ಕ್ಯಾಲ್ಸಿಯಂ ಮತ್ತು ವಿಟಮಿನ್ ಡಿ2, ಮೆದುಳಿನ ಮತ್ತು ಶರೀರದ ಶೀಘ್ರ ಬೆಳವಣಿಗೆಗಾಗಿ ಸರಿಯಾದ ಪ್ರೋಟೀನ್‌ಗಳು; ಬೆಳೆಯುವ ಶರೀರಕ್ಕೆ ಶಕ್ತಿ— ಇವೆಲ್ಲ ಫೆರೆಕ್ಸ್‌ನಲ್ಲಿವೆ. ತಾಯಂದಿರು ಬೇರೆ ಯಾವುದೇ ಘನ ಆಹಾರಕ್ಕಿಂತ ಅಧಿಕವಾಗಿ ಫೆರೆಕ್ಸ್‌ನ್ನು ಆರಿಸುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ಹಣ್ಣುಗಳು, ತರಕಾರಿಗಳು, ಬೇಳೆ, ಮಾಂಸ, ಮೊಟ್ಟೆಗಳು— ಇವುಗಳಲ್ಲಿ ಯಾವುದರೊಡನೆಯಾದರೂ ಬೆರಸಿ ಕೊಡಲು ಫೆರೆಕ್ಸ್ ರುಚಿಕರವಾಗಿದೆ.

ಫೆರೆಕ್ಸ್ ಆದರ್ಶವಾದ ಪ್ರಥಮ ಘನ ಆಹಾರ.

ನಮ್ಮ ಉಚಿತ ಫೆರೆಕ್ಸ್ ಪುಸ್ತಿಕೆಯನ್ನು ಮತ್ತು ರೂ. 2 ರಿಯಾಯಿತಿಯ ಯೋಜನೆಯ ವಿವರವನ್ನು ಪಡೆಯಲು ಇಂದೇ ಬರೆಯಿರಿ.

ನಿಮ್ಮ ಹೆಸರು ಮತ್ತು ವಿಳಾಸದ ಜೊತೆಗೆ (ಭಾಷೆಯ ಹೆಸರನ್ನು ನಮೂದಿಸಿರಿ) 25 ಪೈಸೆ ಸ್ಟಾಂಪನ್ನು ಇಟ್ಟು ಪೋಸ್ಟ್ ಬ್ಯಾಗ್ ನಂ. 19119, ಬೊಂಬಾಯಿ 400 025 ಈ ವಿಳಾಸಕ್ಕೆ ಕಳಿಸಿರಿ.



ಗ್ಲಾಕ್ಸೊ

LIL.GF-53-935 KN

ಸರಿಸುತ್ತಿದ್ದರಲ್ಲದೇ ಒಳ್ಳೇ ಸಮಾಜಸೇವಕಿಯೂ ಆಗಿದ್ದರು. ಹೀಗಿದ್ದರೂ ತಮ್ಮ ಪತ್ನಿಗೆ, ಬ್ರಿಟಿಶ್ ಸರಕಾರ 'ಹೈನೆಸ್' ಪದವಿಯನ್ನು ಕೊಡುವುದಿಲ್ಲವೆಂದು ನವಾಬರಿಗೆ ದುಃಖವಾಗಿತ್ತು. ಹಿಂದಿನ ವೈಸ್‌ರಾಯರ ಕಾಲದಲ್ಲಿ ಮೌಂಟ್‌ಬ್ಯಾಟನ್ನರೇ ನವಾಬರ ಪರವಾಗಿ ಕೇಳಿಕೊಂಡಿದ್ದರು. ಆದರೆ ಒಬ್ಬ ರಾಜನಿಗೆ ಈ ಸವಲತ್ತು ಕೊಟ್ಟರೆ ಇತರ ರಾಜ, ನವಾಬರು ಮದುವೆಯಾದ ಯುರೋಪಿಯನ್ ಸ್ತ್ರೀಯರಿಗೆಲ್ಲ ಕೊಡಬೇಕಾದೀತೆಂದೂ ಅದರಿಂದ ರಾಜತ್ವದ ಘನತೆ ಹಾಳಾಗುವುದೆಂದೂ ಉತ್ತರ ಬಂದಿತ್ತು.

ಈಗ ತಮ್ಮ ಸಹಕಾರಿಗಳನ್ನು ಕರೆದು ಮೌಂಟ್‌ಬ್ಯಾಟನ್ ತಾವು ಪಾಲನಪುರದ ಬೇಗಮರಿಗೆ 'ಹೈನೆಸ್' ಪದವಿ ದಯಪಾಲಿಸುವುದಾಗಿ ಘೋಷಿಸಿದರು.

ಅವರಲ್ಲಿ ಒಬ್ಬರು ಅಲ್ಲಗಳೆದರು: "ಹಾಗೆ ಮಾಡಲು ಬರುವುದಿಲ್ಲ." "ಯಾಕೆ ಬರುವುದಿಲ್ಲ? ನಾನೀ ದೇಶದ ವೈಸ್‌ರಾಯನಲ್ಲವೆ?" ಎನ್ನುತ್ತ ಮೌಂಟ್‌ಬ್ಯಾಟನ್ ಗಡಿಬಿಡಿಯಿಂದ ಕಾಗದ ಪತ್ರಗಳನ್ನು ತರಿಸಿ 'ಪರಮಾತ್ಮನ ಅನುಗ್ರಹದಿಂದ' ಪಾಲನಪುರದ ಬೇಗಮರನ್ನು 'ಹೈನೆಸ್' ಸ್ಥಾನಕ್ಕೆ ಏರಿಸಿದ್ದಾಗಿ ಬರೆಸಿದರು. ಅಂತೂ ಅವರ ಕಡೆಗೆ ಆ ಕಾಗದ ಬಂದಾಗ ರಾತ್ರಿ ೧೧-೫೮ ಆಗಿತ್ತು. ಆಢ್ಯತೆಯಿಂದ ಸಹಿ ಮಾಡಿ ಭಾರತದ ವೈಸ್‌ರಾಯರೊಬ್ಬರು ಮಾಡಬಹುದಾದ ಕೊನೆಯ ಕೆಲಸವನ್ನು ಮುಗಿಸಿದರು.

ಅದೇ ಕ್ಷಣಕ್ಕೆ ವೈಸ್‌ರಾಯ್ ಭವನದ ತುದಿಯಲ್ಲಿದ್ದ ಯೂನಿಯನ್ ಜಾಕ್ ಕೆಳಗೆ ಇಳಿಯಿತು.

೧೫ ನೇ ಆಗಸ್ಟ್ ೧೯೪೭.

ಬೆಳ್ಳಿಯ ತುತ್ತೂರಿಗಳು ಧ್ವನಿಗೈದು ಸ್ವತಂತ್ರ ಭಾರತದ ಪ್ರಪ್ರಥಮ ಅಧಿಕೃತ ಸಮಾರಂಭ ಪ್ರಾರಂಭವಾಗಲಿದೆಯೆಂದು ಘೋಷಿಸಿದವು. ಭಾರತದ ಮೊಟ್ಟಮೊದಲ ಗವರ್ನರ್ ಜನರಲ್ಲನ ಅಧಿಕಾರ ಸ್ವೀಕಾರ ಸಮಾರಂಭವಾಗಿತ್ತದು. ಮೌಂಟ್‌ಬ್ಯಾಟನ್ನರ ಜೀವನದ 'ಅತಿ ವಿಲಕ್ಷಣ ಹಾಗೂ ಮಹತ್ವದ ದಿನ' ಅದಾಗಿತ್ತು. ಸ್ವತಂತ್ರ ಭಾರತದ ಸಮಾರಂಭಗಳು ಎಷ್ಟು ಸಾಧ್ಯವೋ ಅಷ್ಟು ವಿಜೃಂಭಣೆ, ಸಂಭ್ರಮಗಳಿಂದ ಶೋಭಿಸಬೇಕೆಂಬ ಉತ್ಸಾಹದಿಂದ ಮೌಂಟ್‌ಬ್ಯಾಟನ್ ಪ್ರತಿಯೊಂದು ಚಿಕ್ಕ ವಿವರವನ್ನೂ ಗಮನದಲ್ಲಿಟ್ಟುಕೊಂಡು ಎಲ್ಲ ರೀತಿಯ ವ್ಯವಸ್ಥೆಗಳನ್ನೂ ಮಾಡಿಸಿದ್ದರು.

ಈಗ ಪ್ರತಿಜ್ಞಾಸ್ವೀಕಾರಕ್ಕಾಗಿ ಸನ್ನದ್ಧರಾಗುತ್ತಿದ್ದಂತೆಯೇ ಅವರಿಗೊಂದು ಹಾಸ್ಯಾಸ್ಪದ ವಿಚಾರ ಬಂತು. ಆ ಸಭೆಯಲ್ಲಿ ನೆರೆದ ಎಲ್ಲ ಭಾರತೀಯರಲ್ಲಿ ಕೇವಲ ಒಂದೇ ಅಂಶ ಸಾಮಾನ್ಯವಾಗಿತ್ತು. ಹೆಚ್ಚು ಕಡಿಮೆ ಎಲ್ಲರೂ ಒಂದಿಲ್ಲೊಂದು ಸಲ ಬ್ರಿಟಿಶ್ ಜೇಲುಗಳಲ್ಲಿ ಅತಿಥಿಗಳಾಗಿದ್ದರು! ಅವರೆಲ್ಲರ ಮುಂದೆ ಕೈಯೆತ್ತಿ ಗಂಭೀರವಾಗಿ ಭಾರತದ ಈ ಗವರ್ನರ್ ಜನರಲ್ ಅಧಿಕಾರ ಸ್ವೀಕರಿಸಿದರು. ಅವರೊಡನೆ ದೇಶದ ಹೊಸ ಮಂತ್ರಿಮಂಡಲವೂ ಅಧಿಕಾರ ಸ್ವೀಕರಿಸಿತು.

ಹೊರಗಡೆ ವೈಸ್‌ರಾಯನ ೩೧ ತೋಪುಗಳ ಬದಲಿಗೆ ಗವರ್ನರ ಜನರಲ್ಲನ ೨೧ ತೋಪುಗಳು ಹಾರಿದವು. ದರ್ಬಾರ್ ಹಾಲಿನ ಹೊರಗೆ ಗವರ್ನರ್ ಜನರಲ್ಲನ ಅಂಗರಕ್ಷಕ ದಲ ಹಾಗೂ ಅವರ ಬಂಗಾರದ ರಥಗಳು ಸಿದ್ಧವಾಗಿದ್ದವು. ಅಂಗರಕ್ಷಕರ, ಅಶ್ವದಲಗಳ ಗೌರವದ ಮುಜುರೆಯನ್ನು ಗಂಭೀರವಾಗಿ ಸ್ವೀಕರಿಸಿದ ಮೌಂಟ್‌ಬ್ಯಾಟನ್, ತಮ್ಮ ರಥ ವೈಸ್‌ರಾಯ್ ಭವನವನ್ನು ದಾಟಿ ಹೊರಬಂದಾಗ ಅವಾಕ್ಕಾದರು.

ಯಾವ ಬಿಳಿಯನಿಗೂ ಕಾಣಸಿಕ್ಕದಿದ್ದ ಭಾರತ ಅವರ ಎದುರಿನಲ್ಲಿತ್ತು. ಹಿಂದಿನಂತೆ ಪರಂಗಿ ಸಾಹೇಬರನ್ನು ನೋಡಿ ಬೆರಗಾಗಲು ಬಂದ ಜನಜಂಗುಳಿ ಇದಾಗಿರಲಿಲ್ಲ. ನೋಡನೋಡುತ್ತಿದ್ದಂತೆ ಮೌಂಟ್‌ಬ್ಯಾಟನ್ನರ ಹೊಳೆಯುತ್ತಿದ್ದ ಬಂಗಾರದ ರಥವು ಉನ್ಮತ್ತ ಜನಸಾಗರದಿಂದ ಸುತ್ತುವರಿಯಲ್ಪಟ್ಟಿತ್ತು. ತಮ್ಮ ಮೆರವಣಿಗೆಗಾಗಿ ಮೌಂಟ್‌ಬ್ಯಾಟನ್ ತಯಾರಿಸಿದ್ದ ವಿವರವಾದ



ಕೋರಿಝು ವಾಕ್
ಮಂದಿ
ಗೇ ಸ್ಟೈಪ್
ಡಾರ್ಲಿಂಗ್
ಉತ್ಸವದ ದಿನಗಳಿಗಾಗಿ ಕರೋನಾ ಪಾದರಕ್ಷೆಗಳ ಝುಗಝುಗಿಸುವ ಪ್ರದರ್ಶನ
Carona
ಕರೋನಾ ಸಾಹು ಕಂ. ಲಿ.

ಯೋಜನೆ ದಿಕ್ಕಾಪಾಲಾಯಿತು. ಜನರು ಎದುರು ಸಿಕ್ಕಿದವರನ್ನು ಆಲಿಂಗಿಸಿ 'ಆಜಾದ ಸಾಹೇಬ್" ಎನ್ನುತ್ತಿದ್ದರು.

ಸಾಯಂಕಾಲ ಇಂಡಿಯಾ ಗೇಟಿನ ಬಳಿಯಲ್ಲಿನ ಮೈದಾನದಲ್ಲಿ ಧ್ವಜಾರೋಹಣದ ಸಂದರ್ಭದಲ್ಲಂತೂ ಜನತೆಯ ಮಹಾಪೂರವೇ ಉಂಟಾಗಿತ್ತು. ಹಿಂದಿನ ಸಮಾರಂಭಗಳ ವರದಿಗಳನ್ನು ಪರಿಶೀಲಿಸಿ ಮೌಂಟ್‌ಬ್ಯಾಟನ್ ೩೦,೦೦೦ ಜನ ಬರುತ್ತಾರೆಂದು ಅಂದಾಜು ಮಾಡಿದ್ದರು. ಅವರ ಅಂದಾಜು ತುಸುವೇ ತಪ್ಪಾಗಿತ್ತು! ಐದು ಲಕ್ಷ ಜನ ಇಂಡಿಯಾ ಗೇಟ್ ಮೈದಾನದ ನಡುವೆ ನಿರ್ಮಿಸಿದ್ದ ವೇದಿಕೆಯನ್ನು ಸುತ್ತುವರೆದಿದ್ದರು. ಜನಜಂಗುಳಿಯನ್ನು ನಿಯಂತ್ರಿಸಲು ಮಾಡಿದ್ದ ವ್ಯವಸ್ಥೆಗಳೆಲ್ಲವೂ ಯಾವಾಗಲೋ ಮುರಿದು ಬಿದ್ದಿದ್ದವು.

ದೂರದಲ್ಲಿ ವೈಸ್‌ರಾಯರ ರಥ, ಅವರ ಅಂಗರಕ್ಷಕರ ಬಣ್ಣ ಬಣ್ಣದ ರುಮಾಲುಗಳು ಕಣ್ಣಿಗೆ ಬೀಳುತ್ತಲೇ ಜನರ ಉತ್ಸಾಹ ಪುಟಿದೆದ್ದಿತು. ಸಾಲದ್ದಕ್ಕೆ ಅಲ್ಲಿನ ಸಾವಿರಾರು ಮಾತೆಯರು ತಮ್ಮ ಕೈಗೂಸುಗಳನ್ನು ತಂದಿದ್ದರು. ಈ ಹೂಸ ಗದ್ದಲದಲ್ಲಿ ಅವು ಅಪ್ಪಚ್ಚಿಯಾದಾವೆಂದು ಭಯಭ್ರಾಂತರಾಗಿ ಅವರು ವಿಚಿತ್ರವಾದ ಉಪಾಯವನ್ನು ಕೈಕೊಂಡರು. ತಾವು ಬೀಳುವಂತಾದಾಗಲೆಲ್ಲ ತಮ್ಮ ಕೂಸುಗಳನ್ನು ಮೇಲಕ್ಕೆ ತೂರಿ ಸಾವರಿಸಿಕೊಳ್ಳಲಾರಂಭಿಸಿದರು ನೋಡುತ್ತಿದ್ದಂತೆಯೇ ನೂರಾರು ಶಿಶುಗಳು ಅಂತರಿಕ್ಷದಲ್ಲಿ ತೂರಲ್ಪಟ್ಟವು! ವೇದಿಕೆಯ ಮೇಲಿದ್ದ ಕುಮಾರಿ ಪಮೇಲಾ ಮೌಂಟ್‌ಬ್ಯಾಟನ್ ಈ ದೃಶ್ಯವನ್ನು ನೋಡಿ ದಿಗ್ಭ್ರಾಂತಳಾದಳು: "ಮೈ ಗಾಡ್ ಇಲ್ಲಿ ಶಿಶುಗಳ ಮಳೆಯಾಗುತ್ತಿದೆ," ಎಂದುಕೊಂಡಳಾಕೆ.

ಬ್ಯಾಂಡ್ ಪಾರ್ಟಿಯವರಿಗೆ ಅಲುಗಾಡಲೂ ಜಾಗವಿಲ್ಲದಂತೆ ಜನ ಅವರನ್ನು ಸುತ್ತುವರಿದಿತ್ತು. ಮೌಂಟ್‌ಬ್ಯಾಟನ್ನರಿಗೆ ತಮ್ಮ ರಥದಿಂದ ಇಳಿಯಲೂ ಸಾಧ್ಯವಿರಲಿಲ್ಲ. "ಹೇಗಾದರೂ ಮಾಡಿ ಧ್ವಜ ಏರಿಸಿಬಿಡಿರಿ"– ಅವರು ತಾವಿದ್ದಲ್ಲಿಂದಲೇ ಕೂಗಿದರು. ಐದು ಲಕ್ಷ ಜನರ ಅಬ್ಬರದ ನಡುವೆ ಭಾರತದ ಧ್ವಜ ಏರುತ್ತಿದ್ದಂತೆಯೇ ವಿಕ್ಟೋರಿಯಾ ಮಹಾರಾಜ್ಞಿಯ ಮರಿಮೊಮ್ಮಗ ಸೆಡೆದು ನಿಂತು, ಗೌರವ ಸಲ್ಲಿಸಿದ.

ಲೂಯಿ ಮತ್ತು ಎಡ್ವಿನಾ ಮೌಂಟ್‌ಬ್ಯಾಟನ್ನರ ನೆನಪಿನಲ್ಲಿ ಇಂಡಿಯಾ ಗೇಟಿನಿಂದ ಮರಳಿ ಬರುವ ಯಾತ್ರೆ ಅವರು ಜೀವನದುದ್ದಕ್ಕೂ ಅಚ್ಚಳಿಯದೇ ಉಳಿಯಲಿತ್ತು. ಅವರು ಹಿಂದೆಂದೂ ಕಂಡಿರದಂಥ ಹರ್ಷೋನ್ಮಾದದಲ್ಲಿ ಮುಳುಗಿದ್ದ ಆ ಮಹಾಸಾಗರದ ನಡುವೆ ಅವರ ಕುದುರೆ ಗಾಡಿಯು ನೀರ ಮೇಲಣ ತೆಪ್ಪದಂತೆ ಸಾಗುತ್ತಿತ್ತು. ಗಾಡಿಯ ಮೇಲೆ ನಿಂತು ಮೌಂಟ್‌ಬ್ಯಾಟನ್ ಕತ್ತು ಚಾಚಿ ಎಲ್ಲ ಕಡೆಗೆ ನೋಡಿದರೂ ಯಾವ ದಿಕ್ಕಿನಲ್ಲಿಯೂ ಜನಸ್ತೋಮಕ್ಕೆ ಕೊನೆಯೇ ಇದ್ದಂತೆ ಕಾಣಲಿಲ್ಲ. ಅಲ್ಲಿ ನಿಂತಿದ್ದಂತೆಯೇ, ಹಿಂದಕ್ಕೆ ಯಾವ ಬಿಳಿಯನಿಗೂ ಸಲ್ಲದ ಮರ್ಯಾದೆಯನ್ನು ಅನುಭವಿಸುವ ಭಾಗ್ಯ ಅವರದಾಯಿತು. ನಿಜವಾದ ಪ್ರೀತಿ, ಅಭಿಮಾನಗಳಿಂದ ಮೊಟ್ಟ ಮೊದಲ ಸಲ ಭಾರತದ ಜನತೆ ಆಂಗ್ಲನೊಬ್ಬನಿಗೆ ಜಯ–ಜಯಕಾರ ಸಲ್ಲಿಸಿತು. ದಾರಿಯುದ್ದಕ್ಕೂ ಹಾರ್ದಿಕವಾಗಿ ಒಕ್ಕೊರಲಿನಿಂದ ಘೋಷಣೆ ಕೇಳಬರುತ್ತಿತ್ತು: "ಮೌಂಟ್‌ಬ್ಯಾಟನ್ ಕೀ ಜೈ."

ಅರಮನೆಯನ್ನು ಕೊನೆಗೊಮ್ಮೆ ಸೇರಿದಾಗ ಆನಂದಾಶ್ರುಗಳಿಂದ ಮೌಂಟ್‌ಬ್ಯಾಟನ್ ದಂಪತಿಗಳ ಮುಖವೆಲ್ಲ ಒದ್ದೆಯಾಗಿತ್ತು. ❖

This magazine owned by the Karnataka Patrika Private Ltd. is printed & published by Bhomeshwar Das Kohli at the Samyukta Karnatak Press; Koppikar Road, Hubli. Representatives: Bombay: V. S. Mani, Phone: 472794, Calcutta: H. Muzamdar Phone: 46-4238; Madras: P. N. Srinivasan, Phone: 83748: New Delhi P. R. Chopra, Phone: 224130



ಯಾವುದೇ ಸಮಯವಿರಲಿ, ಯಾವುದೇ ಸಂದರ್ಭವಿರಲಿ
"ಅಮ್ಮಾ, ನನ್ನ ಮಾಲ್ಟೆಕ್ಸ್ ಮರೆಯಬೇಡ!"
heros' SBC-60-J KAN
ಅಪರಾಹ್ನಕ್ಕಾಗಿ. ನಮ್ಮ ರಾಜು ಯಾವಾಗಲೂ ತನ್ನ ಊಟದ ಡಬ್ಬಿಯಲ್ಲಿ ಮಾಲ್ಟೆಕ್ಸ್ ಕೊಂಡುಹೋಗಲು ಬಯಸುತ್ತಾನೆ. ಅವನಿಗೆ ಬೇರೆ ಯಾವ ಬಿಸ್ಕಿಟೂ ಇಷ್ಟವಾಗುವುದಿಲ್ಲ. ಕಾರಣ ಎಲ್ಲಾ ಮಕ್ಕಳಿಗೆ ಮಾಲ್ಟೆಕ್ಸ್ ನ ಅಪೂರ್ವ ರುಚಿ ಎಂದರೆ ಬಲು ಪ್ರೀತಿ. ಮಾಲ್ಟೆಕ್ಸ್ ಉಡುಗೊರೆ ಕೊಡಲು ಆಕರ್ಷಣೀಯ ಪಾಕೀಟುಗಳಲ್ಲಿ ಅಥವಾ ಮನೆಗೆ ಕೊಂಡುಹೋಗಲು ಲೂಸ್ ಕೂಡಾ ದೊರಕುತ್ತದೆ ಮಾಲ್ಟೆಕ್ಸ್ — ಇದಕ್ಕೆ ಸಮಾನವಾದ ಬೇರೆ ಸಿಹಿ ಬಿಸ್ಕಿಟ್ ಇಲ್ಲ.
SATHE MALTex BISCUITS
ಸಾಠೆ

KASTURI PRICE 1-25 Regd. No. KRNG 43

Registered with the Registrar of Newspapers for India under No. 3633/57



COVER PRINTED AT BHARAT PHOTO OFFSET WORKS, DHARWA